‘ಕಲ್ಯಾಣ ಮಿತ್ರ’ ಸಹಾಯವಾಣಿಗೆ ಚಾಲನೆ • ಅಧಿಕಾರಿಗಳಿಗೆ ವೃತ್ತಿ ಸಾಮರ್ಥ್ಯ ಕಾರ್ಯಾಗಾರ

ಪರಿಶಿಷ್ಟರ ಅನುದಾನ: ಸಿ.ಎಂ ಮೇಲ್ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಕಲ್ಯಾಣಕ್ಕಾಗಿ ವಿವಿಧ ನಿಗಮಗಳಿಗೆ ನೀಡಿರುವ ಅನುದಾನ ಫಲಾನುಭವಿಗಳಿಗೆ ನೇರವಾಗಿ ತಲುಪಬೇಕೆಂದು ಅಧಿಕಾರಿಗಳಿಗೆ ಗುರಿ ನೀಡಲಾಗಿದೆ. ಇದರ ಮೇಲ್ವಿಚಾರಣೆ ನಾನೇ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಆರಂಭಿಸಿದ ‘ಕಲ್ಯಾಣ ಮಿತ್ರ’ ಸಹಾಯವಾಣಿಗೆ ಚಾಲನೆ ಮತ್ತು ಇಲಾಖೆಯ ಅಧಿಕಾರಿಗಳಿಗೆ ವೃತ್ತಿ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಪರಿಶಿಷ್ಟ ಸಮುದಾಯಕ್ಕೆ ಶಿಕ್ಷಣ, ಆದಾಯ ಹೆಚ್ಚಳ, ಸ್ವಾಭಿಮಾನಿ ಬದುಕಿಗೆ ಬೇಕಾಗುವ ಎಲ್ಲ ವ್ಯವಸ್ಥೆಗಳನ್ನು ಸರ್ಕಾರ ಮಾಡುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಪಾದರಸದಂತೆ ಕೆಲಸ ಮಾಡಬೇಕು. ಸಬೂಬುಗಳ ಕಾಲ ಮುಗಿದಿದೆ. ಫಲಾನುಭವಿಗಳಿಗೆ ಮೀಸಲಿಟ್ಟಿರುವ ಹಣ ಯಾವುದೇ ತೊಡಕುಗಳಿಲ್ಲದೆ ತಲುಪಬೇಕು’ ಎಂದರು.

‘ಕಲ್ಯಾಣ ಮಿತ್ರ’ ಸಹಾಯವಾಣಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ವಿಧಾನಪರಿಷತ್ ಸದಸ್ಯರಾದ ಅ. ದೇವೇಗೌಡ, ಎನ್. ರವಿಕುಮಾರ್, ವೈ.ಎ. ನಾರಾಯಣಸ್ವಾಮಿ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸಭಾಪತಿ ಬಸವರಾಜ ಹೊರಟ್ಟಿ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಚ್. ನಾಗೇಶ್ ಇದ್ದರು —ಪ್ರಜಾವಾಣಿ ಚಿತ್ರ

‘ಸರ್ಕಾರದ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿ, ಜೀವನ ಗುಣಮಟ್ಟ ಹೆಚ್ಚಿಸಬೇಕೆನ್ನುವ ಕಲ್ಪನೆ ಸಾಕಾರಗೊಳ್ಳಲು ಮೊದಲು ಇಲಾಖೆಗೆ ಸಾಮರ್ಥ್ಯ ಇರಬೇಕು. ದೀನದಲಿತರ ಶ್ರೇಯೋಭಿವೃದ್ಧಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕಣ್ಣೀರನ್ನು ಒರೆಸುವುದು ನನಗೆ ಮುಖ್ಯ. ಇದರಲ್ಲಿ ಯಾವುದೇ ರಾಜಿ, ಮುಲಾಜು ಇಲ್ಲ’ ಎಂದು ಮುಖ್ಯಮಂತ್ರಿ ತಿಳಿಸಿದರು.

ಐದು ವರ್ಷದ ಯೋಜನೆ: ‘ಎಸ್‌ಸಿ, ಎಸ್‌ಟಿ ಜನರ ಅಭಿವೃದ್ಧಿಗೆ ಐದು ವರ್ಷದ ಯೋಜನೆ ರೂಪಿಸಬೇಕು. ಆರ್ಥಿಕ ನೆರವು ಒದಗಿಸಲು ಆ್ಯಂಕರ್ ಬ್ಯಾಂಕ್ ವ್ಯವಸ್ಥೆ ಮಾಡಲಾಗುತ್ತಿದೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಗಳಿಗೆ ಈ ಬಾರಿ ₹ 28 ಸಾವಿರ ಕೋಟಿ ನೀಡಲಾಗಿದ್ದು, 75 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುವುದು. ಜಮೀನು ಖರೀದಿಗೆ ₹ 20 ಲಕ್ಷ, ಯುವಕರಿಗೆ ಸ್ವಯಂ ಉದ್ಯೋಗಕ್ಕೆ ವ್ಯವಸ್ಥೆ, ಮನೆ ನಿರ್ಮಾಣಕ್ಕೆ ₹ 2 ಲಕ್ಷ ನೀಡಲಾಗುತ್ತಿದೆ. ಈ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಸಹಾಯವಾಣಿ ಒಳ್ಳೆಯ ಕೆಲಸ’ ಎಂದರು.

ನೌಕರರಿಗೆ ರಕ್ಷಣೆ: ‘ಸರ್ಕಾರಿ ನೌಕರರಾಗಿ ಕೆಲಸ ಮಾಡುವುದು ಸುಲಭವಲ್ಲ. ಬಹಳಷ್ಟು ಬಾರಿ ಕ್ಲಿಷ್ಟಕರ ಸಂದರ್ಭಗಳು ಬರುತ್ತವೆ. ಸಮಾಜ ಕಲ್ಯಾಣ ಇಲಾಖೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ವೇಳೆ ಅನುಮಾನಗಳಿಗೆ ಅವಕಾಶವಿಲ್ಲ. ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗುವುದು. ಅದರಂತೆ ಕೆಲಸ ಮಾಡಬೇಕು. ನಿಮ್ಮನ್ನು ರಕ್ಷಿಸುವುದು ನಮ್ಮ ಕೆಲಸ’ ಎಂದು ಅಧಿಕಾರಿಗಳಿಗೆ ಭರವಸೆ ನೀಡಿದರು.

‘ಆಡಳಿತದಲ್ಲಿ ಆಮೂಲಾಗ್ರ ಬದಲಾವಣೆ’

‘ಆಡಳಿತದಲ್ಲಿ ಹಂತಗಳಲ್ಲಿ ಆಮೂಲಾಗ್ರ ಬದಲಾವಣೆ ತರಲಾಗುತ್ತದೆ. ನಿರ್ಣಯ ಮಾಡುವ ಹಲವಾರು ಹಂತಗಳನ್ನು ತೆಗೆಯಲಾಗುತ್ತಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಸಮಾಜ ಕಲ್ಯಾಣ ಇಲಾಖೆಗೆ ಹೊಸ ಆಯಾಮ ಕೊಡಬೇಕಿದೆ. ಹೀಗಾಗಿ, ಎಲ್ಲ ವಿಷಯಗಳಲ್ಲಿ ಆದೇಶಗಳು ತುರ್ತಾಗಿ ಆಗಬೇಕೆಂದು ಸಚಿವರಿಗೆ ತಿಳಿಸಿದ್ದೇನೆ. ನಿಗದಿತ ಸಮಯದಲ್ಲಿ ಕಾರ್ಯಕ್ರಮಗಳು ತಲುಪಿದರೆ ಬದಲಾವಣೆ ಸಾಧ್ಯ. ಈ ಇಲಾಖೆಯ ಕಾರ್ಯಕ್ರಮಗಳು ವೆಚ್ಚ ಅಲ್ಲ, ಮಾನವ ಸಂಪನ್ಮೂಲಗಳಲ್ಲಿ ಬಂಡವಾಳ ಹೂಡಿಕೆ’ ಎಂದರು.

ಅನುದಾನ ಒದಗಿಸಿದರೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬ ಧೋರಣೆ, ಅಸಡ್ಡೆ, ಅಸಹಕಾರವನ್ನು ಎಂದೂ ಒಪ್ಪಲು ಸಾಧ್ಯವಿಲ್ಲ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಶಿವಶರಣರ ವಚನ ಸಂಪುಟದ ಮೊಬೈಲ್ ಆ್ಯಪ್ ಬಿಡುಗಡೆ ಇಂದು

ಸಿರಿಗೆರೆ (ಚಿತ್ರದುರ್ಗ ಜಿಲ್ಲೆ): ಇಲ್ಲಿನ ತರಳಬಾಳು ಬೃಹನ್ಮಠದಿಂದ ಸಿದ್ಧಪಡಿಸಿರುವ ‘ಶಿವಶರಣರ ವಚನ ಸಂಪುಟ’ದ ಮೊಬೈಲ್ ಆ್ಯಪ್ ಇದೇ 3ರಂದು ಸಂಜೆ 6.30ಕ್ಕೆ ಬೆಂಗಳೂರಿನ ತರಳಬಾಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅನಾವರಣಗೊಳ್ಳಲಿದೆ.

ಸಿರಿಗೆರೆಯ ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲಿದ್ದಾರೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಜೇಡರ ದಾಸೀಮಯ್ಯ ಸೇರಿ 255ಕ್ಕೂ ಹೆಚ್ಚು ವಚನಕಾರರ 21 ಸಾವಿರ ವಚನಗಳನ್ನು ಈ ಮೊಬೈಲ್ ಆ್ಯಪ್ ಮೂಲಕ ವಚನಾಸಕ್ತರು ಬೆರಳತುದಿಯಲ್ಲಿಯೇ ಓದಬಹುದಾಗಿದೆ. ಸಿರಿಗೆರೆ ಶ್ರೀಗಳ ಮಾರ್ಗದರ್ಶನದಲ್ಲಿ ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಜಿ.ಮಧು ಈ ಆ್ಯಪ್ ಅನ್ನು ಸಿದ್ಧಪಡಿಸಿದ್ದಾರೆ ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಕಾರ್ಯದರ್ಶಿ ಮಾಹಿತಿ ನೀಡಿದ್ದಾರೆ.

‘ಬಸವಣ್ಣನವರ ಷಟ್‌ಸ್ಥಲ ವಚನಗಳು’ (ಹಿಂದಿ), ‘ಬಸವೇಶ್ವರರ ವಚನಾಲು’ (ತೆಲುಗು) ಹಾಗೂ ಧೀರ ಸನ್ಯಾಸಿ- ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಜೀವನ ಚರಿತ್ರೆ’ ಕೃತಿಗಳ ಲೋಕಾರ್ಪಣೆಯೂ ಈ ಸಂದರ್ಭದಲ್ಲಿ ನಡೆಯಲಿದೆ.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನೀರಾವರಿ ಯೋಜನೆ ಪೂರ್ಣ’

ವಿಜಯಪುರ: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನತೆ ಕಾಂಗ್ರೆಸ್‌ಗೆ ಅಧಿಕಾರ ನೀಡಿದರೆ ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ, ಬಾಕಿ ಇರುವ ಎಲ್ಲ ನೀರಾವರಿ ಯೋಜನೆಗಳನ್ನು ಐದು ವರ್ಷದಲ್ಲಿ ಪೂರ್ಣಗೊಳಿಸುತ್ತೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.

ಬಬಲೇಶ್ವರ ತಾಲ್ಲೂಕಿನ ಸುಕ್ಷೇತ್ರ ಸಂಗಾಪೂರ ಎಸ್.ಎಚ್.ಗ್ರಾಮದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಕಮರಿಮಠದ ಜಾತ್ರಾ ಮಹೋತ್ಸವ ಹಾಗೂ ಯಾತ್ರಿ ನಿವಾಸ ಉದ್ಘಾಟಿಸಿ ಅವರು ಮಾತನಾಡಿದರು.

‘ಕಾಂಗ್ರೆಸಿಗರು ಎಂದಿಗೂ ಮಾತಿಗೆ ತಪ್ಪುವುದಿಲ್ಲ. ಆದರೆ ಬಿಜೆಪಿ ಹಾಗಲ್ಲ. 2018ರ ವಿಧಾನಸಭಾ ಚುನಾವಣೆ ವೇಳೆ ಬಿಜೆಪಿ ಪ್ರಣಾಳಿಕೆಯಲ್ಲಿ ನೀರಾವರಿಗಾಗಿ ₹1.5 ಲಕ್ಷ ಕೋಟಿ ಖರ್ಚು ಮಾಡುವುದಾಗಿ ಹೇಳಿದ್ದರು. ಮಾಡಿದ್ದಾರಾ? ಒಂದು ವೇಳೆ ಅನುದಾನ ನೀಡಿದ್ದರೆ ಕೃಷ್ಣಾ ಮೇಲ್ದಂಡೆ ಯೋಜನೆ, ಮಹಾದಾಯಿ ಸೇರಿದಂತೆ ಎಲ್ಲ ನೀರಾವರಿ ಯೋಜನೆಗಳು ಪೂರ್ಣಗೊಳ್ಳುತ್ತಿದ್ದವು’ ಎಂದರು.

ಬಿಹಾರದಿಂದ ಪಿಕೆ ಸಕ್ರಿಯ ರಾಜಕಾರಣಕ್ಕೆ?

ಪಟ್ನಾ (ಪಿಟಿಐ): ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅವರು ಬಿಹಾರದ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸುವಂತಹ ಹೇಳಿಕೆ ನೀಡಿದ್ದಾರೆ. ತಮ್ಮ ತವರು ರಾಜ್ಯ ಬಿಹಾರದಿಂದ ‘ಹೊಸ ಆರಂಭ’ ಮಾಡುವುದಾಗಿ ಅವರು ಟ್ವೀಟ್‌ನಲ್ಲಿ ಘೋಷಿಸಿದ್ದಾರೆ.

‘ಪ್ರಜಾತಂತ್ರದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುವ ಮತ್ತು ಜನಪರ ನೀತಿ ರೂಪಿಸಲು ನೆರವಾಗುವ ನನ್ನ ತುಡಿತವು ಏರಿಳಿತದ ಪ್ರಯಾಣವಾಯಿತು. ಹಿಂದಿರುಗಿ ನೋಡಿದರೆ, ಸಮಸ್ಯೆಗಳು ಮತ್ತು ಜನ ಸುರಾಜ್‌ನ (ಉತ್ತಮವಾದ ಜನಾಡಳಿತ) ಹಾದಿಯ ಸರಿಯಾದ ಗ್ರಹಿಕೆಗಾಗಿ ನಿಜವಾದ ಮಾಲೀಕರಾದ ಜನರ ಬಳಿಗೆ ಹೋಗಲು ಇದು ಸಕಾಲ ಅನಿಸಿದೆ’ ಎಂದು ಪ್ರಶಾಂತ್ ಟ್ವೀಟ್ ಮಾಡಿದ್ದಾರೆ. ‘ಬಿಹಾರದಿಂದ ಆರಂಭ’ ಎಂಬ ಹ್ಯಾಷ್‌ಟ್ಯಾಗ್ ಸೇರಿಸಿದ್ದಾರೆ.

ಪ್ರಶಾಂತ್ ಅವರು ಬಿಹಾರದಿಂದ ಸಕ್ರಿಯ ರಾಜಕಾರಣ ಆರಂಭಿಸಲಿದ್ದಾರೆ ಎಂಬ ಸುಳಿವನ್ನು ಈ ಟ್ವೀಟ್ ನೀಡಿದೆ. ತಮ್ಮ ಭವಿಷ್ಯದ ಯೋಜನೆಗಳ ಬಗ್ಗೆ ಇನ್ನಷ್ಟು ವಿವರಗಳನ್ನು ಈ ವಾರದಲ್ಲಿ ನಡೆಸಲಿರುವ ಮಾಧ್ಯಮಗೋಷ್ಠಿಯಲ್ಲಿ ಪ್ರಶಾಂತ್ ಬಹಿರಂಗಪಡಿಸಲಿದ್ದಾರೆ ಎಂದು ಐ-ಪ್ಯಾಕ್ (ಪ್ರಶಾಂತ್ ಅವರು ಸ್ಥಾಪಿಸಿದ ಚುನಾವಣಾ ಸಲಹೆ ನೀಡಿಕೆ ಸಂಸ್ಥೆ) ತಿಳಿಸಿದೆ.

ಪ್ರಶಾಂತ್ ಕಿಶೋರ್

ಪ್ರಶಾಂತ್ ಟ್ವೀಟ್‌ಗೆ ಬಿಜೆಪಿ ಕಟುವಾದ ಪ್ರತಿಕ್ರಿಯೆ ನೀಡಿದೆ. ‘ಪ್ರಶಾಂತ್ ಕಿಶೋರ್ ಅವರು ಸಮಾಜ ವಿಜ್ಞಾನಿಯೂ ಅಲ್ಲ ರಾಜಕೀಯ ವಿಜ್ಞಾನಿಯೂ ಅಲ್ಲ. ಅವರೊಬ್ಬ ಮಧ್ಯವರ್ತಿ ಮಾತ್ರ. ಬಿಹಾರ ರಾಜಕಾರಣದಲ್ಲಿ ಅವರು ಮತಕ್ಕೆ ಕತ್ತರಿ ಹಾಕುವವರು ಮಾತ್ರ’ ಎಂದು ಬಿಜೆಪಿ ವಕ್ತಾರ ನಿಖಿಲ್ ಆನಂದ್ ಹೇಳಿದ್ದಾರೆ.

ಪ್ರಶಾಂತ್ ಸಕ್ರಿಯ ರಾಜಕಾರಣಕ್ಕೆ ಬರುವುದು ಜೆಡಿಯುಗೆ ಕೂಡ ಪಥ್ಯವಾಗಿಲ್ಲ. 2020ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ, ಚಿರಾಗ್ ಪಾಸ್ವಾನ್ ಅವರ ‘ತಲೆ ಕೆಡಿಸಿ’ ನಿತೀಶ್ ಕುಮಾರ್ ವಿರುದ್ಧ ತಿರುಗಿ ಬೀಳುವಂತೆ ಮಾಡಿದ್ದು ಪ್ರಶಾಂತ್ ಎಂಬ ಅನುಮಾನ ಜೆಡಿಯುನ ಹಲವು ಮುಖಂಡರಲ್ಲಿ ಇದೆ.

ಕಾಂಗ್ರೆಸ್ ಪುನಶ್ಚೇತನಕ್ಕೆ ನೆರವಾಗಲು ಮತ್ತು ಆ ಪಕ್ಷಕ್ಕೆ ಸೇರಲು ನಿರಾಕರಿಸಿದ ಕೆಲವೇ ದಿನಗಳ ಬಳಿಕ ಕಿಶೋರ್ ಅವರು ಈ ನಿರ್ಧಾರ ಪ್ರಕಟಿಸಿದ್ದಾರೆ.

ಪಕ್ಷಾಂತರ ಹೇಳಿಕೆ: ಉಲ್ಟಾ ಹೊಡೆದ ಎಂಟಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದು ಪಕ್ಷ ತೊರೆದು ಇನ್ನೊಂದು ಪಕ್ಷ ಸೇರಿರುವುದು ರಾಜಕೀಯ ಜೀವನದಲ್ಲಿ ನಾನು ಮಾಡಿದ ಮೊದಲ ತಪ್ಪು’ ಎಂದು ಹೇಳಿಕೆ ನೀಡಿದ್ದ ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಅವರು ಈಗ ಉಲ್ಟಾ ಹೊಡೆದಿದ್ದಾರೆ.

‘ಬಿಜೆಪಿ ಬಗ್ಗೆ ಯಾವುದೇ ಅಸಮಾಧಾನವಿಲ್ಲ. ನನ್ನ ಹೇಳಿಕೆಯ ಬಗ್ಗೆ ಯಾವುದೇ ರೀತಿ ಅಪಾರ್ಥ ಕಲ್ಪಿಸುವುದೂ ಬೇಡ. ಪಕ್ಷಾಂತರ ಕುರಿತ ನನ್ನ ಹೇಳಿಕೆ ಸೈದ್ಧಾಂತಿಕವಾದುದು. ಯಾರೇ ಆಗಲಿ ಪಕ್ಷಾಂತರ ಮಾಡುವುದು ತಪ್ಪು ಎಂಬ ಅರ್ಥದಲ್ಲಿ ಹೇಳಿದ್ದೇನೆ’ ಎಂದಿದ್ದಾರೆ.

‘ಬಿಜೆಪಿ ಬಗ್ಗೆ ಅಸಮಾಧಾನವೂ ಇಲ್ಲ, ಬಿಜೆಪಿಗೆ ಬಂದಿರುವುದು ತಪ್ಪು ಎಂದು ಭಾವಿಸಿಯೂ ಇಲ್ಲ. ಪಕ್ಷದಲ್ಲಿ ಎಲ್ಲ ನಾಯಕರು ವಿಶ್ವಾಸದಿಂದ ನಡೆಸಿಕೊಂಡಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ರಾಜಕೀಯದಲ್ಲಿ ನಾನು ಹಣ ಮಾಡಬೇಕು ಎಂದೇನಿಲ್ಲ. ಆ ವಿಷಯದಲ್ಲಿ ನಾನು ಇಂದಿಗೂ ಪರಿಶುದ್ಧನಾಗಿದ್ದೇನೆ. ರಾಜಕೀಯ ಜೀವನದಲ್ಲಿ ನಾನು ಮಾಡಿದ ಒಂದೇ ಒಂದು ತಪ್ಪು ಎಂದರೆ, ಒಂದು ಪಕ್ಷ ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರಿರುವುದು. ಅದರ ಅರಿವು ಈಗ ಆಗುತ್ತಿದೆ. ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಕಡೆಯವರೇ ನನ್ನನ್ನು ಪಕ್ಷದಿಂದ ಹೊರಗೆ ಕಳುಹಿಸಿದರು’ ಎಂದು ಇತ್ತೀಚೆಗೆ ಬಾಗೇಪಲ್ಲಿಯಲ್ಲಿ ನಡೆದ ಸಭೆಯಲ್ಲಿ ಹೇಳಿದ್ದರು.

ಸೆಸ್ಕ್: 8 ರಂದು ಕೌನ್ಸೆಲಿಂಗ್

ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ (ಸೆಸ್ಕ್) ಕಿರಿಯ ಪವರ್ ಮ್ಯಾನ್ ಹುದ್ದೆಗೆ ಅಂತಿಮ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನಿಗಮದ ಕಾರ್ಯಾಲಯ, ನಂ.29, ವಿಜಯನಗರ 2ನೇ ಹಂತ, ಹಿನಕಲ್‌ನಲ್ಲಿ ಮೇ 8ರಂದು (ಭಾನುವಾರ) ಬೆಳಿಗ್ಗೆ 9 ಗಂಟೆಗೆ ಕೌನ್ಸೆಲಿಂಗ್ ಏರ್ಪಡಿಸಲಾಗಿದೆ. ಮಾಹಿತಿಗಾಗಿ www.cescmysore.org ಸಂಪರ್ಕಿಸಬಹುದು.

ಮೇ 14ಕ್ಕೆ ಸಾಮರಸ್ಯ ನಡಿಗೆ–ಸೌಹಾರ್ದ ಸಮಾವೇಶ

ಉಡುಪಿಯಲ್ಲಿ ಬಹುತ್ವ ಭಾರತ ದರ್ಶನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮು ಸೌಹಾರ್ದ ಕದಡಿ ಹೋಗಿರುವ ಈ ಹೊತ್ತಿನಲ್ಲಿ ಸಾಮರಸ್ಯದ ತಂಗಾಳಿ ಬೀಸಲು ಉಡುಪಿಯ ‘ಸಹಬಾಳ್ವೆ’ ತಂಡ ಮತ್ತು ಸಮಾನ ಮನಸ್ಕ ಸಂಘಟನೆಗಳು ಸಜ್ಜಾಗಿದೆ. ಮೇ 14ರಂದು ಸಾಮರಸ್ಯ ನಡಿಗೆ ಮತ್ತು ಸೌಹಾರ್ದತಾ ಸಮಾವೇಶ ನಡೆಯಲಿದ್ದು ‘ಬಹುತ್ವ ಭಾರತ’ದ ದರ್ಶನವೂ ಆಗಲಿದೆ.

ಉಡುಪಿಯಿಂದ ಆರಂಭವಾದ ಹಿಜಾಬ್ ವಿವಾದ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಆಯಿತು. ಜಾತ್ರೆಗಳಲ್ಲಿ ಮತ್ತು ದೇವಸ್ಥಾನಗಳ ಆಸುಪಾಸಿನ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಹಲಾಲ್ ಕಟ್ ಮತ್ತು ಆಜಾನ್ ವಿರುದ್ಧದ ಅಭಿಯಾನ ಹೀಗೆ ಸಾಮರಸ್ಯ ಕದಡುವ ವಾತಾವರಣ ನಿರಂತರವಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಸಾರಮಸ್ಯದ ಸಂದೇಶ ಸಾರುವ ಪ್ರಯತ್ನವೊಂದು ಆರಂಭವಾಗಿದೆ.

‘ಮೇ 14ರಂದು ಮಧ್ಯಾಹ್ನ 2.30ಕ್ಕೆ ಉಡುಪಿಯ ಅಜ್ಜರಕಾಡು ಹುತಾತ್ಮರ ಚೌಕದ ಬಳಿಯಿಂದ ಸಾಮರಸ್ಯ ನಡಿಗೆ ಆರಂಭವಾಗಲಿದೆ. ಸೌಹಾರ್ದ ಬಯಸುವ ರಾಜ್ಯದ ಸಮಾನ ಮನಸ್ಕರು ಒಂದೆಡೆ ಸೇರಿ ಸಾಮರಸ್ಯದ ಹೆಜ್ಜೆ ಇಡಲು ಸಜ್ಜಾಗಿದ್ದೇವೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ ಸೇರಿ ಎಲ್ಲಾ ಧರ್ಮ ಗುರುಗಳು ಮತ್ತು ಸಾಮಾಜಿಕ ಹೋರಾಟಗಾರರು ಕೈ ಕೈ ಹಿಡಿದು ಹೆಜ್ಜೆ ಹಾಕಲಿದ್ದಾರೆ. ಸಂಜೆ 4.30ಕ್ಕೆ ಸಹಬಾಳ್ವೆ ಸಮಾವೇಶದ ವೇದಿಕೆ ಕಾರ್ಯಕ್ರಮ ಆರಂಭವಾಗಲಿವೆ’ ಎಂದು ಸಹಬಾಳ್ವೆ ಸಮಾವೇಶದ ಪ್ರಧಾನ ಸಂಚಾಲಕ ಕೆ.ಎಲ್. ಅಶೋಕ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾದ ನಾಯಕ ಯೋಗೇಂದ್ರ ಯಾದವ್, ಉಡುಪಿ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲಾ ಸಂಯುಕ್ತ ಜಮಾಅತ್ ಖಾಜಿಗಳಾದ ಝೈನುಲ್ ಉಲಮಾ ಎಂ.ಅಬ್ದುಲ್ ಹಮೀದ್ ಮುಸ್ಲಿಯಾರ್ ಮಾಣಿ, ಪುತ್ತೂರಿನ ಮಲಂಕರ ಕ್ಯಾಥೋಲಿಕ್ ಚರ್ಚ್‌ನ ಬಿಷಪ್ ಗೀವರ್ಗೀಸ್ ಮಾರ್ ಮಕರಿಯೋಸ್, ‘ಅನುಪಮ’ ಪತ್ರಿಕೆ ಸಹ ಸಂಪಾದಕಿ ಸಬೀಹಾ ಫಾತಿಮಾ, ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು, ಮೈಸೂರು ಬಸವ ಜ್ಞಾನ ಮಂದಿರದ ಮಾತೆ ಬಸವಾಂಜಲಿ ದೇವಿ, ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ, ಬಸವ ಧರ್ಮ ಪೀಠದ ಬಸವಪ್ರಕಾಶ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದರು.

ಪ್ರಧಾನಿ ಕಾರ್ಯಾಲಯದ ವಿರುದ್ಧ ಗುಜರಾತ್ ಪಕ್ಷೇತರ ಶಾಸಕ ಆರೋಪ

ಬಂಧನ: ಪೂರ್ವಯೋಜಿತ ಸಂಚು–ಮೇವಾನಿ

ನವದೆಹಲಿ (ಪಿಟಿಐ): ‘ಅಸ್ಸಾಂ ಪೊಲೀಸರು ನನ್ನನ್ನು ಬಂಧಿಸಿದ್ದರ ಹಿಂದೆ ಪ್ರಧಾನಿ ಕಾರ್ಯಾಲಯದ (ಪಿಎಂಒ) ಪೂರ್ವಯೋಜಿತ ಸಂಚು ಇದೆ’ ಎಂದು ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ ಸೋಮವಾರ ಆರೋಪಿಸಿದ್ದಾರೆ.

ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗುಜರಾತ್‌ನಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನನ್ನನ್ನು ಮುಗಿಸಲು ಸಂಚು ರೂಪಿಸಲಾಗಿದೆ. ಇದು ‘56 ಇಂಚಿನ ಹೇಡಿತನ’ದ ಕೃತ್ಯ’. ಗುಜರಾತ್‌ನ ವರ್ಚಸ್ಸಿಗೂ ಧಕ್ಕೆ’ ಎಂದು ಟೀಕಿಸಿದರು.

‘ಮೋದಿಯವರೇ ನೀವು ಗುಜರಾತ್ ಮೂಲದವರು ಮತ್ತು ನನ್ನ ಮೂಲವೂ ಗುಜರಾತ್. ನಾನು ಹೂವು ಅಲ್ಲ, ಆದರೆ ಬೆಂಕಿ, ಯಾವುದೇ ಕಾರಣಕ್ಕೂ ನಾನು ಬಗ್ಗುವುದಿಲ್ಲ ಎಂಬ ನನ್ನ ಸಹೋದ್ಯೋಗಿಯೊಬ್ಬರ ಮಾತನ್ನು ನೀವು ಅರ್ಥೈಸಿಕೊಳ್ಳಬೇಕು. ಭಾರತದ ಪ್ರಧಾನಿಯವರೇ ನಿಮಗೆ ಇದು ನನ್ನ ಸವಾಲು’ ಎಂದು ಹೇಳಿದ್ದಾರೆ.

ವಡಗಾಮ್ ಕ್ಷೇತ್ರದ ಸ್ವತಂತ್ರ ಶಾಸಕರಾದ ಮೇವಾನಿ ಅವರು, ‘ಅಸ್ಸಾಂ ಪೊಲೀಸರಿಂದ ನನ್ನ ಬಂಧನವು ಪೂರ್ವ ಯೋಜಿತ ಪಿತೂರಿ. ಶಿಷ್ಟಾಚಾರ ಮತ್ತು ನಿಯಮಗಳನ್ನು ಉಲ್ಲಂಘಿಸಲಾಗಿದೆ’ ಎಂದು ಆರೋಪಿಸಿದ್ದಾರೆ.

22 ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಸೋರಿಕೆ, ಮುಂದ್ರಾ ಬಂದರಿನಲ್ಲಿ ಇತ್ತೀಚೆಗೆ ವಶಪಡಿಸಿಕೊಂಡ ₹1.75 ಲಕ್ಷ ಕೋಟಿ ಮೌಲ್ಯದ ಡ್ರಗ್ಸ್ ಪ್ರಕರಣದಲ್ಲಿ ಉದ್ಯಮಿ ಗೌತಮ್ ಅದಾನಿ ವಿರುದ್ಧ ವಿಶೇಷ ತನಿಖಾ ತಂಡದಿಂದ ವಿಚಾರಣೆ ನಡೆಯಬೇಕು ಎಂಬುದು ಸೇರಿ ಹಲವು ವಿಚಾರಗಳ ಬಗ್ಗೆ ಕ್ರಮಕ್ಕೆ ಆಗ್ರಹಿಸಿ ಜೂನ್ 1ರಂದು ಗುಜರಾತ್ ಬಂದ್ ನಡೆಸಲಾಗುವುದು. ಉನಾದಲ್ಲಿ ದಲಿತರ ಮೇಲೆ ಹಾಗೂ ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಅದೇ ದಿನ ಪ್ರತಿಭಟಿಸುವುದಾಗಿಯೂ ಅವರು ತಿಳಿಸಿದ್ದಾರೆ.

ಇದೇ ವೇಳೆ ಅವರು, ‘ಕಾಂಗ್ರೆಸ್‌ಗೆ ನನ್ನ ಬೆಂಬಲ ಮುಂದುವರಿಯಲಿದೆ’ ಎಂದು ವಾಗ್ದಾನ ಮಾಡಿದರು.

ಪ್ರಧಾನಿ ವಿರುದ್ಧ ಆಕ್ಷೇಪಾರ್ಹ ಟ್ವೀಟ್ ಮಾಡಿದ್ದ ಆರೋಪದಡಿ ಮೇವಾನಿ ಅವರನ್ನು ಅಸ್ಸಾಂ ಪೊಲೀಸರು ಏ.19ರಂದು ಬಂಧಿಸಿದ್ದರು. ಪ್ರಧಾನಿ ಅವರನ್ನು ಉಲ್ಲೇಖಿಸಿ ‘ಗೋಡ್ಸೆಯನ್ನು ದೇವರಂತೆ ಪರಿಗಣಿಸಲಾಗಿದೆ’ ಎಂದು ಮೇವಾನಿ ಟ್ವೀಟ್ ಮಾಡಿದ್ದರು.

ಈ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಮೇವಾನಿ ಅವರನ್ನು, ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಹಾಗೂ ಸರ್ಕಾರಿ ಸೇವೆಗೆ ಅಡ್ಡಿಪಡಿಸಿದ ಆರೋಪಗಳಿಗೆ ಸಂಬಂಧಿಸಿ ಮತ್ತೆ ಬಂಧಿಸಲಾಗಿತ್ತು. ಈ ಪ್ರಕರಣದಲ್ಲಿ ಏಪ್ರಿಲ್ 29ರಂದು ಮೇವಾನಿ ಅವರಿಗೆ ಅಸ್ಸಾಂ ಬಾರ್ಪೇಟಾ ಜಿಲ್ಲಾ ನ್ಯಾಯಾಲಯವು ಜಾಮೀನು ನೀಡಿತ್ತು.

‘ಸರ್ವಾಧಿಕಾರಕ್ಕೆ ಅವಕಾಶವಿಲ್ಲ’

ನಾಸಿಕ್ (ಪಿಟಿಐ): ಮಸೀದಿಗಳಿಂದ ಧ್ವನಿವರ್ಧಕಗಳನ್ನು ತೆಗೆದುಹಾಕಬೇಕೆಂಬ ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ ಅವರ ಒತ್ತಾಯದ ವಿರುದ್ಧ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೋಮವಾರ ವಾಗ್ದಾಳಿ ನಡೆಸಿದ್ದು, ‘ರಾಜ್ಯದಲ್ಲಿ ಸರ್ವಾಧಿಕಾರಕ್ಕೆ ಅವಕಾಶವಿಲ್ಲ, ಕಾನೂನು ಪ್ರಕಾರ ಆಡಳಿತವಿದ್ದು, ಕಾನೂನಿನ ಮೂಲಕವೇ ತಕ್ಕ ಉತ್ತರ ನೀಡಲಾಗುವುದು’ ಎಂದು ಹೇಳಿದ್ದಾರೆ.

ರಾಜ್ ಠಾಕ್ರೆ ಅವರು ಔರಂಗಾಬಾದ್‌ನಲ್ಲಿ ಭಾನುವಾರ ನಡೆದ ರ‍್ಯಾಲಿಯಲ್ಲಿ ‘ಮೇ 3 ರೊಳಗೆ ಮಸೀದಿಗಳ ಮೇಲಿರುವ ಧ್ವನಿವರ್ಧಕಗಳನ್ನು ತೆಗೆಯಬೇಕು. ಇಲ್ಲದಿದ್ದರೆ ಮಸೀದಿಗಳ ಎದುರು ಹನುಮಾನ್ ಚಾಲೀಸ್ ಪಠಣ ಆರಂಭಿಸುತ್ತೇವೆ’ ಎಂದು ನೀಡಿದ ಹೇಳಿಕೆಗೆ ಪವಾರ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ಠಾಕ್ರೆ ಅವರ ಹೆಸರನ್ನು ಉಲ್ಲೇಖಿಸದೇ ಮಾತನಾಡಿದ ಪವಾರ್, ‘ಜನರನ್ನು ಪ್ರಚೋದಿಸುವುದು ಸುಲಭ. ಆದರೆ ಅದು ಮಹಾರಾಷ್ಟ್ರದಲ್ಲಿ ಸಾಮಾಜಿಕ ಸಾಮರಸ್ಯವನ್ನು ಕದಡುತ್ತದೆ. ಇಂಥ ಕೆಲಸಕ್ಕೆ ಅವಕಾಶ ನೀಡುವುದಿಲ್ಲ. ಮಹಾರಾಷ್ಟ್ರದಲ್ಲಿ ಸರ್ವಾಧಿಕಾರಕ್ಕೆ ಅವಕಾಶ ನೀಡುವುದಿಲ್ಲ. ಇಲ್ಲಿ ಕಾನೂನು ಎಲ್ಲರಿಗೂ ಸಮಾನವಾಗಿದೆ’ ಎಂದು ಪ್ರತಿಪಾದಿಸಿದರು.

ರಾಹುಲ್ ಸಂವಾದ: ಅನುಮತಿ ನಿರಾಕರಿಸಿದ ಒಸ್ಮಾನಿಯಾ ವಿ.ವಿ

ಹೈದರಾಬಾದ್ (ಪಿಟಿಐ): ಒಸ್ಮಾನಿಯಾ ವಿಶ್ವವಿದ್ಯಾಲಯವು ತನ್ನ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಲು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಅನುಮತಿ ನಿರಾಕರಿಸಿದ್ದು, ಇದರಿಂದ ಆಕ್ರೋಶಗೊಂಡ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಒತ್ತಡ ಹೇರಿರುವುದೇ ಅನುಮತಿ ನಿರಾಕರಣೆಗೆ ಕಾರಣ ಎಂದು ಕಾಂಗ್ರೆಸ್ ಆರೋಪಿಸಿದೆ.

ಕ್ಯಾಂಪಸ್‌ನೊಳಗೆ ಯಾವುದೇ ರಾಜಕೀಯ ಚಟುವಟಿಕೆಗಳಿಗೆ ಅನುಮತಿ ನೀಡಬಾರದು ಎಂದು ಕಳೆದ ವರ್ಷ ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿ ನಿರ್ಣಯ ಅಂಗೀಕರಿಸಿದೆ ಈ ಕಾರಣಕ್ಕೆ ರಾಹುಲ್ ಅವರ ಭೇಟಿಗೆ ಅನುಮತಿ ನಿರಾಕರಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಮೇ7ರಂದು ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳೊಂದಿಗೆ ನಡೆಸಲಿದ್ದ ಸಂವಾದ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದ್ದ 18 ಮಂದಿ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಪೊಲೀಸರು ಭಾನುವಾರ ಬಂಧಿಸಿದ್ದರು.

ರಾಹುಲ್ ಗಾಂಧಿ ಅವರು ಬಂಧನಕ್ಕೊಳಗಾಗಿರುವ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಮೇ7 ರಂದು ಭೇಟಿಯಾಗುವ ಸಾಧ್ಯತೆ ಇದೆ ಎಂದು ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಹಾಗೂ ಸಂಸದ ಎ.ರೇವಂತ್ ರೆಡ್ಡಿ ತಿಳಿಸಿದ್ದಾರೆ.

‘ಹಿಂದೂಗಳು ಹೆಚ್ಚು ಮಕ್ಕಳನ್ನು ಹೆರಬೇಕು’

ಲಖನೌ: ‘ದೇಶದಲ್ಲಿ ಇರುವುದು ಒಂದೇ ಧರ್ಮ, ಅದೂ ಸನಾತನ ಧರ್ಮ. ಹಿಂದೂಗಳು ಧರ್ಮದ ಆಧಾರದ ಮೇಲೆ ಒಗ್ಗೂಡಿ ಮತ ಚಲಾಯಿಸಬೇಕು. ಭಾರತವನ್ನು ಹಿಂದೂ ರಾಷ್ಟ್ರವಾಗಿಸಬೇಕು’ ಎಂದು ಇಬ್ಬರು ವಿವಾದಿತ ಹಿಂದೂ ಸ್ವಾಮೀಜಿಗಳು ಹೇಳಿದ್ದಾರೆ.

ಉತ್ತರ ಪ್ರದೇಶದ ಅಲಿಗಡ ಪಟ್ಟಣದಲ್ಲಿ ಭಾನುವಾರ ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಕಾಳಿಚರಣ್ ಮಹಾರಾಜ್ ಸ್ವಾಮೀಜಿ ಮತ್ತು ಯತಿ ನರಸಿಂಹಾನಂದ ಸರಸ್ವತಿ ಅವರು, ‘ದೇಶವು ಇಸ್ಲಾಮಿಕ್ ರಾಷ್ಟ್ರವಾಗಿ ಬದಲಾಗಬಾರದು ಮತ್ತು ಮುಸ್ಲಿಮರು ಪ್ರಧಾನಿಯಾಗಬಾರದು. ಅದಕ್ಕಾಗಿ ಹಿಂದೂ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಹೆರಬೇಕು. ಧರ್ಮದ ಆಧರಿತವಾಗಿಯೇ ಮತ ಚಲಾಯಿಸಬೇಕು’ ಎಂದರು. ‘ನಾವೆಲ್ಲರೂ ಒಗ್ಗೂಡದಿದ್ದರೆ, ಹಿಂದೂ ಧರ್ಮ ಬೆಂಬಲಿಸದಿದ್ದರೆ ನಮ್ಮ ಮಹಿಳೆಯರಿಗೆ ಸುರಕ್ಷತೆ ಇರುವುದಿಲ್ಲ. ಪ್ರಧಾನಿ ಮೋದಿ ಮತ್ತು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಬೆಂಬಲಿಸಬೇಕು’ ಎಂದು ಕಾಳಿಚರಣ್ ಮಹಾರಾಜ್ ಹೇಳಿದರು.

ಬಸವ ನಮನ

ಲ್ಯಾಂಬೆತ್ ಬಸವೇಶ್ವರ ಫೌಂಡೇಷನ್ ಲಂಡನ್‌ನಲ್ಲಿ ಸೋಮವಾರ ಬಸವ ಜಯಂತಿ ಹಮ್ಮಿಕೊಂಡಿತ್ತು. ಫೌಂಡೇಷನ್‌ನ ಅಧ್ಯಕ್ಷ ಡಾ. ನೀರಜ್ ಪಾಟೀಲ್, ಬ್ರಿಟನ್‌ನಲ್ಲಿರುವ ಭಾರತದ ಹೈಕಮಿಷನರ್ ಗಾಯತ್ರಿ ಕುಮಾರ್, ಬ್ರಿಟನ್‌ನ ‘ಕನ್ನಡ ಬಳಗ’ದ ಮುಖ್ಯಸ್ಥರಾದ ಡಾ.ಸ್ನೇಹಾ ಕುಲಕರ್ಣಿ ಹಾಗೂ ‘ಕನ್ನಡಿಗರು ಯು.ಕೆ’ ಮುಖ್ಯಸ್ಥರಾದ ಗಣಪತಿ ಭಟ್ ಮೊದಲಾದವರು ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ನವಾಬ್ ಮಲಿಕ್ ಸ್ಥಿತಿ ಗಂಭೀರ: ವಕೀಲರ ಹೇಳಿಕೆ

ಮುಂಬೈ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಎನ್‌ಸಿಪಿ ಮುಖಂಡ, ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಅನಾರೋಗ್ಯಕ್ಕೀಡಾಗಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಜ್ವರ ಮತ್ತು ಭೇದಿಯಿಂದ ಬಳಲುತ್ತಿರುವ ಮಲಿಕ್ ಅವರನ್ನು ಮುಂಬೈಯಲ್ಲಿರುವ ಸರ್ಕಾರಿ ಸ್ವಾಮ್ಯದ ಜೆಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಿತಿ ಗಂಭೀರವಾಗಿದೆ ಎಂದು ಅವರ ವಕೀಲರು ವಿಶೇಷ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಮಲಿಕ್ ಅವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಜೆಜೆ ಆಸ್ಪತ್ರೆಯ ವೈದ್ಯರು ಹೇಳಿದ್ದಾರೆ.

ನ್ಯಾಯಾಂಗ ಬಂಧನದಲ್ಲಿದ್ದ ಮಲಿಕ್ ಅವರನ್ನು ಆರ್ಥರ್ ರಸ್ತೆಯ ಜೈಲಿನಲ್ಲಿ ಇರಿಸಲಾಗಿತ್ತು. ಅನಾರೋಗ್ಯದ ಕಾರಣ ಜಾಮೀನು ನೀಡಬೇಕೆಂದು ಅವರು ನ್ಯಾಯಾಲಯವನ್ನು ಕೋರಿದ್ದರು. ಆದರೆ, ಅವರ ಮನವಿ ತಿರಸ್ಕೃತಗೊಂಡಿತ್ತು.

ಪ್ರಧಾನಿ ಸಲಹೆಗಾರರಾಗಿ ತರುಣ್ ಕಪೂರ್ ನೇಮಕ

ನವದೆಹಲಿ (ಪಿಟಿಐ): ಪೆಟ್ರೋಲಿಯಂ ಇಲಾಖೆಯ ಮಾಜಿ ಕಾರ್ಯದರ್ಶಿ, ನಿವೃತ್ತ ಐಎಎಸ್ ಅಧಿಕಾರಿ ತರುಣ್ ಕಪೂರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಗಾರರನ್ನಾಗಿ ಸೋಮವಾರ ನೇಮಿಸಲಾಗಿದೆ.

ಈ ಬಗ್ಗೆ ಕೇಂದ್ರದ ಸಂಪುಟ ನೇಮಕಾತಿ ಸಮಿತಿ ಸೋಮವಾರ ಅಧಿಕೃತ ಮಾಹಿತಿ ನೀಡಿದೆ.

ಹಿಮಾಚಲ ಪ್ರದೇಶದ 1987ರ ಬ್ಯಾಚ್‌ನ ಐಎಎಸ್ ಅಧಿಕಾರಿ ತರುಣ್ ಕಪೂರ್ ಅವರನ್ನು ಎರಡು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ. ಭಾರತ ಸರ್ಕಾರದ ಕಾರ್ಯದರ್ಶಿ ಹಂತದ ಸ್ಥಾನಮಾನಗಳನ್ನು ಕಪೂರ್ ಅವರಿಗೆ ನೀಡಲಾಗುತ್ತದೆ.

ಹ್ಯಾಂಡ್ ಗ್ರೆನೇಡ್ ಪತ್ತೆ: ಯೋಧನ ಬಂಧನ

ಶ್ರೀನಗರ: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ಭಾರತೀಯ ಸೇನೆಯ ಯೋಧರೊಬ್ಬರ ಬ್ಯಾಗ್‌ನಲ್ಲಿ ಜೀವಂತ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದ್ದು, ಯೋಧನನ್ನು ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ವೆಲ್ಲೂರು ಮೂಲದ ಬಾಲಾಜಿ ಸಂಪತ್ ಬಂಧಿತ ಯೋಧ. ನಿಲ್ದಾಣದಲ್ಲಿ ಬ್ಯಾಗ್‌ಗಳನ್ನು ತಪಾಸಣೆ ಮಾಡುವಾಗ ಜೀವಂತ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದೆ. ಬಂಧಿತ ಯೋಧ ಇಂಡಿಗೋ ವಿಮಾನದಲ್ಲಿ ಶ್ರೀನಗರದಿಂದ ದೆಹಲಿ ಮೂಲಕ ಚೆನ್ನೈಗೆ ತೆರಳಬೇಕಿತ್ತು. ಹೆಚ್ಚಿನ ವಿಚಾರಣೆಗಾಗಿ ಆರೋಪಿ ಯೋಧನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬೇಅಂತ್ ಸಿಂಗ್ ಪ್ರಕರಣ: 2 ತಿಂಗಳಲ್ಲಿ ನಿರ್ಧರಿಸಲು ಸೂಚನೆ

ನವದೆಹಲಿ (ಪಿಟಿಐ): ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬೇಅಂತ್ ಸಿಂಗ್ ಅವರ ಹತ್ಯೆ (1995) ಪ್ರಕರಣದಲ್ಲಿ 26 ವರ್ಷಗಳ ಕಾಲ ಸೆರೆವಾಸ ಅನುಭವಿಸಿದ ಕಾರಣಕ್ಕೆ, ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಬೇಕು ಎಂದು ಬಲವಂತ್ ಸಿಂಗ್ ರಾಜೋನಾ ಎಂಬುವರ ಮನವಿಯನ್ನು ಎರಡು ತಿಂಗಳೊಳಗೆ ನಿರ್ಧರಿಸುವಂತೆ ಸುಪ್ರೀಂಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ನೇತೃತ್ವದ ಪೀಠವು ಈ ಕುರಿತು ಸೂಚನೆ ನೀಡಿತು.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ: ಅಭ್ಯರ್ಥಿ ಜೊತೆ ₹40 ಲಕ್ಷಕ್ಕೆ ಡೀಲ್; ₹10 ಲಕ್ಷ ಮುಂಗಡ

ಶಾಂತಿಬಾಯಿ ಪರಾರಿಗೆ ಸೂಚಿಸಿದ್ದ ಜ್ಯೋತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಬಂಧನಕ್ಕೊಳಗಾಗಿರುವ ಶಹಾಬಾದ್ ನಗರಸಭೆಯ ಸಿಬ್ಬಂದಿ ಜ್ಯೋತಿ ಪಾಟೀಲ, ಅಭ್ಯರ್ಥಿ ಶಾಂತಿಬಾಯಿ ಹಾಗೂ ಅವರ ಪತಿ ಬಸ್ಯನಾಯ್ಕಗೆ ಪರಾರಿಯಾಗುವಂತೆ ತಾವೇ ಸೂಚಿಸಿದ್ದಾಗಿ ಸಿಐಡಿ ತನಿಖೆ ವೇಳೆ ಒಪ್ಪಿಕೊಂಡಿದ್ದಾರೆ.

ಸೇಡಂ ತಾಲ್ಲೂಕಿನ ಕೋನಪುರ ತಾಂಡಾಕ್ಕೆ ಏಪ್ರಿಲ್ 10ರಂದು ತೆರಳಿದ್ದ ತನಿಖಾಧಿಕಾರಿಗಳು ವಿಚಾರಣೆಗೆ ತಮ್ಮೊಂದಿಗೆ ಬರುವಂತೆ ಶಾಂತಿಬಾಯಿ ಹಾಗೂ ಬಸ್ಯನಾಯ್ಕಗೆ ಸೂಚಿಸಿದ್ದರು. ಬೇರೆ ಕಡೆ ಹೋಗಿರುವುದಾಗಿ ತಿಳಿಸಿದ ಬಸ್ಯನಾಯ್ಕ ಆ ನಂತರ ಪತ್ನಿಯನ್ನು ಕರೆದುಕೊಂಡು ಪರಾರಿಯಾಗಿದ್ದರು. ಒಂದು ವೇಳೆ ಶಾಂತಿಬಾಯಿ ಸಿಕ್ಕರೆ ತಾವು ನಿಕಟ ಸಂಪರ್ಕ ಹೊಂದಿರುವುದು ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಪರಾರಿಯಾಗಲು ಹೇಳಿದ್ದೆ ಎಂದು ಜ್ಯೋತಿ ವಿಚಾರಣೆ ವೇಳೆ ತಿಳಿಸಿದ್ದಾಗಿ ಸಿಐಡಿ ಮೂಲಗಳು ಹೇಳಿವೆ.


ಜ್ಯೋತಿ ಪಾಟೀಲ

'₹40 ಲಕ್ಷಕ್ಕೆ ಡೀಲ್'!: ಪಿಎಸ್‌ಐ ಹುದ್ದೆಗೆ ಆಯ್ಕೆಯಾಗುವಂತೆ ನೋಡಿಕೊಳ್ಳಲು ಜ್ಯೋತಿ ಪಾಟೀಲ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದರು. ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಶಾಂತಿಬಾಯಿ ಹೆಸರು ಬರುವುದಕ್ಕೂ ಮುನ್ನವೇ ₹ 10 ಲಕ್ಷ ಹಣವನ್ನು ಮುಂಗಡ ಪಡೆದಿರುವುದಾಗಿ ಜ್ಯೋತಿ ತಿಳಿಸಿದ್ದಾರೆ. ಆಯ್ಕೆಪಟ್ಟಿಯಲ್ಲಿ ಹೆಸರು ಕಾಣಿಸಿ ಕೊಂಡ ಬಳಿಕ ಉಳಿದ ₹ 30 ಲಕ್ಷವನ್ನು ಕೊಡಲು ಸಿದ್ಧತೆ ಮಾಡಿಕೊಂಡಿದ್ದರು. ಅಷ್ಟರಲ್ಲಿ ಹಗರಣ ಬೆಳಕಿಗೆ ಬಂತು. ಹೀಗಾಗಿ, ಉಳಿದ ಹಣ ವನ್ನು ನೀಡಲು ಆಗಲಿಲ್ಲ ಎಂಬುದು ತಿಳಿದು ಬಂದಿದೆ' ಎಂಬುದು ಈ ಮೂಲಗಳ ಮಾಹಿತಿ.

'ಬಂಧಿತ ಜ್ಯೋತಿ ಪಾಟೀಲ ಹಾಗೂ ದಿವ್ಯಾ ಹಾಗರಗಿ ಹಿಂದೆಯೂ ಇಂತಹ ಹಲವು ಅಕ್ರಮ ನೇಮಕಾತಿಗಳಲ್ಲಿ ಕೈಜೋಡಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಯಾವ ಪರೀಕ್ಷೆಗ ಳಲ್ಲಿ ಅಕ್ರಮ ಮಾರ್ಗದ ಮೂಲಕ ಅಭ್ಯರ್ಥಿಗಳು ಆಯ್ಕೆಯಾಗುವಂತೆ ನೋಡಿಕೊಂಡಿದ್ದಾರೆ ಎಂಬ ಬಗ್ಗೆಯೂ ವಿಚಾರಣೆ ನಡೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಶಹಾಬಾದ್ ನಗರಸಭೆಯಲ್ಲಿ ದ್ವಿತೀಯ ದರ್ಜೆ ಸಹಾಯಕಿಯಾಗಿ ನೇಮಕವಾಗಿದ್ದ ಜ್ಯೋತಿ, ಕೆಲ ರಾಜಕಾರಣಿಗಳ ಪ್ರಭಾವ ಬಳಸಿಕೊಂಡು ಬೆಂಗಳೂರಿನ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ತೆರಳಿದ್ದರು. ಅಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಕೆಲಸ ಮಾಡಿದ್ದರು. ತಮ್ಮ ಪ್ರಭಾವ ಬಳಸಿಕೊಂಡು ಕೆಲ ವರ್ಗಾವಣೆಗಳನ್ನೂ ಮಾಡಿಸಿದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಇತ್ತೀಚೆಗಷ್ಟೇ ಬೆಂಗಳೂರಿನಿಂದ ಶಹಾಬಾದ್ ನಗರಸಭೆಗೆ ವಾಪಸಾಗಿದ್ದರು.

ಅಭ್ಯರ್ಥಿಗಳನ್ನು ಕರೆತರುವ ಕೆಲಸವನ್ನು ಜ್ಯೋತಿ ಮಾಡುತ್ತಿದ್ದರು. ತಾನು ಭಾರಿ ಪ್ರಭಾವಿ ಎಂದು ತೋರಿಸಿಕೊಳ್ಳಲು ಸಚಿವರು, ಶಾಸಕರು ತಮಗೆ ಪರಿಚಯವಿದ್ದಾರೆ ಎಂದು ಹೇಳುತ್ತಿದ್ದರು ಎನ್ನಲಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ದಿವ್ಯಾ ಹಾಗರಗಿ ಅವರಿಗೆ ಸೇರಿದ ಹಡಗಿಲ್ ಹಾರುತಿ ಗ್ರಾಮದ ಬಳಿಯ ಜಮೀನಿಗೂ ಭೇಟಿ ನೀಡಿದ್ದರು. ಆ ಚಿತ್ರಗಳು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಮಾಹಿತಿ ನೀಡದ ರುದ್ರಗೌಡ, ಮುಖ್ಯ ಶಿಕ್ಷಕ ಕಾಶಿನಾಥ

ನೇಮಕಾತಿ ಹಗರಣದ ಪ್ರಮುಖ ಸೂತ್ರಧಾರಿ ಎನ್ನಲಾಗುತ್ತಿರುವ ಅಫಜಲಪುರದ ರುದ್ರಗೌಡ ಡಿ. ಪಾಟೀಲ ಹಾಗೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ತನಿಖಾಧಿಕಾರಿಗಳ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಿಲ್ಲ ಎಂದು ಗೊತ್ತಾಗಿದೆ.

ರುದ್ರಗೌಡ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸುವ ಬದಲು ಅಸಡ್ಡೆಯಿಂದ ಪ್ರತಿಕ್ರಿಯಿಸುತ್ತಿದ್ದಾರೆ. ಹೀಗಾಗಿ, ಪ್ರಕರಣದಲ್ಲಿ ಬಂಧಿತರಾದ ಇತರ ಅಭ್ಯರ್ಥಿಗಳಿಗೆ ತಾವು ಮಾಡಿದ ಸಹಾಯದ ವಿವರಗಳು, ದಾಖಲೆಗಳನ್ನು ಸಿಐಡಿ ಅಧಿಕಾರಿಗಳು ಬಿಚ್ಚಿಟ್ಟ ಬಳಿಕವಷ್ಟೇ ರುದ್ರಗೌಡ ಒಂದಷ್ಟು ಮಾಹಿತಿ ನೀಡುತ್ತಿದ್ದಾರೆ.

ಸೋಮವಾರವಷ್ಟೇ ಸಿಐಡಿಗೆ ಶರಣಾಗಿರುವ ಕಾಶಿನಾಥ ಸಹ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸುತ್ತಿಲ್ಲ ಎಂದು ತಿಳಿದು ಬಂದಿದೆ.

ಮತ್ತೊಬ್ಬ ಅಭ್ಯರ್ಥಿ ವಿಚಾರಣೆ

ಸಿಐಡಿ ಅಧಿಕಾರಿಗಳು ಸೋಮವಾರ ಸಂಜೆ ಕಲಬುರಗಿಯ ರಾಜಾಪುರ ನಿವಾಸಿ ಪ್ರಭು ಶರಣಪ್ಪ ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಇವರೂ ಪರೀಕ್ಷೆಯಲ್ಲಿ ಅಕ್ರಮ ನಡೆಸಿರಬಹುದು ಎಂಬ ಬಗ್ಗೆ ಸಂಶಯ ಬಂದಿದ್ದರಿಂದ ವಿಚಾರಣೆಗೆ ಕರೆಸಿಕೊಳ್ಳಲಾಗಿದೆ.

3 ಕೋಟಿ ವೆಚ್ಚದ ಮನೆ ಕಟ್ಟಿಸುತ್ತಿರುವ ಆರೋಪಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ, ಅಮರ್ಜಾ ನೀರಾವರಿ ಯೋಜನೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ನಗರದ ಓಕಳಿ ಕ್ಯಾಂಪ್ ಬಡಾವಣೆಯಲ್ಲಿ ಸುಮಾರು ₹ 3 ಕೋಟಿ ವೆಚ್ಚದಲ್ಲಿ ಬೃಹತ್ ಮನೆ ನಿರ್ಮಿಸುತ್ತಿರುವುದನ್ನು ಸಿಐಡಿ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

'ಅಕ್ರಮ ನೇಮಕಾತಿ ಪ್ರಕರಣ ಬಯಲಾಗದೆ ಹೋಗಿದ್ದರೆ ಇಂಟಿರಿಯರ್ ಡಿಸೈನ್‌ಗೆ ಅಗತ್ಯವಾದ ಪರಿಕರ ಹಾಗೂ ಪೀಠೋಪಕರಣಗಳನ್ನು ತರಲು ತಯಾರಿ ನಡೆಸಿದ್ದ. ಅದಕ್ಕಾಗಿ ಈತ ವಿದೇಶಕ್ಕೂ ತೆರಳುವವನಿದ್ದ. ಕಳೆದ ಕೆಲ ದಿನಗಳಿಂದ ಮನೆ ಕೆಲಸ ಸ್ಥಗಿತಗೊಂಡಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಕಲಬುರಗಿಯ ಸೇಡಂ ರಸ್ತೆಯ ಓಕಳಿ ಕ್ಯಾಂಪ್ ಬಡಾವಣೆಯಲ್ಲಿ ನಿರ್ಮಾಣ ಹಂತದಲ್ಲಿರುವ ಆರೋಪಿ ಮಂಜುನಾಥ ಮೇಳಕುಂದಿ ಮನೆ

ಪ್ರಕರಣ ಬಯಲಾಗುತ್ತಿದ್ದಂತೆ ನಾಪತ್ತೆಯಾಗಿದ್ದ ಮಂಜುನಾಥ ಬೆಂಗಳೂರು, ಮಂಗಳೂರು, ಕಾರವಾರ, ಆಂಧ್ರಪ್ರದೇಶದ ತಿರುಪತಿ ಸೇರಿದಂತೆ ಅನೇಕ ಕಡೆ ಸುತ್ತಾಡಿದ್ದಾರೆ. ಪೊಲೀಸರಿಗೆ ಸಿಕ್ಕಿ ಬೀಳುವ ಭಯದಿಂದ ಒಂದು ಕಡೆ ನೆಲೆ ನಿಂತಿರಲಿಲ್ಲ ಎನ್ನಲಾಗಿದೆ.

ಮಂಜುನಾಥ ಅವರ ತಂದೆ ಎಎಸ್‌ಐ ಹುದ್ದೆಯಿಂದ ನಿವೃತ್ತರಾಗಿದ್ದು, ತನಿಖಾಧಿಕಾರಿಗಳು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಕಣ್ಣೀರಿಟ್ಟರು ಎಂದು ತಿಳಿದು ಬಂದಿದೆ. ತನಿಖಾಧಿಕಾರಿಗಳು ಸಮಾಧಾನಪಡಿಸಿ, 'ನಿಮ್ಮ ಮಗನಿಗೆ ಬಂದು ಶರಣಾಗಲು ಹೇಳುವ ಮೂಲಕ ತನಿಖೆಗೆ ಸಹಕರಿಸಿ' ಎಂದಿದ್ದಾರೆ. ಹೀಗಾಗಿ, ಮಂಜುನಾಥ ಸಿಐಡಿ ಅಧಿಕಾರಿಗಳಿಗೆ ಶರಣಾಗಿದ್ದಾರೆ.

3 ದಿನ ಸಿಐಡಿ ಕಸ್ಟಡಿಗೆ: ಮಂಜುನಾಥ ಹಾಗೂ ಮತ್ತೊಬ್ಬ ಆರೋಪಿ ಶ್ರೀಧರ ಪವಾರ ಅವರನ್ನು ನ್ಯಾಯಾಧೀಶರು ಮೂರು ದಿನಗಳ ಕಾಲ ಸಿಐಡಿ ಕಸ್ಟಡಿಗೆ ಒಪ್ಪಿಸಿದ್ದಾರೆ.

ದಿವ್ಯಾ ಬಗ್ಗೆ ಮಕ್ಕಳ ಬೇಸರ

ಕಲಬುರಗಿ: 'ನಿನ್ನಿಂದಲೇ ಅಪ್ಪ ಜೈಲಿಗೆ ಹೋಗುವಂತಾಯಿತು' ಎಂದು ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರಿಗೆ ಅವರ ಪುತ್ರರು ಅಸಮಾಧಾನ ವ್ಯಕ್ತಪಡಿಸಿ ಕಣ್ಣೀರು ಹಾಕಿದ ಘಟನೆ ವಿಚಾರಣೆ ಸಂದರ್ಭದಲ್ಲಿ ನಡೆದಿದೆ.

ಪ್ರಕರಣ ಬೆಳಕಿಗೆ ಬಂದ ಬಳಿಕ ಬಂಧನವನ್ನು ತಪ್ಪಿಸಿಕೊಳ್ಳಲು ದಿವ್ಯಾ ನಾಪತ್ತೆಯಾಗಿದ್ದರು. ಹಾಗಾಗಿ, ಅವರ ಪತಿ ರಾಜೇಶ್ ಹಾಗರಗಿ ಅವರನ್ನು ಬಂಧಿಸಲಾಗಿತ್ತು. ಇದರಿಂದಾಗಿ ಅವರ 14 ಹಾಗೂ 8 ವರ್ಷದ ಇಬ್ಬರು ಗಂಡು ಮಕ್ಕಳನ್ನು ವಿಜಯಪುರದ ತವರು ಮನೆಯಲ್ಲಿ ಇರಿಸಲಾಗಿತ್ತು. ದಿವ್ಯಾ ಅವರ ಸಹೋದರ ಭಾನುವಾರ ಮಕ್ಕಳನ್ನು ಕಲಬುರಗಿಗೆ ಕರೆತಂದಿದ್ದರು.

ಇಲ್ಲಿನ ಐವಾನ್ ಇ ಶಾಹಿ ಅತಿಥಿಗೃಹದಲ್ಲಿ ತಾಯಿಯನ್ನು ಭೇಟಿ ಮಾಡಿದ ಮಕ್ಕಳು ಅಳುತ್ತಲೇ ಬೇಸರ ವ್ಯಕ್ತಪಡಿಸಿದರು. ಮಕ್ಕಳನ್ನು ಕಂಡ ಕೂಡಲೇ ದಿವ್ಯಾ ಸಹ ಕಣ್ಣೀರು ಹಾಕಿದರು. 'ಇಬ್ಬರೂ ಮಕ್ಕಳು ತಾಯಿಗಿಂತ ತಂದೆಯೊಂದಿಗೆ ಹೆಚ್ಚು ಒಡನಾಟ ಇಟ್ಟುಕೊಂಡಿದ್ದಾರೆ. ಹೀಗಾಗಿಯೇ ರಾಜೇಶ್ ಬಂಧನಕ್ಕೆ ಒಳಗಾಗಿದ್ದು ಮಕ್ಕಳಲ್ಲಿ ತೀವ್ರ ಬೇಸರ ಉಂಟು ಮಾಡಿದೆ' ಎಂದು ಹಾಗರಗಿ ಕುಟುಂಬದೊಂದಿಗೆ ಒಡನಾಟ ಹೊಂದಿರುವ ಬಿಜೆಪಿ ಮುಖಂಡರೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

'ಅಕ್ರಮ ಕಲಬುರಗಿಗಷ್ಟೇ ಸೀಮಿತವಲ್ಲ; ಉಳಿದೆಡೆಯೂ ತನಿಖೆ ನಡೆಸಿ'

ಮೈಸೂರು: 'ಪಿಎಸ್‌ಐ ನೇಮಕಾತಿ ಅಕ್ರಮವನ್ನು ಕಲಬುರಗಿಗೆ ಸೀಮಿತಗೊಳಿಸಿ ಆರ್‌.ಡಿ.ಪಾಟೀಲ, ದಿವ್ಯಾ ಹಾಗರಗಿ ಅವರನ್ನು ಹಿಡಿದಿರುವುದಾಗಿ ಬಿಜೆಪಿ ಸರ್ಕಾರ ಬೆನ್ನು ತಟ್ಟಿಕೊಳ್ಳುತ್ತಿದೆ. ಇನ್ನೂ ಹಲವಾರು ಪರೀಕ್ಷಾ ಕೇಂದ್ರಗಳ ಬಗ್ಗೆ ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿದ್ದು, ಆ ಬಗ್ಗೆ ತನಿಖೆಯೇ ನಡೆಸಿಲ್ಲ' ಎಂದು ಶಾಸಕ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕಲಬುರಗಿ ಬಿಟ್ಟು ಬೆಂಗಳೂರು, ಬೆಳಗಾವಿಗೆ ಬಂದರೆ ತನಿಖೆ ಚುರುಕಾಗುತ್ತದೆ. ಆಗ ಸರ್ಕಾರದ ಮಟ್ಟದಲ್ಲಿ ಯಾರಿಗೆ ದುಡ್ಡು ಹೋಗಿದೆ ಎಂಬುದು ಗೊತ್ತಾಗುತ್ತದೆ. ಮಧ್ಯವರ್ತಿಗಳಾಗಿರುವ ಆರ್‌.ಡಿ.ಪಾಟೀಲ, ದಿವ್ಯಾ ಹಾಗರಗಿ ಯಾರ ಪರ ಕೆಲಸ ಮಾಡುತ್ತಿದ್ದರು? ಅಭ್ಯರ್ಥಿಗಳಿಂದ ಹಣ ಸಂಗ್ರಹಿಸಿದ್ದು ಯಾರ ಪಾಲಾಗಿದೆ' ಎಂದು ಪ್ರಶ್ನಿಸಿದರು.

'ದಿವ್ಯಾ ಹಾಗರಗಿ ಸಿಕ್ಕಿದ ತಕ್ಷಣ ಮೂರು ತಾಸುಗಳಲ್ಲಿ ಮರು ಪರೀಕ್ಷೆ ಎಂದರು. ಮರುಪರೀಕ್ಷೆ ಮಾಡುವ ಉದ್ದೇಶವಿದ್ದರೆ 545 ಮಂದಿಯ ಓಎಂಆರ್ ಶೀಟ್ ತರಿಸಿಕೊಂಡಿದ್ದು ಏಕೆ? ಪ್ರಾಮಾಣಿಕರೂ ಈಗ ಧರಣಿ ಕುಳಿತಿದ್ದಾರೆ. ಪರೀಕ್ಷೆ ಬರೆದ 57 ಸಾವಿರ ಮಂದಿಯೂ ಪ್ರತಿಭಟನೆ ನಡೆಸುತ್ತಿದ್ದಾರೆ' ಎಂದರು.

'545 ಅಭ್ಯರ್ಥಿಗಳಲ್ಲಿ ಸುಮಾರು 300 ಮಂದಿ ಅಕ್ರಮ ನಡೆಸಿದ್ದಾರೆ ಎಂದು ಸರ್ಕಾರವೇ ಹೇಳುತ್ತಿದೆ. ಆದರೆ, 19 ಜನರನ್ನು ಮಾತ್ರ ಬಂಧಿಸಲಾಗಿದೆ. ಇನ್ನುಳಿದವರು ಎಲ್ಲಿ ಹೋದರು? ಎಲ್ಲರೂ ಕಲಬುರಗಿಯಲ್ಲಿ ಪರೀಕ್ಷೆ ಬರೆಯಲು ಸಾಧ್ಯವೇ? ಬೆಳಗಾವಿಯಲ್ಲಿ ದೈಹಿಕ ಸಾಮರ್ಥ್ಯ ಪರೀಕ್ಷೆ ವಿಚಾರವಾಗಿ ದಾಖಲಾದ ಪ್ರಕರಣದ ತನಿಖೆ ಏನಾಯಿತು' ಎಂದು ಕೇಳಿದರು.

'ಪರೀಕ್ಷೆ ಅಕ್ರಮದಲ್ಲಿ ಕಾಂಗ್ರೆಸ್ ತಲೆಗಳೇ ಹೆಚ್ಚು ಉರುಳಲಿವೆ'

ಹೊಸಪೇಟೆ (ವಿಜಯನಗರ): 'ಪಿಎಸ್‌ಐ ಪರೀಕ್ಷೆ ಅಕ್ರಮದ ತನಿಖೆಯಲ್ಲಿ ಕಾಂಗ್ರೆಸ್ ತಲೆಗಳೇ ಹೆಚ್ಚು ಉರುಳಲಿವೆ. ಆದರೆ, ಕಾಂಗ್ರೆಸ್‌ನವರು ಶುದ್ಧಹಸ್ತರಂತೆ ಆರೋಪ ಮಾಡುತ್ತಿದ್ದಾರೆ. ಕಲ್ಲು ಹೊಡೆದು ಓಡುವ ಸ್ವಭಾವ ಕಾಂಗ್ರೆಸ್ಸಿಗರದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಟೀಕಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎನ್ನುವುದು ಗೊತ್ತಾದ ಕೂಡಲೇ ನಮ್ಮ ಸರ್ಕಾರ ಸಿಐಡಿಯಿಂದ ತನಿಖೆ ಆರಂಭಿಸಿತು. ಈಗಾಗಲೇ ಅನೇಕರನ್ನು ಬಂಧಿಸಲಾಗಿದೆ. ಪಾರದರ್ಶಕವಾಗಿ ತನಿಖೆ ನಡೆಯುತ್ತಿದ್ದು, ನಮ್ಮ ಪಕ್ಷವಾಗಲಿ, ಸರ್ಕಾರವಾಗಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಯಾರು, ಎಷ್ಟೇ ಪ್ರಭಾವಿಶಾಲಿಯಾಗಿದ್ದರೂ ಬಿಡುವುದಿಲ್ಲ' ಎಂದರು.

Shri C.M.Mudlaiah
1928 ~ 2021
1st Death Anniversary prayers on
4th May 22 at 12 noon
Venue : Taste of Coast RMV 2 nd stage
Sanjay Nagar Bengaluru Deeply mourned
by family pH 9964335352, 9845900729.

ಪ್ರಥಮ ವಾರ್ಷಿಕ ಪುಣ್ಯಸ್ಮರಣೆ

ಶ್ರೀ.ಕೆ. ನಾಗರಾಜಯ್ಯ ನವರು
(ಹರಿಕಥೆ ವಿದ್ವಾನ್, ಜ್ಯೋತಿಷ್ಯ ಪಂಡಿತರು)
ಜನನ: 8.6.1943 ಮರಣ : 6.5.2021
ತಾ|| 3.5.2022ನೇ ಮಂಗಳವಾರ ಬೆಳಿಗ್ಗೆ 10:30ಕ್ಕೆ ಓಬಳಾಪುರ, ತುಮಕೂರು. ಇಲ್ಲಿ ಏರ್ಪಡಿಸಲಾಗಿದೆ ತಾವು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗದವರು
ಮೊ: 9538111239, 9742299833

'ಸರ್ಕಾರವನ್ನು ಬಿಜೆಪಿ ಕಾರ್ಯಕರ್ತರೇ ಮೆಚ್ಚಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರತಿ ದಿನ ಒಂದೊಂದು ಹಗರಣ ಹೊರಬರುತ್ತಿದ್ದು, ಕೆಟ್ಟ ಹೆಸರು ಪಡೆದಿರುವ ಈ ರಾಜ್ಯ ಸರ್ಕಾರವನ್ನು ಬಿಜೆಪಿ ಕಾರ್ಯಕರ್ತರೇ ಮೆಚ್ಚುವುದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಕಿಂಗ್‌ಪಿನ್‌ಗಳ ಜೊತೆಗೆ ಪೊಲೀಸ್ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಭಾಗಿಯಾಗಿರುವ ಶಂಕೆ ಇದೆ. ಹೀಗಾಗಿ, ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿ ತನಿಖೆ ನಡೆಸಬೇಕು' ಎಂದು ಅವರು ಆಗ್ರಹಿಸಿದರು.

'ಪ್ರಾಮಾಣಿಕವಾಗಿ ಪರೀಕ್ಷೆ ಬರೆದವರಿಗೆ ಅನ್ಯಾಯವಾಗಿದೆ. ಪರೀಕ್ಷೆಯ ಪಾವಿತ್ರ್ಯವೇ ಹಾಳಾಗುತ್ತಿದೆ. ಚೆನ್ನಾಗಿ ಓದಿಕೊಂಡವರು ಯಾವಾಗ ಪರೀಕ್ಷೆ ಎದುರಿಸಿದರೂ ಉತ್ತೀರ್ಣರಾಗುತ್ತಾರೆ. ಓದದೇ ಇರುವವರಿಗಷ್ಟೇ ಆತಂಕ' ಎಂದು ಅವರು ಹೇಳಿದರು.

'ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ನಡೆದಿರುವ ವಿಚಾರಗಳನ್ನು ಮನವರಿಕೆ ಮಾಡುವುದನ್ನು ಬಿಟ್ಟು ಬೇರೆಯವರ ಮೇಲೆ ಆರೋಪ ಮಾಡುತ್ತಾರೆ. ಕೆಲಸಕ್ಕೆ ಬಾರದ ಮಾತನಾಡಿ ಜನರಲ್ಲಿ ಗೊಂದಲ ಮೂಡಿಸುತ್ತಿರುವ ಶ್ರೀರಾಮಸೇನೆ, ಆರ್‌ಎಸ್‌ಎಸ್, ಬಜರಂಗದಳದ ಮುಖಂಡರ ವಿರುದ್ಧ ಮುಖ್ಯಮಂತ್ರಿ ತಮ್ಮ ಅಸ್ತ್ರ ಬಳಸಲಿ' ಎಂದು ವಿಶ್ವನಾಥ್ ಆಗ್ರಹಿಸಿದರು.

ಅಕ್ರಮ ಎಸಗಿ 'ಮೊದಲ ರ‍್ಯಾಂಕ್' ?

ಬೆಂಗಳೂರು: ಪಿಎಸ್‌ಐ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಮೊದಲ ರ‍್ಯಾಂಕ್ (ಮಹಿಳಾ ವಿಭಾಗ) ಪಡೆದಿದ್ದ ವಿಜಯಪುರದ ರಚನಾ ಹನುಮಂತ ಸಹ ಅಕ್ರಮ ಎಸಗಿರುವುದು ಸಿಐಡಿ ತನಿಖೆಯಿಂದ ಪತ್ತೆಯಾಗಿದ್ದು, ಅವರ ವಿರುದ್ಧವೂ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಅಕ್ರಮ ಎಸಗಿದ್ದ ಆರೋಪದಡಿ 22 ಅಭ್ಯರ್ಥಿಗಳ ವಿರುದ್ಧ ಸಿಐಡಿ ಆರ್ಥಿಕ ಗುಪ್ತದಳ ವಿಭಾಗದ ಡಿವೈಎಸ್ಪಿ ಪಿ. ನರಸಿಂಹಮೂರ್ತಿ ನೀಡಿದ್ದರು. ಇದರಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ರಚನಾ ಕೂಡಾ ಆರೋಪಿ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿಐಡಿ ವಿಚಾರಣೆ ಎದುರಿಸಿದ್ದ ರಚನಾ ಅವರ ಒಎಂಆರ್ ಕಾರ್ಬನ್ ಪ್ರತಿ ಹಾಗೂ ಅಸಲಿ ಪ್ರತಿ ನಡುವೆ ಸಾಕಷ್ಟು ವ್ಯತ್ಯಾಸಗಳು ಕಂಡುಬಂದಿದೆ.

ರಚನಾ ಹನುಮಂತ

ರಚನಾ ಸಹ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದ್ದು, ಅವರ ಒಎಂಆರ್ ಪ್ರತಿಯನ್ನು ಸಿಐಡಿ ಅಧಿಕಾರಿಗಳು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ' ಎಂದೂ ತಿಳಿಸಿವೆ.

'ಕ್ರಮ ಸಂಖ್ಯೆ 9252741 ಅಭ್ಯರ್ಥಿ ಆಗಿದ್ದ ರಚನಾ ಹನುಮಂತ, ಪತ್ರಿಕೆ – 1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 25 ಅಂಕ ಹಾಗೂ ಪತ್ರಿಕೆ –2ರಲ್ಲಿ (ಸಾಮಾನ್ಯ ಅಧ್ಯಯನ) 128.25 ಅಂಕ ಪಡೆದಿದ್ದರು. ಒಟ್ಟು 153.25 ಅಂಕ ಪಡೆದು ಮಹಿಳಾ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದುಕೊಂಡಿದ್ದಾರೆ. ಪತ್ರಿಕೆ–2ರ ಒಎಂಆರ್ ಪ್ರತಿಯಲ್ಲೇ ಸಾಕಷ್ಟು ವ್ಯತ್ಯಾಸಗಳು ಇದೆ' ಎಂದೂ ಮೂಲಗಳು ತಿಳಿಸಿವೆ.

ಪ್ರತಿಭಟನೆಯಲ್ಲಿದ್ದ ರಚನಾ: 545 ಪಿಎಸ್‌ಐ ನೇಮಕಾತಿಗಾಗಿ ಮರು ಲಿಖಿತ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸುತ್ತಿದ್ದಂತೆ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ್ದರು. ರಚನಾ ಹನುಮಂತ ಸಹ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಶ್ವತ್ಥನಾರಾಯಣ ಮೌನಿ ಬಾಬಾ ಏಕೆ– ಉಗ್ರಪ್ಪ

ಬೆಂಗಳೂರು: 'ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿರುವ ಮಾಗಡಿ ತಾಲ್ಲೂಕಿನ ದರ್ಶನ್ ಗೌಡ ಅವರಿಂದ ₹ 80 ಲಕ್ಷಕ್ಕೂ ಹೆಚ್ಚಿನ ಹಣ ಪಡೆಯಲಾಗಿದ್ದು, ಇದರ ಹಿಂದೆ ಪ್ರಭಾವಿ ಸಚಿವರ ಸಹೋದರನ ಮೇಲೆ ಆರೋಪವಿದೆ. ಪ್ರಭಾವಿ ಸಚಿವರು ಕರೆ ಮಾಡಿ ಆ ಅಭ್ಯರ್ಥಿಯನ್ನು ವಿಚಾರಣೆಯಿಂದ ಬಿಡುಗಡೆಗೊಳಿಸಿದ್ದಾರೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಎಚ್.ಎಂ. ರೇವಣ್ಣ ಜತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ರಾಮನಗರ ಜಿಲ್ಲೆ ಉಸ್ತುವಾರಿ ಸಚಿವ ಅಶ್ವತ್ಥನಾರಾಯಣ ಈ ವಿಚಾರದಲ್ಲಿ ಮೌನಿ ಬಾಬಾ ಆಗಿರುವುದೇಕೆ? ಸಹಾಯಕ ಪ್ರಾಧ್ಯಾಪಕ ಹುದ್ದೆ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ನಾಗರಾಜ್ ಹಾಗೂ ಸೌಮ್ಯಾ ಎಂಬುವವರ ಬಂಧನವಾಗಿದ್ದು, ಆ ಪ್ರಕರಣದಲ್ಲೂ ಅವರು ಮೌನವಾಗಿರುವುದು ಸಂಶಯ ಹುಟ್ಟು ಹಾಕಿದೆ' ಎಂದರು. 'ದರ್ಶನ್ ಗೌಡನಿಗೆ ನೋಟಿಸ್ ನೀಡಿದ್ದರೂ ಬಂಧಿಸಿಲ್ಲ ಯಾಕೆ? ಹಣ ನೀಡಿರುವ ವಿಷಯ ಬಹಿರಂಗ ಆಗಬಹುದೆಂದು ಆತನನ್ನು ಬಂಧಿಸದೇ, ವಿಚಾರಣೆ ನಡೆಸದಂತೆ ಸಂಚು ರೂಪಿಸಲಾಗಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

General

ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್ ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟೀರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

ಉದ್ಯೋಗಾವಕಾಶ

Part-Time Jobs

GALAXY PARTTIME Join Male work with Haiprofile, College girl, Housewife, Earn 15000- 25000. 7043061715, 8979597135

ಕರ್ನಾಟಕದ ಎಲ್ಲಾ ಭಾಗದವರಿಗೆ ಮನೆಯಿಂದಲೇ ಕುಳಿತು ಬುಕ್ ಬರೆಯುವ, ಫಾರಂ ತುಂಬುವ ಕೆಲಸ ಮಾಡಿ.ತಿಂಗಳಿಗೆ 18,000-26,000/-ಸಂಪಾದಿಸಿ ಗೃಹಿಣಿಯರಿಗೆ,ವಿದ್ಯಾರ್ಥಿಗಳಿಗೆ, ವಯಸ್ಸಾದವರಿಗೂ ಅವಕಾಶ ಪಾರ್ಟ್-ಟೈಂ/ಫುಲ್-ಟೈಂ. 9353497350, 8904253623

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನಲ್ಲಿ ಮತ್ತೊಮ್ಮೆ ಗೋಲ್ಡನ್ ಜಾಬ್ ಆಫರ್- 24 ಗಂಟೆಯ ಮನೆ ಕೆಲಸ (ಗುಡಿಸುವುದು, ಒರೆಸುವುದು, ಅಡುಗೆಮಾಡುವುದು). ಸಂಬಳ- 20,000/- ಬೆಂಗಳೂರು ತಲುಪಲು ಸಾರಿಗೆ ಸೌಲಭ್ಯ, ಬೆಂಗಳೂರಿನಲ್ಲಿರುವ ಮಹಿಳಾ ಹಾಸ್ಟೆಲ್ನಲ್ಲಿ ವಸತಿ ಸೌಲಭ್ಯ, ಪರಿಶೀಲಿಸಿದ ಕುಟುಂಬದಲ್ಲಿ ಕೆಲಸ. ಕರೆ ಮಾಡಿ : 7045875963/ 7045221111

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ ssle puc degree ಸಂಬಳ15000 to 28000 ಸಂಪರ್ಕಿಸಿರಿ 9980814578,9980812378

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000-56,000/- ವಸತಿಯೂಟದೊಂದಿಗೆ 8197650569, 7204396011

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ. ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸಮಾಜಸೇವೆ

Others

HOME NURSE/ Caregiver/ Male/Female available for Day/Night-24/7 for more details contact: MAJ, Grand Majestic Mall, Gandhinagar, Majestic, Bangalore- 6366883838, 7022399993.

Old Age Home

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ.ಹೋಂ ನರ್ಸ್ ಕೆಲಸ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು,ಯುವಕರು ತಕ್ಷಣ ಬೇಕಾಗಿದ್ದಾರೆ.ಊಟ, ವಸತಿ ಉಚಿತ ಸಂಬಳ 13,000-16,000/- ಸಂ. 8123699421, 8880954221

ಪ್ರವಾಸ

Travel

24 ವರ್ಷಗಳ ಅನುಭವಿ ಪ್ರವಾಸಿ ಸಂಸ್ಥೆಯಿಂದ 11.06.2022 27.06.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ.27.05.2022, 04.06.2022 ರಿಂದ 8 ದಿನಗಳ ಶಿಮ್ಲಾ,ಕುಲುಮನಾಲಿ ಚಂಡಿಘಡ್. 27.06.2022 ರಿಂದ 7 ದಿನಗಳ ಕಾಶಿ ಯಾತ್ರ 30.06.2022 09.07.2022 ರಿಂದ 12/8 ದಿನಗಳ ಅಮರನಾಥ್,ಕಾಶ್ಮೀರ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

★ಜುಲೈ 13ರಿಂದ 12 ದಿನಗಳ* ಅಮರನಾಥ, ಜಮ್ಮು, ಶ್ರೀನಗರ, ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ, ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. ಬೆಂಗಳೂರು. 9480253807

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಎಂಇಎಸ್ ಯುವ ಘಟಕದ ಅಧ್ಯಕ್ಷ ಶುಭಂ ಶೆಳಕೆ ವಿವಾದಿತ ಪೋಸ್ಟ್

ಗಡಿ ಜನರು ನ್ಯಾಯಕ್ಕೆ ಕಾಯುತ್ತಿದ್ದಾರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಳಗಾವಿ, ನಿಪ್ಪಾಣಿ, ಕಾರವಾರ, ಬೀದರ್, ಭಾಲ್ಕಿಯನ್ನು ಸೇರಿಸಿಕೊಂಡು ಸಂಯುಕ್ತ ಮಹಾರಾಷ್ಟ್ರ ರಚನೆಯಾಗಬೇಕು. ಗಡಿಯಲ್ಲಿರುವ ಮರಾಠಿ ಭಾಷಿಗರಿಗೆ ನ್ಯಾಯ ಸಿಗಬೇಕು' ಎಂದು ಇಲ್ಲಿನ ಮಹಾರಾಷ್ಟ್ರ ಏಕೀಕರಣ ಸಮಿತಿಯ (ಎಂಇಎಸ್) ಯುವ ಘಟಕದ ಅಧ್ಯಕ್ಷ ಶುಭಂ ಶೆಳಕೆ ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ ಗಡಿ ವಿವಾದವನ್ನು ಮತ್ತೊಮ್ಮೆ ಕೆಣಕಿದ್ದಾರೆ.

ಅಲ್ಲದೇ, ಬೆಳಗಾವಿ, ನಿಪ್ಪಾಣಿ, ಕಾರವಾರ, ಬೀದರ್, ಭಾಲ್ಕಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿದ ರೀತಿಯ ಗ್ರಾಫಿಕ್ ವಿಡಿಯೊ ಮಾಡಿ ಪೋಸ್ಟ್ ಹಾಕಿದ್ದಾರೆ. ಭಾಷಾ ಸಾಮರಸ್ಯ ಕದಡುವ ಪ್ರಯತ್ನ ನಡೆಸಿದ್ದಾರೆ.

'ಕಟ್ಟಾ ಮಹಾರಾಷ್ಟ್ರವಾದಿಗಳಾಗಿರುವ ನಾವು ಮಹಾರಾಷ್ಟ್ರ ದಿನದಂದು ಮುಕ್ತವಾಗಿ ಶುಭಾಶಯ ಹೇಳುವ ಸ್ಥಿತಿಯಲ್ಲಿಲ್ಲ. ಸಂಯುಕ್ತ ಮಹಾರಾಷ್ಟ್ರಕ್ಕಾಗಿ ನಡೆದ ಚಳವಳಿಯಲ್ಲಿ ರಕ್ತ ನೆಲಕ್ಕೆ ಬಿದ್ದು 66 ವರ್ಷಗಳಾಗಿವೆ. ಬೆಳಗಾವಿಯ ಗಡಿಯಲ್ಲಿರುವ ನಿವಾಸಿಗಳು ಇಂದಿಗೂ ನ್ಯಾಯಕ್ಕಾಗಿ ಕಾಯುತ್ತಿದ್ದಾರೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ. ಸಂಪೂರ್ಣ ಸಂಯುಕ್ತ ಮಹಾರಾಷ್ಟ್ರ ಶೀರ್ಷಿಕೆಯಲ್ಲಿ ವಿವಾದಿತ ನಕ್ಷೆಯನ್ನು ಪೋಸ್ಟ್ ಮಾಡಿದ್ದಾರೆ.

ಆಕ್ರೋಶ: ಶುಭಂ ಟ್ವೀಟ್ ಮತ್ತು 'ಕರ್ನಾಟಕದ ಗಡಿ ಭಾಗಗಳ ಮರಾಠಿಗರು ಇರುವ ಸ್ಥಳಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳುವ ಹೋರಾಟಕ್ಕೆ ನಮ್ಮ ಬೆಂಬಲ ಮುಂದುವರಿಯಲಿದೆ' ಎಂಬ ಆ ರಾಜ್ಯದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿಕೆಗೆ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಒಂದಿಂಚೂ ಜಾಗ ಬಿಟ್ಟುಕೊಡಲ್ಲ– ಬೊಮ್ಮಾಯಿ

ಬೆಂಗಳೂರು: 'ರಾಜ್ಯದ ಗಡಿ ಪ್ರದೇಶದ ಒಂದಿಂಚೂ ಜಾಗವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಗಡಿ ಬಗ್ಗೆ ಸರ್ಕಾರದ ನಿಲುವು ಬಹಳ ಸ್ಪಷ್ಟವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಕರ್ನಾಟಕದ ಗಡಿ ಭಾಗಗಳ ಮರಾಠಿ ಭಾಷಿಗರು ಇರುವ ಸ್ಥಳಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳುವ ಹೋರಾಟಕ್ಕೆ ನಮ್ಮ ಬೆಂಬಲ ಮುಂದುವರಿಯಲಿದೆ' ಎಂಬ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿಕೆಗೆ ಬೊಮ್ಮಾಯಿ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಬೊಮ್ಮಾಯಿ, 'ಮಹಾರಾಷ್ಟ್ರದಲ್ಲಿನ ರಾಜಕಾರಣಿಗಳು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಅದಕ್ಕಾಗಿ ರಾಜ್ಯದ ಗಡಿ ಭಾಷೆಗಳ ಬಗ್ಗೆ ಕೆದಕುತ್ತಿದ್ದಾರೆ' ಎಂದರು.

'ಮಹಾರಾಷ್ಟ್ರದವರು ಅವರ ರಾಜಕೀಯ ಉಳಿವಿಗಾಗಿ ರಾಜ್ಯದ ಗಡಿ ಭಾಷೆ ವಿಚಾರಗಳನ್ನು ಎತ್ತುವುದು ಸಣ್ಣತನ. ಮಹಾರಾಷ್ಟ್ರದ ಎಲ್ಲ ರಾಜಕಾರಣಿಗಳು ಈ ರೀತಿಯ ವರ್ತನೆಯನ್ನು ಕೈಬಿಡಬೇಕು' ಎಂದು ಆಗ್ರಹಿಸಿದ ಮುಖ್ಯಮಂತ್ರಿ, 'ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆ ಮಾತನಾಡುವ ಜನರಿರುವ ಹಲವು ಪ್ರದೇಶಗಳಿವೆ. ಈ ಬಗ್ಗೆಯೂ ಕ್ರಮ ತೆಗೆದುಕೊಳ್ಳುವ ಚಿಂತನೆ ಸರ್ಕಾರ ಮಾಡುತ್ತಿದೆ' ಎಂದರು.

ಎಂಇಎಸ್ ಬಗ್ಗೆ ಸರ್ಕಾರದ ಮೃದು ಧೋರಣೆ: ಎಚ್‌ಡಿಕೆ

ಬೆಂಗಳೂರು: 'ಭಾಷೆಯ ಹೆಸರಿನಲ್ಲಿ ಜನರ ಮಧ್ಯೆ ಬೆಂಕಿ ಹಚ್ಚುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಪುಂಡರ ಬಗ್ಗೆ ರಾಜ್ಯದ ಬಿಜೆಪಿ ಸರ್ಕಾರ ಮೃದು ಧೋರಣೆ ತಾಳಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಕರ್ನಾಟಕದ ಕೆಲವು ಭಾಗಗಳನ್ನು ಮಹಾರಾಷ್ಟ್ರದ ಭಾಗ ಎಂಬಂತೆ ಬಿಂಬಿಸಿರುವ ನಕ್ಷೆಗಳನ್ನು ಎಂಇಎಸ್ ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಕುರಿತು ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆಯುತ್ತಿದ್ದಾಗಲೇ ಎಂಇಎಸ್ ಪುಂಡರು ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಧ್ವಂಸ ಮಾಡಿದ್ದರು. ಎಂಇಎಸ್ ನಿಷೇಧಿಸುವಂತೆ ರಾಜ್ಯದ ಜನ ಒಕ್ಕೊರಲಿನಿಂದ ಆಗ್ರಹಿಸಿದ್ದರು. ಬಿಜೆಪಿ ಸರ್ಕಾರ ಅಸಡ್ಡೆ ತೋರಿದ ಪರಿಣಾಮ ಆ ಪುಂಡರು ಮತ್ತೆ ಬಾಲ ಬಿಚ್ಚಿದ್ದಾರೆ' ಎಂದಿದ್ದಾರೆ.

'ಮಹಾರಾಷ್ಟ್ರ ದಿನದ ನೆಪದಲ್ಲಿ ಎಂಇಎಸ್ ಪುಂಡರು ನಾಡದ್ರೋಹ ಎಸಗಿದ್ದಾರೆ. ಕರ್ನಾಟಕದಲ್ಲೇ ಇದ್ದು ಕನ್ನಡ ನೆಲದ ವಿರುದ್ಧ ವಿಧ್ವಂಸಕ ಕೃತ್ಯ ಎಸಗಿರುವ ಶುಭಂ ಶೆಳಕೆ ಎಂಬ ಧೂರ್ತನು ಫೇಸ್‌ಬುಕ್‌ನಲ್ಲಿ ರಾಜ್ಯವನ್ನು ಒಡೆಯುವ ಸಂದೇಶ ಪೋಸ್ಟ್ ಮಾಡಿದ್ದಾನೆ. ಬೆಳಗಾವಿ ಗಲಭೆಯಲ್ಲಿ ಜೈಲು ಸೇರಿದ್ದ ಆತ ಈಗ ಮತ್ತೆ ಕಿಡಿಗೇಡಿತನ ಆರಂಭಿಸಿದ್ದಾನೆ. ಆತನ ವಿರುದ್ಧ ಭಯೋತ್ಪಾದನೆ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದ್ದಾರೆ. ಕರ್ನಾಟಕದಲ್ಲಿ ಕನ್ನಡಿಗರ ಸರ್ಕಾರ ಇದೆಯೆ? ಅಥವಾ ಮಹಾರಾಷ್ಟ್ರದ ಬಾಲಂಗೋಚಿ ಆಡಳಿತ ಇದೆಯೆ? ತಲೆಯ ಮೇಲೆ ಕೇಸರಿ ಪೇಟ, ಭುಜದ ಮೇಲೆ ಕೇಸರಿಶಾಲು ಧರಿಸಿ ಪೋಸು ಕೊಡುವ ಎಂಇಎಸ್ ಪುಂಡರ ಮೇಲೆ ಪ್ರಕರಣ ದಾಖಲಿಸಲು ಬಿಜೆಪಿ ಸರ್ಕಾರಕ್ಕೆ ಮನಸ್ಸು ಒಪ್ಪುತ್ತಿಲ್ಲವೆ? ಎಂದು ಪ್ರಶ್ನಿಸಿದ್ದಾರೆ.

ಜಿಲ್ಲೆ ವಿಭಜನೆ ಮಾತು: ಮಹೇಶ ಜೋಶಿ ಹೇಳಿಕೆಗೆ ಖಂಡನೆ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): 'ಉತ್ತರ ಕನ್ನಡವು ಭೌಗೋಳಿಕವಾಗಿ ವಿಸ್ತಾರವಾಗಿದ್ದು ಪ್ರಗತಿ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಇನ್ನೊಂದು ಜಿಲ್ಲೆಯಾಗಬೇಕು. ಹೊಸ ಜಿಲ್ಲೆಯ ಕೇಂದ್ರವನ್ನು ಜನ ನಿರ್ಧರಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಹೇಳಿದರು. ಇದಕ್ಕೆ ಹಲವರಿಂದ ಖಂಡನೆ ವ್ಯಕ್ತವಾದ ಬಳಿಕ ಅವರು ಸ್ಪಷ್ಟನೆಯನ್ನೂ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕವು ಪಟ್ಟಣದಲ್ಲಿ ಸೋಮವಾರ ಆಯೋಜಿಸಿದ್ದ 'ಅಕ್ಷರೋತ್ಸವ' ಕಾರ್ಯಕ್ರಮದಲ್ಲಿ ಜೋಶಿ ಮಾತನಾಡಿ, ಜಿಲ್ಲೆಯ ವಿಭಜನೆಯ ಬಗ್ಗೆ ಪ್ರಸ್ತಾಪಿಸಿದರು.

'ಕನ್ನಡ ಸಾಹಿತ್ಯ ವೇದಿಕೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು. ಜಿಲ್ಲೆಯ ಜನರು ಭಾವನಾತ್ಮಕವಾಗಿ ಬೆಸೆದುಕೊಂಡಿದ್ದಾರೆ. ಈಗಷ್ಟೇ ವಿಭಜನೆಯ ವಿವಾದ ತಣ್ಣಗಾಗಿದೆ. ಮಹೇಶ ಜೋಶಿಯವರು ಉರಿಯುವ ಬೆಂಕಿಗೆ ತುಪ್ಪ ಸುರಿದಿದ್ದಾರೆ' ಎಂದು ಸಾಹಿತಿಗಳು, ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು.

ಸಿ.ಐ.ಟಿ.ಯು ರಾಜ್ಯ ಘಟಕದ ಕಾರ್ಯದರ್ಶಿ ಯಮುನಾ ಗಾಂವ್ಕರ್, ಸಾಹಿತಿ ಮಹಾಂತೇಶ ರೇವಡಿ, ಪರಿಷತ್‌ನ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ರೋಹಿದಾಸ ನಾಯಕ ಮುಂತಾದವರು ಹೇಳಿಕೆಯನ್ನು ಖಂಡಿಸಿದರು.

ಬಳಿಕ ಸ್ಪಷ್ಟನೆ ನೀಡಿದ ಮಹೇಶ ಜೋಶಿ, 'ಇದು ಸಾಹಿತ್ಯ ಪರಿಷತ್ ನಿಲುವಲ್ಲ; ನನ್ನ ವೈಯಕ್ತಿಕ ಹೇಳಿಕೆ. ಜಿಲ್ಲೆಯ ಅಭಿವೃದ್ಧಿಯ ದೂರದೃಷ್ಟಿಯಿಂದ ಹೇಳಿದ್ದೇನೆ ವಿನಾ ರಾಜಕೀಯವಾಗಿ ಅಲ್ಲ' ಎಂದರು.

ಮಂಗಳವಾರ, ಮೇ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 122 | ಪುಟ 20

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಕ್ಷಯ ಫಲದ ತೃತೀಯಾ 7

ಈದ್ ಉಲ್ ಫಿತ್ರ್ ಶುಭಾಶಯಗಳು

ಬಸವ ಜಯಂತಿ ಶುಭಾಶಯಗಳು

ಪಿಎಸ್‌ಐ: ಆರೋಪಿ ಅಭ್ಯರ್ಥಿಗಳು ಬಾಯ್ಬಿಟ್ಟ ಸಂಗತಿ

₹1.25 ಕೋಟಿವರೆಗೂ ಬಿಕರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿ ಆಯ್ಕೆಯಾಗುವುದಕ್ಕಾಗಿ ಆರೋಪಿ ಅಭ್ಯರ್ಥಿಗಳು, ₹ 30 ಲಕ್ಷದಿಂದ ₹ 1.25 ಕೋಟಿವರೆಗೂ ಹಣ ಕೊಟ್ಟಿದ್ದಾರೆಂಬ ಮಾಹಿತಿ ಸಿಐಡಿಗೆ ಲಭ್ಯವಾಗಿದೆ. ಹಣ ವರ್ಗಾವಣೆಗೆ ಸಂಬಂಧಪಟ್ಟ ಪುರಾವೆಗಳಿಗಾಗಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಮಮತೇಶ್ ಗೌಡ

ಒಎಂಆರ್ ತಿದ್ದಿ ಹಾಗೂ ಬ್ಲೂಟೂತ್ ಉಪಕರಣ ಮೂಲಕ ಅಕ್ರಮ ಎಸಗಿ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೆಸರು ಗಿಟ್ಟಿಸಿದ್ದ 22 ಅಭ್ಯರ್ಥಿಗಳ ವಿರುದ್ಧ ಈಗಾಗಲೇ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳಾದ ಹೆಡ್ ಕಾನ್‌ಸ್ಟೆಬಲ್ ಎಸ್. ಮಮತೇಶ್ ಗೌಡ, ಕಾನ್‌ಸ್ಟೆಬಲ್‌ಗಳಾದ ಬಿ. ಗಜೇಂದ್ರ, ಸಿ. ಯಶವಂತ ದೀಪ, ಸಾಮಾನ್ಯ ಅಭ್ಯರ್ಥಿಗಳಾದ ಆರ್. ಮಧು, ಎಚ್.ಯು. ರಘುವೀರ್, ಸಿ.ಎಂ. ನಾಗರಾಜ್, ಮನುಕುಮಾರ್ ಸೇರಿದಂತೆ 12 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಕಲಬುರಗಿ ಪ್ರಕರಣದಲ್ಲಿ 26 ಮಂದಿಯನ್ನು ಬಂಧಿಸಲಾಗಿದ್ದು, ಒಟ್ಟಾರೆ ಬಂಧಿತರ ಸಂಖ್ಯೆ 38ಕ್ಕೆ ಏರಿದೆ.

ಹೈಗ್ರೌಂಡ್ಸ್ ಠಾಣೆ ಪ್ರಕರಣದ ತನಿಖೆಯನ್ನೂ ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಬಂಧಿತ 12 ಅಭ್ಯರ್ಥಿಗಳನ್ನು ಸಿಐಡಿ ಅಧಿಕಾರಿಗಳು ಭಾನುವಾರ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

6ನೇ ಪುಟ ನೋಡಿ

ಕಾಶಿನಾಥ

ಮುಖ್ಯ ಶಿಕ್ಷಕ ಕಾಶಿನಾಥ ಶರಣು

ಕಲಬುರಗಿ: ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ನಗರದ ದಿವ್ಯಾ ಹಾಗರಗಿ ಒಡೆತನದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಸೋಮವಾರ ಬೆಳಿಗ್ಗೆ ಸಿಐಡಿ ಅಧಿಕಾರಿಗಳಿಗೆ ಶರಣಾಗಿದ್ದಾರೆ.

6ನೇ ಪುಟ ನೋಡಿ

ಅಶ್ವತ್ಥನಾರಾಯಣ– ಡಿಕೆಶಿ ವಾಕ್ಸಮರ

ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಸಚಿವರೊಬ್ಬರ ಸೋದರ ಭಾಗಿಯಾಗಿದ್ದಾರೆ ಎಂಬ ವಿಷಯ ದೊಡ್ಡಮಟ್ಟದ ಚರ್ಚೆಯನ್ನು ಹುಟ್ಟುಹಾಕಿದೆ.

‘ಅಕ್ರಮದಲ್ಲಿ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರ ಸೋದರನ ಪಾತ್ರ ಇದೆ’ ಎಂದು ಕಾಂಗ್ರೆಸ್ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆರೋಪಿಸಿದ್ದರು. ಆ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಹೆಸರು ಪ್ರಸ್ತಾಪಿಸದೇ ವಾಗ್ದಾಳಿ ನಡೆಸಿದ್ದರು. ಅದಕ್ಕೆ ತಕ್ಷಣವೇ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, ‘ನನ್ನ ಏಳಿಗೆ ಸಹಿಸಲಾಗದ ಶಿವಕುಮಾರ್ ಅವರು ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಕಟ್ಟುಕತೆಗಳನ್ನು ಸೃಷ್ಟಿಸಿದ್ದಾರೆ’ ಎಂದಿದ್ದಲ್ಲದೇ, ಕಾನೂನು ಕ್ರಮ ಜರುಗಿಸುವ ಎಚ್ಚರಿಕೆಯನ್ನೂ ನೀಡಿದ್ದಾರೆ.

‘ಬೆಳವಣಿಗೆ ಸಹಿಸದೇ ಷಡ್ಯಂತ್ರ’

- ಶಿವಕುಮಾರ್ ನನ್ನ ಸಹೋದರ ಸತೀಶ್ ವಿರುದ್ಧ ಮಾಡಿರುವ ಆರೋಪಕ್ಕೆ ಸಾಕ್ಷ್ಯ ನೀಡಲಿ. ನಮ್ಮ ಕುಟುಂಬದಲ್ಲಿ ಭ್ರಷ್ಟಾಚಾರ ಪದ್ಧತಿ ಇಲ್ಲ, ಆ ರೀತಿ ಇರಲಿಕ್ಕೆ ನಮ್ಮದು ಡಿಕೆಶಿ ಕುಟುಂಬವೂ ಅಲ್ಲ.
- ಪಿಎಸ್‌ಐ ನೇಮಕಾತಿ ವಿಚಾರದಲ್ಲಿ ಯಾವುದೇ ವ್ಯಕ್ತಿಗೂ ಶಿಫಾರಸು ಮಾಡುವ ಪ್ರಶ್ನೆಯೇ ಇಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸುತ್ತಾರೆ.

‘ಕುಂಬಳಕಾಯಿ ಕಳ್ಳ ಅಂದರೆ...’



- ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಪ್ರಭಾವಿ ಸಚಿವರ ಪಾತ್ರ ಇದೆ ಎಂದು ಮಾಧ್ಯಮಗಳು ಬಿಚ್ಚಿಟ್ಟಿವೆ. ನಾನು ಅದರ ಬಗ್ಗೆ ಮಾತನಾಡಿದ್ದೆ. ಕುಂಬಳಕಾಯಿ ಕಳ್ಳ ಅಂದ್ರೆ ಅಶ್ವತ್ಥನಾರಾಯಣ್ ಹೆಗಲು ಮುಟ್ಟಿ ನೋಡಿಕೊಂಡಿದ್ದೇಕೆ?

6ನೇ ಪುಟ ನೋಡಿ

ಚಿನ್ನದ ದರ ₹ 745, ಬೆಳ್ಳಿ ₹ 1,228ರಷ್ಟು ಇಳಿಕೆ | 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ತಯಾರಿಕಾ ಚಟುವಟಿಕೆಗೆ ವೇಗ

ನವದೆಹಲಿ: ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಏಪ್ರಿಲ್‌ನಲ್ಲಿ ವೇಗದ ಬೆಳವಣಿಗೆ ಕಂಡಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ. 3D

‘ಉಕ್ರೇನ್: ಯಾರಿಗೂ ಜಯ ಸಿಗದು’

ಬರ್ಲಿನ್ (ಪಿಟಿಐ): ‘ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಯಾರೂ ಗೆಲ್ಲುವುದಿಲ್ಲ. ಎಲ್ಲರೂ ನಷ್ಟ ಅನುಭವಿಸುತ್ತಾರೆ. ಭಾರತವು ಯಾವಾಗಲೂ ಶಾಂತಿಯ ಪರವಿರುತ್ತದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಪ್ರತಿಪಾದಿಸಿದರು. 3D

ಸಿ.ಎಂ ಬದಲಾವಣೆ ಸದ್ದು!

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ರಾಜ್ಯ ಭೇಟಿಯ ಸಂದರ್ಭದಲ್ಲೇ ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಮಾಡಲಾಗುತ್ತದೆ ಎಂಬ ಸದ್ದು ಜೋರಾಗಿದೆ. 3D

‘ಕೋವಿಡ್ ಲಸಿಕೆಯ ಪ್ರತಿಕೂಲ ಪರಿಣಾಮ ಬಹಿರಂಗಪಡಿಸಿ’

ನವದೆಹಲಿ: ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಯಾರನ್ನೂ ಬಲವಂತ ಮಾಡುವಂತಿಲ್ಲ. ಲಸಿಕೆ ಹಾಕಿಸಿದ್ದರಿಂದ ಆದ ಪ್ರತಿಕೂಲ ಪರಿಣಾಮಗಳನ್ನು ಬಹಿರಂಗಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. 3D



ಬನಶಂಕರಿ 6ನೇ ಹಂತಕ್ಕೆ 20 ವರ್ಷ ಕಳೆದರೂ ಪೂರೈಕೆಯೇ ಆಗದ ಕುಡಿಯುವ ನೀರು

ಹೆಸರಿಗೆ ಪ್ರತಿಷ್ಠಿತ: ಸೌಕರ್ಯ ಕನಿಷ್ಠ

• ವಿಜಯಕುಮಾರ್ ಎಸ್.ಕೆ.

ಬನಶಂಕರಿ 6ನೇ ಹಂತದಲ್ಲಿ ರಸ್ತೆ ಬದಿ ಬಿದ್ದಿರುವ ಕಸದ ರಾಶಿ –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

ಬೆಂಗಳೂರು: ಮೂಲಸೌಕರ್ಯ ಇಲ್ಲ, ಕುಡಿಯುವ ನೀರಿಲ್ಲ, ಉದ್ಯಾನಗಳಿಲ್ಲ, ಪಾದಚಾರಿ ಮಾರ್ಗಗಳಿಲ್ಲ, ನೆಮ್ಮದಿಯ ಬದುಕಂತೂ ಇಲ್ಲವೇ ಇಲ್ಲ...

ಇದು ಎಲ್ಲ ಇಲ್ಲಗಳ ನಡುವಿನ ಬನಶಂಕರಿ 6ನೇ ಹಂತದ ಸ್ಥಿತಿ. ರಾಜರಾಜೇಶ್ವರಿನಗರಕ್ಕೆ ಹೊಂದಿಕೊಂಡಂತೆ ನೈಸ್ ರಸ್ತೆ ಬದಿಯಲ್ಲಿರುವ ಈ ಬಡಾವಣೆ ಹೆಸರಿಗಷ್ಟೇ ಪ್ರತಿಷ್ಠಿತ ಬಡಾವಣೆ. ಆದರೆ, ಇಲ್ಲಿ ಮೂಲಸೌಕರ್ಯ ಎಂಬುದು ಮರೀಚಿಕೆಯಾಗಿದೆ.

ಕರಿಯನಪಾಳ್ಯ, ಗುಬ್ಬಲಾಳ, ಗಾಣಗಲ್ಲು, ಚಿಕ್ಕೇಗೌಡನಪಾಳ್ಯ, ಪಟ್ಟೇಗಾರಪಾಳ್ಯ ಸುತ್ತಮುತ್ತಲ ಹಲವು ಹಳ್ಳಿಗಳ ಜಮೀನನ್ನು 1999ರಲ್ಲಿ ಸ್ವಾಧೀನಪಡಿಸಿಕೊಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, 20 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು 14 ಬ್ಲಾಕ್‌ಗಳಲ್ಲಿ ಅಭಿವೃದ್ಧಿಪಡಿಸಿದೆ. ನಿವೇಶನಗಳನ್ನು ನಾಗರಿಕರಿಗೆ ಹಂಚಿಕೆ ಮಾಡಲಾಗಿದ್ದು, ಬಹುತೇಕ ಮನೆಗಳು ನಿರ್ಮಾಣವಾಗಿವೆ.

ತುರಹಳ್ಳಿ ಅರಣ್ಯಕ್ಕೆ ಹೊಂದಿಕೊಂಡಂತೆ ಇರುವ ಈ ಬಡಾವಣೆಯಲ್ಲಿ ಉತ್ತಮವಾದ ಹವಾಗುಣ ಇದೆ. ಬೆಂಗಳೂರು ನಗರದೊಳಗಿನ ಉಷ್ಣಾಂಶಕ್ಕಿಂತ ಕಡಿಮೆ ಉಷ್ಣಾಂಶ ಇರುತ್ತದೆ. ಆದರೆ, ಮೂಲ ಸೌಕರ್ಯ ಇಲ್ಲದೆ ನಿವಾಸಿಗಳು ಬಳಲುತ್ತಿದ್ದಾರೆ.

20 ವರ್ಷಗಳಷ್ಟು ಹಳೆಯದಾದ ಈ ಬಡಾವಣೆಯಲ್ಲಿ ಕುಡಿಯುವ ನೀರಿನ ಸಂಪರ್ಕವನ್ನೇ ಬಿಡಿಎ ಕಲ್ಪಿಸಿಲ್ಲ. ಕಾವೇರಿ ನೀರಿನ ಕೊಳವೆ ಈ ಬಡಾವಣೆ ಪಕ್ಕದಲ್ಲಿ ಹಾದು ಹೋಗಿದೆ. ಆದರೆ, ಈ ಬಡಾವಣೆಗಳಿಗೆ ಮಾತ್ರ ಕಾವೇರಿ ನೀರಿನ ಭಾಗ್ಯ ದೊರೆತಿಲ್ಲ.

‘ಕೊಳವೆ ಬಾವಿ ಮೂಲಕವಾದರೂ ನೀರು ಪೂರೈಸುವ ವ್ಯವಸ್ಥೆಯನ್ನೂ ಬಿಡಿಎ ಮಾಡಿಲ್ಲ. ನಮ್ಮ ನಿವೇಶನಗಳಲ್ಲಿ ಕೊಳವೆ ಬಾವಿಗಳಲ್ಲಿನ ನೀರೇ ನಮಗೆ ಜೀವ ಜಲ. ಅಂತರ್ಜಲ ಮಟ್ಟ ಕುಸಿದಿರುವುದರಿಂದ ನಿತ್ಯ ಪರದಾಡುವ ಸ್ಥಿತಿ ಇದೆ. ಪ್ರತಿದಿನವೂ ಹಣ ಪಾವತಿಸಿ ಟ್ಯಾಂಕರ್ ನೀರು ತರಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ’ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

‘ಮೂಲೆ ನಿವೇಶನಗಳ ಹರಾಜು ಪ್ರಕ್ರಿಯೆ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಬಿಡಿಎ ಪ್ರತಿಷ್ಠಿತ ಬಡಾವಣೆ ಎಂದು ಹೆಸರಿಸುತ್ತದೆ. ನಾಗರಿಕರಿಗೆ ಕುಡಿಯುವ ನೀರಿನ ಸೌಕರ್ಯವನ್ನೇ ಕಲ್ಪಿಸದೆ ಪ್ರತಿಷ್ಠಿತ ಬಡಾವಣೆ ಆಗುವುದಾದರೂ ಹೇಗೆ’ ಎಂದು ಅವರು ಪ್ರಶ್ನಿಸುತ್ತಾರೆ.

ಬಡಾವಣೆಯ ಒಳಚರಂಡಿ ವ್ಯವಸ್ಥೆಯೂ ಸಮರ್ಪಕವಾಗಿಲ್ಲ. ಎಲ್ಲೆಂದರಲ್ಲಿ ಬಾಯಿ ತೆರೆದಿರುವ ಮ್ಯಾನ್‌ಹೋಲ್‌ಗಳು ಸಾಮಾನ್ಯವಾಗಿವೆ. ತ್ಯಾಜ್ಯ ಸಂಸ್ಕರಣ ಘಟಕಗಳು ಇಲ್ಲದಿರುವುದರಿಂದ ಒಳಚರಂಡಿ ನಿರ್ವಹಣೆ ಇಲ್ಲವಾಗಿದೆ. ಕೆಲವೆಡೆ ಒಂದು ಮ್ಯಾನ್‌ಹೋಲ್‌ನಿಂದ ಇನ್ನೊಂದು ಮ್ಯಾನ್‌ಹೋಲ್‌ಗೆ ಪೈಪ್ ಅಳವಡಿಕೆಯೇ ಆಗದೆ ನೀರು ರಸ್ತೆಗೆ ಹರಿಯುವ ಸ್ಥಿತಿ ಇದೆ. ಇದರಿಂದ ಸಾಂಕ್ರಾಮಿಕ ರೋಗದ ಬೀತಿ ಕಾಡುತ್ತಿದೆ ಎಂದು 2ನೇ ಬ್ಲಾಕ್ ನಿವಾಸಿಗಳು ದೂರುತ್ತಾರೆ.



ಮೂಲಸೌಕರ್ಯಗಳಿಂದ ವಂಚಿತವಾಗಿರುವ ಬನಶಂಕರಿ 6ನೇ ಹಂತದ 2ನೇ ಬ್ಲಾಕ್ ನೋಟ

‘ತ್ಯಾಜ್ಯ ವಿಲೇವಾರಿ ವ್ಯವಸ್ಥೆಯೇ ಇಲ್ಲ’

ಬಡಾವಣೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿಗೆ ಸೂಕ್ತ ವ್ಯವಸ್ಥೆಯೇ ಇಲ್ಲ. ಮನೆ ಮನೆಯಿಂದ ಕಸ ಸಂಗ್ರಹ ವ್ಯವಸ್ಥೆಯನ್ನು ಜನಪ್ರತಿನಿಧಿಗಳ ಜತೆ ಸೇರಿ ನಿವಾಸಿಗಳೇ ತಾತ್ಕಾಲಿಕವಾಗಿ ಮಾಡಿಕೊಂಡಿದ್ದಾರೆ.

ರಸ್ತೆ ಸ್ವಚ್ಛತೆ ಮತ್ತು ರಸ್ತೆ ಬದಿಯಲ್ಲಿ ಬೀಳುವ ಕಸ ತೆರವುಗೊಳಿಸುವ ಯಾವುದೇ ವ್ಯವಸ್ಥೆ ಇಲ್ಲ. ಆದ್ದರಿಂದಾಗಿ ಇಡೀ ಬಡಾವಣೆಯೇ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಮುಖ್ಯ ರಸ್ತೆಗಳಲ್ಲಿ, ರಸ್ತೆ ಪಕ್ಕ, ಉದ್ಯಾನಕ್ಕೆ ಮೀಸಲಿಟ್ಟಿರುವ ಜಾಗಗಳಲ್ಲಿ ಕಸ ರಾಶಿ– ರಾಶಿಯಾಗಿ ಬಿದ್ದಿದೆ.

‘ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಮಾರಾಟ ಮಾಡಿರುವ ಬಿಡಿಎ, ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸದೆ ಬಡಾವಣೆಯನ್ನೇ ತಿಪ್ಪೆಗುಂಡಿಯಾಗಿಸಿದೆ’ ಎಂದು ನಿವಾಸಿಗಳು ದೂರುತ್ತಾರೆ.

ಬನಶಂಕರಿ 6ನೇ ಹಂತ, ವಿಶ್ವೇಶ್ವರಯ್ಯ ಬಡಾವಣೆ, ಅಂಜನಾಪುರದಲ್ಲಿ ಕುಡಿಯುವ ನೀರು ಸೇರಿ ಅಗತ್ಯ ಮೂಲ ಸೌಕರ್ಯಕ್ಕೆ ₹444 ಕೋಟಿ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಎಲ್ಲ ಮೂಲಸೌಕರ್ಯ ಒದಗಿಸಿ ಬಡಾವಣೆಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗುವುದು

ಎಂ.ಬಿ.ರಾಜೇಶ್‌ಗೌಡ, ಬಿಡಿಎ ಆಯುಕ್ತ

ಬೀದಿ ದೀಪ ನಿರ್ವಹಣೆ ಅಸಮರ್ಪಕ

ಹೊಂಬಾಳೆಗೌಡ

ಬಡಾವಣೆಯಲ್ಲಿ ಅಲ್ಲಲ್ಲಿ ಬೀದಿ ದೀಪಗಳಿದ್ದರೂ ನಿರ್ವಹಣೆ ಸಮರ್ಪಕವಾಗಿಲ್ಲ. ದೂರು ಸಲ್ಲಿಸಿ ವಾರಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ.

‘ಕಾಡಿನಂಚಿನಲ್ಲಿರುವ 2ನೇ ಬ್ಲಾಕ್‌ಗೆ ಬೀದಿ ದೀಪದ ಅವಶ್ಯಕತೆ ಹೆಚ್ಚು. ಹೊಸ ದೀಪಗಳನ್ನು ಅಳವಡಿಸುವಂತೆ ಕೇಳಿ ಎರಡು ವರ್ಷ ಕಳೆದರೂ ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಿಲ್ಲ. ಕಾಡಿನ ಬಳಿಯಲ್ಲಿರುವ ನಮ್ಮ ಬಡಾವಣೆಗೆ ಹಾವುಗಳು, ಕಾಡು ಪ್ರಾಣಿಗಳ ಉಪಟಳ ಇದೆ. ಆದ್ದರಿಂದ ಕೂಡಲೇ ಬೀದಿ ದೀಪದ ವ್ಯವಸ್ಥೆ ಮಾಡಬೇಕು’ ಎಂದು ಸಂಘದ ಉಪಾಧ್ಯಕ್ಷ ಹೊಂಬಾಳೆಗೌಡ ಮನವಿ ಮಾಡುತ್ತಾರೆ.

ಅರಣ್ಯ ಅತಿಕ್ರಮಣ ಮಾಡಿರುವ ಬಿಡಿಎ: ನಿವಾಸಿಗಳಿಗೆ ಪೀಕಲಾಟ

ಜಿ.ವಿ. ಸತೀಶ್

ತುರಹಳ್ಳಿ ಅರಣ್ಯದ ಪಕ್ಕದಲ್ಲಿರುವ ಈ ಬಡಾವಣೆಯ ಎರಡನೇ ಬ್ಲಾಕ್‌ನ ಕಾಡಂಚಿನ ಮನೆಗಳಿಗೆ ಅರಣ್ಯ ಇಲಾಖೆಯಿಂದಲೂ ಸಮಸ್ಯೆ ಎದುರಾಗಿದೆ.

ಅರಣ್ಯ ಇಲಾಖೆ ಪ್ರಕಾರ, ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿ ಬಿಡಿಎ ನಿವೇಶನ ಅಭಿವೃದ್ಧಿಪಡಿಸಿದೆ. ಬಿಡಿಎ ನಂಬಿ ನಿವೇಶನ ಖರೀದಿಸಿದವರು ಈಗ ತೊಂದರೆ ಅನುಭವಿಸುವಂತಾಗಿದೆ.

‘ಮನೆ ಕಟ್ಟಲು ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿಪಡಿಸುತ್ತಿದ್ದಾರೆ. ಕಟ್ಟಿರುವ ಮನೆಗಳನ್ನೂ ತೆರವುಗೊಳಿಸುವುದಾಗಿ ಗುರುತು ಮಾಡಿದ್ದಾರೆ. ಸುಮಾರು 40 ನಿವಾಸಿಗಳು ಈ ತೊಂದರೆ ಅನುಭವಿಸುತ್ತಿದ್ದಾರೆ. ಬಿಡಿಎ ಮತ್ತು ಅರಣ್ಯ ಇಲಾಖೆಯ ತಿಕ್ಕಾಟದಿಂದಾಗಿ ನಮ್ಮ ನೆಮ್ಮದಿ ಹಾಳಾಗಿದೆ’ ಎಂದು ಅಳಲು ತೋಡಿಕೊಳ್ಳುತ್ತಾರೆ ನಿವಾಸಿಗಳು.

‘ಅರಣ್ಯ ಇಲಾಖೆಯ ಪ್ರಕಾರ ಸುಮಾರು ಎರಡು ಎಕರೆ ಜಾಗವನ್ನು ಬಿಡಿಎ ಅತಿಕ್ರಮಿಸಿದೆ. ಈ ಸಮಸ್ಯೆ ಪರಿಹರಿಸಲು ಬಿಡಿಎ ಕೂಡ ಮನಸ್ಸು ಮಾಡುತ್ತಿಲ್ಲ’ ಎಂದು ಬನಶಂಕರಿ 6ನೇ ಹಂತ 2ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಜಿ.ವಿ. ಸತೀಶ್ ಹೇಳಿದರು.

ಉದ್ಯಾನಕ್ಕೆ ಮೀಸಲಿಟ್ಟಿರುವ ಜಾಗ ಸ್ಮಶಾನವಾಗಿ ಮಾರ್ಪಟ್ಟಿರುವುದು

ಸ್ಮಶಾನವಾದ ಉದ್ಯಾನ

ನಗರಾಭಿವೃದ್ಧಿ ನಿಯಮಗಳ ಪ್ರಕಾರ ಉದ್ಯಾನಕ್ಕೆ ಸಾಕಷ್ಟು ಜಾಗ ಈ ಬಡಾವಣೆಯ ಯಾವ ಪ್ರದೇಶದಲ್ಲೂ ಇಲ್ಲ. ಕೆಲವಡೆ ಇರುವ ಜಾಗವೂ ಸ್ಮಶಾನವಾಗಿ ಮಾರ್ಪಟ್ಟಿದೆ.

ಯಾವುದೇ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ಮತ್ತು ಉದ್ಯಾನಕ್ಕೆ ನಿರ್ದಿಷ್ಟ ಜಾಗ ಮೀಸಲಿಡಬೇಕು. ರಾಜಕಾಲುವೆ ಪಕ್ಕದ ಬಫರ್ ಜಾಗ, ಹೈಟೆನ್ಷನ್ ವಿದ್ಯುತ್ ತಂತಿ ಕೆಳಗಿನ ಅನುಪಯುಕ್ತ ಜಾಗಗಳನ್ನು ಉದ್ಯಾನ ಎಂದು ನಕ್ಷೆಗಳಲ್ಲಿ ತೋರಿಸಲಾಗಿದೆ.

ಸ್ಥಳಕ್ಕೆ ಹೋಗಿ ಜಾಗ ಪರಿಶೀಲಿಸಿದರೆ ಉದ್ಯಾನ ಎಂದು ಹೇಳುವ ಯಾವುದೇ ಕುರುಹೂ ಸಿಗುವುದಿಲ್ಲ. ಮೀಸಲಿಟ್ಟ ಜಾಗದಲ್ಲಿ ಅಭಿವೃದ್ಧಿ ಕಾಣದೆ ಗಿಡಗಂಟೆಗಳು ಬೆಳೆದು ನಿಂತಿವೆ. ಉದ್ಯಾನವೇ ಅಥವಾ ಕುರುಚಲು ಕಾಡೇ ಎಂದು ಹೇಳಲಾಗದ ಸ್ಥಿತಿ ಇದೆ. ಎರಡನೇ ಬ್ಲಾಕ್‌ನಲ್ಲಿನ ಮುಖ್ಯ ರಸ್ತೆಯ ಪಕ್ಕದಲ್ಲಿ ಸಿಗುವ ಉದ್ಯಾನದ ಜಾಗ ಈಗ ಸ್ಮಶಾನವಾಗಿ ಮಾರ್ಪಟ್ಟಿದೆ.

‘ಇಡೀ ಬಡಾವಣೆಯಲ್ಲಿ ಒಂದೇ ಒಂದು ಉದ್ಯಾನವೂ ಅಭಿವೃದ್ಧಿಯಾಗಿಲ್ಲ. ನಕ್ಷೆಯಲ್ಲಿ ಅನುಪಯುಕ್ತ ಜಾಗವನ್ನು ತೋರಿಸಿ ಬಿಡಿಎ ಅಧಿಕಾರಿಗಳು ಸುಮ್ಮನಾಗಿದ್ದಾರೆ’ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸುತ್ತಾರೆ.

SBI ಭಾರತೀಯ ಸ್ಟೇಟ್ ಬ್ಯಾಂಕ್
ಪ್ರಾದೇಶಿಕ ವ್ಯವಹಾರ ಕಛೇರಿ-1, ಆಡಳಿತ ಕಛೇರಿ,-1,ನೆಲ ಮಹಡಿ, ಎಸ್‌ಬಿಐ ಕೆಜಿ ರಸ್ತೆ ಸಂಕೀರ್ಣ, ಬೆಂಗಳೂರು – 560 009
ಇ-ಮೇಲ್: cmcnopnsr1.aobesban@sbi.co.in, ಮೊಬೈಲ್: 94489 90954

ಗುತ್ತಿಗೆ ಆಧಾರದ ಮೇಲೆ ಕಟ್ಟಡಕ್ಕಾಗಿ ಅಧಿಸೂಚನೆ

ಭಾರತೀಯ ಸ್ಟೇಟ್ ಬ್ಯಾಂಕ್ ಸುಮಾರು 240 ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿರುವ ವಾಣಿಜ್ಯ/ಕಛೇರಿ ಬಳಕೆಗಾಗಿ ಗುತ್ತಿಗೆ ಹಾಗು ಬಾಡಿಗೆ ಆಧಾರದ ಮೇಲೆ ಮಾಲೀಕರಿಗೆ/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಎಸ್‌ಬಿಐ ಶಂಕರಪುರಂ ಶಾಖೆ (40195) ಗಾಗಿ ನೆಲ ಮಹಡಿಯಲ್ಲಿ 240 ಚದರ ಮೀಟರ್‌ನ ± 25% (2600 Sqft+ ಹೆಚ್ಚುವರಿ ಸ್ಥಳ) ಹಳೆಯ ಸಂಖ್ಯೆ ಆಸ್ತಿ ಹೊಂದಿರುವ ಅಸ್ತಿತ್ವದಲ್ಲಿರುವ ಆವರಣದಿಂದ 1.00 km ವ್ಯಾಪ್ತಿಯೊಳಗೆ ಮುಖ್ಯ ರಸ್ತೆಯಲ್ಲಿರಬೇಕು. ನಂ. 12, ಬಾಗಿಲು ಸಂಖ್ಯೆ 41, ನಿಗಮದ ಹಳೆಯ ಸಂಖ್ಯೆ 8, ಪ್ರಸ್ತುತ ಸಂಖ್ಯೆ 8/6 'ಶ್ರೇಯಸ್' ನೆಲ ಮಹಡಿ, ರಂಗ ರಾವ್ ರಸ್ತೆ, ಶಂಕರಪುರಂ, ಬೆಂಗಳೂರು- 560 004

ವಿವರವಾದ ಮಾನದಂಡ, ನಿಯಮಗಳು ಮತ್ತು ಷರತ್ತುಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡಿರುವ ತಾಂತ್ರಿಕ ಬಿಡ್ ಅನ್ನು ಸಲ್ಲಿಸುವ ಸ್ವರೂಪವನ್ನು ಎಸ್‌ಬಿಐನ ವೆಬ್ ಸೈಟ್ www.sbi.co.in ಅಥವಾ bank.sbi ನಿಂದ 04.05.2022 ರಿಂದ 17.05.2022 ರವರೆಗೆ ಡೌನ್‌ಲೋಡ್ ಮಾಡಬಹುದು. ತ್ರಾಂತ್ರಿಕ ಬಿಡ್ ಮತ್ತು ಬೆಲೆ ಬಿಡ್ ಅನ್ನು ಎರಡು ಬೇರೆ ಕವರ್‌ಗಳಲ್ಲಿ, ಮೊಹರು ಸಮೇತ ಪ್ರತ್ಯೇಕವಾಗಿ ಎಸ್‌ಬಿಐ ಪ್ರಾದೇಶಿಕ ವ್ಯವಹಾರ ಕಛೇರಿ-1, ಆಡಳಿತ ಕಛೇರಿ-1 ನೆಲ ಮಹಡಿ, ಕೆಜಿ ರಸ್ತೆ, ಬೆಂಗಳೂರು-9 ಗೆ 17.05.2022 ರಂದು ಸಂಜೆ 4 ಗಂಟೆಯೊಳಗಾಗಿ ಸಲ್ಲಿಸಬೇಕು, ದಲ್ಲಾಳಿಗಳು ಈ ವಹಿವಾಟಿನಲ್ಲಿ ಭಾಗವಹಿಸಲು ಅವಕಾಶವಿಲ್ಲ.

ಸ್ಥಳ :ಬೆಂಗಳೂರು
ದಿನಾಂಕ: 03.05.2022
ಎಸ್‌ಡಿ/ಪ್ರಾದೇಶಿಕ ವ್ಯವಸ್ಥಾಪಕ ಪ್ರದೇಶ-1, ಎಒ-1

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. 01 UBL 2022-23
ದಿನಾಂಕ: 26.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಘಾಟ್ ಸೆಕ್ಷನ್‌ನಲ್ಲಿ (ಕ್ಯಾಸಲ್ ರಾಕ್-ಕುಲೆಮ್ ವಿಭಾಗ) ಎಸ್ & ಟಿ ಗೇರ್‌ಗಳಿಗೆ ವಿದ್ಯುತ್ ಸರಬರಾಜನ್ನು ಬಲಪಡಿಸುವುದು.	ರೂ. 1,23,34,284/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27-05-2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ ಹುಬ್ಬಳ್ಳಿ
PUB/72/AAV/PRB/SWR/2022-23
S.W.Railways SWRRLY SWRRLY

ಪಿಂಚಣಿ ಹಣದಲ್ಲಿ ವಿಧವೆಯರಿಗೆ ಮಾಸಾಶನ

ಪ್ರಜಾವಾಣಿ ವಾರ್ತೆ

ಸಿದ್ರಾಮಪ್ಪ ಎಂ.ದುಲಂಗೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಪಡಸಾವಳಿ ಗ್ರಾಮದ ನಿವೃತ್ತ ಮುಖ್ಯಶಿಕ್ಷಕ ಸಿದ್ರಾಮಪ್ಪ ಎಂ.ದುಲಂಗೆ ಅವರು ಐದು ವರ್ಷಗಳಿಂದ ತಮ್ಮ ಪಿಂಚಣಿ ಹಣದಲ್ಲಿ 80ಕ್ಕೂ ಹೆಚ್ಚು ವಿಧವೆಯರಿಗೆ ತಲಾ ₹300 ಮಾಸಾಶನ ನೀಡುತ್ತಿದ್ದಾರೆ.

ತಡಕಲ್ ಗ್ರಾಮದ ಶಿವಲಿಂಗೇಶ್ವರ ಅನುದಾನಿತ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕರಾಗಿದ್ದ ಸಿದ್ರಾಮಪ್ಪ ಅವರು ನಿವೃತ್ತರಾದ ಬಳಿಕ ಪ್ರತಿ ತಿಂಗಳ ಮೊದಲ ವಾರದಲ್ಲಿ ತಾಲ್ಲೂಕಿನ ಪಡಸಾವಳಿ, ಚಿಂಚೋಳಿ(ಕೆ), ಚಿಂಚೋಳಿ(ಬಿ), ಸಾವಳೇಶ್ವರ, ನಿರಗುಡಿ, ತಡಕಲ್, ಸರಸಂಬಾ ಗ್ರಾಮಗಳಿಗೆ ತೆರಳಿ ಮಾಸಾಶನ ನೀಡುತ್ತಾರೆ.

‘ನನಗೆ ₹45 ಸಾವಿರ ಪಿಂಚಣಿ ಬರುತ್ತಿದೆ. ಅದರಲ್ಲಿ ಪ್ರತಿ ತಿಂಗಳು ₹ 25 ಸಾವಿರ ಹಣವನ್ನು ಅಸಹಾಯಕರಿಗೆ, ಬಡವರಿಗೆ ವಿಶೇಷವಾಗಿ ಮಹಿಳೆಯರಿಗೆ ನೆರವಿನ ರೂಪದಲ್ಲಿ ನೀಡುತ್ತೇನೆ’ ಎಂದು ಸಿದ್ರಾಮಪ್ಪ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಐಇಡಿ ಸ್ಫೋಟ: ಇಬ್ಬರು ಸಿಆರ್‌ಪಿಎಫ್ ಸಿಬ್ಬಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಆವಂತಿಪೋರಾದಲ್ಲಿ ಸೋಮವಾರ ಉಗ್ರರು ಹುದುಗಿಸಿಟ್ಟದ್ದ ಸುಧಾರಿತ ಸ್ಫೋಟಕ ಸಾಮಗ್ರಿ(ಐಇಡಿ) ಸ್ಫೋಟಗೊಂಡು ಇಬ್ಬರು ಸಿಆರ್‌ಪಿಎಫ್ ಸಿಬ್ಬಂದಿ ಗಾಯಗೊಂಡಿದ್ದಾರೆ.

‘ಆವಂತಿಪೋರಾದ ಲಾರ್ಮೂ ಪ್ರದೇಶದಲ್ಲಿ ಎರಡು ಬಂಕರ್ ವಾಹನಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಹಾಗೂ ಕೇಂದ್ರೀಯ ಮೀಸಲು ಪೊಲೀಸ್ ಪಡೆಯು (ಸಿಆರ್‌ಪಿಎಫ್) ನಗರ ಪ್ರದಕ್ಷಣೆ ಮಾಡುತ್ತಿದ್ದ ಸಂದರ್ಭದಲ್ಲಿ ಐಇಡಿ ಸ್ಫೋಟಗೊಂಡಿದ್ದು, ಘಟನೆಯಲ್ಲಿ ಇಬ್ಬರು ಸಿಆರ್‌ಪಿಎಫ್ ಸಿಬ್ಬಂದಿ ಗಾಯಗೊಂಡಿದ್ದಾರೆ’ ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

ಚಿತ್ರಾವಳಿ

ಈದ್ ಉಲ್ ಫಿತ್ರ್ ಅಂಗವಾಗಿ ಪೊಲೀಸರು ಶಿವಾಜಿನಗರದ ರಸೆಲ್ ಮಾರುಕಟ್ಟೆಯಲ್ಲಿ ಸೋಮವಾರ ಪಥಸಂಚಲನ ನಡೆಸಿದರು

‘ಈದ್ ಉಲ್ ಫಿತ್ರ್’ ಅಂಗವಾಗಿ ಶಿವಾಜಿನಗರ ಮಳಿಗೆಗಳ ಬಳಿ ಖರೀದಿಯಲ್ಲಿ ತೊಡಗಿದ್ದ ಮುಸ್ಲಿಂ ಸಮುದಾಯದವರು –ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ನೀವು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿ.

ಶ್ರೀ ಅಖಂಡ ಶ್ರೀನಿವಾಸ ಮೂರ್ತಿ

ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ – 07/05/2022, ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ
(ನೋಂದಣಿ: ಬೆಳಿಗ್ಗೆ 9ರಿಂದ, ಪ್ರವೇಶ ಉಚಿತ)
ಸ್ಥಳ: ಪಾನಿ ಪುರಿ ಮೈದಾನ, ಸರ್ಕಾರಿ ಕಾಲೇಜು ಎದುರು, #2, 1ನೇ ಅಡ್ಡ ರಸ್ತೆ, ಗಣೇಶ ಬ್ಲಾಕ್, ಸುಲ್ತಾನಪಾಳ್ಯ, ಪುಲಿಕೇಶಿನಗರ.

ಸಂಪರ್ಕಕ್ಕೆ:
ಗಿರೀಶ್: 9916667466

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**‘ಕಕ್ಷಿದಾರ’**) ಈ ಕೆಳಕಂಡ “ಷೆಡ್ಯೂಲ್” ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **“ಷೆಡ್ಯೂಲ್ ಸ್ವತ್ತುಗಳು”** ಎಂದು ಕರೆಯಲ್ಪಡುವ, ಸದರಿ ಮಾಲೀಕರಾದ **ಶ್ರೀ. ಸೈಯದ್ ಫಹೀಮ್ ಶಾ, ಬಿನ್ ಶ್ರೀ. ಸೈಯದ್ ಮಜೀದ್ ಶಾ,** ವಯಸ್ಸು 55 ವರ್ಷ, ಪ್ರಸ್ತುತ ವಾಸ: ನಂ.83, ಸಂತ. ಜಾನ್ ಚರ್ಚ್ ರಸ್ತೆ, ಬೆಂಗಳೂರು – 560 005 (**‘ಮಾಲೀಕರು’**) ಇವರೊಡನೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕೆಲವೊಂದು ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಸದರಿ ಷೆಡ್ಯೂಲ್ ಸ್ವತ್ತುಗಳ ಏಕಮೇವ ಮತ್ತು ನಿರುಪಾಧಿಕ ಮಾಲೀಕರೆಂದೂ ಮತ್ತು ಸದರಿ ಷೆಡ್ಯೂಲ್ ಸ್ವತ್ತುಗಳ ಶಾಂತಿಯುತ ಸ್ವಾಧೀನವನ್ನು ಹೊಂದಿರುವುದಾಗಿಯೂ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಕ್ಲೇಮ್‌ಗಳನ್ನು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಂತಹ ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **14 (ಹದಿನಾಲ್ಕು)** ದಿನಗಳ ಅವಧಿಯೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಚಿಕ್ಕಗುಬ್ಬಿ ಗ್ರಾಮದಲ್ಲಿರುವ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸ್ಥಿರಾಸ್ತಿ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ 03 ಎಕರೆ 39.5 ಗುಂಟೆಗಳ ಸಂಪೂರ್ಣ ಜಮೀನುಗಳ ವಿವರಗಳನ್ನು ಈ ಕೆಳಗಿನ ಟೇಬಲ್‌ನಲ್ಲಿ ತಿಳಿಸಲಾಗಿದೆ.

ಕ್ರಮ ಸಂಖ್ಯೆ	ಸರ್ವೆ ನಂ	ವಿಸ್ತೀರ್ಣ	ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :
1	95/2	2 ಎಕರೆ 2.4 ಗುಂಟೆಗಳು	ಸರ್ವೆ ನಂ.95/1	ಸರ್ವೆ ನಂ.96/2	ಸರ್ವೆ ನಂ.97	ಸರ್ವೆ ನಂ. 55 ಮತ್ತು ರಸ್ತೆ
2	96/2	01 ಎಕರೆ 37.1 ಗುಂಟೆಗಳು	ಸರ್ವೆ ನಂ.95/2	ಸರ್ವೆ ನಂ. 96/2 ರ ಉಳಿದ ಭಾಗ	ಸರ್ವೆ ನಂ.97	ಸರ್ವೆ ನಂ. 55 ಮತ್ತು ರಸ್ತೆ

ಸಹಿ/–
ಶ್ರೀನಿವಾಸ್ ಬಿ.ಆರ್. ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
206 & 207, 2ನೇ ಮಹಡಿ, ಹೆಚ್‌ಎಂ ಜೆನೆವ ಹೌಸ್,
14, ಕನ್ನಿಗ್‌ಹ್ಯಾಂ ರಸ್ತೆ, ಬೆಂಗಳೂರು – 560052, ದೂ. ಸಂ. +91-80-6836-1111

ದಿನಾಂಕ: 03.05.2022
ಸ್ಥಳ : ಬೆಂಗಳೂರು

ಮೂಲ ಸೌಕರ್ಯ ಹೆಚ್ಚಿಸುವಂತೆ ಸಾರ್ವಜನಿಕರ ಮನವಿ • ಮುರಿದುಬಿದ್ದಿರುವ ಆಟದ ಪರಿಕರಗಳು

‘ಗಾಯತ್ರಿ ದೇವಿ ಉದ್ಯಾನ’ ನಿರ್ವಹಣೆ ಕೊರತೆ

• ಮನೋಹರ್ ಎಂ.

ಬೆಂಗಳೂರು: ರಾಜಾಜಿನಗರದ ಪ್ರಕಾಶನಗರ ವಾರ್ಡ್‌ನ ಮರಿಯಪ್ಪನಪಾಳ್ಯದಲ್ಲಿರುವ ಗಾಯತ್ರಿ ದೇವಿ ಉದ್ಯಾನವು ನಿರ್ವಹಣೆಯಲ್ಲಿ ಹಿಂದುಳಿದಿದೆ. ಸಾವಿರಕ್ಕೂ ಹೆಚ್ಚು ಮಂದಿ ವಾಯುವಿಹಾರ ಮಾಡುವ ಉದ್ಯಾನದಲ್ಲಿ ಮೂಲ ಸೌಕರ್ಯಗಳು ಇದ್ದೂ ಇಲ್ಲದಂತಾಗಿವೆ ಎನ್ನುವುದು ಇಲ್ಲಿನ ಸಾರ್ವಜನಿಕರ ಅಳಲು.

ಉದ್ಯಾನ ಮೊದಲಿಗೆ ಉತ್ತಮವಾಗಿತ್ತು. ಇತ್ತೀಚೆಗೆ ನಿರ್ವಹಣಾ ಕೊರತೆಯಿಂದ ದುಃಸ್ಥಿತಿಗೆ ತಲುಪುತ್ತಿದ್ದು, ಸಂಬಂಧಪಟ್ಟವರು ಉದ್ಯಾನದ ಅಭಿವೃದ್ಧಿಗೆ ಒತ್ತು ನೀಡಿದರೆ ಜನರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಉದ್ಯಾನದಲ್ಲಿ ಸಮಸ್ಯೆಗಳು ಕೇಳಿ ಬಂದ ಕೂಡಲೇ ಅವುಗಳನ್ನು ಪರಿಹರಿಸಲಾಗುತ್ತಿದೆ. ಆಟದ ಮತ್ತು ವ್ಯಾಯಾಮ ಸಲಕರಣೆಗಳನ್ನು ಶೀಘ್ರದಲ್ಲೇ ಬದಲಾಯಿಸಲಾಗುವುದು.

ಎಸ್.ಸುರೇಶ್ ಕುಮಾರ್, ಶಾಸಕ

ಪ್ರಜಾವಾಣಿ ವಿಶೇಷ

‘ಉದ್ಯಾನ ಮೇಲ್ನೋಟಕ್ಕೆ ಸುಂದರವಾಗಿ ಕಾಣುತ್ತದೆ. ಆದರೆ, ಉದ್ಯಾನ ಪ್ರವೇಶಿಸಿದರೆ ಅಲ್ಲಿನ ಅವ್ಯವಸ್ಥೆಗಳು ಕಣ್ಣಿಗೆ ರಾಚುತ್ತವೆ. ಉದ್ಯಾನದಲ್ಲಿ ವ್ಯಾಯಾಮಕ್ಕೆಂದೇ ವಯಸ್ಸಾದವರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ವ್ಯಾಯಾಮದ ಪರಿಕರಗಳೆಲ್ಲ ಹಾಳಾಗಿ ವರ್ಷಗಳೇ ಕಳೆದಿವೆ’ ಎಂದು ಉದ್ಯಾನದಲ್ಲಿ ವಾಯುವಿಹಾರಕ್ಕೆ ಬರುವ ಗಾಯತ್ರಿ ಹೇಳಿದರು.

‘ಬಹುತೇಕ ವ್ಯಾಯಾಮದ ಪರಿಕರಗಳು ಹಾಳಾಗಿರುವುದರಿಂದ ವಯಸ್ಸಾದವರು ಅವುಗಳನ್ನು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಉದ್ಯಾನಕ್ಕೆ ಬಂದು ಅಸಹಾಯಕರಾಗಿ ಅಲ್ಲಿಂದ ಹಿಂತಿರುಗುತ್ತಾರೆ’ ಎಂದರು.

‘ಉದ್ಯಾನದಲ್ಲಿ ನಡಿಗೆದಾರರೆಲ್ಲ ವಾಯುವಿಹಾರದ ನಂತರ ‘ನಗೆಕೂಟ’ಕ್ಕೆ ಸೇರುತ್ತಿದ್ದೆವು. ಆವರಣದಲ್ಲಿ ಸಂಜೆ ವೇಳೆ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಈಗ ನಗೆಕೂಟಕ್ಕೆ ಬರುವವರ ಸಂಖ್ಯೆಯೂ ಕಡಿಮೆಯಾಗಿದೆ. ಸೊಳ್ಳೆ ನಿಯಂತ್ರಣ ಔಷಧ ಸಿಂಪಡಿಸುವುದು ಸಮರ್ಪಕವಾಗಿ ನಡೆಯುತ್ತಿಲ್ಲ. ಜನರ ಆರೋಗ್ಯದ ಮೇಲೆ ಕಾಳಜಿಯೇ ಇಲ್ಲ’ ಎಂದು ಅಳಲು ತೋಡಿಕೊಂಡರು.

‘ಮಕ್ಕಳ ಆಟದ ಪರಿಕರಗಳು ಮುರಿದು ಬಿದ್ದಿವೆ. ಕೆಲವು ಆಟದ ಪರಿಕರಗಳಲ್ಲಿ ಆಸನವೇ ಇಲ್ಲ. ಮಕ್ಕಳು ಇದನ್ನೇ ಉಪಯೋಗಿಸುತ್ತಿದ್ದಾರೆ. ವ್ಯಾಯಾಮ ಸಲಕರಣೆಗಳೂ ಮುರಿದಿವೆ. ಈ ಸಲಕರಣೆಗಳಿಗೆ ಹಾಕಿರುವ ತಳಪಾಯ ಸಡಿಲಗೊಂಡು ಅಲುಗಾಡುತ್ತಿವೆ. ಕಬ್ಬಿಣದ ಸಲಕರಣೆಗಳಿಗೆ ಗ್ರೀಸ್ ಹಾಕದ ಕಾರಣ ಕರ್ಕಶ ಶಬ್ದ ಮಾಡುತ್ತವೆ. ಇದರಿಂದ ಉದ್ಯಾನದಲ್ಲಿ ಕಿರಿಕಿರಿ ಉಂಟಾಗುತ್ತಿದೆ’ ಎನ್ನುತ್ತಾರೆ ಸ್ಥಳೀಯ ನಿವಾಸಿ ಅಶೋಕ್.

‘ಉದ್ಯಾನಗಳು ನಾಗರಿಕರ ಆರೋಗ್ಯ ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುತ್ತವೆ. ಉದ್ಯಾನವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದು ಪಾಲಿಕೆಯ ಆದ್ಯ ಕರ್ತವ್ಯ. ಆದರೆ, ಪಾಲಿಕೆ ತನ್ನ ಜವಾಬ್ದಾರಿ ಮರೆತಿದೆ’ ಎಂದು ದೂರಿದರು.

ಚಾವಣಿ ಕುಸಿದು ತಿಂಗಳಾಯಿತು: ‘ಉದ್ಯಾನದಲ್ಲಿ ವಿಶ್ರಾಂತಿಗಾಗಿ ನಿರ್ಮಿಸಿರುವ ಸೂರನ್ನು ಯೋಗ, ಧ್ಯಾನ ಇನ್ನಿತರ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದರು. ವಯಸ್ಸಾದವರು ಹೆಚ್ಚಾಗಿ ವಿಶ್ರಾಂತಿ ಪಡೆಯುತ್ತಿದ್ದರು. ವಿಶ್ರಾಂತಿ ಸ್ಥಳದ ಚಾವಣಿ ಕುಸಿದು ತಿಂಗಳಾದರೂ ದುರಸ್ತಿ ಮಾಡಲು ಯಾರೂ ಮುಂದಾಗಿಲ್ಲ. ಇದರಿಂದ ಅಲ್ಲಿ ಕೂರಲು ಜನ ಹೆದರುತ್ತಿದ್ದಾರೆ. ವಿಶ್ರಾಂತಿ ಸ್ಥಳಗಳು ಶಿಥಿಲಾವಸ್ಥೆ ತಲುಪುತ್ತಿವೆ’ ಎಂದು ವಾಯುವಿಹಾರಕ್ಕೆ ಬರುವ ನಂಜುಂಡ ಬೇಸರ ವ್ಯಕ್ತಪಡಿಸಿದರು. ‘ಅಂಗವಿಕಲ ಮಕ್ಕಳಿಗೆ ಮೀಸಲಾಗಿರುವ ಸ್ಥಳ ಸದುಪಯೋಗವಾಗುತ್ತಿಲ್ಲ. ಈ ಸ್ಥಳಕ್ಕೆ ಬೀಗ ಹಾಕಲಾಗಿದೆ. ಅಲ್ಲಿರುವ ಸಲಕರಣೆಗಳೆಲ್ಲ ತುಕ್ಕು ಹಿಡಿಯುತ್ತಿವೆ. ಈ ಸ್ಥಳ ಉಪಯೋಗವಾಗದ ಕಾರಣ ಎಲ್ಲ ಮಕ್ಕಳಿಗೆ ಆಟವಾಡಲು ಅನುವು ಮಾಡಿದರೆ ಒಳ್ಳೆಯದು’ ಎಂದು ಹೇಳಿದರು.

ಉದ್ಯಾನದಲ್ಲಿ ಆಶ್ರಯ ತಾಣದ ಚಾವಣಿ ಕುಸಿದಿರುವುದು



ಉದ್ಯಾನದಲ್ಲಿ ಮಾರ್ಗದ ಪಕ್ಕ ಅಳವಡಿಸಿದ್ದ ಕಬ್ಬಿಣದ ಸರಳುಗಳು ಕಣ್ಮರೆಯಾಗಿರುವುದು

ವಿದ್ಯುತ್ ತಂತಿಗಳು ಕೈಗೆ ತಾಗುವಂತಿರುವುದು

‘ಅವಘಡವಾದರೆ ಯಾರು ಹೊಣೆ’

‘ಉದ್ಯಾನದಲ್ಲಿ ವಿದ್ಯುತ್ ಸಂಪರ್ಕ ವ್ಯವಸ್ಥೆ ಹಾಳಾಗಿದ್ದು, ವಿದ್ಯುತ್ ತಂತಿಗಳು ಎಲ್ಲೆಂದರಲ್ಲಿ ಕಳಚಿಕೊಂಡು ಸಾರ್ವಜನಿಕರಿಗೆ ಅಪಾಯವನ್ನುಂಟು ಮಾಡುವ ಸ್ಥಿತಿಯಲ್ಲಿವೆ. ಮಕ್ಕಳು ಇದರ ಅಕ್ಕಪಕ್ಕದಲ್ಲೇ ಆಟವಾಡುತ್ತಿರುತ್ತಾರೆ. ಏನಾದರೂ ಅನಾಹುತಗಳಾದರೆ ಯಾರು ಹೊಣೆ? ಕೂಡಲೇ ಈ ಅವ್ಯವಸ್ಥೆ ಸರಿಪಡಿಸಿ.

–**ಶ್ಯಾಮ್ ಬುಜಾರೆ ಎಸ್.,** ನಡಿಗೆದಾರರ

‘ಉದ್ಯಾನದಲ್ಲಿ ಭದ್ರತಾ ಲೋಪ’

ಉದ್ಯಾನದಲ್ಲಿ ಭದ್ರತಾ ಲೋಪವೇ ದೊಡ್ಡ ಸಮಸ್ಯೆಯಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಾನಕ್ಕೆ ಬರುವುದರಿಂದ ಇಲ್ಲಿ ಭದ್ರತಾ ಸಿಬ್ಬಂದಿಯ ಅಗತ್ಯವಿದೆ. ಆದರೆ, ಉದ್ಯಾನದಲ್ಲಿ ಭದ್ರತಾ ಸಿಬ್ಬಂದಿಯನ್ನು ಕಂಡು ಬಹಳ ದಿನಗಳಾಯಿತು. ಸಮಸ್ಯೆ ಹೇಳಿಕೊಳ್ಳಲು ಪಾಲಿಕೆ ಸದಸ್ಯರೇ ಇಲ್ಲ. ಪುಂಡರ ಕಾಟ ಇರುವುದರಿಂದ ಭದ್ರತೆಗಾಗಿ ಸಿಬ್ಬಂದಿಯನ್ನು ಶೀಘ್ರವಾಗಿ ನಿಯೋಜಿಸಿ.

–**ಪ್ರಶಾಂತ್,** ಸಾರ್ವಜನಿಕ

ಉತ್ತರಪ್ರದೇಶ: ₹ 775 ಕೋಟಿ ಮೌಲ್ಯದ ಹೆರಾಯಿನ್ ವಶ

ಅಹಮದಾಬಾದ್: ಉತ್ತರಪ್ರದೇಶದ ಮುಜಾಫ್ಫರ್‌ನಗರದ ಮನೆಯೊಂದರಲ್ಲಿ ₹775 ಕೋಟಿ ಮೌಲ್ಯದ ಹೆರಾಯಿನ್ ಅನ್ನು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ದೆಹಲಿ ಮತ್ತು ಉತ್ತರಪ್ರದೇಶ ಪೊಲೀಸರ ಸಹಾಯದಿಂದ ವಶಪಡಿಸಿಕೊಂಡಿದೆ ಎಂದು ಸೋಮವಾರ ಎಟಿಎಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 775 ಕೋಟಿ ಮೌಲ್ಯ ಹೊಂದಿರುವ 155 ಕೆ.ಜಿ.ಯಷ್ಟು ಮಾದಕ ವಸ್ತು ಹೆರಾಯಿನ್ ಅನ್ನು ಪ್ರಮುಖ ಡ್ರಗ್ ಆರೋಪಿ ರಾಜಿ ಹೈದರ್ ಜೈದಿ ಅವರ ಸಹೋದರಿಯ ಮನೆಯಿಂದ ಭಾನುವಾರ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಎಟಿಎಸ್) ಸುನಿಲ್ ಜೋಶಿ ಮಾಹಿತಿ ನೀಡಿದ್ದಾರೆ.

ಗುಜರಾತ್‌ನ ಕರಾವಳಿ ಅರೇಬಿಯನ್ ಸಮುದ್ರದಲ್ಲಿ ₹280 ಕೋಟಿ ಮೌಲ್ಯದ ಹೆರಾಯಿನ್‌ನೊಂದಿಗೆ ಪಾಕಿಸ್ತಾನದ 9 ಪ್ರಜೆಗಳನ್ನು ಬಂಧಿಸಲಾಗಿತ್ತು. ಬಳಿಕ ಏಪ್ರಿಲ್ 27ರಂದು ದೆಹಲಿ ಮತ್ತು ಉತ್ತರಪ್ರದೇಶದ ವಿವಿಧೆಡೆ ಎಟಿಎಸ್ ಮತ್ತು ಮಾದಕವಸ್ತು ನಿಯಂತ್ರಣ ಮಂಡಳಿ (ಎನ್‌ಸಿಬಿ)ಯಿಂದ ಬಂಧಿತರಾಗಿದ್ದ ನಾಲ್ವರು ಆರೋಪಿಗಳಲ್ಲಿ ಜೈದಿ ಕೂಡಾ ಇದ್ದ.

ಮುಜಾಫ್ಫರ್‌ನಗರದಲ್ಲಿರುವ ತನ್ನ ಸಹೋದರಿಯ ಮನೆಯಲ್ಲಿ ಜೈದಿ ದೊಡ್ಡ ಪ್ರಮಾಣದಲ್ಲಿ ಮಾದಕ ದ್ರವ್ಯ ಸಂಗ್ರಹವನ್ನು ಹೊಂದಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಎಟಿಎಸ್ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಜೋಶಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

MISSING

Missing from Vanagaram, Chennai (Native place: Hoshiarpur, Punjab–144216) Fair looking, Height 5'6" wearing Black Yellow striped T Shirt if any one found any information about Him please

Rahul Badyal (37)

Finder will be Suitably Rewarded

Contact : 8416906302, 8146062142, 7006492984

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಮಂಗಳೂರು, ಬಲ್ಮಠ ರಸ್ತೆ, ಮಂಗಳೂರು– 575001. ಫೋನ್: 0824-2863322/2863325, ಇ-ಮೇಲ್: pecomlr@canarabank.com

ಪ್ರಸ್ತಾವನೆಗಾಗಿ ವಿನಂತಿ ಆಹ್ವಾನ ಸೂಚನೆ (ಆರ್‌ಎಫ್‌ಪಿ)–ಇ–ಟೆಂಡರಿಂಗ್

ಮಂಗಳೂರು ವೃತ್ತದ ಅಡಿಯಲ್ಲಿನ ವಿವಿಧ ಶಾಖೆಗಳಿಗೆ ದರ್ಜೆ ಎ ಮತ್ತು ಬಿಬಿ ಟಿಆರ್‌ಟಿಎಲ್ ಜ್ಯುವೆಲ್ ಸೇಫ್‌ಗಳ ಪೂರೈಕೆ

ಕೆನರಾ ಬ್ಯಾಂಕ್ ಮಂಗಳೂರು ವೃತ್ತದ ವ್ಯಾಪ್ತಿಯಲ್ಲಿನ ವಿವಿಧ ಶಾಖೆಗಳಿಗೆ **ದರ್ಜೆ ಎ ಮತ್ತು ಬಿಬಿ ಟಿಆರ್‌ಟಿಎಲ್ (ಟಾರ್ಚ್ ರೆಸಿಸ್ಟೆಂಟ್ ಟೂಲ್ ರೆಸಿಸ್ಟೆಂಟ್)** ಜ್ಯುವೆಲ್ ಸೇಫ್ (ಆಭರಣ ಸುರಕ್ಷೆ) ಗಳನ್ನು ಇ–ಟೆಂಡರಿಂಗ್ ಮೂಲಕ ಖರೀದಿಸಲು ಉದ್ದೇಶಿಸಲಾಗಿದೆ. **ಆನ್‌ಲೈನ್ ಬಿಡ್‌ನಡಿ (ಎರಡು ಬಿಡ್ ಪರಿಕಲ್ಪನೆ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್)** ಅಡಿಯಲ್ಲಿ ರಿವರ್ಸ್ ಹರಾಜಿನ ಜೊತೆಗೆ ಆರ್‌ಎಫ್‌ಪಿಯಲ್ಲಿ ವಿವರಿಸಿದಂತೆ ಚಿನ್ನಾಭರಣಗಳ ಸುರಕ್ಷಿತ ಪೂರೈಕೆಗಾಗಿ ಮಾನ್ಯತೆ ಹೊಂದಿರುವ ಬಿಐಎಸ್ ಪರವಾನಿಗೆ ಹೊಂದಿರುವ ಮೂಲ ತಯಾರಕರು/ಅಧಿಕೃತ ಡೀಲರ್‌ಗಳಿಂದ ಬಿಡ್ ಆಹ್ವಾನಿಸಲಾಗಿದೆ.

ಆರ್‌ಎಫ್‌ಪಿ ಮತ್ತು ಇತರೆ ವಿವರಗಳನ್ನು ನಮ್ಮ ಬ್ಯಾಂಕ್‌ನ ವೆಬ್‌ಸೈಟ್ **https://canarabank.com/tenders.aspx,** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://canarabank.abcprocure.com** ಮತ್ತು ಸಿಪಿಪಿ ಪೋರ್ಟಲ್ **www.eprocure.gov.in** ನಿಂದ ಪಡೆದುಕೊಳ್ಳಬಹುದು. ಅರ್‌ಎಫ್ ಪಿ ಸಲ್ಲಿಸಲು ಕೊನೆಯ ದಿನಾಂಕ **25.05.2022 ಸಂಜೆ 3.00ಗಂಟೆ.** ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕ್‌ನ ವೆಬ್‌ಸೈಟ್ **https://canarabank.com/tenders.aspx** ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://canarabank.abcprocure.com.** ನಲ್ಲಿ ಮಾತ್ರ ನೀಡಲಾಗುವುದು. ಯಾವುದೇ ಕಾರಣ ನೀಡದೆ ಆಫರ್‌ಗಳನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಸ್ಥಳ: ಮಂಗಳೂರು, ದಿನಾಂಕ: 03.05.2022 ಸಹಿ/– ಉಪ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಪ್ರಥಮ ವರ್ಷದ ಪುಣ್ಯ ಸ್ಮರಣೆ

(24.03.1969 - 03.05.2021)

ಶ್ರೀಮತಿ ನಂದ ಆಂಜನಪ್ಪ ರೆಡ್ಡಿ

W/o ಮೊಮು ಆಂಜನಪ್ಪ ರೆಡ್ಡಿ

ಪ್ರೀತಿ ವಾತ್ಸಲ್ಯದ ಬದುಕನ್ನು ಕಲಿಸಿ ನಮ್ಮೆಲ್ಲರೊಂದಿಗೆ ಆದರ್ಶದ ಬದುಕನ್ನು ಬಾಳಿ ಸರಳ ಸೌಜನ್ಯತೆಯ ಸಾಕಾರ ಮೂರ್ತಿಯಾಗಿದ್ದ ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ, ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ.

ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಕುಟುಂಬವರ್ಗದವರು.

ಸದಸ್ಯರು, ಸಿಬ್ಬಂದಿ ವರ್ಗದವರು

ಮೊಮು ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ | ಬ್ಲೂ ಆರ್ಕಿಡ್ ಹೋಟೆಲ್ಸ್ | ದೇವ್ ಕನ್‌ಸ್ಟ್ರಕ್ಷನ್ಸ್

MOMU VENTURES | Blu Orchid HOTELS

ಅರ್ಜುನ ವರ ಜ್ಯುವೆಲ್ಲರ್ಸ್

ARJUNAA™ VARA JEWELLERS ACCURACY IN DESIGN JAYANAGAR, BANGALORE

ಅರ್ಜುನ ನಿಮಗೆಲ್ಲರಿಗೂ ಅಕ್ಷಯ ತೃತೀಯದ ಶುಭಾಶಯಗಳನ್ನು ಕೋರುತ್ತಾರೆ

Jayanagar's Cradle of Accuracy in Design

ತಾಳಿ ಹಾಗೂ ಮಾಂಗಲ್ಯದ ಮೇಲೆ ಮಜೂರಿ ಶುಲ್ಕ / ವೇಸ್ಟೇಜ್ ಶುಲ್ಕವಿರುವುದಿಲ್ಲ*

ಪ್ರತಿ ಕಿಲೋ ಬೆಳ್ಳಿಯ ವಸ್ತುಗಳ ಮೇಲೆ ರೂ. 1200/- ರಿಯಾಯಿತಿ!*

ಪ್ರತಿ ಕ್ಯಾರಟ್ ವಜ್ರದ ಆಭರಣಗಳ ಮೇಲೆ ರೂ. 12,000/- ರಿಯಾಯಿತಿ!*

ಹಳೆಯ ಚಿನ್ನದ ವಿನಿಮಯದಲ್ಲಿ ಪ್ರತಿ ಗ್ರಾಂಗೆ ರೂ. 121/- ಹೆಚ್ಚು!*

ಪ್ರತಿ ಗ್ರಾಂ ಚಿನ್ನದ ಮೇಲೆ ರೂ. 121/- ರಿಯಾಯಿತಿ!*

ಬೆಳಗ್ಗೆ 06.00 ರಿಂದ ರಾತ್ರಿ 11.00 ಗಂಟೆವರೆಗೆ
ದಿನವಿಡೀ ಉಪಹಾರಗಳನ್ನು ಆನಂದಿಸಿ, ವಿಶಾಲವಾದ ವ್ಯಾಲೆಟ್ ಪಾರ್ಕಿಂಗ್ ಲಭ್ಯವಿದೆ.

ಅರ್ಜುನ ಜ್ಯೂವೆಲ್ಲರ್ಸ್ #69, 38ನೇ ಕ್ರಾಸ್, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು

+91 6362824611 | 080 26651969 /41241969 | @arjunaa_jewellers | www.arjunaa.com



ಈ ಅಕ್ಷಯ ತೃತೀಯಕ್ಕೆ,
ಚಿನ್ನದ ಮೇಲೆ ₹2500 ವರೆಗೆ |
ಬೆಳ್ಳಿಯ ಮೇಲೆ ₹250 ವರೆಗೆ ಕ್ಯಾಶ್‌ಬ್ಯಾಕ್*ಪಡೆಯಿರಿ

ಲ್ಯಾಬ್ ಪ್ರಮಾಣೀಕೃತ ಶುದ್ಧತೆ

PhonePe

*ಗುಣಮಟ್ಟ, ಶುದ್ಧತೆ, ಬೆಲೆ ನಿಗದಿ, ಡೆಲಿವರಿ ಮತ್ತು ಆರ್ಡರ್‌ಗಳ ನೆರವೇರಿಕೆಯನ್ನು PhonePeಯ ಪಾಲುದಾರರು ಮಾತ್ರ ಖಾತರಿಪಡಿಸುತ್ತಾರೆ ಮತ್ತು ಪಾಲುದಾರರ ಇತರ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. PhonePeನ ಪಾತ್ರವು ಪೇಮೆಂಟ್‌ಗಳನ್ನು ಸುಗಮಗೊಳಿಸುವುದಕ್ಕೆ ಸೀಮಿತವಾಗಿದೆ.
ಈ ಕೊಡುಗೆಯು 3 ಮೇ 2022ರವರೆಗೆ ಮಾಡಿದ ಖರೀದಿಗಳಿಗೆ ಮಾನ್ಯವಾಗಿರುತ್ತದೆ. ಕೊಡುಗೆಯನ್ನು ಪಡೆದುಕೊಳ್ಳುವ ಮೊದಲು https://phon.pe/GoldSilverATನಲ್ಲಿ ನಿಯಮಗಳು ಮತ್ತು ಷರತ್ತುಗಳನ್ನು ಓದಿ.

ಲಕ್ಷ್ಮೇಶ್ವರದ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ವತಿಯಿಂದ ಗದುಗಿನ ತೋಂಟದಾರ್ಯ ಮಠದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರು ಡಾ. ಸುಧಾಮೂರ್ತಿ ಅವರಿಗೆ 'ಮಾನವತಾವಾದಿ ಬಸವೇಶ್ವರ ಪ್ರಶಸ್ತಿ' ಪ್ರದಾನ ಮಾಡಿದರು. ಪ್ರಶಸ್ತಿಯು ₹1 ಲಕ್ಷ ನಗದು, ಫಲಕ, ಸ್ಮರಣಿಕೆ ಒಳಗೊಂಡಿದೆ. ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ ಇದ್ದಾರೆ

₹4.80 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದಲ್ಲಿ ಕಳ್ಳರು ಕೈಚಳಕ ತೋರಿಸಿದ್ದು, ಸಿದ್ಧರಾಮೇಶ್ವರ ಬಡಾವಣೆಯಲ್ಲಿ ಒಂದೇ ದಿನ ಎರಡು ಮನೆಗಳಲ್ಲಿ ಕಳ್ಳತನವಾಗಿದೆ.

ಭಾನುವಾರ ಮಧ್ಯರಾತ್ರಿ ಬಡಾವಣೆಯ ರುದ್ರಾರಾಧ್ಯ ಎಂಬುವವರ ಮನೆಯಲ್ಲಿ ₹4.80 ಲಕ್ಷ ಕಳ್ಳತನ ಮಾಡಿದ್ದರೆ, ರಾಮಚಂದ್ರಯ್ಯ ಎಂಬುವರ ಮನೆಯಲ್ಲಿ 40 ಗ್ರಾಂ ಚಿನ್ನಾಭರಣ, ₹6 ಸಾವಿರ ನಗದು ದೋಚಿದ್ದಾರೆ. ಮನೆಗೆ ಬೀಗ ಹಾಕಿರುವುದನ್ನು ಗಮನಿಸಿದ ಕಳ್ಳರು, ಮನೆಗೆ ನುಗ್ಗಿ ಕಳ್ಳತನ ಮಾಡಿದ್ದಾರೆ. ಸೋಮವಾರ ಬೆಳಿಗ್ಗೆ ಪ್ರಕರಣ ಬೆಳಕಿಗೆ ಬಂದಿದೆ. ಜಯನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಡೆಸಾ ಸೇತುವೆ ಮೇಲೆ ಮತ್ತೊಮ್ಮೆ ದಾಳಿ

ಕೀವ್ (ಎಪಿ): ರಷ್ಯಾ ಪಡೆಗಳು ಉಕ್ರೇನ್‌ನ ಒಡೆಸಾದ ಪಶ್ಚಿಮ ದಲ್ಲಿನ ಡ್ನೈಸ್ಟರ್ ನದಿಯ ಆಯ ಕಟ್ಟಿನ ಸೇತುವೆ ಗುರಿ ಯಾಗಿಸಿ, ಸೋಮ ವಾರ ಮತ್ತೊಮ್ಮೆ ದಾಳಿ ನಡೆಸಿ ಧ್ವಂಸ ಗೊಳಿಸಿವೆ ಎಂದು ಪ್ರಾದೇಶಿಕ ಗವರ್ನರ್ ಮ್ಯಾಕ್ಸಿಮ್ ಮಾರ್ಶೆಂಕೊ ತಿಳಿಸಿದ್ದಾರೆ.

ಡ್ನೈಸ್ಟರ್ ನದಿಯು ಕಪ್ಪು ಸಮುದ್ರಕ್ಕೆ ಹರಿಯುತ್ತದೆ. ಈಗಾಗಲೇ ರಷ್ಯಾ ಎರಡು ಕ್ಷಿಪಣಿಗಳನ್ನು ಉಡಾಯಿಸಿ, ಸೇತುವೆ ಹಾನಿಗೊಳಿಸಿತ್ತು.

ಈ ಸೇತುವೆಯು ಒಡೆಸಾದ ಪಶ್ಚಿಮ ಪ್ರದೇಶಗಳಿಗೆ ಏಕೈಕ ರೈಲ್ವೆ ಸಂಪರ್ಕ ಮತ್ತು ಪ್ರಮುಖ ಹೆದ್ದಾರಿ ಸಂಪರ್ಕ ಒದಗಿಸುತ್ತದೆ. ಈ ಸೇತುವೆ ಧ್ವಂಸಗೊಂಡಿರುವುದರಿಂದ ನೆರೆಯ ರೊಮೇನಿಯಾದಿಂದ ಶಸ್ತ್ರಾಸ್ತ್ರಗಳು ಮತ್ತು ಇತರ ಸರಕುಗಳ ಸಾಗಣೆಯು ಅಸಾಧ್ಯವಾಗಿದೆ.

ಉಕ್ರೇನ್‌ನ ಸಂಪೂರ್ಣ ದಕ್ಷಿಣದ ಮೇಲೆ ಹಿಡಿತ ಸಾಧಿಸಲು ಮತ್ತು ಮಾಲ್ಡೊವಾದ ಪ್ರತ್ಯೇಕತಾವಾದಿ ಟ್ರಾನ್ಸ್‌ನಿಸ್ಟ್ರಿಯಾ ಪ್ರದೇಶಕ್ಕೆ ಭೂ ಕಾರಿಡಾರ್ ನಿರ್ಮಿಸುವ ಗುರಿ ಇದೆ ಎಂದು ರಷ್ಯಾದ ಹಿರಿಯ ಸೇನಾ ಅಧಿಕಾರಿಯೊಬ್ಬರು ಹೇಳಿಕೆ ನೀಡಿದ ನಂತರ ಈ ಸೇತುವೆ ಮೇಲೆ ನಿರಂತರ ದಾಳಿ ನಡೆಯುತ್ತಿವೆ.

ಉತ್ತರಹಳ್ಳಿಯ ಅಂಗಡಿಯೊಂದರಲ್ಲಿ ಕೆಸರಿನ ರಾಡಿ ಸಂಗ್ರಹವಾಗಿತ್ತು. ಅದನ್ನು ಮಾಲೀಕರೊಬ್ಬರು ಸ್ವಚ್ಛಗೊಳಿಸುತ್ತಿರುವುದು(ಎಡ) ಉತ್ತರಹಳ್ಳಿಯ ಲಕ್ಷ್ಮಯ್ಯ ಬಡಾವಣೆಯ ಮನೆಯೊಂದರಲ್ಲಿ ಶೇಖರಣೆಯಾಗಿದ್ದ ಮಳೆ ನೀರನ್ನು ಮಹಿಳೆಯೊಬ್ಬರು ಬಕೆಟ್‌ನಲ್ಲಿ ತುಂಬಿ ಹೊರಹಾಕಲು ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರಗಳು

ಧಾರಾಕಾರ ಮಳೆ: ಬಿಬಿಎಂಪಿ, ಜಲಮಂಡಳಿ, ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ

ಹೊಳೆಯಂತಾದ 'ಸ್ಮಾರ್ಟ್' ರಸ್ತೆಗಳು

ಪ್ರಜಾವಾಣಿ ವಾರ್ತೆ

ಉತ್ತರಹಳ್ಳಿಯ ಲಕ್ಷ್ಮಯ್ಯ ಬಡಾವಣೆ ಬಳಿ ರಾಜಕಾಲುವೆ ತಡೆಗೋಡೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದ ದೃಶ್ಯ

ಬೆಂಗಳೂರು: ನಗರದಲ್ಲಿ ಭಾನುವಾರ ಸಂಜೆಯಿಂದ ರಾತ್ರಿಯವರೆಗೂ ಸುರಿದ ಧಾರಾಕಾರ ಮಳೆಯಿಂದಾಗಿ ಹಲವು ರಸ್ತೆಗಳು ಜಲಾವೃತಗೊಂಡಿದ್ದವು. ರಾಜಕಾಲುವೆಗಳು ಉಕ್ಕಿ ಹರಿದಿದ್ದರಿಂದ ತಗ್ಗು ಪ್ರದೇಶಗಳಲ್ಲಿರುವ ಹಲವು ಬಡಾವಣೆಯ ಮನೆಗಳಿಗೆ ನೀರು ನುಗ್ಗಿತ್ತು. ಇದರಿಂದ ನಿವಾಸಿಗಳು ಪರಿತಪಿಸುವಂತಾಯಿತು. ಅನೇಕರು ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದು ರಾತ್ರಿ ಕಳೆಯುವಂತಾಯಿತು.

ಉತ್ತರಹಳ್ಳಿಯ ಲಕ್ಷ್ಮಯ್ಯ ಬಡಾವಣೆ, ಕೃಷ್ಣಪ್ಪ ಬಡಾವಣೆ, ಗುಂಡು ಮುನೇಶ್ವರ ರಸ್ತೆಗಳು ಜಲಾವೃತಗೊಂಡಿದ್ದವು. ಈ ಭಾಗದ 200ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಮಳೆ ನೀರಿನಿಂದಾಗಿ ಧವಸ-ಧಾನ್ಯಗಳು ಹಾನಿಯಾಗಿದ್ದವು. ಮನೆಯಲ್ಲಿದ್ದ ಹಾಸಿಗೆ, ದಿಂಬು, ಬಟ್ಟೆ, ಪುಸ್ತಕಗಳು ನೀರಿನಲ್ಲಿ ತೇಲುತ್ತಿದ್ದ ದೃಶ್ಯಗಳು ಕಂಡುಬಂದವು.

ಮನೆಯ ಆವರಣದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು ಹಾಗೂ ಕಾರುಗಳು ನೀರಿನಲ್ಲಿ ಮುಳುಗಿದ್ದವು. ನೀರಿನ ಸಂಪಿನೊಳಗೆ ತ್ಯಾಜ್ಯ ನೀರು ಸೇರ್ಪಡೆಯಾಗಿದ್ದರಿಂದ ಅನೇಕರು ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿತ್ತು. ಜೆರಾಕ್ಸ್ ಅಂಗಡಿಗಳಿಗೂ ನೀರು ನುಗ್ಗಿದ್ದರಿಂದ ಮಾಲೀಕರು ಸಂಕಷ್ಟ ಎದುರಿಸಿದರು.

ರೀನಿಯಸ್ ಸ್ಟ್ರೀಟ್‌ನ ಹಲವು ಮನೆಗಳ ಆವರಣಕ್ಕೂ ನೀರು ನುಗ್ಗಿತ್ತು. ಯೋಜನಾಬದ್ಧವಾಗಿ ಕಾಮಗಾರಿ ನಡೆಸದಿರುವುದೇ ಈ ಸಮಸ್ಯೆಗೆ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ನಗರಕ್ಕೆ ಸುಂದರ ರೂಪ ನೀಡುತ್ತೇವೆ ಎಂದು ಹೇಳಿ ಒಂದು ವರ್ಷ ವಿವಿಧ ಕಾಮಗಾರಿಗಳನ್ನು ನಡೆಸಿದರು. ಸುಸ್ಥಿತಿಯಲ್ಲಿದ್ದ ರಸ್ತೆಗಳನ್ನೆಲ್ಲಾ ಅಗೆದು ಹಾಕಿ ನಮಗೆಲ್ಲಾ ತೊಂದರೆ ಕೊಟ್ಟರು. ಕಾಮಗಾರಿ ಮುಗಿದ ಮೇಲಾದರೂ ನೆಮ್ಮದಿಯಿಂದ ಇರಬಹುದು ಅಂದುಕೊಂಡಿದ್ದೆವು. ಆದರೆ, ಭಾನುವಾರ ಸುರಿದ ಮಳೆಯು 'ಸ್ಮಾರ್ಟ್‌ಸಿಟಿ'ಯ ಬಣ್ಣ ಬಯಲು ಮಾಡಿದೆ. ನಮ್ಮ ನೆಮ್ಮದಿಯನ್ನೂ ಕಸಿದಿದೆ' ಎಂದು ನಿವಾಸಿಗಳು ಕಿಡಿಕಾರಿದರು.

'ಗುತ್ತಿಗೆ ಪಡೆದಿದ್ದವರು ಸೂಕ್ತ ಯೋಜನೆ ಇಲ್ಲದೆ ಕಾಮಗಾರಿ ನಡೆಸಿರುವುದು ಇದರಿಂದ ಸ್ಪಷ್ಟವಾಗುತ್ತದೆ. ರೆಸಿಡೆನ್ಸಿ ರಸ್ತೆ, ಕಾನ್ವೆಂಟ್ ರಸ್ತೆ ಹಾಗೂ ಹೇನ್ಸ್ ಸ್ಟ್ರೀಟ್‌ನ ರಸ್ತೆಗಳನ್ನು ಎತ್ತರಿಸಿ ನಿರ್ಮಾಣ ಮಾಡಿರುವುದರಿಂದ ಆ ಭಾಗದ ನೀರೆಲ್ಲಾ ತಗ್ಗು ಪ್ರದೇಶದಲ್ಲಿರುವ ನಮ್ಮ ಬಡಾವಣೆಯತ್ತ ಹರಿದು ಬರುತ್ತದೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ಅನುವಾಗುವಂತೆ ಒಳಚರಂಡಿ ನಿರ್ಮಿಸಿಲ್ಲ. ಹೀಗಾಗಿ ಮನೆಯ ಮುಂದೆ ಮಂಡಿಯವರೆಗೂ ನೀರು ಸಂಗ್ರಹವಾಗಿತ್ತು. ಇನ್ನೂ ಕೆಲ ಹೊತ್ತು ಮಳೆ ಸುರಿದಿದ್ದರೆ ಕೊಳಚೆ ನೀರು ಮನೆಯೊಳಗೆ ನುಗ್ಗುತ್ತಿತ್ತು' ಎಂದು ದೂರಿದ್ದಾರೆ.

'ಮಳೆ ನೀರಿನ ಜೊತೆಗೆ ತ್ಯಾಜ್ಯವೂ ಸೇರಿಕೊಂಡು ದುರ್ನಾತ ಬೀರುತ್ತಿತ್ತು. ಉಸಿರಾಡುವುದಕ್ಕೂ ಕಷ್ಟಪಡುವಂತಹ ಪರಿಸ್ಥಿತಿ ಇತ್ತು. ನಮ್ಮ ಬಡಾವಣೆಯಲ್ಲಿ ವೃದ್ಧರೇ ಹೆಚ್ಚಾಗಿ ನೆಲೆಸಿದ್ದೇವೆ. ಯಾರಿಗಾದರೂ ಆರೋಗ್ಯ ಸಮಸ್ಯೆ ಕಾಣಿಸಿಕೊಂಡರೆ ಆಸ್ಪತ್ರೆಗೆ ಹೋಗುವುದಾದರೂ ಹೇಗೆ. ಬಿಬಿಎಂಪಿ ಅಧಿಕಾರಿಗಳನ್ನು ಪ್ರಶ್ನಿಸಿದರೆ, ಜಲಮಂಡಳಿಯವರಿಗೆ ಕೇಳಿ ಎಂದು ಹೇಳುತ್ತಾರೆ. ಜಲಮಂಡಳಿಯವರನ್ನು ಪ್ರಶ್ನಿಸಿದರೆ ಬಿಬಿಎಂಪಿಯವರತ್ತ ಕೈ ತೋರಿಸುತ್ತಾರೆ. ನಾವು ಯಾರ ಬಳಿ ಸಮಸ್ಯೆ ಹೇಳಿಕೊಳ್ಳಬೇಕು' ಎಂದು ಪ್ರಶ್ನಿಸಿದರು.

'ಸುಮಾರು 50 ವರ್ಷಗಳಿಂದ ಇಲ್ಲಿ ನೆಲೆಸಿದ್ದೇವೆ. ಈವರೆಗೂ ಈ ರೀತಿಯ ಸಮಸ್ಯೆ ಎದುರಿಸಿರಲಿಲ್ಲ. ಸ್ಮಾರ್ಟ್ ಸಿಟಿ ಕಾಮಗಾರಿ ಪೂರ್ಣಗೊಂಡ ಬಳಿಕ ಒಂದಿಲ್ಲೊಂದು ಸಮಸ್ಯೆ ತಲೆದೋರುತ್ತಿದೆ. ಬೇಸಿಗೆಯಲ್ಲೇ ಹೀಗಾದರೆ ಮಳೆಗಾಲದಲ್ಲಿ ನಮ್ಮ ಪಾಡೇನು' ಎಂದು ಬೇಸರ ವ್ಯಕ್ತಪಡಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ: ಬಿವಿಕೆ ಅಯ್ಯಂಗಾರ್ ರಸ್ತೆಯು ಮಳೆ ನೀರಿನಿಂದ ತುಂಬಿ ಹೋಗಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ತ್ಯಾಜ್ಯಯುಕ್ತ ನೀರಿನಲ್ಲಿ ಇಬ್ಬರು ವ್ಯಕ್ತಿಗಳು ನಡೆದುಕೊಂಡು ಹೋಗುತ್ತಿರುವ ದೃಶ್ಯ ಈ ವಿಡಿಯೊದಲ್ಲಿದೆ. 'ಸುಮಾರು 1 ಲಕ್ಷ ಕೋಟಿ ಆದಾಯ ಮತ್ತು ಕಾರ್ಪೊರೇಟ್ ತೆರಿಗೆ ಪಾವತಿದಾರರಿರುವ ನಗರದ ಸ್ಥಿತಿ ಹೀಗಾಗಬಾರದಿತ್ತು' ಎಂದು ವ್ಯಕ್ತಿಯೊಬ್ಬರು ಟ್ವಿಟರ್‌ನಲ್ಲಿ ವ್ಯಂಗ್ಯವಾಡಿದ್ದಾರೆ.

ಸಿಗದ ಶಾಶ್ವತ ಪರಿಹಾರ: ಶಾಸಕರ ವಿರುದ್ಧ ಆಕ್ರೋಶ

'ಪ್ರತಿ ಬಾರಿ ಮಳೆ ಬಂದಾಗಲೂ ರಾಜಕಾಲುವೆ ಉಕ್ಕಿ ಹರಿದು ಮನೆಗಳಿಗೆ ನೀರು ನುಗ್ಗುತ್ತದೆ. ಇದರ ಅರಿವಿದ್ದರೂ ಶಾಶ್ವತ ಪರಿಹಾರ ಕಲ್ಪಿಸಲು ಶಾಸಕ ಎಂ.ಕೃಷ್ಣಪ್ಪ ಹಾಗೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ' ಎಂದು ಲಕ್ಷ್ಮಯ್ಯ ಬಡಾವಣೆ, ಕೃಷ್ಣಪ್ಪ ಬಡಾವಣೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

'ಮನೆಗೆ ದಿಢೀರ್ ನೀರು ನುಗ್ಗಿದ್ದರಿಂದ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಗಾಬರಿಯಿಂದ ಮಕ್ಕಳನ್ನು ಕರೆದುಕೊಂಡು ನಾಗರಬಾವಿಯಲ್ಲಿರುವ ತಂದೆ ಮನೆಗೆ ಹೋಗಿದ್ದೆ. ಬೆಳಿಗ್ಗೆ ಹಿಂದಿರುಗಿ ಬಂದು ನೋಡಿದಾಗ ಇಡೀ ಮನೆ ಕೆಸರಿನಿಂದ ತುಂಬಿ ಹೋಗಿತ್ತು' ಎಂದು ಸ್ಥಳೀಯ ನಿವಾಸಿ ಭವ್ಯ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ಸಂತ್ರಸ್ತರ ಮನವಿ ಆಲಿಸಿದರು. ಮುಂದೆ ಈ ರೀತಿ ಆಗದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ಧರೆಗೆ ಉರುಳಿದ ವಿದ್ಯುತ್ ಕಂಬಗಳು

ಭಾರಿ ಗಾಳಿ ಮತ್ತು ಮಳೆಯಿಂದಾಗಿ ನಗರದಲ್ಲಿ ಹಲವು ವಿದ್ಯುತ್ ಕಂಬಗಳು ಉರುಳಿಬಿದ್ದಿದ್ದು, ಕೆಲ ಕಂಬಗಳು ಮುರಿದಿವೆ. ಅವುಗಳ ದುರಸ್ತಿ ಕಾರ್ಯವನ್ನು ಬೆಸ್ಕಾಂ ಸಿಬ್ಬಂದಿ ಮಾಡಿದ್ದಾರೆ.

'ಬೆಂಗಳೂರು ದಕ್ಷಿಣ ವಿಭಾಗದಲ್ಲಿ 21 ಕಂಬಗಳು ಮುರಿದಿವೆ. ಈ ಪೈಕಿ 7 ಕಡೆ ಕಂಬಗಳನ್ನು ಅಳವಡಿಸಲಾಗಿದೆ. ಇನ್ನೂ 14 ಕಂಬಗಳನ್ನು ಶೀಘ್ರವೇ ಮರುಸ್ಥಾಪನೆ ಮಾಡಲಾಗುತ್ತದೆ. ಪೂರ್ವ ವಿಭಾಗದಲ್ಲಿ 13 ಕಂಬಗಳು ಹಾನಿಗೊಳಗಾಗಿದ್ದವು. ಅದನ್ನೂ ಸರಿಪಡಿಸಿ ಸಂಬಂಧಪಟ್ಟ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. 'ಪಶ್ಚಿಮ ವಿಭಾಗದಲ್ಲಿ 7 ಕಂಬಗಳು ಮುರಿದಿದ್ದವು. ಎರಡು ಕಡೆ ಕಂಬಗಳನ್ನು ಹಾಕಲಾಗಿದೆ. ಉಳಿದ ಕಂಬಗಳ ಮರುಸ್ಥಾಪನೆ ಕಾರ್ಯ ಪ್ರಗತಿಯಲ್ಲಿದೆ' ಎಂದೂ ಹೇಳಿದ್ದಾರೆ.

ರೀನಿಯಸ್ ಸ್ಟ್ರೀಟ್‌ನಲ್ಲಿ ಮನೆಯೊಂದರ ಮುಂದೆ ಸಂಗ್ರಹವಾಗಿದ್ದ ತ್ಯಾಜ್ಯಯುಕ್ತ ನೀರು

'ಇನ್ನೆರಡು ದಿನ ಮಳೆ ಸಾಧ್ಯತೆ'

ಬೆಂಗಳೂರು: 'ನಗರದಲ್ಲಿ ಇನ್ನೂ ಎರಡು ದಿನಗಳ ಕಾಲ ಮಳೆ ಬೀಳುವ ಸಾಧ್ಯತೆ ಇದೆ. ಯಾವುದೇ ರೀತಿಯ ಅನಾಹುತಗಳನ್ನು ತಡೆಯಲು ಬಿಬಿಎಂಪಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಈಗಾಗಲೇ ಎಲ್ಲ ವಲಯಗಳಲ್ಲಿನ ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ. ವಲಯ ಮತ್ತು ವಿಭಾಗ ಮಟ್ಟದಲ್ಲಿ ಹಾಗೂ ಕೇಂದ್ರ ಕಚೇರಿಯಲ್ಲಿರುವ ತಂಡಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಹಲವಾರು ಸ್ಥಳಗಳಲ್ಲಿ ಮರಗಳು ಬೀಳುವುದನ್ನು ಪತ್ತೆ ಮಾಡಲಾಗಿದೆ. ಭಾನುವಾರ ರಾತ್ರಿ ಉತ್ತರಹಳ್ಳಿಯಲ್ಲಿ ಭಾರಿ ಮಳೆಯಿಂದ ರಾಜಕಾಲುವೆಯಲ್ಲಿ ನೀರು ಮನೆಗಳಿಗೆ ನುಗ್ಗಿತ್ತು. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಮುಖ್ಯ ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ' ಎಂದು ಸೋಮವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪದವಿ ಪ್ರದಾನ

ಕೆಂಗೇರಿಯಲ್ಲಿನ ಬಿಜಿಎಸ್ 'ಜಿಮ್ಸ್' 3ನೇ ಘಟಿಕೋತ್ಸವದಲ್ಲಿ 140 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಆರೋಗ್ಯ ಸಚಿವ ಕೆ.ಸುಧಾಕರ್ ಇದ್ದಾರೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ELCITA

TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 has invited tenders as detailed below:

Sl. no	Tender Name	Tender Number	Link	Last date and time for apply
1	Fixing and laying of the pervious pavers in the pumphouse at Electronics City Industrial Township Authority, Bengaluru-560100	ELCITA/UDD/2022-23/OW/WORK_INDENT1615	https://eproc.karnataka.gov.in:443/eprocurement/common/tender_details.seam?tender_id=ELCITA%2FUDD%2F2022-23%2FOW%2FWORK_INDENT1615	12/05/2022 5:00 PM
2	Replacement of Highly Corroded MS pipe With Highly Corrosion Resistance pipe STRAINLESS STEEL 304 at 300 KLD CSTP, Electronics City Industrial Township Authority Bengaluru-560100.	ELCITA/UDD/2022-23/OW/WORK_INDENT1614	https://eproc.karnataka.gov.in:443/eprocurement/common/tender_details.seam?tender_id=ELCITA%2FUDD%2F2022-23%2FOW%2FWORK_INDENT1614	12/05/2022 5:00 PM
3	Upgradation of existing Rainwater recharge pits to Rainwater injection pit to enhance groundwater level quantity at Electronics city Electronics City Industrial Township Authority Bengaluru-560100	ELCITA/UDD/2022-23/OW/WORK_INDENT1627	https://eproc.karnataka.gov.in:443/eprocurement/common/tender_details.seam?tender_id=ELCITA%2FUDD%2F2022-23%2FOW%2FWORK_INDENT1627	12/05/2022 5:00 PM
4	Supply, Installation, and commissioning of Air quality Monitoring System at Electronics City Industrial Township Authority Bengaluru-560100	ELCITA/UDD/2022-23/Air quality_2204	https://eproc.karnataka.gov.in:443/eprocurement/common/tender_details.seam?tender_id=ELCITA%2FUDD%2F2022-23%2FAir+quality_2204	12/05/2022 5:00 PM

Details of the Tenders can be downloaded from the e-procurement website eproc.karnataka.gov.in under **Urban Development Department-Electronics City Industrial Township Authority.**
Also, details are available in www.elcita.in
For queries Contact: 080-4660 2222 /
write to: env.engr@elcita.in
Electronics City Industrial Township Authority (ELCITA) # 7 (P), West Phase, Electronics City, Bangalore : 560 100
Website : www.elcita.in
Phone: 080-4660 2222

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

JOB OPPORTUNITIES

General

PROSPECTIVE CAREER, Retired, VRS, Professionals, Senior Citizens, Business People, Substantial Income. International Recognition. 97400-90431/ 8884445665

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

Teachers/ Professors

WANTED TRAINED LADY TEACHERS to teach Mathematics, Sanskrit, English and Physical Education in English Medium Primary and High schools. Walk-in Interview on 04.05.2022 between 9.30 AM and 11.30 AM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080 26710170/ 74833-77387

WANTED QUALIFIED teachers to teach ENGLISH, HINDI, EVS, COMPUTER & PE for HIGHER PRIMARY. Freshers can also apply. Immediately contact Secretary,SRI VINAYAKA VIDYA KENDRA, Thindlu MainRoad, Kodigehalli, Sahakarnagar Post, Bangalore-560092. Phone:9880357297/ 08041698983

BUSINESS

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/ 9606701007

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

MATRIMONIAL

Wedding Arrangements

Cards

WEDDING CARDS WITH PRINTING AT FACTORY RATES AT YOUR DOORSTEP (ALL INDIAN LANGUAGES). Call: 9880324530

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

REAL ESTATE SELLING

Real Estate Agents

Kanakapura Road

SITE for Sale, 20x40 South face, 30x50 West face BBMP A Khatha at Gubbalala near by KSIT College metro station 9742334939 / 9535963778

TOURS & TRAVEL

Travel

SEND YOUR Parents to NEPAL MUKTINATH. We take care of them. We do Muktinath every month. NALANDA TRAVELS, Kundapura, Mobile: 8310028157

PERSONAL

Change of Name

14844150N SEP/MT GAJENDRA METI 1ATC My MOTHER Name records BASAVVA Instead of BASAVVA RUDRAPPA METI Notary K.V MANI Bangalore

I, N. SAVITHA URF MANGALAGOWRI, Residing at No. 972, 2nd Main Road, M.C. Layout near Raheja Park Apartment Bangalore-560040 have changed my name to N. SAVITHA MANGALAGOWRI, vide affidavit dated 02.05.2022, before notary H.S. Sakalesh Aradhya, Bangalore. Henceforth I shall be called N. SAVITHA MANGALAGOWRI, only.

I H.SASHIMURTHY W/o H.S. Narasimha Murthy, aged about 68Years, residing at Building No.1, Flat No. 203, Shantipark Apartment, 9th Block, Jayanagar, Bangalore-69, have changed my name from H.Sashimurthy to M.D. SASHIKALA for all Purpose Vide affidavit dated 29-03-2022 Sworn before S.Vijaya Kumar, Advocate & Notary.

I, V. LOKANADHA RAJU, Residing at No. 1233, 14th Cross, Judicial Layot, Bangalore- 560065, have changed my name to LOKNATA RAJU vide affidavit dated 27.04.2022, before notary Sivakumara. M.N Bangalore. Hencefoth I shall be called LOKNATA RAJU only.

14844150N SEP/MT GAJENDRA METI 1ATC My DAUGHTER Name records SRIDEVI Instead of SRIDEVI METI Notary K.V MANI Bangalore

LAXMI W/O 14844150N SEP/MT GAJENDRA METI R/A BEGUR KALGHATGI DHARWAD KARNATAKAMY NAME LAXMI TO LAXMI METI Notary K.V MANI Bangalore

I, TIRUMALACHARY. K.S, residing at Bengaluru Rural-562123 have changed my name as TIRUMALACHARI. K,S., vide affidavit dated 2/5/2022 before Notary P.C.Ramaiah, Bangalore

14844150N SEP/MT GAJENDRA METI 1ATC My FATHER Name records RUDRAPPA Instead of RUDRAPPA MALLESHAPPA METI Notary K.V MANI Bangalore

I. SHEIKH ABDULLA S/o. Abdul Wahab residing at No.30 3rd Cross, 1st Main, Road EX-Servicemen Colony, R.T.Nagar, Bangalore-32, have changedmy name to SHAIKH ABDULLA. vide affidavit dated-30-04-2022 before Notary Sivakumara.M.N. Bangalore.

14844150N SEP/MT GAJENDRA METI 1ATC My DAUGHTER Name records SAHANA Instead of SAHANA G METI Notary K.V MANI Bangalore

I, VISHWANATH BILLUR, S/o. Mallappa Billur, Shirahatti Taluk- Athani, Dist- Belgaum, Karnataka-591304, have changed my name to VISHWANATH M BILLUR vide affidavit dated 29.04.2022, sworn before notary A. Manjula, Bangalore-22.

Lost

LOST
I, R. Jayalakshmi, have lost my original Sale Deed bearing site No. 25, Doddajala Hobli, Bengaluru North Taluk. **Khatha No. 303 Property No. 70/1, 70/2, 70/3, while Shifting the House. Finders please Contact- 9900973043**

LOST
I, S. Lokesh, have lost my original Sale deed bearing No. 4139/61-62, Vol 271 pg No. 243/ 244 Dated 27.10.1961 **Khatha No. 107, Property No. 41/14** Singayyanapalya, 5th Cross, Bengaluru48 **while Shifting the House. Finders please Contact- 9008003271**

EFFECTIVE FROM May 1, 2022

DH DECCAN HERALD | ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

153 ದಿನ ಪೂರೈಸಿದ ಅಹೋರಾತ್ರಿ ಧರಣಿ • ದುಡಿಮೆ ಇಲ್ಲದೆ ಐಟಿಐ ಕಾರ್ಮಿಕರ ಬದುಕು ದುಸ್ತರ

‘ಚಿನ್ನ ಅಡವಿಟ್ಟಾಗಿದೆ, ಪಿಎಫ್ ಖಾಲಿ...’

• ಜಿ.ಶಿವಕುಮಾರ

ಐಟಿಐ ಲಿಮಿಟೆಡ್ ಎದುರು ಕಾರ್ಮಿಕರು ಸೋಮವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಧರಣಿ ಕುಳಿತು 153 ದಿನಗಳಾದವು. ಐದು ತಿಂಗಳಿಂದ ಕೆಲಸವಿಲ್ಲ. ಕೂಡಿಟ್ಟ ಹಣವೆಲ್ಲಾ ಖಾಲಿ ಆಗಿದೆ. ಮನೆಯಲ್ಲಿದ್ದ ಚಿನ್ನವನ್ನೆಲ್ಲಾ ಅಡವಿಟ್ಟಾಗಿದೆ. ಆ ಹಣವೂ ಖರ್ಚಾದರೆ ಮುಂದೇನು ಗತಿ ಎಂಬ ಚಿಂತೆ ಕಾಡುತ್ತಿದೆ..’

ಕೆ.ಆರ್.ಪುರದ ಆವಲಹಳ್ಳಿ ನಿವಾಸಿ ಮುನಿಯಮ್ಮ ಅವರ ಅಳಲು ಇದು.

ಮುನಿಯಮ್ಮ ಸೇರಿದಂತೆ ಒಟ್ಟು 80 ಮಂದಿ ಕೆ.ಆರ್.ಪುರದಲ್ಲಿರುವ ಐಟಿಐ ಲಿಮಿಟೆಡ್‌ನಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಆಡಳಿತ ಮಂಡಳಿ 2021ರ ಡಿ.1 ರಂದು ಇವರನ್ನೆಲ್ಲಾ ಕೆಲಸದಿಂದ ಏಕಾಏಕಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಇವರು ಅಹೋರಾತ್ರಿ ಧರಣಿ ಆರಂಭಿಸಿದ್ದರು. ಐಟಿಐ ಲಿಮಿಟೆಡ್‌ನಲ್ಲಿ ನೀಡುತ್ತಿದ್ದ ₹10 ಸಾವಿರ, ₹15 ಸಾವಿರ ವೇತನ ಇವರ ಜೀವನಕ್ಕೆ ಆಧಾರವಾಗಿತ್ತು. ಸಂಬಳವಿಲ್ಲದೆ ಇವರ ಬದುಕು ಈಗ ಬೀದಿಗೆ ಬಿದ್ದಂತಾಗಿದೆ.

‘ಕೆಲ ವರ್ಷಗಳ ಹಿಂದೆ ಪತಿ ತೀರಿಕೊಂಡರು. ಇಬ್ಬರು ಮಕ್ಕಳನ್ನು ಸಾಕುವ ಜವಾಬ್ದಾರಿ ನನ್ನ ಹೆಗಲೇರಿತು. ಐಟಿಐ ಲಿಮಿಟೆಡ್‌ನಲ್ಲಿ 10 ವರ್ಷದಿಂದ ಮೇಲ್ವಿಚಾರಕಿಯಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ₹12,000 ಸಂಬಳ ಸಿಗುತ್ತಿತ್ತು. ಅದರಲ್ಲೇ ಜೀವನ ನಡೆಯುತ್ತಿತ್ತು. ಕೆಲಸದಿಂದ ವಜಾ ಮಾಡಿದ ಬಳಿಕ ನಮ್ಮ ಬದುಕು ದಯನೀಯ ಸ್ಥಿತಿಗೆ ತಲುಪಿದೆ’ ಎಂದು ಬೇಸರಿಸಿಕೊಂಡರು.

‘ನನ್ನ ಮಕ್ಕಳು ಚೆನ್ನಾಗಿ ಓದಲಿ ಎಂದು ಚಿನ್ನವನ್ನೆಲ್ಲಾ ಅಡವಿಟ್ಟು ಕಾಲೇಜಿಗೆ ₹70 ಸಾವಿರ ಶುಲ್ಕ ಕಟ್ಟಿದ್ದೇನೆ. ದಿನಸಿ ಹಾಗೂ ಅಗತ್ಯ ವಸ್ತುಗಳ ಖರೀದಿಗೆ ಹಣವಿಲ್ಲದಂತಾದಾಗ ಪಿಎಫ್ (ಭವಿಷ್ಯ ನಿಧಿ) ಹಣ ಬಿಡಿಸಿಕೊಂಡಿದ್ದೆ. ಅದೂ ಖಾಲಿಯಾಗಿದೆ. ಮನೆ ಬಾಡಿಗೆ ಕಟ್ಟಲು ಕೆಲವರ ಹತ್ತಿರ ಸಾಲ ಮಾಡಿದ್ದೇನೆ. ಅದನ್ನು ಹೇಗೆ ತೀರಿಸಬೇಕೋ ಗೊತ್ತಿಲ್ಲ. ಇಂದಲ್ಲ ನಾಳೆ ಹೋರಾಟಕ್ಕೆ ಜಯ ಸಿಗುತ್ತದೆ ಎಂಬ ಭರವಸೆ ಇದೆ. ಕಾನೂನಿನ ಮೇಲೆ ನಂಬಿಕೆ ಇದೆ. ಮರು ನೇಮಕ ಮಾಡಿಕೊಳ್ಳದಿದ್ದರೆ ಮನೆಯವರೆಲ್ಲಾ ಉಪವಾಸ ಮಲಗಬೇಕಾಗುತ್ತದೆ’ ಎಂದರು.

‘ಹೊತ್ತಿನ ಊಟಕ್ಕೂ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಕಷ್ಟ ನೋಡಿ ಅಕ್ಕಪಕ್ಕದ ಊರಿನವರು ತಮ್ಮ ಮನೆಗಳಿಂದಲೇ ಊಟ, ಉಪಾಹಾರ ತಂದು ಕೊಡುತ್ತಿದ್ದಾರೆ. ಕೆಲವು ಸಂಘಟನೆಯವರೂ ಆಹಾರದ ವ್ಯವಸ್ಥೆ ಮಾಡಿದ್ದಾರೆ. ಕೆಲವರು ಬಿಸ್ಕೆಟ್, ಹಣ್ಣುಗಳನ್ನೂ ಕೊಟ್ಟು ಹೋಗುತ್ತಾರೆ. ಧರಣಿ ಕುಳಿತಿರುವುದರಿಂದ ಮನೆಯ ಆಗು ಹೋಗುಗಳತ್ತ ಗಮನಹರಿಸುವುದಕ್ಕೆ ಆಗುತ್ತಿಲ್ಲ. ಹೆಂಡತಿ, ಮಕ್ಕಳ ಯೋಗಕ್ಷೇಮ ವಿಚಾರಿಸುವುದೂ ಸಾಧ್ಯವಾಗುತ್ತಿಲ್ಲ’ ಎಂದು ಅರುಣ್‌ಕುಮಾರ್ ಬೇಸರ ವ್ಯಕ್ತಪಡಿಸಿದರು.

‘ಐದು ತಿಂಗಳಿಂದ ಕೆಲಸವಿಲ್ಲ. ನ್ಯಾಯ ಸಿಗುವವರೆಗೂ ಇಲ್ಲಿಂದ ಕದಲುವುದಿಲ್ಲ’ ಎಂದು ಹೇಳಿದರು.

‘ನುಣುಚಿಕೊಳ್ಳುತ್ತಿರುವ ಅಧಿಕಾರಿಗಳು’

‘ವಜಾಗೊಳಿಸಿರುವ ಎಲ್ಲ ಕಾರ್ಮಿಕರನ್ನೂ ಮರು ನೇಮಕ ಮಾಡಿಕೊಳ್ಳುವಂತೆ ಪ್ರಾದೇಶಿಕ ಕಾರ್ಮಿಕ ಆಯುಕ್ತರು, ಐಟಿಐ ಆಡಳಿತ ಮಂಡಳಿಗೆ ಸೂಚನೆ ನೀಡಿದ್ದಾರೆ. ಮೊದಲ ಹಂತದಲ್ಲಿ 35 ಮಂದಿಯನ್ನು ಮರು ನೇಮಕ ಮಾಡಿಕೊಳ್ಳುವುದಾಗಿ ಆಡಳಿತ ಮಂಡಳಿಯವರು ಆಯುಕ್ತರಿಗೆ ಲಿಖಿತ ಭರವಸೆ ನೀಡಿದ್ದರು. ಉಳಿದ 45 ಮಂದಿಯನ್ನೂ ಹಂತ ಹಂತವಾಗಿ ನೇಮಿಸಿಕೊಳ್ಳುವುದಾಗಿ ತಿಳಿಸಿದ್ದರು. ಆದರೆ, ಈಗ ಕುಂಟು ನೆಪಗಳನ್ನು ಹೇಳುತ್ತಾ ಮಾತು ಬದಲಿಸುತ್ತಿದ್ದಾರೆ’ ಎಂದು ವಜಾಗೊಂಡ ಕಾರ್ಮಿಕ ಗಂಗರಾಜ್ ಆರೋಪಿಸಿದರು.

‘ಮಾನವ ಸಂಪನ್ಮೂಲ ವಿಭಾಗದವರಿಗೆ ಕೇಳಿದರೆ ಆಡಳಿತ ಮಂಡಳಿಯವರತ್ತ ಕೈ ತೋರಿಸುತ್ತಾರೆ. ಆಡಳಿತ ಮಂಡಳಿಯವರು ಯೂನಿಯನ್‌ನವರು ತಕರಾರು ಮಾಡುತ್ತಿರುವುದಾಗಿ ತಿಳಿಸುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ತಲುಪಿದ ಕೆಂಪೇಗೌಡರ ‘ಖಡ್ಗ’

ಬೆಂಗಳೂರು: ದೇವನಹಳ್ಳಿ ಬಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿಷ್ಠಾಪನೆ ಆಗಲಿರುವ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆಯ ಭಾಗವಾದ 4 ಸಾವಿರ ಕಿಲೋ ತೂಕದ ಖಡ್ಗವು ದೆಹಲಿಯಿಂದ ಸೋಮವಾರ ಬೆಂಗಳೂರು ತಲುಪಿದೆ.

ವಿಶೇಷ ಟ್ರಕ್‌ನಲ್ಲಿ ಬಂದ ಈ ಖಡ್ಗವನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಖಡ್ಗಕ್ಕೆ ಸಾಂಪ್ರದಾಯಿಕ ಶಕ್ತಿಪೂಜೆ ನೆರವೇರಿಸಲಾಯಿತು. ‘ಕೆಂಪೇಗೌಡರ ಸ್ಮರಣಾರ್ಥ ಕೆಐಎನಲ್ಲಿ 23 ಎಕರೆ ಜಾಗದಲ್ಲಿ ಪಾರಂಪರಿಕ ಪಾರ್ಕ್ ಅಸ್ತಿತ್ವಕ್ಕೆ ಬರಲಿದ್ದು, ಕಾಮಗಾರಿ ಭರದಿಂದ ಸಾಗುತ್ತಿವೆ. ಇಲ್ಲಿ ತಲೆಯೆತ್ತಲಿರುವ ಕೆಂಪೇಗೌಡರ ಪ್ರತಿಮೆಗೆ ₹ 85 ಕೋಟಿ ವಿನಿಯೋಗಿಸಲಾಗುತ್ತಿದೆ. ನೋಯಿಡಾದ ಶಿಲ್ಪಿ ರಾಮ್ ವಾನಜಿ ಸುತರ್ ಈ ಪ್ರತಿಮೆ ಮಾಡಿಕೊಡುತ್ತಿದ್ದಾರೆ’ ಎಂದು ಅಶ್ವತ್ಥನಾರಾಯಣ ತಿಳಿಸಿದರು.

‘ಕೆಂಪೇಗೌಡರು ಕೈಯಲ್ಲಿ ಹಿಡಿದಿರುವ ಕತ್ತಿಯು (ಖಡ್ಗ) ಕ್ಷಾತ್ರಬಲವನ್ನು ಪ್ರತಿನಿಧಿಸುತ್ತಿದ್ದು, ನವಭಾರತಕ್ಕೊಂದು ಸಂಕೇತವಾಗಿದೆ. ವಿಮಾನ ನಿಲ್ದಾಣದ ಮೂಲಕ ಹೋಗುವವರು ಮತ್ತು ಇಲ್ಲಿ ಬಂದಿಳಿಯುವವರಿಗೆ ಈ ಪ್ರತಿಮೆಯ ನೋಟ ಒಂದು ದಿವ್ಯ ಅನುಭೂತಿ ಮೂಡಿಸುವಂತಿರಬೇಕು ಎನ್ನುವುದು ಸರ್ಕಾರದ ಉದ್ದೇಶ’ ಎಂದರು.

ಆರೋಪಿ ಪತ್ತೆಗೆ ಲುಕ್‌ಔಟ್ ನೋಟಿಸ್

ಬೆಂಗಳೂರು: ಪ್ರೀತಿ ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿರುವ ಆರೋಪಿ ನಾಗರಾಜ್ ಬಗ್ಗೆ ಪೊಲೀಸರಿಗೆ ಇದುವರೆಗೂ ಸುಳಿವು ಪತ್ತೆಯಾಗಿಲ್ಲ. ಆತನ ಪತ್ತೆಗೆ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿದೆ.

‘ಏಪ್ರಿಲ್ 28ರಂದು ಕೃತ್ಯ ಎಸಗಿದ್ದ ನಾಗರಾಜ್, ರಾಜ್ಯದಿಂದಲೇ ಪರಾರಿಯಾಗಿದ್ದಾನೆ. ಆತ ಎಲ್ಲಿದ್ದಾನೆ ಎಂಬ ಮಾಹಿತಿ ಲಭ್ಯವಾಗುತ್ತಿಲ್ಲ. ಆತನ ಪತ್ತೆಗಾಗಿ ವಿಶೇಷ ತಂಡಗಳು ತನಿಖೆ ಮುಂದುವರಿಸಿವೆ’ ಎಂದು ಪೊಲೀಸರು ಹೇಳಿದರು. ‘ಗಾಯಗೊಂಡಿರುವ ಯುವತಿ, ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದರು. ‘ಸಣ್ಣದೊಂದು ಗಾರ್ಮೆಂಟ್ಸ್ ಕಾರ್ಖಾನೆ ನಡೆಸುತ್ತಿದ್ದ ನಾಗರಾಜ್, ವ್ಯವಸ್ಥಿತವಾಗಿ ಸಂಚು ರೂಪಿಸಿಯೇ ಆ್ಯಸಿಡ್ ಎರಚಿ ಪರಾರಿಯಾಗಿದ್ದಾನೆ. ಕನ್ನಡ, ತಮಿಳು, ತೆಲುಗು ಹಾಗೂ ಇತರೆ ಭಾಷೆಯಲ್ಲೂ ಕರಪತ್ರ ಮುದ್ರಿಸಿ ಎಲ್ಲ ರಾಜ್ಯಗಳಿಗೂ ಕಳುಹಿಸಲಾಗಿದೆ. ಲುಕ್ ಔಟ್ ನೋಟಿಸ್ ಹೊರಡಿಸಲಾಗಿದೆ’ ಎಂದೂ ಪೊಲೀಸರು ಹೇಳಿದರು.

ರಾಜ್ಯದಾದ್ಯಂತ ಯೋಗ ಅಭಿಯಾನ ಮುಖ್ಯಮಂತ್ರಿ ಬೊಮ್ಮಾಯಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್, ಶ್ವಾಸ ಯೋಗ ಸಂಸ್ಥೆ ಮತ್ತು ಪತಂಜಲಿ ಯೋಗ ಪೀಠದ ಸಹಯೋಗದಲ್ಲಿ ರಾಜ್ಯದಾದ್ಯಂತ ‘ಕರ್ನಾಟಕ ಯೋಗ ಅಭಿಯಾನ’ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಶ್ವಾಸ ಯೋಗ ಸಂಸ್ಥೆಯ ಸಂಸ್ಥಾಪಕರು ಮತ್ತು ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಮಹಾಪೋಷಕರಾಗಿರುವ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದ ನಿಯೋಗ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿಮಾಡಿ, ರಾಜ್ಯದಲ್ಲಿ ಯೋಗ ಶಿಕ್ಷಣ ಪ್ರಚುರಪಡಿಸುವ ಕುರಿತು ಚರ್ಚಿಸಿತು. ಆಗ ಬೊಮ್ಮಾಯಿ ಈ ಸಲಹೆ ನೀಡಿತು.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಯೋಗ ಅಭಿಯಾನ ನಡೆಸುವಂತೆ ವಚನಾನಂದ ಸ್ವಾಮೀಜಿ ನೇತೃತ್ವದ ತಂಡಕ್ಕೆ ಸಲಹೆ ನೀಡಿದ್ದೇನೆ. ಈ ಸಂಬಂಧ ಶ್ವಾಸ ಯೋಗ ಸಂಸ್ಥೆ ಹಾಗೂ ಪತಂಜಲಿ ಯೋಗ ಪೀಠ ಜಂಟಿಯಾಗಿ ಸಲ್ಲಿಸುವ ಪ್ರಸ್ತಾವಕ್ಕೆ ಸರ್ಕಾರದಿಂದ ಅಗತ್ಯ ಸಹಕಾರ ಒದಗಿಸುವ ಭರವಸೆಯನ್ನೂ ನೀಡಿದ್ದೇನೆ’ ಎಂದು ಬೊಮ್ಮಾಯಿ ತಿಳಿಸಿದರು.

‘ಯೋಗ ಶಿಕ್ಷಣವನ್ನು ಇನ್ನಷ್ಟು ಪ್ರಚುರಪಡಿಸುವ ಹಾಗೂ ಎಲ್ಲ ವಯೋಮಾನದವರೂ ಯೋಗಾಭ್ಯಾಸವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹ ನೀಡಲು ರಾಜ್ಯದಾದ್ಯಂದ ಯೋಗ ಅಭಿಯಾನ ನಡೆಸಲು ಉದ್ದೇಶಿಸಲಾಗಿದೆ. ಸರ್ಕಾರದಿಂದ ಅಗತ್ಯ ಸಹಕಾರ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಶೀಘ್ರದಲ್ಲೇ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ವಚನಾನಂದ ಸ್ವಾಮೀಜಿ ಹೇಳಿದರು.

ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಡಾ. ಜಯದೀಪ್ ಆರ್ಯ, ಕರ್ನಾಟಕ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಭವರ್‌ಲಾಲ್ ಆರ್ಯ ನಿಯೋಗದಲ್ಲಿದ್ದರು.

Office of The Chief Engineer (Capital Zone) P.W.D Bhopal (M.P)

Tender Notice

NIT No. 05/ G. /1/Mis/C.Z./2019 (Year 2022) Bhopal, Date 19-04-2022

Online Tender for mentioned below are being invited. The Tender have been uploaded on the e-Procurement system of Public Works Department on the Portal https://mptenders.gov.in Tender details are as below:-

Sl.No.	Tender No.	District	Nature of work	Name of work	Call No.	Cost of Project (PAC) (Rs. in lack)	Remarks
1	2	3	4	5	6	7	8
1	2022_ PWDRB_ 198084_1	BHOPAL (PWD Mn. Dn. No. 2 Bhopal)	Plan	Construction of Kerwa Dam to Kerwa Canal Parallel Road one Side Kerwa to Hinotiya, Bhairopur , Maxi Bhopal Road Length 13.50 Km.	1st call	1936.55	EMD/All Document are to be submitted online only.
				Total		1936.55	

The document can only be purchased online from the above website after making online payment. The last date & time for purchase of Document on line is Dated 06-05-22 up to (17:30.) Detailed NIT and other details can be viewed on the above mentioned portal. Amendments to NIT, if any, would be published on website only, and not in newspaper.

Chief Engineer (Capital Zone)
P.W.D. Bhopal Madhya Pradesh

G-12224/22 पहला डोज़ रक्षा – दूसरा डोज़ सुरक्षा ।

‘ಬಿ–ಖಾತಾ: ಸರ್ಕಾರದ ನಿರ್ದೇಶನದಂತೆ ಕ್ರಮ’

ಬೆಂಗಳೂರು: ‘ನಗರದಲ್ಲಿನ ಬಿ–ಖಾತಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನದಂತೆ ಕ್ರಮಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದ್ದಾರೆ.

‘ಸುಮಾರು 6 ಲಕ್ಷಕ್ಕಿಂತ ಹೆಚ್ಚು ಬಿ–ಖಾತಾ ಆಸ್ತಿಗಳಿವೆ. ಈ ವಿಷಯದ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಸಭೆ ನಡೆದಿದೆ. ಈ ಸಭೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗುವುದು’ ಎಂದು ಸೋಮವಾರ ತಿಳಿಸಿದರು.

‘ಬಿ–ಖಾತಾಗಳು ಪ್ರತ್ಯೇಕವಾಗಿ ಉಳಿಯಬಾರದು ಎನ್ನುವುದು ನಮ್ಮ ಉದ್ದೇಶ. ಆದರೆ, ಯಾವ ರೀತಿಯಲ್ಲಿ ಬಿ–ಖಾತಾಗಳನ್ನು ಎ–ಖಾತಾಗೆ ಪರಿವರ್ತಿಸಬೇಕು ಎನ್ನುವುದು ಮುಖ್ಯ’ ಎಂದು ತಿಳಿಸಿದರು.

ಸುಲಿಗೆ ಪ್ರಕರಣ: ಭದ್ರಾವತಿಯಲ್ಲಿ ಆರೋಪಿ ಆತ್ಮಹತ್ಯೆ

ಬೆಂಗಳೂರು: ವೃದ್ಧೆಯೊಬ್ಬರ ಮೇಲೆ ಹಲ್ಲೆ ಮಾಡಿ ಚಿನ್ನದ ಸರ ಕಿತ್ತೊಯ್ದಿದ್ದ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪ ಎದುರಿಸುತ್ತಿದ್ದ ನರೇಂದ್ರ ಬಾಬು (46) ಎಂಬುವರು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ವಿದ್ಯಮಾನ ನಗರದಲ್ಲಿ ಏಪ್ರಿಲ್ 20ರಂದು ಬಾಡಿಗೆ ಕೇಳುವ ನೆಪದಲ್ಲಿ ವೃದ್ಧೆಯೊಬ್ಬರ ಮೇಲೆ ಹಲ್ಲೆ ಮಾಡಿ, 48 ಗ್ರಾಂ ಚಿನ್ನದ ಸರ ಸುಲಿಗೆ ಮಾಡಲಾಗಿತ್ತು. ಗಾಯಗೊಂಡ ವೃದ್ಧೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಅವರು ನೀಡಿದ್ದ ದೂರಿನಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಸುಲಿಗೆ ಪ್ರಕರಣದಲ್ಲಿ ನರೇಂದ್ರ ಬಾಬು ಭಾಗಿಯಾದ ಬಗ್ಗೆ ಮಾಹಿತಿ ಇತ್ತು. ಅವರು ಭದ್ರಾವತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಕುಟುಂಬಸ್ಥರಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಟ್ಯಾನರಿ ರಸ್ತೆಯಲ್ಲಿ ವಾಹನಗಳ ದಟ್ಟಣೆ ಉಂಟಾಗಿರುವುದು (ಎಡಚಿತ್ರ) ದಟ್ಟಣೆಯಿಂದ ವಾಹನಗಳು ಸಾಲುಗಟ್ಟಿ ನಿಂತಿರುವುದು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನನೆಗುದಿಗೆ ಬಿದ್ದ ಟ್ಯಾನರಿ ರಸ್ತೆ ವಿಸ್ತರಣೆ ಯೋಜನೆ • ವಾಹನ ಸವಾರರು ಹೈರಾಣ

ಇಕ್ಕಟ್ಟಾದ ರಸ್ತೆಯಲ್ಲಿ ಸಂಚಾರ ಕಿರಿಕಿರಿ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಸದಾ ವಾಹನಗಳಿಂದ ಗಿಜಿಗಿಡುವ ರಸ್ತೆ, ಸಂಚಾರಕ್ಕೆ ಹರಸಾಹಸಪಡುವ ವಾಹನ ಸವಾರರು, ಕಿರಿದಾದ ಪಾದಚಾರಿ ಮಾರ್ಗ, ರಸ್ತೆ ವಿಸ್ತರಣೆ ಯೋಜನೆಯೂ ನನೆಗುದಿಗೆ...

ಇದು ನಗರದ ಟ್ಯಾನರಿ ರಸ್ತೆಯ ಚಿತ್ರಣ. ನಗರದ ಕಂಟ್ಮೋನೆಂಟ್‌ನ ಈಶಾನ್ಯ ಭಾಗದಲ್ಲಿರುವ ಟ್ಯಾನರಿ ರಸ್ತೆ ಸುಮಾರು ನಾಲ್ಕು ಕಿಲೋ ಮೀಟರ್ ಉದ್ದ ಇದೆ. ಟ್ಯಾನರಿ ರಸ್ತೆಯನ್ನು ಸಂಚಾರ ಸ್ನೇಹಿಯನ್ನಾಗಿ ಮಾಡಬೇಕು ಎನ್ನುವ ಯೋಜನೆ ಮಾತ್ರ ಗ್ರಹಣ ಹಿಡಿದಿದೆ.

ಈ ರಸ್ತೆಯನ್ನು ಯೋಜನಾಬದ್ಧವಾಗಿ ನಿರ್ಮಿಸಿಲ್ಲ. ದಿನೇ ದಿನೇ ವಾಹನಗಳ ಸಂಚಾರ ಹೆಚ್ಚುತ್ತಿದೆ. ಹೀಗಾಗಿ, ಇಲ್ಲಿ ಎಚ್ಚರಿಕೆಯಿಂದ ಸಂಚರಿಸಬೇಕು. ಇಲ್ಲದಿದ್ದರೆ ಅಪಘಾತಗಳು ಖಚಿತ. ವಾಹನಗಳ ಪಾರ್ಕಿಂಗ್ ಸಹ ವ್ಯವಸ್ಥಿತವಾಗಿ ಇಲ್ಲ. ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡಿರುವುದು ಸಹ ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸಿದೆ ಎನ್ನುವುದು ಸ್ಥಳೀಯರ ದೂರು.

ಈ ರಸ್ತೆಯನ್ನು ವಿಸ್ತರಿಸಬೇಕು ಎನ್ನುವುದು ಹಲವು ವರ್ಷಗಳ ಬೇಡಿಕೆ. ಆದರೆ, ರಸ್ತೆ ವಿಸ್ತರಣೆಗೆ ವಿಘ್ನಗಳೇ ಹೆಚ್ಚು. ನಿತ್ಯ ವಾಹನ ದಟ್ಟಣೆಯಿಂದ ಈ ಭಾಗದ ಸಾರ್ವಜನಿಕರು ನರಕಯಾತನೆ ಅನುಭವಿಸುತ್ತಿದ್ದರು. ಬಿಎಂಟಿಸಿ ಬಸ್‌ಗಳ ಸಂಚಾರಕ್ಕೂ ತೊಡಕಾಗುತ್ತಿದೆ. ಹೀಗಾಗಿ, ರಸ್ತೆ ವಿಸ್ತರಣೆ ಕಾಮಗಾರಿ ಕೈಗೊಳ್ಳಲು ಹಲವು ವರ್ಷಗಳ ಹಿಂದೆಯೇ ತೀರ್ಮಾನಿಸಲಾಗಿತ್ತು. ಆದರೆ, ವಿಸ್ತರಣೆಗೆ ಅಗತ್ಯವಿರುವ ಜಾಗವನ್ನು ಬಿಟ್ಟುಕೊಡಲು ಆಸ್ತಿ ಮಾಲೀಕರು ಒಪ್ಪದಿರುವುದು ಯೋಜನೆಗೆ ಅಡ್ಡಿಯಾಗಿದೆ. ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

ಎಂ.ಎಂ.ರಸ್ತೆಯಿಂದ ಹೊರ ವರ್ತುಲ ರಸ್ತೆವರೆಗಿನ ಡಾ.ಬಿ.ಆರ್. ಅಂಬೇಡ್ಕರ್ ರಸ್ತೆಯನ್ನು (ಟ್ಯಾನರಿ ರಸ್ತೆ) ಅಗಲಗೊಳಿಸುವುದಕ್ಕೆ ಬಿಬಿಎಂಪಿ ಉದ್ದೇಶಿಸಿತ್ತು. ಆಟೋಗಳು, ದ್ವಿಚಕ್ರ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಮಾರ್ಗದಲ್ಲಿ ಸಂಚರಿಸುತ್ತವೆ. ರಸ್ತೆಯಲ್ಲಿ ವಿಭಜಕ ಅಳವಡಿಕೆಗೆ ವಿಸ್ತರಣೆ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ.

ಒಟ್ಟು 4.16 ಕಿ.ಮೀ.ಉದ್ದದ ರಸ್ತೆಯನ್ನು ₹30.92 ಕೋಟಿ ವೆಚ್ಚದಲ್ಲಿ ವಿಸ್ತರಿಸಲು ನಿರ್ಧರಿಸಲಾಗಿತ್ತು. ಇದಕ್ಕಾಗಿ 3,140 ಚದರ ಮೀಟರ್ ಜಮೀನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ರಸ್ತೆಯ ಎರಡೂ ಬದಿಯಲ್ಲಿರುವ 653 ಆಸ್ತಿಗಳನ್ನು ಇದಕ್ಕಾಗಿ ಸ್ವಾಧೀನಪಡಿಸಿಕೊಳ್ಳಬೇಕಿದೆ.

ಈಗಿರುವ ರಸ್ತೆಯು ಕೆಲವೆಡೆ ಚಿಕ್ಕದಾಗಿದೆ. ರಸ್ತೆಯ ಅಗಲ 7 ಮೀಟರ್‌ನಿಂದ 15 ಮೀಟರ್‌ನಷ್ಟಿದೆ. 4.16 ಕಿ.ಮೀ.ಉದ್ದಕ್ಕೂ 24 ಮೀಟರ್ (80 ಅಡಿ) ರಸ್ತೆ ನಿರ್ಮಿಸುವ ಯೋಜನೆ ಇದೆ. ಎರಡೂ ಬದಿಯಲ್ಲೂ ತಲಾ 2.40 ಮೀಟರ್ ಅಗಲದ ಪಾದಚಾರಿ ಮಾರ್ಗವನ್ನೂ ನಿರ್ಮಿಸಲು ಉದ್ದೇಶಿಸಲಾಗಿತ್ತು. ಯೋಜನೆ ಪ್ರಕಾರ ಕಾಮಗಾರಿ ಪೂರ್ಣಗೊಂಡ ಬಳಿಕ ಟ್ಯಾನರಿ ರಸ್ತೆಯ ಎಂ.ಎಂ.ರಸ್ತೆ, ಅಂಬೇಡ್ಕರ್ ಕಾಲೇಜು ನಡುವಿನ ರಸ್ತೆಯಲ್ಲಿ ವಾಹನ ದಟ್ಟಣೆ ಸಮಸ್ಯೆ ನಿವಾರಣೆಯಾಗಲಿದೆ ಎಂದು ಅಧಿಕಾರಿಗಳು ಪ್ರತಿಪಾದಿಸುತ್ತಾರೆ.

ಅಂಕಿ ಅಂಶ

7-15 ಮೀಟರ್ ಈಗಿರುವ ರಸ್ತೆಯ ಅಗಲ

24 ಮೀಟರ್ ವಿಸ್ತರಣೆ ಕಾಮಗಾರಿ ಬಳಿಕ ರಸ್ತೆಯ ಅಗಲ

653 ಸ್ವಾಧೀನಕ್ಕೆ ಗುರುತಿಸಲಾದ ಒಟ್ಟು ಆಸ್ತಿಗಳು

ಇದು ರಸ್ತೆ ಎನ್ನುವ ಸ್ಥಿತಿಯಲ್ಲಿಯೇ ಇಲ್ಲ. ಸರಿಯಾದ ಫುಟ್‌ಪಾತ್ ಸಹ ಇಲ್ಲ. ಪಾದಚಾರಿಗಳು ನಡೆದಾಡುವುದು ಹೇಗೆ? ವಾಹನಗಳ ಸಂಚಾರ ಹೆಚ್ಚುತ್ತಿದೆ. ಸಮಸ್ಯೆಗಳು ಹಾಗೆಯೇ ಹೆಚ್ಚುತ್ತಿವೆ.

ವೇಣು, ಟ್ಯಾನರಿ ರಸ್ತೆ ನಿವಾಸಿ

7ರಂದು ಪುಲಿಕೇಶಿನಗರದಲ್ಲಿ ಜನಸ್ಪಂದನ

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಇದೇ ಮೇ 7ರಂದು ಸುಲ್ತಾನಪಾಳ್ಯದ ಗಣೇಶ ಬ್ಲಾಕ್‌ನ ಒಂದನೇ ಅಡ್ಡರಸ್ತೆಯ ಪಾನಿಪುರ ಮೈದಾನದಲ್ಲಿ ‘ಜನಸ್ಪಂದನ’ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಅಖಂಡ ಶ್ರೀನಿವಾಸಮೂರ್ತಿ

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಸಂಪರ್ಕ: **9916674666**

ಸುದ್ದಿ 2 ನಿಮಿಷ

5ಕ್ಕೆ ಸೌಹಾರ್ದ ಸಂಸ್ಕೃತಿ ಸಮಾವೇಶ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಧಾರ್ಮಿಕ ಸಂಘರ್ಷ ತಡೆಗೆ ಪರಿಹಾರ ಕಂಡುಕೊಳ್ಳುವ ಆಶಯದೊಂದಿಗೆ ವಿವಿಧ ಧಾರ್ಮಿಕ, ಕಾರ್ಮಿಕ, ದಲಿತ, ಸಾಹಿತ್ಯ, ಮಹಿಳಾ ಸಂಘಟನೆಗಳು ಒಗ್ಗೂಡಿ ‘ಸೌಹಾರ್ದ ಸಂಸ್ಕೃತಿ ಸಮಾವೇಶ’ವನ್ನು ಇದೇ 5ರಂದು ಸಂಜೆ 4.30ಕ್ಕೆ ವಸಂತನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿವೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘಟನೆ ಮುಖಂಡ ಮಾವಳ್ಳಿ ಶಂಕರ್, ‘ಸರ್ವ ಸಮುದಾಯಗಳನ್ನು ಪ್ರತಿನಿಧಿಸುವ ಧರ್ಮಗುರುಗಳು ಸಮಾವೇಶದಲ್ಲಿ ಭಾಗವಹಿಸಲಿದ್ದು, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಸಬೇಕೆಂಬ ಕಳಕಳಿಯ ಸಂದೇಶ ನೀಡಲಿದ್ದಾರೆ’ ಎಂದರು.

‘ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಯೇ ಉಳಿಸಬೇಕಿದೆ. ‘ಧರ್ಮದ ಹೆಸರಲ್ಲಿ ದ್ವೇಷ ಬಿತ್ತುವುದು ಬೇಡ’ ಎನ್ನುವುದೇ ಸಮಾವೇಶದ ಪ್ರಧಾನ ಸಂದೇಶ’ ಎಂದು ಹೇಳಿದರು.

‘ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಭಾಗವಹಿಸಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಆಶಯ ನುಡಿಗಳನ್ನಾಡಲಿದ್ದಾರೆ’ ಎಂದರು.

ಬನಶಂಕರಿಯಲ್ಲಿ ಮಲಬಾರ್ ಷೋ ರೂಂ

ಬೆಂಗಳೂರು: ನಗರದ ಬನಶಂಕರಿಯಲ್ಲಿ ‘ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್’ನ ಹೊಸ ಷೋ ರೂಂ ಆರಂಭವಾಗಿದೆ.

ಚಿನ್ನ ಮತ್ತು ವಜ್ರದ ವ್ಯಾಪಾರ ಸಮೂಹಗಳಲ್ಲಿ ದೇಶದಲ್ಲೇ ಅತಿ ದೊಡ್ಡದಾಗಿರುವ ‘ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್’ನ ಹೊಸ ಷೋ ರೂಂ ವಿಶ್ವದರ್ಜೆಯ ಆಭರಣಗಳನ್ನು ಹೊಂದಿದೆ.

ಬನಶಂಕರಿಯ 100 ಅಡಿ ರಸ್ತೆಯ, ಬಿಎಸ್‌ಕೆ ಮೂರನೇ ಹಂತದಲ್ಲಿರುವ ಅಪೊಲೊ ಪಬ್ಲಿಕ್ ಶಾಲೆಯ ಎದುರು ಆರಂಭಿಸಿರುವ ಈ ಹೊಸ ಷೋ ರೂಂ ಅನ್ನು ಕಂದಾಯ ಸಚಿವ ಆರ್. ಅಶೋಕ ಸೋಮವಾರ ಉದ್ಘಾಟಿಸಿದರು. ಕರ್ನಾಟಕ ವಿಭಾಗದ ಮುಖ್ಯಸ್ಥ ಫಿಲ್ಸೋರ್ ಬಾಬು, ವಲಯ ಮುಖ್ಯಸ್ಥರಾದ ಮಾನ್ಸೂರ್ ಅಲಂ ಮತ್ತು ರಿಬಿನ್ ತೌಫಿಕ್ ಇದ್ದರು.

ಇದು ಬೆಂಗಳೂರಿನ 12ನೇ ಮತ್ತು ಕರ್ನಾಟಕದಲ್ಲಿನ 28ನೇ ಷೋ ರೂಂ ಆಗಿದೆ. ಅಕ್ಷಯ ತೃತಿಯಕ್ಕಾಗಿ ಈ ಷೋ ರೂಂನಲ್ಲಿ ವಿಶೇಷ ಕೊಡುಗೆಗಳನ್ನು ಪ್ರಕಟಿಸಲಾಗಿದೆ. ವಜ್ರದ ಮೌಲ್ಯದ ಮೇಲೆ ಶೇ 20ರಷ್ಟು ಕಡಿತ ಹಾಗೂ ಎಲ್ಲ ರತ್ನಾಭರಣಗಳ ಮತ್ತು ‘ಅನ್‌ಕಟ್’ ಆಭರಣಗಳ ತಯಾರಿ ದರಗಳ ಮೇಲೆ ಶೇ 25ರಷ್ಟು ಕಡಿತದ ಸೌಲಭ್ಯವಿದೆ. ಹಲವಾರು ಆಕರ್ಷಕ ಮತ್ತು ಅಪರೂಪದ ಚಿನ್ನ ಮತ್ತು ವಜ್ರದ ಆಭರಣಗಳು ಇಲ್ಲಿ ಲಭ್ಯ. ತಯಾರಿಕಾ ಶುಲ್ಕವು ಶೇ 4.9ರಿಂದ ಆರಂಭವಾಗಲಿದೆ.

'ಬನಶಂಕರಿಯಲ್ಲಿ ಆರಂಭಿಸಿರುವ ಷೋ ರೂಂ ಗ್ರಾಹಕರಿಗೆ ಆಭರಣಗಳ ಖರೀದಿಯಲ್ಲಿ ಹೊಸತನ ನೀಡುತ್ತದೆ. ವಿಶ್ವದರ್ಜೆಯ ಶಾಪಿಂಗ್ ವ್ಯವಸ್ಥೆಯನ್ನು ಈ ಷೋ ರೂಂ ನೀಡುತ್ತದೆ. ಪ್ರತಿಯೊಂದು ಸಂದರ್ಭಕ್ಕೂ ಹೊಂದುವ ವಿನ್ಯಾಸಗಳು ಇಲ್ಲಿವೆ’ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮ್ಮದ್ ತಿಳಿಸಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಬಡವರಿಗೆ ದಿನಸಿ ಕಿಟ್ ವಿತರಿಸಿದರು. ಜೆಡಿಎಸ್ ಬೆಂಗಳೂರು ಮಹಾನಗರ ಘಟಕದ ಅಧ್ಯಕ್ಷ ಆರ್‌.ಪ್ರಕಾಶ್, ಬ್ಯಾಟರಾಯನಪುರ ಕ್ಷೇತ್ರದ ಅಧ್ಯಕ್ಷ ಎನ್‌.ವೇಣುಗೋಪಾಲ್, ಮುಖಂಡ ಟಿ.ಎನ್‌.ಹರೀಶ್ ಕುಮಾರ್ ಇದ್ದರು.

ಬಡ ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಘಟಕದ ವತಿಯಿಂದ ಹೆಗಡೆನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು, ರಂಜಾನ್ ಹಬ್ಬದ ಪ್ರಯುಕ್ತ ಅಲ್ಪಸಂಖ್ಯಾತ ಕುಟುಂಬಗಳಿಗೆ 5 ಸಾವಿರ ದಿನಸಿ ಕಿಟ್ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ‘ಎಲ್ಲ ಜಾತಿ-ಧರ್ಮದ ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಪಕ್ಷದ ಆದ್ಯತೆ ಆಗಿದೆ. ರಂಜಾನ್, ಮುಸಲ್ಮಾನರಿಗೆ ಪವಿತ್ರವಾದ ಹಬ್ಬವಾಗಿದ್ದು, ಒಂದು ತಿಂಗಳ ಕಾಲ ಉಪವಾಸ ಮತ್ತು ಅನ್ನದ ಮಹತ್ವ ತಿಳಿಸುವ ಸಲುವಾಗಿ ಈ ಆಚರಣೆಯನ್ನು ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಇರುವವರು ಇಲ್ಲದವರಿಗೆ ನೀಡುವ ಪದ್ಧತಿಯಿದೆ’ ಎಂದರು.

ಬೆಂಗಳೂರು ಮಹಾನಗರ ಜಾತ್ಯತೀತ ಜನತಾದಳದ ಅಧ್ಯಕ್ಷ ಆರ್. ಪ್ರಕಾಶ್, ಬ್ಯಾಟರಾಯನಪುರ ಕ್ಷೇತ್ರದ ಅಧ್ಯಕ್ಷ ಎನ್.ವೇಣುಗೋಪಾಲ್, ಮುಖಂಡರಾದ ಟಿ.ಎ.ಶರವಣ, ಚೌಡರೆಡ್ಡಿ ತೂಪಲ್ಲಿ, ಟಿ.ಎನ್. ಹರೀಶ್ ಕುಮಾರ್, ಎಂ.ಖಲೀಲ್ ಉಲ್ಲಾ, ಸೈಯದ್ ಅನೀಫ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲೂ ಆರಂಭವಾದ ಎನ್‌ಐಎ ಶಾಖೆ • 22 ಜನರಿಗೆ ಶಿಕ್ಷೆ

ರಾಜ್ಯದಲ್ಲಿ 12ಕ್ಕೂ ಹೆಚ್ಚು ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2012ರಿಂದ ಈತನಕ ದಾಖಲಾಗಿರುವ ಭಯೋತ್ಪಾದನಾ ಕೃತ್ಯಕ್ಕೆ ಸಂಬಂಧಿಸಿದ 12ಕ್ಕೂ ಹೆಚ್ಚು ಪ್ರಕರಣಗಳು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ತೆಕ್ಕೆಯಲ್ಲಿವೆ. ಇವುಗಳಲ್ಲಿ 329 ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ವಿಶೇಷವೆಂದರೆ 2016ರಿಂದ ಈತನಕ 22 ಜನರಷ್ಟೇ ಶಿಕ್ಷೆಗೆ ಗುರಿಯಾಗಿದ್ದಾರೆ.

ರಾಜ್ಯ ವ್ಯಾಪ್ತಿಯಲ್ಲಿ ಎನ್‌ಐಎ ಅಡಿ ದಾಖಲಾಗಿರುವ ಆರ್‌ಎಸ್‌ಎಸ್ ಸ್ವಯಂ ಸೇವಕ ರುದ್ರೇಶ್ ಕೊಲೆ, ಭಯೋತ್ಪಾದನೆ ಹರಡುವ ಆರೋಪದಡಿಯಲ್ಲಿ ನಿಷೇಧಿತ ಐಎಸ್ ಸಂಘಟನೆ ಜೊತೆಗೂಡಿ ರಾಜ್ಯದ ವಿವಿಧೆಡೆ ಚಟುವಟಿಕೆ ನಡೆಸಿದ ಆರೋಪ ಹೊತ್ತವರು ಹಾಗೂ ಅಲ್–ಹಿಂದ್ ಜಿಹಾದಿ ಸಭೆಗಳಲ್ಲಿ ಪಾಲ್ಗೊಂಡ ಆರೋಪಿಗಳು, ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿರುವ ಕೋಕೊನಟ್ ಗ್ರೋವ್ ರೆಸ್ಟೋರೆಂಟ್ ಮುಂಭಾಗದಲ್ಲಿ ನಡೆದ ಬಾಂಬ್ ಸ್ಫೋಟ, ಜಮಾತ್ ಉಲ್ ಮುಜಾಹಿದ್ದೀನ್‌ನ ಬಾಂಗ್ಲಾದೇಶಿ ಸದಸ್ಯರು ಕೃಷ್ಣಗಿರಿ ಕಾಡಿನಲ್ಲಿ ರಾಕೆಟ್ ಹಾರಿಸುವ ತರಬೇತಿ ಪಡೆದದ್ದು ಮತ್ತು ಉಗ್ರಗಾಮಿ ಕೃತ್ಯಗಳ ಬಳಕೆಗಾಗಿ ವಿವಿಧೆಡೆ ಡಕಾಯಿತಿಗಳನ್ನು ನಡೆಸಿದ್ದು, ಶ್ರೀಲಂಕಾ ಮತ್ತು ಬಾಂಗ್ಲಾ ದೇಶಗಳಿಂದ ಮಾನವ ಕಳ್ಳಸಾಗಣೆ, ಸಂಸದ ಪ್ರತಾಪ್ ಸಿಂಹ ಅವರನ್ನು 2012ರಲ್ಲಿ ಕೊಲೆ ಮಾಡುವ ಸಂಚು ರೂಪಿಸಿದ್ದು, ಲಷ್ಕರ್ ಎ ತೈಯಬಾ (ಎಲ್‌ಇಟಿ) ಚಟುವಟಿಕೆ, ಫೇಕ್ ಇಂಡಿಯನ್ ಕರೆನ್ಸಿ ನೋಟ್ (ಎಫ್‌ಐಸಿಎನ್) ಚಲಾವಣೆ, ಕೆ.ಜಿ ಹಳ್ಳಿ ಮತ್ತು ಡಿಜೆ ಹಳ್ಳಿ ಪ್ರಕರಣ ಸೇರಿದಂತೆ ಶಿವಮೊಗ್ಗದಲ್ಲಿ ಇತ್ತೀಚೆಗೆ ನಡೆದ ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆಯೂ ಎನ್‌ಐಎ ತನಿಖೆ ವ್ಯಾಪ್ತಿಗೆ ಸೇರ್ಪಡೆಯಾಗಿದೆ.

ಇವುಗಳಲ್ಲಿ ಒಟ್ಟು ಐದು ಪ್ರಕರಣಗಳು ವಿಚಾರಣೆಯ ಹಂತದಲ್ಲಿದ್ದು ಇದರಲ್ಲಿನ ಒಟ್ಟು 109 ಆರೋಪಿಗಳು ಜೈಲಿನಲ್ಲಿದ್ದಾರೆ. ರಾಜ್ಯದಲ್ಲಿ ನಡೆದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ದೆಹಲಿ, ಕೊಲ್ಕತ್ತಾ, ಚೆನ್ನೈ, ಸೇಲಂ ಜೈಲುಗಳಲ್ಲಿಯೂ ಆರೋಪಿಗಳಿದ್ದಾರೆ. ಬಹುತೇಕರು ಭಾರತೀಯ ದಂಡ ಸಂಹಿತೆಯ (ಐಪಿಸಿ) ವಿವಿಧ ಕಲಂಗಳ ಅಡಿಯಲ್ಲಿನ ಅಪರಾಧಗಳಿಗಿಂತಲೂ ಮಿಗಿಲಾಗಿ, ‘ಕಾನೂನು ಬಾಹಿರ ಚಟುವಟಿಕೆಗಳ ನಿರ್ಬಂಧ ಕಾಯ್ದೆ–1967’ರ (ಯುಎಪಿಎ) ವಿವಿಧ ಕಲಂಗಳ ಅಡಿಯಲ್ಲಿ ಬಂಧನದಲ್ಲಿದ್ದಾರೆ.

ಎಫ್‌ಐಸಿಎನ್, ಎಲ್‌ಇಟಿ, ಮೈಸೂರು ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿದ ಮತ್ತು ಪಾಸ್‌ಪೋರ್ಟ್ ಪ್ರಕರಣಗಳಲ್ಲಿ 22 ಜನರಿಗೆ ಎನ್‌ಐಎ ವಿಶೇಷ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ವಿವಿಧ ಪ್ರಕರಣಗಳಲ್ಲಿ ಒಟ್ಟು 219 ಜನ ಆರೋಪಿಗಳಿಗೆ ಜಾಮೀನು, ಡಿಫಾಲ್ಟ್ ಜಾಮೀನು (ನಿಗದಿತ ಅವಧಿಯಲ್ಲಿ ಕೋರ್ಟ್‌ಗೆ ಅಂತಿಮ ವರದಿಯನ್ನು ಸಲ್ಲಿಸದೇ ಹೋದಲ್ಲಿ ತಂತಾನೇ ಲಭ್ಯವಾಗುವ ಜಾಮೀನು ಹಕ್ಕು) ದೊರೆತಿದ್ದರೆ, ಎಲ್ಲಾ ಪ್ರಕರಣಗಳಲ್ಲಿ ಬೇಕಾದ 14 ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಈತನಕ 12ಕ್ಕೂ ಹೆಚ್ಚು ಪ್ರಕರಣಗಳಲ್ಲಿ 118ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆಸಲಾಗಿದೆ.

ರಾಜ್ಯದಲ್ಲಿ 2016ರಿಂದ ವಿಶೇಷ ಪ್ರಾಸಿಕ್ಯೂಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಪಿ.ಪ್ರಸನ್ನಕುಮಾರ್, ‘ಇತ್ತೀಚೆಗೆ ಬೆಂಗಳೂರಿನಲ್ಲಿಯೂ ಎನ್‌ಐಎ ತನ್ನ ಶಾಖೆಯನ್ನು ಆರಂಭಿಸಿದೆ. ಆತಂಕವಾದಿ ಚಟುವಟಿಕೆಗಳನ್ನು ಹತ್ತಿಕ್ಕಲು ಮತ್ತು ಇವುಗಳ ಜೊತೆ ಸಂಪರ್ಕ ಇರಿಸಿಕೊಂಡವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಿ, ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತಿದೆ‘ ಎಂದು ವಿವರಿಸುತ್ತಾರೆ.

ಕೋವಿಡ್: 30ಗಳ ನಂತರ ಹೊಸ ಪ್ರಕರಣ ವರದಿ

ರಾಮನಗರ: ಜಿಲ್ಲೆಯಲ್ಲಿ ಒಂದು ತಿಂಗಳ ಬಳಿಕ ಕೋವಿಡ್ ಹೊಸ ಪ್ರಕರಣವೊಂದು ಸೋಮವಾರ ವರದಿ ಆಗಿದೆ.

ಕಳೆದ ಏಪ್ರಿಲ್ 5ರಂದು ಜಿಲ್ಲೆಯಲ್ಲಿ ಕೋವಿಡ್ ಪ್ರಕರಣ ಪತ್ತೆಯಾಗಿತ್ತು. ಇದೀಗ ಕನಕಪುರದಲ್ಲಿ ವ್ಯಕ್ತಿಯೊಬ್ಬರಲ್ಲಿ ಸೋಂಕು ದೃಢವಾಗಿದೆ. ಜಿಲ್ಲೆಯಲ್ಲಿ ಈವರೆಗೆ ಒಟ್ಟು 30,274 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

3 ವಾರದಿಂದ ಕಗ್ಗತ್ತಲಿನಲ್ಲಿ ಗ್ರಾಮ

ಹನೂರು: ತಾಲ್ಲೂಕಿನ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿದರಳ್ಳಿ ಸಮೀಪದ ಹುಚ್ಚಪ್ಪನದೊಡ್ಡಿ ಗ್ರಾಮದಲ್ಲಿ ಮಳೆ–ಗಾಳಿಗೆ ವಿದ್ಯುತ್ ಕಂಬಗಳು ಬಿದ್ದಿದ್ದು, 18 ದಿನಗಳಿಂದಲೂ ವಿದ್ಯುತ್ ಸಂಪರ್ಕ ಇಲ್ಲದಿರುವುದರಿಂದ ರಾತ್ರಿ ಹೊತ್ತಿನಲ್ಲಿ ಗ್ರಾಮವು ಕಗ್ಗತ್ತಲಿನಲ್ಲೇ ಮುಳುಗಿದೆ.

ಕೆಲವು ದಿನದ ಹಿಂದೆ ಗ್ರಾಮದ ಸುತ್ತಮುತ್ತ ಬಿದ್ದ ಗಾಳಿ–ಮಳೆಗೆ ಚಿನ್ನಯ್ಯ ಜಮೀನಿನಲ್ಲಿ ನಾಲ್ಕೈದು ಕಂಬಗಳು ಮುರಿದು ಬಿದ್ದಿದ್ದರೆ, ಪುಟ್ಟರಾಜು ಎಂಬುವರ ಮನೆ ಮೇಲೆ ವಿದ್ಯುತ್ ಕಂಬ ಮುರಿದು ಬಿದ್ದಿದ್ದರೂ ಯಾವುದೇ ಅಪಾಯ ಸಂಭವಿಸಿಲ್ಲ.

ವಿದ್ಯುತ್ ಕಂಬ ಮುರಿದು ಬಿದ್ದು ಮೂರು ವಾರವಾದರೂ ದುರಸ್ತಿ ಮಾಡದಿದ್ದರಿಂದ ವಿದ್ಯುತ್ ಪೂರೈಕೆ ಇಲ್ಲದಾಗಿದೆ. ಗ್ರಾಮದ ಜನರು ಕತ್ತಲಲ್ಲೇ ರಾತ್ರಿ ಕಳೆಯುತ್ತಿದ್ದಾರೆ. ಕುಡಿಯುವ ನೀರಿಗೂ ಪರದಾಡುವಂತಾಗಿದೆ. ‘ಈ ಬಗ್ಗೆ ಹನೂರು ಸೆಸ್ಕ್‌ನ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ದುರಸ್ತಿಗೆ ಮುಂದಾಗಿಲ್ಲ’ ಎಂಬುದು ಗ್ರಾಮಸ್ಥರ ದೂರು.

‘ಜೆಇ, ಎಇಇ ಗಮನಕ್ಕೆ ತಂದಿದ್ದರೂ ಸ್ಪಂದನೆ ಶೂನ್ಯವಾಗಿದೆ. ಅಧಿಕಾರಿಗಳು ಸಮಸ್ಯೆ ಬಗೆಹರಿಸದಿದ್ದಲ್ಲಿ ಗ್ರಾಮಸ್ಥರು, ರೈತ ಸಂಘದ ಜೊತೆಗೂಡಿ ಹನೂರಿನ ಸೆಸ್ಕ್ ಕಚೇರಿ ಮುಂದೆ ಪ್ರತಿಭಟಿಸಬೇಕಾಗುತ್ತದೆ’ ಎಂದು ಗ್ರಾ. ಪಂ. ಉಪಾಧ್ಯಕ್ಷ ರಾಮಲಿಂಗಂ ಎಚ್ಚರಿಸಿದರು.

‘ಗ್ರಾಮದ ಜಮೀನಿನಲ್ಲಿ ಕಂಬಗಳು ಬಾಗಿರುವ ಬಗ್ಗೆ ಮಾಹಿತಿ ಬಂದಿದೆ. ಈ ಬಗ್ಗೆ ಹನೂರು ಎಇಇಗೆ ಸೂಚನೆ ನೀಡಲಾಗಿದೆ. ನಿರಂತರ ರಜೆಯಿದ್ದರಿಂದ ದುರಸ್ತಿ ಆಗಿರಲಿಲ್ಲ. ಮಂಗಳವಾರದಿಂದ ಬೇರೆ ಕಂಬಗಳನ್ನು ಅಳವಡಿಸಲಾಗುವುದು’ ಎಂದು ಕೊಳ್ಳೇಗಾಲ ಇಇ ಪ್ರೀತಮ್ ತಿಳಿಸಿದರು.

₹2 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ರಾಜಣ್ಣ, ಟಿ.ವೆಂಕಟರಾಮರೆಡ್ಡಿ, ಎಚ್‌.ಎ.ಶಿವಕುಮಾರ್ ಇತರರು ಇದ್ದರು

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಭುವನೇಶ್ವರಿನಗರ ಹಾಗೂ ದತ್ತ ಟೌನ್ ಶಿಪ್ (ಕಟ್ಟಿಗೇನಹಳ್ಳಿ) ಬಡಾವಣೆಯಲ್ಲಿ ₹2 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಭುವನೇಶ್ವರಿ ನಗರದಲ್ಲಿ ಈ ಹಿಂದೆ ಅಭಿವೃದ್ಧಿಪಡಿಸಿದ್ದ ರಸ್ತೆಗಳು ಕಾವೇರಿ ನೀರು ಮತ್ತು ಒಳಚರಂಡಿ ಪೈಪ್‌ಲೈನ್ ಅಳವಡಿಕೆ ಹಾಗೂ ದತ್ತ ಟೌನ್ ಶಿಪ್ ಬಡಾವಣೆಯಲ್ಲಿ ಕಾವೇರಿ ನೀರು ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಕೈಗೊಂಡಿದ್ದ ಹಿನ್ನೆಲೆಯಲ್ಲಿ ಹಾಳಾಗಿದ್ದವು. ಹೀಗಾಗಿ ಮತ್ತೆ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಆರಂಭಿಸಲಾಗಿದೆ’ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ರಾಜಣ್ಣ, ಟಿ.ವೆಂಕಟರಾಮರೆಡ್ಡಿ, ಎಚ್‌.ಎ.ಶಿವಕುಮಾರ್, ಡಿ.ಬಿ. ಸುರೇಶ್ ಗೌಡ, ಡಿ.ಸಿ.ಮುನಿರಾಜು, ಡಿ.ಸಿ.ಮುನಿಸ್ವಾಮಿ, ಸಿ.ನಂಜಪ್ಪ, ಬಿಬಿಎಂಪಿ ಸಹಾಯಕ ಎಂಜಿನಿಯರ್‌ಗಳಾದ ಸುರೇಶ್ ದೇವತಾಚಾರ್, ಮಾಲತೇಶ್ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಬಸವ ಉತ್ಸವ: ಸಾನ್ನಿಧ್ಯ–ಶಿವರುದ್ರ ಸ್ವಾಮೀಜಿ, ಉದ್ಘಾಟನೆ–ಗೊ.ರು. ಚನ್ನಬಸಪ್ಪ, ಆಶಯ ನುಡಿ–ಎಸ್. ಪಿನಾಕಪಾಣಿ, ಅತಿಥಿಗಳು–ಬಿ.ಎಸ್. ಪರಮಶಿವಯ್ಯ, ಸಿ.ಸೋಮಶೇಖರ್, ಬಿ.ಆರ್.ಹಿರೇಮಠ್, ಬಲವಂತರಾವ್ ಪಾಟೀಲ, ಆಯೋಜನೆ–ವಚನ ಜ್ಯೋತಿ ಬಳಗ, ಸ್ಥಳ–ಜಗಜ್ಯೋತಿ ಬಸವೇಶ್ವರ ವಿದ್ಯಾರ್ಥಿ ನಿಲಯ, ವಿಜಯನಗರ, ಬೆಳಿಗ್ಗೆ 6.35

ಬಸವ ಜಯಂತಿ: ಸಾನ್ನಿಧ್ಯ–ಸಿದ್ದಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಉದ್ಘಾಟನೆ–ಬಿ.ಎಸ್.ಪರಮಶಿವಯ್ಯ, ಅತಿಥಿಗಳು–ಸಚಿವ ಕೆ.ಗೋಪಾಲಯ್ಯ, ಶಾಸಕ ಎಸ್.ಸುರೇಶ್ ಕುಮಾರ್, ಬಿ.ವೈ. ವಿಜಯೇಂದ್ರ, ಆಯೋಜನೆ–ಬಸವೇಶ್ವರ ನಗರ ಬಸವ ಬಳಗ, ಸ್ಥಳ–ಸಿದ್ಧಗಂಗಾ ಕಲ್ಯಾಣ ಮಂಟಪ, ಶಿವನಗರ, ಬೆಳಿಗ್ಗೆ 8.30

ಬಸವೇಶ್ವರ ಜಯಂತಿ ಪ್ರಯುಕ್ತ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ: ಅತಿಥಿ–ಕೇಂದ್ರ ಗೃಹ ಸಚಿವ ಅಮಿತ್ ಶಾ, ಸ್ಥಳ–ಬಸವೇಶ್ವರ ವೃತ್ತ, ಬೆಳಿಗ್ಗೆ 9.55

ಮಡಿವಾಳ ಮಾಚಿದೇವರ ಜಯಂತಿ: ಸಾನ್ನಿಧ್ಯ–ಶಿವಯೋಗಾನಂದಪುರಿ ಸ್ವಾಮೀಜಿ, ಬಸವ ಮಾಚಿದೇವ ಸ್ವಾಮೀಜಿ, ಪ್ರವಚನ–ಎಡೆಯೂರು ಮೂಡಲಗಿರಿಯಪ್ಪ, ಅಧ್ಯಕ್ಷತೆ–ಬಿ.ಎಚ್. ಶ್ರೀನಿವಾಸ್, ಅತಿಥಿಗಳು–ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ್ ಬಿ.ಗರುಡಾಚಾರ್, ಕಾಂಗ್ರೆಸ್ ಮುಖಂಡ ಆರ್.ವಿ.ದೇವರಾಜ್, ಆಯೋಜನೆ–ಮಡಿವಾಳ ಮಾಚಿದೇವ ಧಾರ್ಮಿಕ ಟ್ರಸ್ಟ್, ಸ್ಥಳ–ಮಡಿವಾಳ ಮಾಚಿದೇವ ದೇವಸ್ಥಾನ, ಕೆಂಪಾಂಬುದಿ ಕೆರೆ ಅಂಗಳ, ಕೆಂಪೇಗೌಡನಗರ, ಬೆಳಿಗ್ಗೆ 10.30

ಮೋನಿಷಾ ಐಸಿರಿ ಗೌಡ

ಕಥಕ್ ರಂಗಪ್ರವೇಶ: ಮೋನಿಷಾ ಐಸಿರಿ ಗೌಡ, ಅತಿಥಿಗಳು–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಸತ್ಯನಾರಾಯಣರಾಜು, ನಂದಿನಿ ಕೆ.ಮೆಹ್ತಾ, ಆಯೋಜನೆ–ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6

ನೃಪತುಂಗ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭ: ಶೈಕ್ಷಣಿಕ ಸಮುಚ್ಚಯ ಕಟ್ಟಡಕ್ಕೆ ಶಂಕುಸ್ಥಾಪನೆ–ಕೇಂದ್ರ ಗೃಹ ಸಚಿವ ಅಮಿತ್ ಶಾ, ಸ್ಥಳ–ಸರ್ಕಾರಿ ಕಲಾ ಕಾಲೇಜಿನ ಮೈದಾನ, ಅಂಬೇಡ್ಕರ್ ವೀದಿ, ಬೆಳಿಗ್ಗೆ 10.30

ಜಿ.ವೇದಾಂತ ಅಯ್ಯಂಗಾರ್ ಅವರ ಪುಣ್ಯಸ್ಮರಣೆ ಮತ್ತು ವಾರ್ಷಿಕ ವಸಂತ ಸಂಗೀತೋತ್ಸವ: ಗಾಯನ–ಬಾಂಬೆ ಜಯಶ್ರೀ, ವಾದ್ಯ ಸಹಕಾರ–ಎಚ್. ಎನ್.ಭಾಸ್ಕರ್, ಪತ್ರಿ ಸತೀಶ್‌ಕುಮಾರ್, ಗಿರಿಧರ್ ಉಡುಪ, ಆಯೋಜನೆ–ಶ್ರೀರಾಮ ಲಲಿತ ಕಲಾ ಮಂದಿರ, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್. ರಸ್ತೆ, ಸಂಜೆ 5.30

ಬಾಂಬೆ ಜಯಶ್ರೀ

ಬಸವ ಜಯಂತಿ: ಸಾನ್ನಿಧ್ಯ–1008 ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಜೆ.ಸಿ. ಮಾಧುಸ್ವಾಮಿ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ, ಆಂಧ್ರಪ್ರದೇಶದ ಸಚಿವೆ ಕೆ.ವಿ.ಉಷಾಶ್ರೀ ಚರಣ್, ಅಶೋಕ್ ಹಾರನಹಳ್ಳಿ, ಬೈರತಿ ಸುರೇಶ್, ವೈ.ಎ.ನಾರಾಯಣಸ್ವಾಮಿ, ಹಂಪ ನಾಗರಾಜಯ್ಯ, ಆಯೋಜನೆ–ತರಳಬಾಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ, ಸ್ಥಳ–ತರಳಬಾಳು ಕೇಂದ್ರದ ಸಭಾಂಗಣ, ಆರ್.ಟಿ.ನಗರ, ಸಂಜೆ 6.30

ಕಾಮಗಾರಿಗಳಿಂದ ನಾಗರಿಕರಿಗೆ ತೊಂದರೆ: ಸ್ಥಳೀಯರ ಆರೋಪ

ಮಲ್ಲೇಶ್ವರದಲ್ಲಿ ಕಾಮಗಾರಿ ವಿಳಂಬ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳು ವಿಳಂಬವಾಗುತ್ತಿದ್ದು, ನಾಗರಿಕರಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯರು ಭಾನುವಾರ ಪ್ರತಿಭಟನೆ ನಡೆಸಿದರು.

‘ಸ್ಯಾಂಕಿ ಕೆರೆ ಉಳಿಸಿ’, ‘ಗುಂಡಿಗಳ ನಗರ ಮಲ್ಲೇಶ್ವರ’, ‘ಕಳಪೆ ಕಾಮಗಾರಿ ನಿಲ್ಲಿಸಿ’ ಘೋಷಣೆಗಳಿದ್ದ ಭಿತ್ತಿಪತ್ರಗಳನ್ನು ಹಿಡಿದು ಸದಾಶಿವನಗರದ ಶಿವಾಜಿ ಪ್ರತಿಮೆಯಿಂದ ಸ್ಯಾಂಕಿ ಕೆರೆವರೆಗೂ ರ‍್ಯಾಲಿ ನಡೆಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.

‘ನಡೆಯುತ್ತಿರುವ ಕಾಮಗಾರಿ ಕಳಪೆಯಾಗಿದೆ. ಟೆಂಡರ್‌ನಲ್ಲಿ ಅವ್ಯವಹಾರ ನಡೆದಿರುವ ಅನುಮಾನವಿದೆ. ಕಾಮಗಾರಿ ವಿಳಂಬದಿಂದಾಗಿ ಸ್ಥಳೀಯರು ಹಾಗೂ ವ್ಯಾಪಾರಿಗಳು ಸಂಕಷ್ಟ ಎದುರಿಸುವಂತಾಗಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಸ್ಯಾಂಕಿ ಕೆರೆ ಅಭಿವೃದ್ಧಿ ನೆಪದಲ್ಲಿ 12 ವರ್ಷದಿಂದ ವಿವಿಧ ಕಾಮಗಾರಿಗಳು ನಡೆದಿವೆ. ಇನ್ನೂ ಪೂರ್ಣಗೊಂಡಿಲ್ಲ. ನಾಲ್ಕು ತಿಂಗಳಲ್ಲಿ ಎರಡು ಬಾರಿ ಪಾದಚಾರಿ ಮಾರ್ಗದ ಕಾಮಗಾರಿ ನಡೆಸಲಾಗಿದೆ’ ಎಂದು ಆರೋಪಿಸಿದರು.

‘ಒಬ್ಬನೇ ಗುತ್ತಿಗೆದಾರನಿಗೆ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಕಾಮಗಾರಿಗಳ ಟೆಂಡರ್ ನೀಡಲಾಗಿದೆ. ಇದು ಕೂಡಾ ವಿಳಂಬಕ್ಕೆ ಕಾರಣ. ಮಲ್ಲೇಶ್ವರ ಮುಖ್ಯರಸ್ತೆ ಹಾಗೂ ಪ್ಯಾಲೇಸ್ ಗುಟ್ಟಹಳ್ಳಿ ರಾಜಕಾಲುವೆ ಕಾಮಗಾರಿಯೂ ಮಂದಗತಿಯಲ್ಲಿ ಸಾಗುತ್ತಿದೆ. ಈ ಬಗ್ಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಸ್ಥಳೀಯ ನಿವಾಸಿ ಅನೂಪ್ ಅಯ್ಯಂಗಾರ್ ದೂರಿದರು.

‘ಕ್ಷೇತ್ರದಲ್ಲಿ ನಡೆಯುತ್ತಿರುವ ಎಲ್ಲ ಕಾಮಗಾರಿಗಳ ಮಾಹಿತಿ ಸಾರ್ವಜನಿಕರಿಗೆ ಸಿಗುವಂತಾಗಬೇಕು. ಮೂರು ತಿಂಗಳಲ್ಲಿ ಕಾಮಗಾರಿಗಳನ್ನು ಮುಗಿಸಬೇಕು. ಗುಣಮಟ್ಟಕ್ಕೆ ಆದ್ಯತೆ ನೀಡಬೇಕು. ಇಲ್ಲದಿದ್ದರೆ ಮುಂದೆ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ’ ಎಂದು ಎಚ್ಚರಿಸಿದರು.

ಕಾಮಗಾರಿ ವಿಳಂಬವಾಗುತ್ತಿರುವುದನ್ನು ಖಂಡಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು

ಅಪಘಾತ: ಕಾನ್‌ಸ್ಟೆಬಲ್ ಸಾವು

ರಾಮನಗರ: ವಿವಾಹ ವಾರ್ಷಿಕೋತ್ಸವ ದಿನದಂದೇ ಹೆಡ್ ಕಾನ್‌ಸ್ಟೆಬಲ್ ಒಬ್ಬರು ರಸ್ತೆ ಅಪಘಾತದಲ್ಲಿ ಮೃತಪಟ್ಟ ಘಟನೆ ಬಿಡದಿ–ಹಾರೋಹಳ್ಳಿ ಮುಖ್ಯ ರಸ್ತೆಯ ಕೆಂಪಶೆಟ್ಟಿದೊಡ್ಡಿ ಬಳಿ ಭಾನುವಾರ ರಾತ್ರಿ ಸಂಭವಿಸಿದೆ.

ರಾಮನಗರ ತಾಲ್ಲೂಕಿನ ತಿಮ್ಮೇಗೌಡನದೊಡ್ಡಿ ನಿವಾಸಿ ಚಂದ್ರಶೇಖರ್ (37) ಮೃತರು. 2008ರಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಕಾನ್‌ಸ್ಟೆಬಲ್ ಆಗಿ ಸೇವೆಗೆ ಸೇರಿದ್ದ ಅವರು ಹೆಡ್ ಕಾನ್‌ಸ್ಟೆಬಲ್ ಆಗಿ ಬಡ್ತಿ ಪಡೆದಿದ್ದರು. ಚಂದ್ರಶೇಖರ್ ಭಾನುವಾರ ಎಂದಿನಂತೆ ಬೈಕ್‌ನಲ್ಲಿ ಕೆಲಸಕ್ಕೆಂದು ಹಾರೋಹಳ್ಳಿಗೆ ತೆರಳಿದ್ದರು. ವಿವಾಹ ವಾರ್ಷಿಕೋತ್ಸವದ ಕಾರಣ ಮನೆಗೆ ಬೇಗ ಬರುವುದಾಗಿ ಮಡದಿಗೆ ಹೇಳಿದ್ದರು. ರಾತ್ರಿ ಕೆಲಸ ಮುಗಿಸಿ ಬೈಕ್‌ನಲ್ಲಿ ರಾಮನಗರಕ್ಕೆ ವಾಪಸ್ ಆಗುತ್ತಿದ್ದ ವೇಳೆ ಲಾರಿಯೊಂದು ಡಿಕ್ಕಿಯಾಗಿ ಸ್ಥಳದಲ್ಲೇ ಸಾವನ್ನಪ್ಪಿದರು.

ಅವರಿಗೆ ಪತ್ನಿ ಪವಿತ್ರಾ, ಆರು ವರ್ಷದ ಪುತ್ರಿ ಆರೋಹಿ ಇದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಯಿತು.

ಇದು ಭಾರತದ ನಂಬಿಕೆ: ಜರ್ಮನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

‘ಉಕ್ರೇನ್: ಯಾರಿಗೂ ಜಯ ಸಿಗದು’

ಬರ್ಲಿನ್ (ಪಿಟಿಐ): ‘ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಯಾರೂ ಗೆಲ್ಲುವುದಿಲ್ಲ. ಎಲ್ಲರೂ ನಷ್ಟ ಅನುಭವಿಸುತ್ತಾರೆ. ಭಾರತವು ಯಾವಾಗಲೂ ಶಾಂತಿಯ ಪರವಿರುತ್ತದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಪ್ರತಿಪಾದಿಸಿದರು.

ಇಲ್ಲಿ ಜರ್ಮನಿಯ ಛಾನ್ಸೆಲರ್ ಒಲಾಫ್ ಸ್ಕೋಲ್ಜ್ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಮೋದಿ, ‘ಉಕ್ರೇನ್ ಬಿಕ್ಕಟ್ಟಿನ ಆರಂಭದಿಂದಲೂ ತಕ್ಷಣವೇ ಯುದ್ಧ ನಿಲ್ಲಿಸಲು ಭಾರತ ಒತ್ತಾಯಿಸಿದೆ. ಸಂಘರ್ಷ ಶಮನಗೊಳಿಸಲು ಮಾತುಕತೆಯೊಂದೇ ಪರಿಹಾರವೆಂದು ಒತ್ತಿ ಹೇಳಿದೆ’ಎಂದರು.

‘ಉಕ್ರೇನ್ ಬಿಕ್ಕಟ್ಟಿನಿಂದಾಗಿ ತೈಲ ಬೆಲೆಗಳು ರಾಕೆಟ್ ವೇಗದಲ್ಲಿ ಗಗನಕ್ಕೇರುತ್ತಿವೆ. ಆಹಾರ ಧಾನ್ಯಗಳು ಮತ್ತು ರಸಗೊಬ್ಬರಗಳ ಕೊರತೆಯ ಪರಿಣಾಮ ಪ್ರಪಂಚದ ಪ್ರತಿ ಕುಟುಂಬದ ಮೇಲೂ ಹೊರೆ ಬಿದ್ದಿದೆ. ಅಭಿವೃದ್ಧಿಶೀಲ ಮತ್ತು ಬಡ ರಾಷ್ಟ್ರಗಳ ಮೇಲೆ ಈ ಬಿಕ್ಕಟ್ಟು ಹೆಚ್ಚಿನ ಪರಿಣಾಮ ಉಂಟು ಮಾಡಿದೆ’ ಎಂದು ಅವರು ಹೇಳಿದರು.

ಉಕ್ರೇನ್ ಸಂಘರ್ಷದಿಂದ ತಲೆದೋರಿರುವ ಮಾನವೀಯ ಪರಿಣಾಮಗಳ ಬಗ್ಗೆ ಭಾರತಕ್ಕೂ ಕಳವಳವಿದೆ. ಸಂಕೀರ್ಣವಾದ ಜಗತ್ತಿನಲ್ಲಿ ಭಾರತ ಮತ್ತು ಜರ್ಮನಿ ನಡುವಿನ ಪಾಲುದಾರಿಕೆಯು ಯಶಸ್ಸಿನ ಉದಾಹರಣೆಯಾಗಿದೆ ಎಂದು ಮೋದಿ ಹೇಳಿದರು.

ದ್ವಿಪಕ್ಷೀಯ ಸಹಕಾರ: ರಕ್ಷಣಾ ಪಾಲುದಾರಿಕೆ ಸೇರಿ ಪ್ರಮುಖ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ, ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಉಭಯ ನಾಯಕರು ಮಾತುಕತೆ ನಡೆಸಿದರು.

ಒಲಾಫ್ ಅವರೊಂದಿಗಿನ ಮಾತುಕತೆಯ ನಂತರ ಪ್ರಧಾನಿ ಮೋದಿ, ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತ ಮತ್ತು ಜರ್ಮನಿ ಹಲವು ಸಮಾನ ಮೌಲ್ಯಗಳನ್ನು ಹೊಂದಿವೆ. ಐರೋಪ್ಯ ಒಕ್ಕೂಟದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳಲ್ಲಿ ತ್ವರಿತ ಪ್ರಗತಿಗೆ ಭಾರತ ಬದ್ಧವಾಗಿದೆ. ಹಸಿರು ಹೈಡ್ರೋಜನ್ ಕಾರ್ಯಪಡೆಯನ್ನು ಸ್ಥಾಪಿಸಲು ಉಭಯ ರಾಷ್ಟ್ರಗಳು ನಿರ್ಧರಿಸಿವೆ ಎಂದು ಹೇಳಿದರು.

ಜರ್ಮನಿಯಲ್ಲಿ ನಡೆಯಲಿರುವ ಜಿ–7 ಶೃಂಗಸಭೆಗೆ ಮೋದಿಯವರಿಗೆ ಆಹ್ವಾನ ನೀಡಿದ ಒಲಾಫ್, ‘ಜಾಗತಿಕ ಆರ್ಥಿಕತೆ, ಹವಾಮಾನ ಬದಲಾವಣೆ ವಿಚಾರದಲ್ಲಿ ಭಾರತ ಪ್ರಮುಖ ಪಾತ್ರ ವಹಿಸುತ್ತಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬರ್ಲಿನ್‌ನಲ್ಲಿರುವ ಭಾರತೀಯರ ಕುಶಲೋಪರಿ ವಿಚಾರಿಸಿದರು – ಪಿಟಿಐ ಚಿತ್ರ

ಹಸಿರು ಇಂಧನಕ್ಕೆ ನೆರವು

ಸುಸ್ಥಿರ ಅಭಿವೃದ್ಧಿ ಕೇಂದ್ರಿತ ಹಲವು ಒಪ್ಪಂದಗಳಿಗೆ ಉಭಯ ನಾಯಕರು ಸಹಿ ಹಾಕಿದರು. ಶುದ್ಧ ಇಂಧನ ಉತ್ಪಾದನೆಯನ್ನು 500 ಗಿಗಾ ವಾಟ್‌ಗೆ ಹೆಚ್ಚಿಸುವ ಗುರಿ ಸಾಧಿಸಲು ಮುಂದಿನ ಎಂಟು ವರ್ಷಗಳಲ್ಲಿ ಅಂದರೆ, 2030ರವರೆಗೆ ಭಾರತಕ್ಕೆ ₹79,800 ಕೋಟಿ ನೆರವು ನೀಡಲು ಜರ್ಮನಿ ವಾಗ್ದಾನ ನೀಡಿದೆ.

ಯುರೋಪ್‌ನ ಮೂರು ರಾಷ್ಟ್ರಗಳ ಪ್ರವಾಸದಲ್ಲಿರುವ ಮೋದಿ ಅವರು, ಸೋಮವಾರ ಬೆಳಿಗ್ಗೆ ಬರ್ಲಿನ್‌ಗೆ ಬಂದಿಳಿದರು. ಡೆನ್ಮಾರ್ಕ್ ಮತ್ತು ಫ್ರಾನ್ಸ್‌ಗೂ ಅವರು ಭೇಟಿ ನೀಡಲಿದ್ದಾರೆ.

ಜರ್ಮನಿಯ ಬರ್ಲಿನ್‌ನಲ್ಲಿ ಸೋಮವಾರ ರಾತ್ರಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಭಾರತೀಯರತ್ತ ಕೈಬೀಸಿದರು– ಪಿಟಿಐ ಚಿತ್ರ

ಭಾರತದಲ್ಲಿ ಹೂಡಿಕೆ ಮಾಡಿ:ಆಹ್ವಾನ

ಬರ್ಲಿನ್: ಜರ್ಮನ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬಿಜೆಪಿ ಸರ್ಕಾರವು ಕೈಗೊಂಡ ಸುಧಾರಣೆಗಳನ್ನು ವಿವರಿಸಿ, ಭಾರತದ ಯುವಜನರನ್ನು ಕೇಂದ್ರೀಕರಿಸಿ ಬಂಡವಾಳ ಹೂಡುವಂತೆ ಅಲ್ಲಿನ ಉದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ.

ಭಾರತ ಮತ್ತು ಜರ್ಮನಿಯ ಉದ್ಯಮಿಗಳೊಂದಿಗೆ ಸಂವಾದ ನಡೆಸಿದ ಅವರು, ‘ಭಾರತದಲ್ಲಿ ಹೆಚ್ಚುತ್ತಿರುವ ನವೋದ್ಯಮಗಳು (ಸ್ಟಾರ್ಟ್ ಅಪ್‌ಗಳು) ಮತ್ತು ಯೂನಿಕಾರ್ನ್‌ಗಳ ಬಗ್ಗೆ ವಿವರಿಸಿದರು. ಈ ದಿಸೆಯಲ್ಲಿ ಭಾರತದ ಯುವಜನರನ್ನು ಕೇಂದ್ರೀಕರಿಸಿಕೊಂಡು ಉದ್ಯಮಿಗಳು ಬಂಡವಾಳ ಹೂಡಬೇಕೆಂದು ಆಹ್ವಾನ ನೀಡಿದರು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

‘ಇಂಡೋ–ಜರ್ಮನ್‌ನ ನಡುವಿನ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯ ಜತೆಗೆ ಆರ್ಥಿಕ ಮತ್ತು ವಾಣಿಜ್ಯ ಪಾಲುದಾರಿಕೆಯನ್ನು ವೃದ್ಧಿಸುವ ಬಗ್ಗೆಯೂ ಪ್ರಧಾನಿ ಅವರು ಚರ್ಚಿಸಿದರು’ ಎಂದೂ ಸಚಿವಾಲಯವು ಟ್ವೀಟ್ ಮಾಡಿದೆ. ಜರ್ಮನಿಯ ಚಾನ್ಸೆಲರ್ ಓಲಾಫ್ ಸ್ಕೋಲ್ಜ್ ನೇತೃತ್ವದಲ್ಲಿ ನಡೆದ ವಾಣಿಜ್ಯ ಸಭೆಯಲ್ಲಿ ಮೋದಿ ಅವರು ಸಹ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್. ಜೈಶಂಕರ್, ಸರ್ಕಾರಗಳ ಉನ್ನತ ಪ್ರತಿನಿಧಿಗಳು ಮತ್ತು ಉಭಯ ದೇಶಗಳ ಆಯ್ದ ಸಿಇಒಗಳು ಭಾಗವಹಿಸಿದ್ದರು.

ಟಗರು ಬಂತು ಟಗರು....

ಮಂಗಳೂರಿನಲ್ಲಿ ನಗರ ಪೊಲೀಸ್ ವತಿಯಿಂದ ಸೋಮವಾರ ಆಯೋಜಿಸಿದ್ದ ಪುನೀತ್ ರಾಜ್‌ಕುಮಾರ್ ಸ್ಮರಣೆ ಕಾರ್ಯಕ್ರಮದಲ್ಲಿ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರು ಹಾಡಿದ ಟಗರು ಚಿತ್ರದ ಹಾಡಿಗೆ ಶಿವರಾಜ್‌ಕುಮಾರ್ ಅವರು ಪೊಲೀಸರೊಂದಿಗೆ ಹೆಜ್ಜೆ ಹಾಕಿದ ಕ್ಷಣ –ಪ್ರಜಾವಾಣಿ ಚಿತ್ರ

ಇಂದು ನಗರಕ್ಕೆ ಅಮಿತ್ ಶಾ: ಪದಾಧಿಕಾರಿಗಳ ಸಭೆ ಮಧ್ಯಾಹ್ನ

ಸಿ.ಎಂ ಬದಲಾವಣೆ ಸದ್ದು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಒಂದು ದಿನದ ರಾಜ್ಯ ಭೇಟಿಯ ಸಂದರ್ಭದಲ್ಲೇ ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಮಾಡಲಾಗುತ್ತದೆ ಎಂಬ ಸದ್ದು ಜೋರಾಗಿದೆ.

ಬಿಜೆಪಿ ವಲಯದಲ್ಲಿ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬದಲಾಗುತ್ತಾರೆ ಎಂಬ ಸುದ್ದಿ ಎರಡು ದಿನಗಳಿಂದ ಹರಿದಾಡುತ್ತಿದ್ದು, ಸೋಮವಾರ ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬಂದು ಬಿಟ್ಟಿತ್ತು. ‘ಒಂದು ವರ್ಷದೊಳಗೆ ವಿಧಾನಸಭೆ ಚುನಾವಣೆ ಎದುರಿಸಬೇಕಾಗಿರುವ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಪ್ರಶ್ನೆಯೇ ಇಲ್ಲ. ಇಂತಹದೊಂದು ಪುಕಾರನ್ನು ಸುಖಾಸುಮ್ಮನೇ ಹಬ್ಬಿಸಲಾಗುತ್ತಿದೆ’ ಎಂದು ಪಕ್ಷದ ಮೂಲಗಳು ಪ್ರಬಲವಾಗಿ ಪ್ರತಿಪಾದಿಸುತ್ತವೆ.

ಅಮಿತ್ ಶಾ ಅವರು ಮಂಗಳವಾರ ಕೆಲವು ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಜತೆಗೆ ಪಕ್ಷದ ಪದಾಧಿಕಾರಿಗಳನ್ನೂ ಭೇಟಿಯಾಗಲಿದ್ದಾರೆ.

ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು, ಮೈಸೂರಿನಲ್ಲಿ ಮಾತನಾಡುವಾಗ, ‘ಪದೇ ಪದೇ ನಾಯಕತ್ವ ಬದಲಾವಣೆಯೇ ಬಿಜೆಪಿಯ ಶಕ್ತಿ’ ಎಂದು ಹೇಳಿದ್ದು ಮುಖ್ಯಮಂತ್ರಿ ಬದಲಾವಣೆಯ ಚರ್ಚೆಗೆ ಪುಷ್ಟಿ ಕೊಟ್ಟಿದೆ. ಆದರೆ, ಬೆಂಗಳೂರಿನಲ್ಲಿ ಭಾನುವಾರ ರಾತ್ರಿ ನಡೆದ ಪಕ್ಷದ ಸಭೆಯಲ್ಲಿ ಮಾತನಾಡಿದ ಬೊಮ್ಮಾಯಿ, ‘ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಎಲ್ಲ ರೀತಿಯ ತ್ಯಾಗಕ್ಕೂ ಸಿದ್ಧರಾಗಬೇಕು ಎಂದು ಹೇಳಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಬೊಮ್ಮಾಯಿ ಅವರ ರೇಸ್‌ಕೋರ್ಸ್ ರಸ್ತೆಯಲ್ಲಿರುವ ನಿವಾಸದಲ್ಲಿ ಏರ್ಪಡಿಸಿರುವ ಭೋಜನಕೂಟದಲ್ಲಿ ಅಮಿತ್ ಶಾ ಭಾಗವಹಿಸಲಿದ್ದಾರೆ. ಆ ಭೋಜನಕೂಟಕ್ಕೆ ಶಾಸಕರು ಮತ್ತು ಸಂಸದರಿಗೂ ಆಹ್ವಾನ ನೀಡಲಾಗಿದೆ. ‘ತಾಜ್ ವೆಸ್ಟ್‌ಎಂಡ್’ ಹೋಟೆಲ್‌ನಲ್ಲಿ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಲಿರುವ ಶಾ, ಚುನಾವಣೆಗೆ ಸಜ್ಜುಗೊಳಿಸಲು ಸರ್ಕಾರ ಮತ್ತು ಪಕ್ಷಕ್ಕೆ ಕೆಲವು ಸಲಹೆ– ಸೂಚನೆಗಳನ್ನು ನೀಡಲಿದ್ದಾರೆ.

‘ಮುಂಬರುವ ದಿನಗಳಲ್ಲಿ ಸರ್ಕಾರದಲ್ಲಿ ಕೆಲ ಬದಲಾವಣೆಯಾಗಲಿದ್ದು, ಮೂರು ಬಗೆಯ ಆಯ್ಕೆಗಳು ವರಿಷ್ಠರ ಮುಂದಿವೆ. ಮೊದಲ ಆಯ್ಕೆ; ಮುಖ್ಯಮಂತ್ರಿ ಮತ್ತು ಕೆಲವು ಹಿರಿಯ ಸಚಿವರ ಬದಲಾವಣೆ, ಎರಡನೇ ಆಯ್ಕೆ ಮುಖ್ಯಮಂತ್ರಿ ಮುಂದುವರಿಸಿ ಶೇ 50 ರಷ್ಟು ಸಚಿವರ ಬದಲಾವಣೆ, ಮೂರನೇ ಆಯ್ಕೆ ಗುಜರಾತ್ ಮಾದರಿಯಲ್ಲಿ ಸಂಪೂರ್ಣ ಬದಲಾವಣೆ. ಆಯ್ಕೆ ಯಾವುದೆಂಬುದನ್ನು ವರಿಷ್ಠರು ತೀರ್ಮಾನಿಸಲಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಕಳೆದ ಸಭೆಯಲ್ಲಿ ನೀಡಿದ್ದ ಗುರಿಯನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬ ಮಾಹಿತಿಯನ್ನು ಶಾ ಪಡೆಯಲಿದ್ದಾರೆ. ಕರ್ನಾಟಕದ ಚುನಾವಣೆ ಬಗ್ಗೆ ಅವರು ಈಗಾಗಲೇ ತಮ್ಮದೇ ಆದ ರೀತಿಯಲ್ಲಿ ಕೆಲಸ ಆರಂಭಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ನಾಯಕತ್ವ ಬದಲಾವಣೆ ಇಲ್ಲ: ಬಿಎಸ್‌ವೈ

ಶಿಕಾರಿಪುರ: ನನ್ನ ಪ್ರಕಾರ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

‘ಬಸವರಾಜ ಬೊಮ್ಮಾಯಿ ಒಳ್ಳೆ ಕೆಲಸ ಮಾಡುತ್ತಿದ್ದಾರೆ. ಸಂತೋಷ್ ಜೀ ಅವರ ಹೇಳಿಕೆ ಬಗ್ಗೆ ಚರ್ಚಿಸುವುದಿಲ್ಲ. ಆ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತದೆ’ ಎಂದರು.

ಹೊಸಪೇಟೆಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ‘ನಮ್ಮ ಪಕ್ಷ ವಿಭಿನ್ನವಾದುದು; ಅದು ನಿಂತ ನೀರಲ್ಲ ಎಂಬ ದೃಷ್ಟಿಕೋನದಿಂದ ಬಿ.ಎಲ್. ಸಂತೋಷ್ ಅವರು ಪಕ್ಷದಲ್ಲಿನ ಬದಲಾವಣೆ ಕುರಿತು ಮಾತುಗಳನ್ನಾಡಿದ್ದಾರೆ. ರಾಜ್ಯದಲ್ಲಿ ಸದ್ಯ ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ’ ಎಂದರು.

ಏಪ್ರಿಲ್‌ನಲ್ಲಿ 54.7ಕ್ಕೆ ಏರಿದ ಸೂಚ್ಯಂಕ: ಎಸ್ ಆ್ಯಂಡ್ ಪಿ ಗ್ಲೋಬಲ್

ತಯಾರಿಕಾ ಚಟುವಟಿಕೆಗೆ ವೇಗ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಏಪ್ರಿಲ್‌ನಲ್ಲಿ ವೇಗದ ಬೆಳವಣಿಗೆ ಕಂಡಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ತಯಾರಿಕೆ ಮತ್ತು ಬೇಡಿಕೆಯಲ್ಲಿ ಹೆಚ್ಚಳ ಕಂಡುಬಂದಿರುವುದು ಮತ್ತು ಅಂತರರಾಷ್ಟ್ರೀಯ ಮಾರಾಟ ಹೆಚ್ಚಾಗಿರುವುದರಿಂದ ಉತ್ತಮ ಬೆಳವಣಿಗೆ ಸಾಧ್ಯವಾಗಿದೆ ಎಂದು ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ಮಾರ್ಚ್‌ನಲ್ಲಿ 54ರಷ್ಟು ಇತ್ತು. ಏಪ್ರಿಲ್‌ನಲ್ಲಿ 54.7ಕ್ಕೆ ಏರಿಕೆ ಆಗಿದೆ. ಕೋವಿಡ್ ನಿರ್ಬಂಧಗಳನ್ನು ಹಿಂದಕ್ಕೆ ಪಡೆದಿರುವುದರಿಂದ ಬೇಡಿಕೆ ಹೆಚ್ಚಾಗುತ್ತಿದೆ.

ವಲಯದ ಬೆಳವಣಿಗೆ ಹಾದಿ



ಮಾಹಿತಿ: ನಿಕೇಯ್, ಐಎಚ್‌ಎಸ್ ಮರ್ಕಿಟ್ ಎಸ್‌ಆ್ಯಂಡ್‌ಪಿ ಗ್ಲೋಬಲ್

ಸತತ 10ನೇ ತಿಂಗಳಿನಲ್ಲಿಯೂ ತಯಾರಿಕಾ ವಲಯದ ಚಟುವಟಿಕೆಗಳು ಏರುಗತಿಯಲ್ಲಿ ಇವೆ ಎನ್ನುವುದನ್ನು ಏಪ್ರಿಲ್ ತಿಂಗಳ ಬೆಳವಣಿಗೆ ಸೂಚಿಸುತ್ತಿದೆ ಎಂದು ಹೇಳಿದೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

ಅಲ್ಪಾವಧಿಯಲ್ಲಿ ವಲಯದ ಬೆಳವಣಿಗೆಯು ಇದೇ ರೀತಿಯಲ್ಲಿ ಮುಂದುವರಿಯಲಿದೆ ಎನ್ನುವುದನ್ನು ಕಚ್ಚಾ ಸಾಮಗ್ರಿಗಳ ಖರೀದಿ ಮತ್ತು ಉತ್ಪನ್ನಗಳ ಮಾರಾಟದಲ್ಲಿ ಆಗುತ್ತಿರುವ ಹೆಚ್ಚಳವು ತೋರಿಸುತ್ತಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ರಷ್ಯಾ-ಉಕ್ರೇನ್ ಸಂಘರ್ಷ ಮತ್ತು ಸರಕು ಸಾಗಣೆ ವೆಚ್ಚ ಹೆಚ್ಚಾಗುತ್ತಿರುವುದರಿಂದ ಹಣದುಬ್ಬರದ ಒತ್ತಡ ತೀವ್ರಗೊಳ್ಳುತ್ತಿದೆ. ಹಣದುಬ್ಬರವು ಬೇಡಿಕೆ ಮೇಲೆ ತೀವ್ರ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ. ಕಂಪನಿಗಳು ತಮ್ಮ ಮೇಲಿನ ಹೆಚ್ಚುವರಿ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುತ್ತಿವೆ ಎಂದು ಅವರು ಹೇಳಿದ್ದಾರೆ.

ಹಲವು ಕಾರ್ಯಕ್ರಮಗಳಲ್ಲಿ ಅಮಿತ್ ಶಾ ಭಾಗಿ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ನಗರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಮತ್ತು ಪಕ್ಷದ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10ಕ್ಕೆ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ, ಬೆಳಿಗ್ಗೆ 10.30ಕ್ಕೆ ನೃಪತುಂಗ ರಸ್ತೆಯಲ್ಲಿರುವ ನೃಪತುಂಗ ವಿಶ್ವವಿದ್ಯಾಲಯ ಕಟ್ಟಡಕ್ಕೆ ಶಂಕುಸ್ಥಾಪನೆ, ವರ್ಚುವಲ್ ಮೂಲಕ ಬಳ್ಳಾರಿಯ ವಿಧಿವಿಜ್ಞಾನ ಪ್ರಯೋಗಾಲಯ ಉದ್ಘಾಟನೆ, ಬೆಳಿಗ್ಗೆ 11.55ಕ್ಕೆ ಡಿಸಾಸ್ಟರ್ ರಿಕವರಿ ಸೆಂಟರ್‌ನ ಉದ್ಘಾಟನೆ ನೆರವೇರಿಸಲಿದ್ದಾರೆ.

ಮಧ್ಯಾಹ್ನ 2ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಏರ್ಪಡಿಸಿರುವ ಭೋಜನ ಕೂಟದಲ್ಲಿ ಶಾ ಭಾಗವಹಿಸುವರು. ಮಧ್ಯಾಹ್ನ 3 ರಿಂದ 3.45ರವರೆಗೆ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ನಾಯಕರ ಜತೆ ಚರ್ಚೆ, ಸಂಜೆ 4 ರಿಂದ 5 ರವರೆಗೆ ಬಿಜೆಪಿ ಕಚೇರಿಗೆ ಭೇಟಿ, ಸಂಜೆ 5.30ಕ್ಕೆ ಖೇಲೊ ಇಂಡಿಯಾ ಸಮಾರೋಪದಲ್ಲಿ ಭಾಗವಹಿಸುವರು.

‘ಪಿಎಸ್‌ಐ ಹಗರಣ: ಕಲಬುರ್ಗಿಗೆ ಸೀಮಿತವಲ್ಲ’

ವಿಜಯಪುರ: ಪಿಎಸ್‌ಐ ನೇಮಕಾತಿ ಹಗರಣ ಕಲಬುರ್ಗಿಗೆ ಸೀಮಿತವಾಗಿಲ್ಲ. ಬೆಂಗಳೂರಿನವರೆಗೂ ಇದರ ಬೇರುಗಳು ವಿಸ್ತರಿಸಿವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಸೋಮವಾರ ಇಲ್ಲಿ ನಡೆದ ಕಾರ್ಯಕರ್ತರ ಸಮಾವೇಶದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಬೆಂಗಳೂರು ನಗರದಲ್ಲಿರುವ ಹಿರಿಯ ಅಧಿಕಾರಿಗಳೂ ಕೂಡಾ ಈ ಹಗರಣದಲ್ಲಿ ಶಾಮೀಲಾಗಿರುವ ಶಂಕೆ ಇದೆ. ಅಕ್ರಮಗಳ ಕುರಿತು ಮಾಹಿತಿಗಳನ್ನು ಬೇರೆ ಮೂಲಗಳಿಂದ ಕಲೆ ಹಾಕುತ್ತಿದ್ದೇನೆ. ಎರಡು ಮೂರು ದಿನಗಳಲ್ಲಿ ಮಾಹಿತಿ ಸಂಗ್ರಹಿಸಲಿದ್ದೇನೆ’ ಎಂದು ತಿಳಿಸಿದರು.

ರೈಲ್ವೆ ಸೇತುವೆಗೆ ಹಣ: ಬಿಎಂಆರ್‌ಸಿಎಲ್ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ಪ್ರಮುಖ ಜವಾಬ್ದಾರಿ ಜತೆಗೆ ಪೂರ್ವ ಬೆಂಗಳೂರಿನಲ್ಲಿ ₹15 ಕೋಟಿ ವೆಚ್ಚದಲ್ಲಿ ಎರಡು ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೆ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಒಪ್ಪಿಕೊಂಡಿದೆ. ಇದಲ್ಲದೇ ದಿಣ್ಣೂರು ಮುಖ್ಯ ರಸ್ತೆಯಲ್ಲಿ ಮೂರನೇ ರೈಲ್ವೆ ಕೆಳಸೇತುವೆಗೆ ಹಣ ಒದಗಿಸಲು ಬಿಬಿಎಂಪಿ ಕೂಡ ಸಮ್ಮತಿಸಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ನೇತೃತ್ವದಲ್ಲಿ ನಡೆದ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ರೈಲ್ವೆ ಕೆಳ ಸೇತುವೆಗಳ ನಿರ್ಮಾಣಕ್ಕೆ ನೈರುತ್ಯ ರೈಲ್ವೆ ಈಗಾಗಲೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುತ್ತಿದ್ದು, ಇದಕ್ಕೆ ಬಿಎಂಆರ್‌ಸಿಎಲ್ ಹಣ ಒದಗಿಸಲಿದೆ. ಫ್ರೇಜರ್ ಟೌನ್ ಬಳಿ (ಪಾಟರಿ ರಸ್ತೆಯಿಂದ ನೇತಾಜಿ ರಸ್ತೆಗೆ ಸಂಪರ್ಕಿಸುವ ರಸ್ತೆ) ಒಂದು ಸೇತುವೆ, ಪಾಟರಿ ಟೌನ್ ಮೆಟ್ರೊ ನಿಲ್ದಾಣದ ಬಳಿ (ನೇತಾಜಿ ರಸ್ತೆಯಿಂದ ಬೋರ್ ಬ್ಯಾಂಕ್ ರಸ್ತೆಗೆ ಸಂಪರ್ಕಿಸುವ ರಸ್ತೆ) ಇನ್ನೊಂದು ಕೆಳ ಸೇತುವೆ ನಿರ್ಮಿಸಲು ಯೋಜಿಸಲಾಗಿದೆ.

‘ಡಿಪಿಆರ್ ಬಹುತೇಕ ಸಿದ್ಧವಾಗಿದ್ದು, ಒಂದು ವಾರದಲ್ಲಿ ಯೋಜನೆಗೆ ಅಗತ್ಯ ಇರುವ ಹಣ ಠೇವಣಿ ಇರಿಸುತ್ತೇವೆ. ಎರಡು ಕೆಳ ಸೇತುವೆ ಕಾಮಗಾರಿ ಶೀಘ್ರವೇ ಪ್ರಾರಂಭವಾಗಲಿವೆ. ರೈಲ್ವೆ ಇಲಾಖೆ ಮೂಲಕ ಕಾಮಗಾರಿ ಕಾರ್ಯಗತಗೊಳ್ಳಲಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ದಿಣ್ಣೂರು ಮುಖ್ಯರಸ್ತೆಯಲ್ಲಿ ಸದ್ಯ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಬದಲಿಗೆ ಕೆಳ ಸೇತುವೆ ನಿರ್ಮಿಸಲು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ(ಕೆ-ರೈಡ್)ಜತೆ ಅನುದಾನ ಹಂಚಿಕೆ ಮಾಡಿಕೊಳ್ಳಲು ಬಿಬಿಎಂಪಿ ಸಮ್ಮತಿಸಿದೆ. ಭೂಸ್ವಾಧೀನದ ಅಗತ್ಯ ಇರುವುದರಿಂದ ಈ ಯೋಜನೆ ಅನುಷ್ಠಾನಕ್ಕೆ ಹೆಚ್ಚಿನ ಕಾಲಾವಕಾಶ ಬೇಕಾಗಲಿದೆ.

‘ರೈಲ್ವೆ ಲೆವೆಲ್ ಕ್ರಾಸಿಂಗ್ ತೆಗೆಯುವ ಯಾವುದೇ ಹೂಡಿಕೆಯೂ ಸ್ವಾಗತಾರ್ಹ. ಈ ರೀತಿಯ ಸುಮಾರು 30 ಲೆವೆಲ್ ಕ್ರಾಸಿಂಗ್‌ಗಳು ನಗರದಲ್ಲಿವೆ. ಅವುಗಳಲ್ಲಿ ಹೆಚ್ಚಿನವು ಯಶವಂತಪುರ ಮತ್ತು ಹೊಸೂರು ಮಾರ್ಗದಲ್ಲಿವೆ. ಕೆಳ ಸೇತುವೆ ಅಥವಾ ಮೇಲ್ಸೇತುವೆ ನಿರ್ಮಿಸಲು ಬಿಬಿಎಂಪಿ ಮತ್ತು ರಾಜ್ಯ ಸರ್ಕಾರ ಹಣ ಒದಗಿಸಬೇಕು’ ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ್ ಒತ್ತಾಯಿಸಿದರು.

ಪಕ್ಷ ತೊರೆದಿಲ್ಲ ಗುಜರಾತ್ ಕಾಂಗ್ರೆಸ್ ಸ್ಪಷ್ಟನೆ

ಟ್ವಿಟ್ಟರ್‌ನಲ್ಲಿ ಹುದ್ದೆ, ಚಿಹ್ನೆ ಕೈಬಿಟ್ಟ ಹಾರ್ದಿಕ್

ಅಹಮದಾಬಾದ್ (ಪಿಟಿಐ): ಗುಜರಾತ್ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ಅವರು ಸೋಮವಾರ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಕಾಂಗ್ರೆಸ್‌ನಲ್ಲಿನ ತಮ್ಮ ಹುದ್ದೆ ಮತ್ತು ಪಕ್ಷದ ಚಿಹ್ನೆಯನ್ನು ಕೈಬಿಟ್ಟಿರುವುದು ರಾಜಕಾರಣದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಹಾರ್ದಿಕ್ ಪಟೇಲ್

ಇತ್ತೀಚೆಗಷ್ಟೇ ತಮ್ಮ ಪಕ್ಷದ ರಾಜ್ಯ ನಾಯಕತ್ವದ ನಡೆಗಳ ಕುರಿತು ತೀವ್ರ ವಾಗ್ದಾಳಿ ನಡೆಸಿದ್ದ ಹಾರ್ದಿಕ್, ‘ಪಕ್ಷದಲ್ಲಿ ನನಗೆ ತುಂಬಾ ಕಿರುಕುಳ ನೀಡಲಾಗುತ್ತಿದ್ದು, ಈ ಬಗ್ಗೆ ಬೇಸರವಿದೆ. ಇಲ್ಲಿನ ನಾಯಕರು ನಾನು ಪಕ್ಷದಿಂದ ಹೊರ ಹೋಗಬೇಕೆಂದು ಬಯಸುತ್ತಿದ್ದಾರೆ’ ಎಂದು ಆರೋಪಿಸಿದ ಬೆನ್ನಲ್ಲೇ ಟ್ವಿಟ್ಟರ್‌ನಲ್ಲಿ ಈ ಬದಲಾವಣೆ ಆಗಿದೆ.

ಕಾಂಗ್ರೆಸ್ ಅನ್ನು ಟೀಕಿಸಿದ್ದ ಬಳಿಕ ಅವರು ಆಡಳಿತಾರೂಢ ಬಿಜೆಪಿಯನ್ನು ಹೊಗಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಗುಜರಾತ್ ಕಾಂಗ್ರೆಸ್‌ನ ವಕ್ತಾರರು ‘ಹಾರ್ದಿಕ್ ಇನ್ನೂ ವಿರೋಧ ಪಕ್ಷದಲ್ಲಿದ್ದಾರೆ’ ಎಂದಿದ್ದರು.

ಇದೇ ವರ್ಷ ಗುಜರಾತ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮುನ್ನ ಹಾರ್ದಿಕ್, ಕಾಂಗ್ರೆಸ್ ಅನ್ನು ತೊರೆಯಬಹುದೆಂಬ ಊಹಾಪೋಹವನ್ನು ಹುಟ್ಟುಹಾಕಿದೆ. ಸೋಮವಾರ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಕಾಂಗ್ರೆಸ್‌ನಲ್ಲಿನ ತಮ್ಮ ಹುದ್ದೆಯ ವಿವರವನ್ನು ಅಳಿಸಿಹಾಕಿದ ಹಾರ್ದಿಕ್, ‘ಹೆಮ್ಮೆಯ ಭಾರತೀಯ ದೇಶಭಕ್ತ, ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತ’ ಎಂದೂ ಬರೆದುಕೊಂಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ಹಾರ್ದಿಕ್ ಪಟೇಲ್ ಲಭ್ಯರಾಗಲಿಲ್ಲ. ಆದರೆ, ಅವರು ಸೋಮವಾರ ಬೆಳಿಗ್ಗೆ ತಮ್ಮ ಟ್ವಿಟ್ಟರ್ ಟೈಮ್‌ಲೈನ್‌ನಲ್ಲಿ ‘ಮೋದಿ ಸರ್ಕಾರವು ದೇಶದ ಆರ್ಥಿಕತೆಯನ್ನು ಹೇಗೆ ಹಾಳುಮಾಡಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಡಿದ್ದ ಟ್ವೀಟ್‌ಗೆ ಮರು ಟ್ವೀಟ್ ಮಾಡಿದ್ದರು.

ಪಕ್ಷ ತೊರೆದಿಲ್ಲ ಸ್ಪಷ್ಟನೆ: ಈ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಗುಜರಾತ್ ಕಾಂಗ್ರೆಸ್‌ನ ವಕ್ತಾರ ಮನೀಶ್ ದೋಷಿ ಅವರು, ‘ಹಾರ್ದಿಕ್ ಇನ್ನೂ ನಮ್ಮ ಪಕ್ಷದಲ್ಲಿದ್ದಾರೆ. ಅವರು ಪಕ್ಷವನ್ನು ತೊರೆದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

2015ರಲ್ಲಿ ಪಾಟೀದಾರ್ ಮೀಸಲಾತಿ ಹೋರಾಟದ ಮೂಲಕ ಗುಜರಾತ್ ರಾಜಕೀಯದಲ್ಲಿ ಮುಂಚೂಣಿಗೆ ಬಂದಿದ್ದ ಹಾರ್ದಿಕ್ ಪಟೇಲ್ ಅವರನ್ನು ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರನ್ನಾಗಿ 2020ರ ಜುಲೈನಲ್ಲಿ ನೇಮಕ ಮಾಡಲಾಗಿತ್ತು.

ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದ ಮಕ್ಕಳಿಗಾಗಿ ಮಲ್ಲೇಶ್ವರ ಬ್ರಾಹ್ಮಣ ಸಭಾ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಾಮೂಹಿಕ ಉಪನಯನ ಕಾರ್ಯಕ್ರಮದಲ್ಲಿ 150 ಬಾಲಕರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ಸಿಎಂ ಬದಲಾವಣೆ ಚರ್ಚೆಯೇ ಇಲ್ಲ’

ಯಾದಗಿರಿ: ‘ಮುಖ್ಯಮಂತ್ರಿ ಬದಲಾವಣೆಯ ಚರ್ಚೆಯೇ ಇಲ್ಲ. ನೀವು ಮಾಧ್ಯಮದವರೇ ಆರಂಭಿಸಿದ್ದೀರಾ. ನಾಯಕತ್ವ ಬದಲಾವಣೆಯೇ ಬಿಜೆಪಿ ಶಕ್ತಿ ಎನ್ನುವ ಬಿ.ಎಲ್. ಸಂತೋಷ ಅವರ ಹೇಳಿಕೆಯನ್ನು ಬೇರೆ ರೀತಿ ಅರ್ಥೈಸಲಾಗಿದೆ’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

‘ಬಿ.ಎಲ್. ಸಂತೋಷ ಅವರು ಯಾರ ಬಗ್ಗೆಯೂ ಏನನ್ನೂ ಹೇಳಿಲ್ಲ. ಎಲ್ಲಾ ನೀವು ಮಾಧ್ಯಮದವರೇ ಹೇಳುತ್ತೀರಿ. ಪಕ್ಷದ ವ್ಯವಸ್ಥೆ ಬಗ್ಗೆ ಅವರು ಮಾತನಾಡಿದ್ದಾರೆ. ಸಾಮಾನ್ಯವಾಗಿ ಪಕ್ಷದಲ್ಲಿ ಯುವಜನರಿಗೆ ಅವಕಾಶ ಕೊಡುತ್ತಿರುವುದಾಗಿ ಹೇಳಿದ್ದಾರೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದ ಸುಪ್ರೀಂ ಕೋರ್ಟ್

‘ಲಸಿಕೆಯ ಪ್ರತಿಕೂಲ ಪರಿಣಾಮ ಬಹಿರಂಗಪಡಿಸಿ’

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಲಸಿಕೆ ಹಾಕಿಸಿಕೊಳ್ಳುವಂತೆ ಯಾರನ್ನೂ ಬಲವಂತ ಮಾಡುವಂತಿಲ್ಲ. ಲಸಿಕೆ ಹಾಕಿಸಿದ್ದರಿಂದ ಆದ ಪ್ರತಿಕೂಲ ಪರಿಣಾಮಗಳನ್ನು ಸರ್ಕಾರವು ಬಹಿರಂಗಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಲಸಿಕೆ ಹಾಕಿಸಿಕೊಳ್ಳದ ವ್ಯಕ್ತಿಗಳಿಗೆ, ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಇರುವವರೆಗೆ ಸಾರ್ವಜನಿಕ ಸ್ಥಳಗಳ ಪ್ರವೇಶವನ್ನು ನಿಷೇಧಿಸಬಾರದು ಎಂದು ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ. ಆರ್. ಗವಾಯಿ ಅವರ ಪೀಠವು ಸಲಹೆ ಕೊಟ್ಟಿದೆ.

ಲಭ್ಯವಿರುವ ದಾಖಲೆಗಳು ಮತ್ತು ಪರಿಣತರ ಅಭಿಪ್ರಾಯ ಪ್ರಕಾರ, ಈಗಿನ ಕೋವಿಡ್ ಲಸಿಕೆ ನೀತಿಯು ಸ್ವೇಚ್ಛಾಚಾರಿ ಮತ್ತು ವಿವೇಕರಹಿತ ಎನ್ನುವಂತಿಲ್ಲ ಎಂದು ಪೀಠವು ಹೇಳಿದೆ.

ಲಸಿಕೆಯಿಂದಾದ ಪ್ರತಿಕೂಲ ಪರಿಣಾಮಗಳ ಬಗೆಗಿನ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯವಿರುವ ವೇದಿಕೆಯಲ್ಲಿ ಪ್ರಕಟಿಸಬೇಕು. ಆದರೆ ವೈಯಕ್ತಿಕ ಮಾಹಿತಿಯ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಪೀಠವು ಸೂಚಿಸಿದೆ.

ಲಸಿಕಾ ಅಭಿಯಾನದ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ ಮಾಜಿ ಸದಸ್ಯ ಡಾ. ಜೇಕಬ್ ಪುಲಿಯಿಲ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಲಸಿಕೆಯಿಂದಾದ ಪ್ರತಿಕೂಲ ಪರಿಣಾಮಗಳನ್ನು ಬಹಿರಂಗಪಡಿಸಲು ನಿರ್ದೇಶನ ನೀಡುವಂತೆ ಅವರು ಕೋರಿದ್ದರು.

‘ಕೇಂದ್ರ ಸರ್ಕಾರವು ಮಕ್ಕಳಿಗೆ ಲಸಿಕೆ ಹಾಕಿಸುವಿಕೆ ವಿಚಾರದಲ್ಲಿ ಕೈಗೊಂಡ ನಿರ್ಧಾರವು ಜಾಗತಿಕ ಮಾನದಂಡಕ್ಕೆ ಅನುಗುಣವಾಗಿದೆ. ನಿಯಂತ್ರಣ ಪ್ರಾಧಿಕಾರಗಳು ಈಗಾಗಲೇ ಅನುಮೋದನೆ ನೀಡಿರುವ ಪ್ರಯೋಗದ ವಿವಿಧ ಹಂತಗಳಲ್ಲಿ ದೊರೆತ ಮಹತ್ವದ ಮಾಹಿತಿಗಳನ್ನು ಆದಷ್ಟು ಬೇಗನೆ ಬಹಿರಂಗಪಡಿಸಬೇಕು’ ಎಂದೂ ಪೀಠವು ಸೂಚಿಸಿದೆ.

ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದನ್ನು ಕಡ್ಡಾಯ ಮಾಡಿಲ್ಲ. ಆದರೆ, ಅರ್ಹ ವ್ಯಕ್ತಿಗಳಲ್ಲಿ ಶೇ 100ರಷ್ಟು ಮಂದಿ ಲಸಿಕೆ ಹಾಕಿಸಿಕೊಳ್ಳುವಂತಾಗಬೇಕು ಎಂದಷ್ಟೇ ತಾನು ಹೇಳಿದ್ದಾಗಿ ಕೇಂದ್ರ ಸರ್ಕಾರವು ಕೋರ್ಟ್‌ಗೆ ಹೇಳಿತ್ತು.

ಲಸಿಕೆ ತಯಾರಿಕಾ ಕಂಪನಿಗಳಾದ ಭಾರತ್ ಬಯೋಟೆಕ್ ಲಿ. ಮತ್ತು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಅರ್ಜಿಯನ್ನು ವಿರೋಧಿಸಿದ್ದವು. ಇದು ಸಾರ್ವಜನಿಕ ಹಿತಾಸಕ್ತಿಯ ರೂಪದಲ್ಲಿರುವ ವೈಯಕ್ತಿಕ ಉದ್ದೇಶದ ಅರ್ಜಿ. ಜಾಗತಿಕ ಮಟ್ಟದಲ್ಲಿ ಹಿಂದೆಂದೂ ಕಂಡಿರದ ರೀತಿಯ ಸಾಂಕ್ರಾಮಿಕದ ಸಂದರ್ಭದಲ್ಲಿ, ಈ ಅರ್ಜಿಯು ಜನರಲ್ಲಿ ಲಸಿಕೆ ಹಿಂಜರಿಕೆ ಮತ್ತು ಸಾರ್ವಜನಿಕ ಉನ್ಮಾದ ಸೃಷ್ಟಿಸಲು ಯತ್ನಿಸುತ್ತಿದೆ ಎಂದು ಈ ಕಂಪನಿಗಳು ವಾದಿಸಿದವು.

‘ಪ್ರತಿಕೂಲ ಪರಿಣಾಮ ನಗಣ್ಯ’

ಜನರಿಗೆ ಕೋವಿಡ್ ಲಸಿಕೆಯ 180 ಕೋಟಿ ಡೋಸ್‌ಗಳನ್ನು ಮಾರ್ಚ್ 13ರವರೆಗೆ ಹಾಕಲಾಗಿದೆ. 77,314 ಪ್ರತಿಕೂಲ ಘಟನೆಗಳು ವರದಿಯಾಗಿವೆ. ಹಾಕಲಾದ ಲಸಿಕೆಯ ಒಟ್ಟು ಡೋಸ್‌ಗಳಿಗೆ ಹೋಲಿಸಿದರೆ ಇದು ಶೇ 0.004ರಷ್ಟು ಮಾತ್ರ. ಹಾಗೆಯೇ 15–18 ವರ್ಷದ ಒಳಗಿನವರಿಗೆ 8.91 ಕೋಟಿ ಡೋಸ್ ಲಸಿಕೆ ಹಾಕಲಾಗಿದೆ. 1,739 ನಗಣ್ಯ, 81 ಗಂಭೀರ ಮತ್ತು ಆರು ಅತಿ ಗಂಭೀರ ಪ್ರತಿಕೂಲ ಪರಿಣಾಮಗಳು ವರದಿಯಾಗಿವೆ ಎಂದು ಸರ್ಕಾರ ಹೇಳಿದೆ. ಕೋವಿಡ್ ಲಸಿಕೆಗೆ ಸಂಬಂಧಿಸಿದ ದಾಖಲೆಗಳು, ಲಸಿಕೆಯಲ್ಲಿ ಏನೇನಿವೆ ಎಂಬ ಎಲ್ಲ ಮಾಹಿತಿಯೂ ಸಾರ್ವಜನಿಕವಾಗಿ ಲಭ್ಯ ಇವೆ ಎಂದೂ ಸರ್ಕಾರ ಕೋರ್ಟ್‌ಗೆ ತಿಳಿಸಿದೆ.

ಎಐಸಿಟಿಇ ಚೇರ್ಮನ್ ಪ್ರೊ.ಅನಿಲ್ ಡಿ.ಸಹಸ್ರಬುದ್ಧೆ ಪ್ರತಿಪಾದನೆ

ಡಿಜಿಟಲ್ ಶಿಕ್ಷಣದಿಂದ ನೋಂದಣಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮೈಸೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿ, ಡಿಜಿಟಲ್ ವಿಶ್ವವಿದ್ಯಾಲಯ, ಡಿಜಿಟಲ್ ಶಿಕ್ಷಣ ವ್ಯವಸ್ಥೆಯಿಂದಾಗಿ ಮುಂದಿನ 10 ವರ್ಷಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಪ್ರಮಾಣ ಶೇ 27ರಿಂದ 50ಕ್ಕೇರುವ ನಿರೀಕ್ಷೆ ಇದೆ. ಡಿಜಿಟಲ್ ವ್ಯವಸ್ಥೆಯು ಕುಗ್ರಾಮಗಳನ್ನೂ ತಲುಪಲಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಉಂಟಾಗಲಿದೆ’ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಚೇರ್ಮನ್ ಪ್ರೊ.ಅನಿಲ್ ಡಿ.ಸಹಸ್ರಬುದ್ಧೆ ಪ್ರತಿಪಾದಿಸಿದರು.

ಸೋಮವಾರ ಇಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವ ಭಾಷಣ ಮಾಡಿದ ಅವರು, ‘ದೇಶದ ಎಲ್ಲೆಡೆ ಇಂಟರ್‌ನೆಟ್ ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆ ಕಾಣಬೇಕು. ಸದ್ಯ ಎರಡೂವರೆ ಲಕ್ಷ ಹಳ್ಳಿಗಳಲ್ಲಿ ಇಂಟರ್‌ನೆಟ್ ಸೌಲಭ್ಯವಿದೆ. ಭಾರತ್ ನೆಟ್ ಮೂಲಕ ಸಂಪರ್ಕ ಕ್ರಾಂತಿ ನಡೆಯುತ್ತಿದ್ದು, ಪ್ರತಿ ಮನೆಗೂ ಆನ್‌ಲೈನ್ ಶಿಕ್ಷಣ ತಲುಪಿಸುವಂತಾಗಬೇಕು. ಈಗಾಗಲೇ ಎಲ್ಲಾ ಹಳ್ಳಿಗೂ ವಿದ್ಯುತ್ ಸಂಪರ್ಕ ನೀಡಲಾಗಿದೆ’ ಎಂದರು.

‘ಕುಗ್ರಾಮಲ್ಲಿರುವ ವ್ಯಕ್ತಿಯತ್ತಲೂ ಕಾಳಜಿ ತೋರಿದಾಗ ಮಾತ್ರ ಭಾರತ ಅಭಿವೃದ್ಧಿ ಕಾಣಲು ಸಾಧ್ಯ. ನವದೆಹಲಿ, ಬೆಂಗಳೂರು, ಹೈದರಾಬಾದ್, ಮುಂಬೈ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಅಲ್ಲ. ಪ್ರಧಾನಿ ನರೇಂದ್ರ ಮೋದಿಯವರೂ ಇದನ್ನೇ ಪ್ರತಿಪಾದಿಸುತ್ತಾರೆ. ಪ್ರತಿ ಗ್ರಾಮ ಅಭಿವೃದ್ಧಿ ಆಗಬೇಕು, ಪ್ರತಿ ವ್ಯಕ್ತಿಗೆ ಶಿಕ್ಷಣ ದೊರೆಯಬೇಕು’ ಎಂದು ಆಶಿಸಿದರು.

> ಮಾಹಿತಿ ತಂತ್ರಜ್ಞಾನ ಸೇವೆಯಲ್ಲಿ ಭಾರತ ಸೂಪರ್ ಪವರ್ ಆಗಿದೆ. ಆದರೆ, ಈ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ಪನ್ನಗಳ ತಯಾರಿಕೆಯಲ್ಲಿ ಹಿಂದೆ ಉಳಿದಿದ್ದೇವೆ
>
> **ಪ್ರೊ.ಅನಿಲ್ ಡಿ.ಸಹಸ್ರಬುದ್ಧೆ,** ಎಐಸಿಟಿಇ ಚೇರ್ಮನ್, ನವದೆಹಲಿ

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಸೂಕ್ಷ್ಮಜೀವಿಗಳು: ತಾರಕವೂ ಮಾರಕವೂ

ಡಾ. ವಿನಯ ಶ್ರೀನಿವಾಸ್

ಸೂಕ್ಷ್ಮಜೀವಿಗಳು ಎಂದಾಕ್ಷಣ ನಮಗೆ ಅವುಗಳಿಂದ ಉಂಟಾಗುವ ಕಾಯಿಲೆಗಳೇ ನೆನಪಾಗುತ್ತವೆ. ಹೌದು, ಅನೇಕ ಬಗೆಯ ರೋಗಕಾರಕ ಸೂಕ್ಷ್ಮಜೀವಿಗಳು ನಮ್ಮ ಸುತ್ತಲಿನ ಪರಿಸರದಲ್ಲಿವೆ. ಬ್ಯಾಕ್ಟೀರಿಯಾ, ವೈರಾಣು, ಪರಾವಲಂಬಿ ಸೂಕ್ಷ್ಮಾಣು, ಶಿಲೀಂಧ್ರ ಮೊದಲಾದುವು ಅವುಗಳಲ್ಲಿ ಮುಖ್ಯವಾದುವು. ಅವು ವಿವಿಧ ಬಗೆಯ ರೋಗಗಳಿಗೆ ಕಾರಣವಾಗುವುದು ನಮಗೆ ಗೊತ್ತೇ ಇದೆ. ಆದರೆ, ನಮ್ಮ ಶರೀರದಲ್ಲೇ ಒಂದಿಷ್ಟು ಸ್ನೇಹಪರ, ಉಪಯುಕ್ತ ಸೂಕ್ಷ್ಮಜೀವಿಗಳಿದ್ದು ಅವು ನಮ್ಮ ಆರೋಗ್ಯವನ್ನು ಕಾಪಾಡುತ್ತವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ಹೌದು, ನಮ್ಮ ಶರೀರದ ಒಳ ಹಾಗೂ ಹೊರಭಾಗಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಈ ಸೂಕ್ಷ್ಮಜೀವಿಗಳಿವೆ. ಚರ್ಮದ ಮೇಲೆ, ಕಣ್ಣಿನ ಒಳಗೆ, ಬಾಯಿ, ಶ್ವಾಸಕೋಶ, ಯೋನಿ, ಜಠರ, ಕರುಳು - ಹೀಗೆ ಎಲ್ಲಡೆಯೂ ಅವು ನೆಲೆ ಮಾಡಿಕೊಂಡಿವೆ. ಒಟ್ಟಾರೆ ನಮ್ಮ ಶರೀರದ ಜೀವಕೋಶಗಳಿಗಿಂತಲೂ ಸರಿ ಸುಮಾರು ಮೂರು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಈ ಸೂಕ್ಷ್ಮಜೀವಿಗಳು ನಮ್ಮ ದೇಹದಲ್ಲಿ ನೆಲೆಸಿವೆ. ಶರೀರದ ಇತರ ಭಾಗಗಳಿಗಿಂತ ಕರುಳಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಸೂಕ್ಷ್ಮಾಣುಗಳ ಬಗ್ಗೆ ಪ್ರತಿಯೊಬ್ಬರೂ ತಿಳಿಯಲೇಬೇಕು. ಏಕೆಂದರೆ, ಅವು ನಮ್ಮ ಸಂಪೂರ್ಣ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಮತ್ತು ಹಲವಾರು ಕಾಯಿಲೆಗಳು ಬರದಂತೆ ತಡೆಯಲು ಈ ಸೂಕ್ಷ್ಮಜೀವಿಗಳು ನಿರಂತರ ಹೋರಾಡುತ್ತವೆ.

> ನಮ್ಮ ಶರೀರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸೂಕ್ಷ್ಮಜೀವಿಗಳಿವೆ. ಕರುಳಿನ ಸೂಕ್ಷ್ಮಜೀವಿಗಳ ಸಮತೋಲನ ನಮ್ಮ ಸಂಪೂರ್ಣ ಆರೋಗ್ಯಕ್ಕೆ ರಹದಾರಿ. ಜೀವಿಗಳು ವೈವಿಧ್ಯವಾದಂತೆಲ್ಲ ವ್ಯಕ್ತಿ ಹೆಚ್ಚು ಆರೋಗ್ಯವಂತನಾಗಿರುತ್ತಾನೆ.

ಎಲ್ಲಿಂದ ಪ್ರವೇಶ?

ಮಗು ಜನಿಸಿದಾಗಲೇ ಶರೀರದಲ್ಲಿ ಸೂಕ್ಷ್ಮಜೀವಿಗಳು ನೆಲೆ ಮಾಡಿರುತ್ತವೆ. ತಾಯಿಯ ಗರ್ಭದಲ್ಲಿರುವಾಗಲೇ ಗರ್ಭಾಶಯದಿಂದ ಒಂದಿಷ್ಟು ಜೀವಿಗಳು ಮಗುವಿನ ಶರೀರವನ್ನು ಪ್ರವೇಶಿಸಿದ್ದರೆ ಇನ್ನುಳಿದವು ಪ್ರಸವದ ವೇಳೆಯಲ್ಲಿ, ಸ್ತನ್ಯಪಾನದ ಮೂಲಕ, ಆಟವಾಡುವಾಗ, ಆಹಾರ ಸೇವಿಸುವಾಗ – ಹೀಗೆ ಎಲ್ಲ ಸಂದರ್ಭಗಳಲ್ಲಿಯೂ ಮಗುವಿನ ಶರೀರವನ್ನು ಪ್ರವೇಶಿಸುತ್ತವೆ.

ಏನೆಲ್ಲ ಮಾಡುತ್ತವೆ?

ದೇಹದ ಪ್ರತಿಯೊಂದು ಅಂಗಾಂಗಳ ಸಮರ್ಪಕ ಕಾರ್ಯನಿರ್ವಹಣೆಯಲ್ಲಿ ಈ ಸೂಕ್ಷ್ಮಜೀವಿಗಳ ಪಾತ್ರವಿದೆ.

- ಚರ್ಮದ ಮೇಲಿನ ಸೂಕ್ಷ್ಮಜೀವಿಗಳು ಇತರ ರೋಗಕಾರಕ ಅಣುಜೀವಿಗಳು ಅಲ್ಲಿ ನೆಲೆ ಮಾಡದಂತೆ ತಡೆದು ಚರ್ಮದ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಸೂರ್ಯನ ಕಿರಣಗಳ ನೆರವಿನಿಂದ ವಿಟಮಿನ್ ಡಿ ತಯಾರಿಸಲೂ ನೆರವಾಗುತ್ತವೆ.
- ಶರೀರದ ಎಲ್ಲ ಬಗೆಯ ಚಯಾಪಚಯ ಕ್ರಿಯೆಗಳು ಸರಾಗವಾಗಿ ನಡೆಯಲು ನೆರವಾಗುತ್ತವೆ.
- ಮೇದೋಜೀರಕ ಗ್ರಂಥಿಯ ಬೀಟಾ ಜೀವಕೋಶಗಳಿಂದ ಇನ್ಸುಲಿನ್ ರಸದೂತ ತಯಾರಾಗುವ ಪ್ರಕ್ರಿಯೆಯನ್ನು ನಿರ್ವಹಿಸುತ್ತವೆ.
- ರೋಗನಿರೋಧಕ ವ್ಯವಸ್ಥೆಯನ್ನು ಸಶಕ್ತಗೊಳಿಸುತ್ತವೆ.
- ಹೃದಯ ಹಾಗೂ ರಕ್ತನಾಳಗಳ ಆರೋಗ್ಯವನ್ನು ವೃದ್ಧಿಸುತ್ತವೆ.
- ಕರುಳಿನಲ್ಲಿ ಈ ಜೀವಿಗಳು ವ್ಯಕ್ತಿ ಸೇವಿಸುವ ಆಹಾರದಿಂದ ಉತ್ಪತ್ತಿಯಾಗುವ ಶಕ್ತಿಯ ಪ್ರಮಾಣ ಮತ್ತು ಪೋಷಕಾಂಶಗಳ ಬಗೆಯನ್ನೂ ನಿರ್ಧರಿಸಬಲ್ಲವು. ನಾವು ಸೇವಿಸಿದ ಆಹಾರಕಣಗಳನ್ನು ವಿಭಜಿಸಿ ಅದರಲ್ಲಿನ ಪೋಷಕಾಂಶಗಳು ನಮ್ಮ ಶರೀರಕ್ಕೆ ದೊರೆಯುವಂತೆ ಮಾಡುತ್ತವೆ. ಆಹಾರದಲ್ಲಿನ ನಾರಿನಾಂಶವನ್ನು ಜೀರ್ಣಿಸಿ ಅವುಗಳಿಂದ ಜೀವಸತ್ವಗಳ ಉತ್ಪಾದನೆಗೆ ಮತ್ತು ಶರೀರಕ್ಕೆ ಅಗತ್ಯವಿರುವಷ್ಟೇ ಪ್ರಮಾಣದ ಕೊಬ್ಬಿನ ಅಂಶವನ್ನು ಹೀರಿಕೊಳ್ಳಲು ನೆರವಾಗುತ್ತವೆ. ಅಲ್ಲದೆ, ಆಹಾರದ ಜೊತೆ ಶರೀರವನ್ನು ಪ್ರವೇಶಿಸುವ ವಿಷಕಾರಕ ವಸ್ತುಗಳನ್ನು ತಟಸ್ಥಗೊಳಿಸುತ್ತವೆ. ರೋಗಕಾರಕ ಸೂಕ್ಷ್ಮಾಣುಗಳು ಬೆಳೆಯದಂತೆ ನಿಯಂತ್ರಣದಲ್ಲಿಡುವುದೂ ಈ ಜೀವಿಗಳ ಜವಾಬ್ದಾರಿಯೇ.
- ಕೊಬ್ಬಿನ ಅಂಶದ ಹೀರುವಿಕೆಯನ್ನು ನಿಯಂತ್ರಣದಲ್ಲಿಡುವುದರ ಮೂಲಕ ಯಕೃತ್ತಿನ ಆರೋಗ್ಯವನ್ನು ಕಾಪಾಡುತ್ತವೆ.
- ಮೂಳೆಗಳನ್ನು ಗಟ್ಟಿಯಾಗಿಡಲು ನೆರವಾಗುತ್ತವೆ.
- ಮಿದುಳಿನ ನರವಾಹಕಗಳನ್ನು ನಿಯಂತ್ರಿಸುವ ಈ ಜೀವಿಗಳು ವ್ಯಕ್ತಿಯ ವರ್ತನೆ, ವಿಚಾರ, ಆಲೋಚನೆ ಹಾಗೂ ಭಾವನೆಗಳ ಮೇಲೆಯೂ ಗಾಢವಾದ ಪ್ರಭಾವ ಬೀರುತ್ತವೆ.



ಮಾರಕ ಯಾವುದು?

ಜಂಕ್ ಆಹಾರ ಮತ್ತು ಅತಿಯಾದ ಮಾಂಸಾಹಾರ ಸೇವನೆ: ವ್ಯಕ್ತಿ ಅತಿಯಾದ ಮಾಂಸಾಹಾರವನ್ನು ಸೇವಿಸಿದಾಗ ಆತನ ಕರುಳಿನಲ್ಲಿರುವ ಈ ಸೂಕ್ಷ್ಮಜೀವಿಗಳು 'ಟ್ರೈಮಿಥೈ ಮೈನ್ ಎನ್ ಆಕ್ಸೈಡ್' ಎಂಬ ರಾಸಾಯನಿಕವನ್ನು ಉತ್ಪತ್ತಿಗೆ ಕಾರಣವಾಗುತ್ತವೆ. ಈ ರಾಸಾಯನಿಕವು ರಕ್ತನಾಳಗಳ ಒಳಪದರಗಳಲ್ಲಿ ಕೊಬ್ಬಿನಾಂಶ ಶೇಖರವಾಗಲು ಪ್ರಚೋದಿಸುತ್ತದೆ. ಅಲ್ಲದೆ ಈ ರಾಸಾಯನಿಕದ ಪ್ರಮಾಣ ದೇಹದಲ್ಲಿ ಏರಿದಂತೆಲ್ಲ ಮೂತ್ರಪಿಂಡಗಳ ಮತ್ತು ಹೃದಯದ ದೀರ್ಘಕಾಲಿಕ ಅನಾರೋಗ್ಯಕ್ಕೂ ಕಾರಣವಾಗಬಹುದು.

ಅತಿಯಾದ ಮಾನಸಿಕ ಒತ್ತಡ; ಜಡಜೀವನ ಶೈಲಿ: ನಾಲ್ಕು ತಾಸುಗಳಿಗೂ ಹೆಚ್ಚು ಒಂದೇ ಜಾಗದಲ್ಲಿ ಕುಳಿತಿರುವುದು, ವ್ಯಾಯಾಮವಿಲ್ಲದ ಜೀವನ.

- ವೈದ್ಯರ ಸಲಹೆ ಇಲ್ಲದೆ ಅನಗತ್ಯ ಹಾಗೂ ಹೆಚ್ಚಾದ ಆ್ಯಂಟಿಬಯೋಟಿಕ್ ಬಳಕೆ.

ಯಾವ ಆರೋಗ್ಯ ಸಮಸ್ಯೆ?

ಕರುಳಿನ ಈ ಸೂಕ್ಷ್ಮಜೀವಿಗಳಿಗೂ ಕೆಲವು ಆರೋಗ್ಯ ಸಮಸ್ಯೆಗಳಿಗೂ ನಿಕಟ ಸಂಬಂಧವಿದೆ. ಈ ಜೀವಿಗಳ ಸಂಖ್ಯೆ ಅಥವಾ ಬಗೆಯಲ್ಲಿ ವ್ಯತ್ಯಾಸವಾದಾಗ ವ್ಯಕ್ತಿ ಹಲವು ಬಗೆಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾನೆ. ಮಧುಮೇಹ, ಬೊಜ್ಜು, ಅಧಿಕ ರಕ್ತದೊತ್ತಡ ಮತ್ತು ಕರುಳಿನ ಕ್ಯಾನ್ಸರ್‌ನಂತಹ ಸಮಸ್ಯೆಗಳು ಇವುಗಳಲ್ಲಿ ಮುಖ್ಯವಾದವು.

ಮಿದುಳಿಗೆ ಸಂಬಂಧಿಸಿದ ಕಾಯಿಲೆಗಳಾದ ನಿದ್ರಾಹೀನತೆ, ಆತಂಕ, ಖಿನ್ನತೆ, ಮರೆವು, ಅಲ್ಝೈಮರ್ ಕಾಯಿಲೆ, ಪಾರ್ಕಿನ್‌ಸನ್ ಕಾಯಿಲೆ, ಆಟಿಸಂ, ಅಪಸ್ಮಾರದಂತಹ ಸಮಸ್ಯೆಗಳಿಗೂ ಈ ಸೂಕ್ಷ್ಮಜೀವಿಗಳ ಅಸಮತೋಲನವೇ ಕಾರಣ ಎನ್ನುತ್ತವೆ ಅಧ್ಯಯನಗಳು. ಇದನ್ನು ನಾವು 'ಕರುಳು-ಮಿದುಳಿನ ರೇಖೆ' ಎಂದು ವಿಶ್ಲೇಷಿಸಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಕರುಳಿನ ಈ ಜೀವಿಗಳ ಸಮತೋಲನ ನಮ್ಮ ಸಂಪೂರ್ಣ ಆರೋಗ್ಯಕ್ಕೆ ರಹದಾರಿ. ಜೀವಿಗಳು ವೈವಿಧ್ಯವಾದಂತೆಲ್ಲ ವ್ಯಕ್ತಿ ಹೆಚ್ಚು ಆರೋಗ್ಯವಂತನಾಗಿರುತ್ತಾನೆ. ಹಾಗಾಗಿ ಇವುಗಳನ್ನು ಸಾಮರಸ್ಯವನ್ನು ಕಾಪಾಡುವುದರತ್ತ ನಾವು ಚಿತ್ತ ಹರಿಸಬೇಕು.

ಸಾಮರಸ್ಯವ ಕಾಪಾಡುವುದು ಹೇಗೆ?

- ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ.
- ಅನಗತ್ಯ ಆ್ಯಂಟಿಬಯೋಟಿಕ್ ಬಳಕೆ ಬೇಡ.
- ವೈದ್ಯರ ಸಲಹೆಯಿಲ್ಲದೆ ಔಷಧಗಳನ್ನು ಸೇವಿಸಬೇಡಿ.
- ಜಂಕ್ ಆಹಾರಸೇವನೆಯನ್ನು ಆದಷ್ಟು ಕಡಿಮೆ ಮಾಡಿ.
- ಕೃತಕ ರಾಸಾಯನಿಕಗಳ ಬಳಕೆಯೂ ಮಿತಿಯಲ್ಲಿರಲಿ.
- ಪ್ರಿಬಯೋಟಿಕ್ ಮತ್ತು ಪ್ರೋಬಯೋಟಿಕ್ ಆಹಾರ ಪದಾರ್ಥಗಳು ನಿಮ್ಮ ದಿನನಿತ್ಯದ ಆಹಾರದಲ್ಲಿರಲಿ.

(**ಪ್ರಿಬಯೋಟಿಕ್ ಆಹಾರಗಳು:** ದೋಸೆ, ಇಡ್ಲಿ, ಮೊಸರು, ಮಜ್ಜಿಗೆ, ಉಪ್ಪಿನಕಾಯಿ ಇತ್ಯಾದಿ.

ಪ್ರೊ-ಬಯೋಟಿಕ್ ಆಹಾರಗಳು: ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ನಾರಿನಾಂಶ ಹೇರಳವಾಗಿರುವ ಹಣ್ಣುಗಳು, ಸೊಪ್ಪು, ತರಕಾರಿಗಳು, ಧಾನ್ಯಗಳು.)

- ನಿತ್ಯವೂ ಕನಿಷ್ಠ ಮೂರು ಬಗೆಯ ತರಕಾರಿಗಳು ಮತ್ತು ಐದು ಬಗೆಯ ಹಣ್ಣುಗಳು ನಿಮ್ಮ ಆಹಾರದ ಭಾಗವಾಗಿರಲಿ.
- ಒತ್ತಡ ನಿರ್ವಹಿಸುವುದನ್ನು ಕಲಿಯಿರಿ.
- ನಿತ್ಯವೂ ಯಾವುದಾದರೊಂದು ಬಗೆಯ ವ್ಯಾಯಾಮವನ್ನು ರೂಢಿಸಿಕೊಳ್ಳಿ.

ಬೇಸಿಗೆಯ ಆರೋಗ್ಯ ಸಮಸ್ಯೆಗಳು

ಡಾ. ಎ. ಪಿ. ಭಟ್

ನಮ್ಮ ದೇಹವು ಸುಗಮವಾಗಿ ಕಾರ್ಯ ನಿರ್ವಹಿಸಲು ದೇಹದ ಉಷ್ಣತೆಯು ನಿರ್ದಿಷ್ಟ ಮಿತಿಯೊಳಗೆ ಇರಬೇಕು. ಯಾವುದೇ ಕಾರಣಕ್ಕೆ ಈ ಮಿತಿಯನ್ನು ಮೀರಿದರೆ ಮಿದುಳಿನಲ್ಲಿ ಇರುವ ತಾಪಮಾನ ನಿರೀಕ್ಷಣಾ ಕೇಂದ್ರವು ಬೆವರುಗ್ರಂಥಿಗಳಿಗೆ ಸಂದೇಶವನ್ನು ಕಳುಹಿಸಿ ಕಾರ್ಯಪ್ರವೃತ್ತವಾಗುವಂತೆ ಮಾಡುತ್ತದೆ. ಬೆವರು–ನೀರಿನ ಮೂಲಕ ಅಧಿಕ ಉಷ್ಣತೆ ಹೊರ ಹೋಗುವುದಲ್ಲದೆ, ಆವಿಯಾಗುವಾಗ ಚರ್ಮ ತಂಪಾಗುವುದು. ಇದಲ್ಲದೆ ಚರ್ಮದ ಮೂಲಕ ಆಗುವ ಉಷ್ಣ ವಿಕಿರಣ ಮತ್ತು ಸಂವಹನ ಕೂಡ ತಾಪ ವಿಸರ್ಜನೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುವವು.

ಹೀಗೆ ನೀರು ಹೊರ ಹೋಗುತ್ತಲೇ ಇದ್ದರೆ ರಕ್ತದಲ್ಲಿಯ ನೀರಿನ ಪ್ರಮಾಣ ಕಡಿಮೆ ಆಗಿ ಸಾಂದ್ರತೆ ಅಧಿಕ ಆಗುವುದು. ನೆತ್ತರಿನ ಮಿತಿ ಮೀರಿದ ಸಾಂದ್ರತೆ ಅಪಾಯಕ್ಕೆ ಆಹ್ವಾನ. ಮಿದುಳಿನಲ್ಲಿಯೇ ರಕ್ತದ ಸಾಂದ್ರತಾ ಮಾಪಕ ಕೇಂದ್ರ ಇದ್ದು, ಅದು ಪಕ್ಕದಲ್ಲಿ ಇರುವ ದಾಹ ಪ್ರಚೋದಕ ಕೇಂದ್ರವನ್ನು ಎಚ್ಚರಿಸುವುದು. ಇದರಿಂದ ನೀರಡಿಕೆ ಉಂಟಾಗಿ, ಶರೀರ ದ್ರವಪದರ್ಥವನನು ಬಯಸುತ್ತದೆ, ನಾವು ದ್ರವಪದಾರ್ಥವನ್ನು ಸೇವಿಸುವೆವು.

ಬೆವರಿನ ಮೂಲಕ ವಿಸರ್ಜಿಸಲ್ಪಡುವ ನೀರು ತನ್ನೊಡನೆ ಉಪ್ಪಿನ ಅಂಶವನ್ನೂ ಒಯ್ಯುವುದು ತಾನೇ? ಆದುದರಿಂದ ನಾವು ಬಾಯಾರಿಕೆ ಆದಾಗ ಮಿತಿ ಮೀರಿ ನೀರು ಸೇವಿಸಿದರೆ ರಕ್ತದಲ್ಲಿ ಉಪ್ಪಿನ ಪ್ರಮಾಣ ಕಡಿಮೆ ಆಗುವುದು. ಅದೂ ಆರೋಗ್ಯಕ್ಕೆ ಒಳ್ಳೆಯದಲ್ಲ. ಸಾಮಾನ್ಯವಾಗಿ ನಾವು ಸೇವಿಸುವ ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಪ್ಪಿನ ಅಂಶ ಇದ್ದು, ನಡುವೆ ಆಹಾರ ಸೇವಿಸದೆ ಬಿಸಿಲಿನಲ್ಲಿ ಬರೀ ನೀರು ಕುಡಿಯುತ್ತಾ ಕೆಲಸ ಮಾಡುವವರಲ್ಲಿ ಈ ಸಮಸ್ಯೆ ಬರುವುದು.

ಉಪ್ಪು ನಮ್ಮ ಮಾಂಸಖಂಡಗಳ ಸಂಕುಚನ–ವಿಕಸನಕ್ಕೆ ಅತಿ ಅವಶ್ಯವಿದ್ದು; ಅದರ ಕೊರತೆಯಿಂದ ಅಸಹನೀಯ ಸೆಳೆತ (cramps) ಉಂಟಾಗುವುದು. ಬಿಸಿಲಿನಲ್ಲಿ ಆಟವಾಡುತ್ತಿರುವ ಕ್ರೀಡಾಳುಗಳು ಇದರಿಂದ ಬಳಲುವುದನ್ನು ಕಂಡಿದ್ದೀರಿ. ಇದನ್ನು ತಡೆಗಟ್ಟಲು ಲವಣಯುಕ್ತ ಪಾನೀಯ ಸೇವನೆಯನ್ನು ಮಾಡಬೇಕು.

ದಾಹಶಮನಕ್ಕೆ ಶುದ್ಧ ನೀರು ಅತಿ ಯೋಗ್ಯ. ಏಕೆಂದರೆ ಇದು ಅತ್ಯಂತ ಕಡಿಮೆ ಸಾಂದ್ರತೆ ಇರುವ ದ್ರವ ಮತ್ತು ಸುಲಭ ಲಭ್ಯ. ಕಬ್ಬಿನ ಹಾಲು, ಸಕ್ಕರೆ ಸೇರಿಸಿದ ಹಣ್ಣಿನ ರಸಗಳು ರಕ್ತದ ಸಾಂದ್ರತೆಯನ್ನು ಇನ್ನೂ ಹೆಚ್ಚು ಮಾಡುವವುದಲ್ಲದೆ ಅನಾವಶ್ಯಕ ಸಕ್ಕರೆಯ ಸೇವನೆ ಆರೋಗ್ಯಕ್ಕೆ ಹಾನಿಕರ. ಮೇಲೆ ತಿಳಿಸಿದಂತೆ ಉಪ್ಪಿನ ಅಂಶ ಕಡಿಮೆ ಆಗುವ ಸನ್ನಿವೇಶ ಇದ್ದರೆ ಕೊಂಚ ಉಪ್ಪು ಸೇರಿಸಿದ ದ್ರಾವಣ ಉತ್ತಮ. ಎಳನೀರಿನಲ್ಲಿ ಉಪ್ಪಿನ ಅಂಶ ಸಾಕಷ್ಟು ಇಲ್ಲದಿರುವುದರಿಂದ ಲವಣಪೂರಣಕ್ಕೆ ಅಷ್ಟು ಪ್ರಯೋಜನಕಾರಿ ಅಲ್ಲ.

ಶುದ್ಧ ನೀರಿನ ಬಳಕೆ ಈಗ ವ್ಯಾಪಕವಾಗಿರುವುದರಿಂದ ನೀರಿನ ಮೂಲಕ ಹರಡುವ ಕಾಲರಾ, ಟೈಫಾಯ್ಡ್ ಕಾಯಿಲೆಗಳು ಈಗ ತುಂಬಾ ಕಡಿಮೆ ಆಗಿವೆ. ಬೇಸಿಗೆಯಲ್ಲಿ ಶೇಖರಿಸಿ ಇಟ್ಟ ಆಹಾರ ಪದಾರ್ಥಗಳಲ್ಲಿ ಬಾಕ್ಟೀರಿಯಾ ಶಿಲೀಂಧ್ರಗಳು ಸುಲಭ ವೇಗದಲ್ಲಿ ಬೆಳೆದು ವಾಂತಿ–ಭೇದಿಗಳನ್ನು ಉಂಟುಮಾಡಬಹುದಾಗಿದ್ದು, ಈ ಬಗ್ಗೆ ಎಚ್ಚರ ವಹಿಸಬೇಕು.

ಅಧಿಕ ಬೆವರು ಉತ್ಪಾದನೆ ಮಾಡುವ ಭರಾಟೆಯಲ್ಲಿ ಬೆವರು ಚರ್ಮದ ಹೊರ ಭಾಗಕ್ಕೆ ಒಯ್ಯುವ ನಾಳಗಳು ಬ್ಲಾಕ್ ಆಗಿ ಲವಣಯುಕ್ತ ದ್ರವ ಚರ್ಮ ಸೇರಿ ತುರಿಕೆ ಉಂಟು ಮಾಡುವವು. ಇದನ್ನೇ 'ಬೆವರು ಸಾಲೆ' ಎಂದು ಕರೆಯುವರು. ಸಾಮಾನ್ಯ ಬೆವರು ಸಾಲೆಯಲ್ಲಿ ಕೆಲವೊಮ್ಮೆ ಬಾಕ್ಟೀರಿಯಾ, ಶಿಲೀಂಧ್ರಗಳು ಸೇರಿ ಪರಿಸ್ಥಿತಿ ಉಲ್ಬಣವಾಗಬಹುದು. ತೆಳುವಾದ ಹತ್ತಿ ಉಡುಪು ಧಾರಣೆ, ತಣ್ಣೀರು ಸ್ನಾನ, ಅನಾವಶ್ಯವಾಗಿ ಬಿಸಿಲಲ್ಲಿ ತಿರುಗಾಡದೇ ಇರುವುದು – ಇದಕ್ಕೆ ಭಾಗಶಃ ಪರಿಹಾರ.

ಸೋಂಕು ರೋಗಗಳಾದ ಧಡಾರ, ಕೋಟ್ಲೆ ಇತ್ಯಾದಿ ಬೇಸಿಗೆಯಲ್ಲಿ ಹರಡುವುದು ಹೆಚ್ಚು. ಮುಂಗಾರು ಪೂರ್ವಮಳೆಯಿಂದ ಸೊಳ್ಳೆಗಳ ಕಾಟ ಮತ್ತು ಅದರಿಂದ ಡೆಂಗಿ ಇತ್ಯಾದಿ. ಈ ಸಮಯದಲ್ಲಿಯೇ ಮದುವೆ ಮುಂಜಿ ಇತ್ಯಾದಿ ಸಮಾರಂಭಗಳೂ, ಜಾತ್ರೆ–ಸಮ್ಮೇಳನಗಳೂ ಅಧಿಕ ಇರುವುದರಿಂದ ಜನಜಂಗುಳಿಯಲ್ಲಿ ಹರಡುವ ಫ್ಲೂವಿನಂತಹ ಶ್ವಾಸಸಂಬಂಧಿ ಕಾಯಿಲೆಗಳ ಬಗ್ಗೆ ಎಚ್ಚರದಿಂದ ಇರಬೇಕು. ಬಹಳ ಮಂದಿ ತಮಗೆ ಐಸ್ ಕ್ರೀಮ್ ತಿಂದೋ, ತಂಪು ಪಾನೀಯ ಸೇವನೆಯಿಂದಲೋ ಶೀತ–ಕೆಮ್ಮು ಬರುತ್ತದೆ ಎಂದು ತಿಳಿಯುತ್ತಾರೆ. ಆದರೆ ಶ್ವಾಸಸಂಬಂಧಿ ಸೋಂಕುಗಳು ಉಸಿರಿನ ಮೂಲಕ ಹರಡುವವು. ಸೋಂಕು ರೋಗಗಳಲ್ಲದೆ ಧೂಳು, ಹೂವಿನ ಪರಾಗ ಇತ್ಯಾದಿ ಅಲರ್ಜಿ ಕಾರಕಗಳು ಈ ಸಮಯ ಗಾಳಿಯಲ್ಲಿ ಯಥೇಚ್ಛ ಇರುವುದರಿಂದ ಆಸ್ತಮಾದಂತಹ ಕಾಯಿಲೆಗಳೂ ಉಲ್ಬಣಗೊಳ್ಳುವವು.

ದೇಹದ ಉಷ್ಣತೆ ಅಧಿಕವಾಗಿ ತೀವ್ರ ಬಳಲುವಿಕೆ, ರಕ್ತದ ಒತ್ತಡ ತಾತ್ಕಾಲಿಕ ಕಡಿಮೆಯಾಗಿ ತಲೆ ತಿರುಗಿ ಬೀಳುವುದು ಮತ್ತು 'ಹೀಟ್ ಸ್ಟ್ರೋಕ್' ಎಂಬ ಪ್ರಾಣಾಂತಿಕ ಕಾಯಿಲೆ ಬರಬಹುದು. ಶರೀರದ ಉಷ್ಣತೆಯನ್ನು ಆರೋಗ್ಯಕರ ವ್ಯಾಪ್ತಿಯಲ್ಲಿ ಇಡಲು ಶರೀರದಲ್ಲಿ ಇರುವ ವ್ಯವಸ್ಥೆ ಪ್ರಯತ್ನಿಸಿ ವಿಫಲವಾಗುವುದು ಇವಕ್ಕೆ ಕಾರಣ.

ಸೆಕೆಗಾಲದಲ್ಲಿ ಆಹಾರದ ಸೇವನೆ ಹಿತ ಮಿತವಾಗಿ ಇರಬೇಕು; ದ್ರವಪದಾರ್ಥಗಳ ಸೇವನೆ ಸಾಕಷ್ಟು ಇರಲಿ.

ಉಜ್ಜಾಯಿ ಪ್ರಾಣಾಯಾಮ

ಎನ್. ಎಸ್. ಓಂಕಾರ್

ಉಜ್ಜಾಯಿ ಪ್ರಾಣಾಯಾಮದಲ್ಲಿ ಗಂಟಲಿನ ಸ್ನಾಯುಗಳನ್ನು ಸ್ವಲ್ಪ ಬಿಗಿ ಮಾಡಿ, ತನ್ಮೂಲಕ ಗಾಳಿಯ ನಾಳವನ್ನು ಅಲ್ಪ ಕಿರಿದಾಗಿಸಿ ಪೂರಕ-ರೇಚಕಕ್ಕೆ ಹಿತವಾದ ಪ್ರತಿರೋಧ ಉಂಟುಮಾಡಲಾಗುತ್ತದೆ. ಈ ವಿಧಾನದಲ್ಲಿ ಉಸಿರಿನ ಪಥದಲ್ಲಿರುವ ನಾಸಿಕಾದಿ ಗಾಳಿಯ ಗೂಡಿನವರೆಗಿನ ಎಲ್ಲ ಅಂಗಗಳೂ ಉದ್ದೀಪನಗೊಳ್ಳುತ್ತದೆ. ಇದು ಪೂರಕ-ರೇಚಕಕ್ಕೆ ಉತ್ತಮ ಆಯಾಮವನ್ನು ನೀಡಿ ಮನಸ್ಸಿನಲ್ಲೂ ವಿಜಯೀಭಾವವನ್ನು ಉಂಟುಮಾಡುತ್ತದೆ.

'ಉಜ್ಜಾಯಿ' ಎಂದರೆ ವಿಜಯಿ, ಗೆಲ್ಲು ಎಂದರ್ಥ. ಉಜ್ಜಾಯಿ ಪ್ರಾಣಾಯಾಮದಿಂದ ಮನಸ್ಸು ಗೆಲುವಿನ ಅನುಭವವನ್ನು ಪಡೆಯುತ್ತದೆ. ಮನಸ್ಸನ್ನು ಧ್ಯಾನಸ್ಥ ಸ್ಥಿತಿಗೆ ಒಯ್ದು, ಮನಸ್ಸಿನ ಸೂಕ್ಷ್ಮತೆಯನ್ನು ವೃದ್ಧಿಸುತ್ತದೆ. ಈ ಕಾರಣದಿಂದಾಗಿ ಉಜ್ಜಾಯಿಯನ್ನು 'ಇಂದ್ರಿಯ ನಿಗ್ರಹ' ಉಸಿರಾಟವೆಂದು ಕರೆಯುತ್ತಾರೆ.



ವಿಧಾನ

- ನೇರವಾಗಿ ಕುಳಿತುಕೊಳ್ಳಿ; ಎದೆಯ ಭಾಗ ಮೇಲಕ್ಕೆತ್ತಿ. ಕುರ್ಚಿಯ ಮೇಲೂ ಕುಳಿತು ಮಾಡಬಹುದು.
- ಕಣ್ಣುಗಳನ್ನು ಮೃದುವಾಗಿ ಮುಚ್ಚಿ.
- ಹಸ್ತಗಳನ್ನು ಮಂಡಿಯ ಮೇಲೆ ಮೇಲ್ಮುಖವಾಗಿರಿಸಿ; ಹೆಬ್ಬೆರಳು ಮತ್ತು ತೋರ್ಬೆರಳುಗಳ ತುದಿಗಳು ಪರಸ್ಪರ ಸ್ಪರ್ಷದಲ್ಲಿರಲಿ.
- ಗಲ್ಲವು ಎದೆಯ ಕಡೆಗೆ ಬರುವಂತೆ ಕತ್ತನ್ನು ಮುಂದಕ್ಕೆ ಬಾಗಿಸಬೇಕು. ಗಂಟಲಿನ ಸ್ನಾಯಗಳನ್ನು ಸ್ವಲ್ಪ ಸಂಕುಚನಗೊಳಿಸಬೇಕು.
- ಕತ್ತನ್ನು ಬಾಗಿಸುವುದು ಕಷ್ಟವಾದಲ್ಲಿ ಮಡಿಚಿದ ಟವೆಲ್ ಒಂದನ್ನು ಗಲ್ಲ ಹಾಗೂ ಎದೆಯ ಮಧ್ಯದಲ್ಲಿ ಇರಿಸಿಕೊಳ್ಳಿ.
- ನಿಧಾನವಾಗಿ ಉಸಿರನ್ನು ಒಳಕ್ಕೆ ತೆಗೆದುಕೊಳ್ಳಿ ಹಾಗೂ ನಿಧಾನವಾಗಿ ಉಸಿರನ್ನು ಹೊರಕ್ಕೆ ಬಿಡಿ.
- ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವಾಗ ಉದರದ ತಳ ಭಾಗ, ಮಧ್ಯ ಭಾಗ ಹಾಗೂ ಮೇಲ್ಭಾಗವು ಸಂಪೂರ್ಣವಾಗಿ ಹಿಗ್ಗಬೇಕು.
- ಉಸಿರನ್ನು ಬಿಡುವಾಗ ಉದರದ ಮೇಲ್ಭಾಗ, ಮಧ್ಯ ಭಾಗ ಹಾಗೂ ತಳ ಭಾಗ ಸಂಪೂರ್ಣವಾಗಿ ಸಂಕುಚನಗೊಳ್ಳಬೇಕು.
- ಉಸಿರನ್ನು ತೆಗೆದುಕೊಳ್ಳುವ ಅವಧಿ 4 ಸೆಕೆಂಡುಗಳಷ್ಟಿದ್ದು, ಉಸಿರನ್ನು ಬಿಡುವ ಅವಧಿ 6 ಸೆಕೆಂಡುಗಳ ಕಾಲ ಇರಬೇಕು.
- ಎದೆಯ ಭಾಗವು ಸಾಧ್ಯವಾದಷ್ಟೂ ನಿಶ್ಚಲವಾಗಿರಬೇಕು.
- ಉಸಿರು ಒಳಹೋಗುವಾಗ ಹಾಗೂ ಹೊರ ಬರುವಾಗ ಉಂಟಾಗುವ ವಿಭಿನ್ನ ಶಬ್ದವನ್ನು ಗಮನಿಸಬೇಕು.
- ಸುಮಾರು 5 - 10 ನಿಮಿಷ ಅಭ್ಯಸಿಸಿ.

ಪ್ರಯೋಜನಗಳು



ಉಜ್ಜಾಯಿ ಪ್ರಾಣಾಯಾಮದಲ್ಲಿ ಗಾಳಿಯ ನಾಳ ಕಿರಿದಾಗಿರುವುದರಿಂದ ಶ್ವಾಸಕೋಶಗಳೊಳಗಿನ ಆಂತರಿಕ ಒತ್ತಡವು ಸ್ವಲ್ಪ ಹೆಚ್ಚಾಗಿ ಇರುತ್ತದೆ. ಹಾಗಾಗಿ, ರೇಚಕದ ಕೊನೆಯ ಹಂತದಲ್ಲೂ ಕಿರು ಉಸಿರ್ನಾಳಗಳು ತೆರೆದುಕೊಂಡಿದ್ದು ಉಸಿರನ್ನು ಸಂಪೂರ್ಣವಾಗಿ ಹೊರಗೆ ಬಿಡಲು ಅನುವು ಮಾಡಿಕೊಡುತ್ತದೆ - ಅಂದರೆ, ರೇಚಕ ಮೀಸಲಿನ ಪ್ರಮಾಣ ಸಾಕಷ್ಟು ತಗ್ಗುತ್ತದೆ. ಇದರಿಂದ ಪೂರಕವು ಉತ್ತಮಗೊಳ್ಳುತ್ತದೆ. ಈ ಕಾರಣದಿಂದಾಗಿ ಅನೇಕ ಶ್ವಾಸಕೋಶ ಸಂಬಂಧೀ ಸಮಸ್ಯೆಗಳಿಗೆ ಉಜ್ಜಾಯಿ ಪ್ರಾಣಾಯಾಮವು ರಾಮಬಾಣ.

ಆಸ್ತಮಾದಿಂದ ಬಳಲುತ್ತಿರುವವರಲ್ಲಿ ಉಸಿರಿನ ಕಿರುನಾಳಗಳು ರೇಚಕದ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ಸಂಕುಚನಗೊಂಡು, ಕಾರ್ಬನ್ ಡೈ ಆಕ್ಸೈಡ್ ಹೆಚ್ಚಿರುವ ಗಾಳಿಯು ಅಗತ್ಯಕ್ಕಿಂತಹೆಚ್ಚಾಗಿಶ್ವಾಸಕೋಶಗಳಲ್ಲಿಉಳಿಯುವಂತೆಮಾಡುತ್ತದೆ.ತತ್ಪರಿಣಾಮವಾಗಿಪೂರಕ ಪ್ರಕ್ರಿಯೆಯು ಕುಂಠಿತಗೊಂಡು ಉಸಿರಾಟ ಏರುಪೇರಾಗುತ್ತದೆ. ಉಜ್ಜಾಯಿ ಪ್ರಾಣಾಯಾಮದ ಅಭ್ಯಾಸದ ಮೂಲಕ ರೇಚಕದ ಆಳವು ಉತ್ತಮಗೊಳ್ಳುವುದರಿಂದ ಪೂರಕವೂ ಸಮರ್ಪಕವಾಗಿ, ಉಸಿರಾಟ ಆರೋಗ್ಯಕರ ಲಯವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಸಾಧಾರಣವಾಗಿ ಆಸ್ತಮಾ ಮತ್ತು ಬ್ರಾಂಖೈಟಿಸ್ ಪೀಡಿತರಲ್ಲಿ ಸ್ವಾಭಾವಿಕ ಉಸಿರಾಟಕ್ಕೂ ಅಗತ್ಯಕ್ಕಿಂತ ಹೆಚ್ಚಿನ ಶಕ್ತಿ ವ್ಯಯವಾಗುತ್ತದೆ. ಉಜ್ಜಾಯಿ ಪ್ರಾಣಾಯಾಮದಲ್ಲಿ ಗಾಳಿಯ ನಾಳದ ಕಿರಿದಾಗುವಿಕೆಯಿಂದಾಗಿ ಉಸಿರಿನ ಹರಿವು ನಿಯಂತ್ರಿತ ಹಾಗೂ ನಿಧಾನ ಗತಿಯಲ್ಲಿ ಸಾಗುತ್ತದೆ. ಇದರೊಂದಿಗೆ ಮೇಲೆ ತಿಳಿಸಿರುವ ಕಾರಣವೂ ಸೇರಿಕೊಂಡು ಉಸಿರಾಟದ ಕಾರ್ಯಕ್ಷಮತೆ ಹೆಚ್ಚುತ್ತದೆ. ಇದರ ಪರಿಣಾಮವಾಗಿ ಆಸ್ತಮಾ ಅಥವಾ ಬ್ರಾಂಖೈಟಿಸ್ ಪೀಡಿತರಲ್ಲಿ ಉಸಿರಾಟವು ಹೆಚ್ಚಿನ ಶ್ರಮವಿಲ್ಲದೆ ನಡೆಯುತ್ತದೆ.

ಪ್ರಧಾನಿ ಹೃದಯ ಗೆದ್ದ ಇಬ್ಬರು ಪುಟಾಣಿಗಳು

ಬರ್ಲಿನ್ (ಪಿಟಿಐ): ಮೂರು ದಿನಗಳ ಯುರೋಪ್ ಭೇಟಿಗಾಗಿ ಸೋಮವಾರ ಬೆಳಿಗ್ಗೆ ಜರ್ಮನಿಗೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾರತೀಯ ಸಮುದಾಯದವರು ಇಲ್ಲಿನ ಆಡ್ಲೋನ್ ಕೆಂಪಿನ್‌ಸ್ಕಿ ಹೋಟೆಲ್‌ನಲ್ಲಿ ಹೃದಯಸ್ಪರ್ಶಿ ಸ್ವಾಗತ ನೀಡಿದರು. ಈ ಪೈಕಿ ದೇಶಭಕ್ತಿ ಗೀತೆ ಹಾಡಿದ ಬಾಲಕ, ಚಿತ್ರ ಬಿಡಿಸಿದ ಬಾಲಕಿ ಪ್ರಧಾನಿ ಅವರ ಹೃದಯವನ್ನು ಗೆದ್ದುಬಿಟ್ಟರು.

ಆಶುತೋಷ್ ಎಂಬ ಬಾಲಕ ದೇಶಭಕ್ತಿ ಗೀತೆ ಹಾಡುತ್ತಿದ್ದಾಗ ಅದನ್ನು ಆಲಿಸಿದ ಪ್ರಧಾನಿ 'ಶಾಭಾಶ್' ಎಂದು ಮೆಚ್ಚುಗೆ ಸೂಚಿಸಿದರು. ಮಾನ್ಯಾ ಮಿಶ್ರಾ ಎಂಬ ಬಾಲಕಿ ತಾನೇ ರಚಿಸಿದ ಪ್ರಧಾನಿ ಅವರ ಚಿತ್ರವನ್ನು ನೀಡಿದಳು. ಇದನ್ನು ಕಂಡು ಖುಷಿಗೊಂಡ ಮೋದಿ ಅವರು ಬಾಲಕಿಯ ಜತೆಗೆ ಫೋಟೊ ತೆಗೆಸಿಕೊಂಡು ಆಕೆ ರಚಿಸಿದ ಚಿತ್ರದ ಮೇಲೆ ತಮ್ಮ ಸಹಿ ಹಾಕಿದರು.

'ಈ ಚಿತ್ರವನ್ನು ಅಮ್ಮನ ನೆರವಿನೊಂದಿಗೆ ನಾನೇ ರಚಿಸಿದ್ದೇನೆ. ಪ್ರಧಾನಿ ಅವರ ಭೇಟಿ ಒಂದು ಅದ್ಭುತ ಅನುಭವ. ಅವರೇ ನನ್ನ ಪ್ರೇರಕ ಶಕ್ತಿ. ನನ್ನ ಚಿತ್ರಕ್ಕೆ ಸಹಿ ಹಾಕಿ ಶಾಭಾಶ್ ಎಂದರು, ನನ್ನ ಕನಸು ಇಂದು ಈಡೇರಿದೆ' ಎಂದು ಹೆಮ್ಮೆಯಿಂದ ಬೀಗುತ್ತಿದ್ದ ಬಾಲಕಿ ಮಾನ್ಯಾ ಹೇಳಿದಳು. ಬೆಳಿಗ್ಗೆ 4 ಗಂಟೆಯಿಂದಲೇ ಚಿಕ್ಕ ಮಕ್ಕಳ ಸಹಿತ ಭಾರತೀಯ ಸಮುದಾಯದವರು ಪ್ರಧಾನಿಗಾಗಿ ಹೋಟೆಲ್‌ನಲ್ಲಿ ಕಾಯುತ್ತಿದ್ದರು. ಜರ್ಮನಿಯಲ್ಲಿ 2.03 ಲಕ್ಷದಷ್ಟು ಮಂದಿ ಭಾರತೀಯರು ಇದ್ದಾರೆ.

ಉಕ್ರೇನ್‌ನಿಂದ ಕಪ್ಪು ಸಮುದ್ರದ ಮೇಲೆ ಬೈರಕ್ತ್ ಡ್ರೋನ್ ದಾಳಿ

ರಷ್ಯಾದ 2 ಗಸ್ತು ದೋಣಿ ನಾಶ

ಕೀವ್ (ಎಎಫ್‌ಪಿ): ಕಪ್ಪು ಸಮುದ್ರದ ಸ್ನೇಕ್ ದ್ವೀಪದ ಬಳಿ ರಷ್ಯಾ ಸೇನೆಯ ಎರಡು ಗಸ್ತು ದೋಣಿಗಳ ಮೇಲೆ ಸೋಮವಾರ ನಸುಕಿನಲ್ಲಿ ಡ್ರೋನ್ ದಾಳಿ ನಡೆಸಿ, ನಾಶಪಡಿಸಲಾಗಿದೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಸೋಮವಾರ ತಿಳಿಸಿದೆ.

ಬೈರಕ್ತ್ ಡ್ರೋನ್‌ನಿಂದ ದಾಳಿ ಮಾಡಿ ರಷ್ಯಾ ಸೇನೆಯ ಸಣ್ಣ ಹಡಗನ್ನು ಸ್ಫೋಟಿಸಿರುವ ಕಪ್ಪು- ಬಿಳುಪಿನ ದೃಶ್ಯದ ತುಣುಕನ್ನು ಉಕ್ರೇನ್ ರಕ್ಷಣಾ ಸಚಿವಾಲಯ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದೆ.

ಉಕ್ರೇನ್ ಸಶಸ್ತ್ರ ಪಡೆಗಳ ಮುಖ್ಯ ಕಮಾಂಡರ್ ವಾಲೆರಿ ಜಲುಜ್ನಿ, ಟರ್ಕಿ ನಿರ್ಮಿತ ಸೇನಾ ಡ್ರೋನ್‌ಗಳನ್ನು ಉಲ್ಲೇಖಿಸಿ 'ಬೈರಕ್ತ್‌ಗಳು ಕೆಲಸ ಮಾಡುತ್ತಿವೆ' ಎಂದು ಹೇಳಿದ್ದಾರೆ.

ದಾಳಿ ನಡೆಸುವ ಸಾಮರ್ಥ್ಯದ ಗಸ್ತು ದೋಣಿಯಲ್ಲಿ ಮೂವರು ನಾವಿಕರು ಮತ್ತು 20 ಸೇನಾ ಸಿಬ್ಬಂದಿ ಇರುತ್ತಾರೆ. ಈ ದೋಣಿಗಳಲ್ಲಿ ಮೆಷಿನ್ ಗನ್‌ಗಳನ್ನು ಅಳವಡಿಸಲಾಗಿದ್ದು, ಗಸ್ತು ಅಥವಾ ದಡ ಮುಟ್ಟಿಸುವ ಕಾರ್ಯಾಚರಣೆಗೆ ಬಳಸಲಾಗುತ್ತದೆ.

ರಷ್ಯಾದ ಆಕ್ರಮಣದ ಪ್ರಾರಂಭದಲ್ಲಿ ಸ್ನೇಕ್ ದ್ವೀಪದ ಬಳಿ ರಷ್ಯಾ ಪಡೆಗಳು ನೀಡಿದ್ದ ಶರಣಾಗತಿ ಸೂಚನೆಯನ್ನು ಉಕ್ರೇನ್ ಸೈನಿಕರು ತಿರಸ್ಕರಿಸಿದ್ದರು. ಉಕ್ರೇನ್ ಸೈನಿಕರು ಶರಣಾಗತಿಯನ್ನು ನಿರಾಕರಿಸುವಾಗ ಬಳಸಿದ ಅಶ್ಲೀಲ ಪದದ ರೇಡಿಯೊ ಸಂದೇಶ ವೈರಲ್ ಆಗಿದ್ದು, ಸ್ನೇಕ್ ದ್ವೀಪ ಉಕ್ರೇನ್‌ನ ಪ್ರತಿರೋಧದ ಸಂಕೇತವೆನಿಸಿಕೊಂಡಿತು.

ರಷ್ಯಾದ ನೌಕಾಪಡೆಯ ಪ್ರತಿಷ್ಠಿತ ಯುದ್ಧ ನೌಕೆ 'ಮಾಸ್ಕವಾ' ಇದೇ ಕಪ್ಪು ಸಮುದ್ರದಲ್ಲಿ ಏಪ್ರಿಲ್ ಮಧ್ಯದಲ್ಲಿ ಮುಳುಗಿತು. 'ಮಾಸ್ಕವಾ' ಮೇಲೆ 'ನೆಪ್ಚೂನ್' ಕ್ಷಿಪಣಿ ದಾಳಿ ನಡೆಸಿದ್ದಾಗಿ ಉಕ್ರೇನ್ ಸೇನೆ ಹೇಳಿತ್ತು.

ಉಕ್ರೇನ್ ಗಡಿಗೆ ಸಮೀಪದ ಬೆಲ್ಗೊರೊಡ್‌ನಲ್ಲಿ ರಷ್ಯಾ ಸೇನಾ ಸೌಲಭ್ಯಗಳ ಬಳಿ ಸೋಮವಾರ ನಸುಕಿನಲ್ಲಿ ಮತ್ತೆರಡು ಸ್ಫೋಟಗಳು ಸಂಭವಿಸಿವೆ. ಆದರೆ ಯಾವುದೇ ಹಾನಿ ಅಥವಾ ಭದ್ರತೆಗೆ ಧಕ್ಕೆ ಆಗಿಲ್ಲ ಎಂದು ಪ್ರಾದೇಶಿಕ ಗವರ್ನರ್ ವ್ಯಾಚೆಸ್ಲಾವ್ ಗ್ಲಾಡ್ಕೋವ್ ತಿಳಿಸಿದ್ದಾರೆ.

ಹಿಟ್ಲರ್‌ನಲ್ಲಿ ಇದ್ದುದು ಯಹೂದಿ ರಕ್ತ: ಲಾವ್ರೊವ್ ಟೀಕೆ

'ಅಡಾಲ್ಫ್ ಹಿಟ್ಲರ್‌ನದು ಯಹೂದಿ ಮೂಲ. ನನ್ನ ಹೇಳಿಕೆ ತಪ್ಪಾಗಿರಲೂಬಹುದು. ಆದರೆ, ಹಿಟ್ಲರ್‌ನಲ್ಲಿ ಇದ್ದದ್ದು ಯಹೂದಿ ರಕ್ತವೇ. ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸೇರಿ ಕೆಲವರು ಯಹೂದಿಗಳಾಗಿದ್ದು, ಉಕ್ರೇನ್‌ನಲ್ಲಿ ಇನ್ನೂ ನಾಜಿ ಗುಣಗಳು ಉಳಿದಿರುವುದರಲ್ಲಿ ಅಚ್ಚರಿ ಏನಿಲ್ಲ' ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಟೀಕಿದ್ದಾರೆ.

ಇಟಲಿಯ ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಲಾವ್ರೊವ್, ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕುಲೆಬಾ ಟೀಕೆ: 'ಅಡಾಲ್ಫ್ ಹಿಟ್ಲರ್ ಮತ್ತು ಯಹೂದಿಗಳ ಬಗ್ಗೆ ರಷ್ಯಾದ ಇತ್ತೀಚಿನ ಹೇಳಿಕೆಗಳು ರಷ್ಯಾ ನಾಯಕರಲ್ಲಿ ಆಳವಾಗಿ ಬೇರೂರಿರುವ ಯಹೂದಿ ವಿರೋಧಿತ್ವವನ್ನು ಪ್ರದರ್ಶಿಸುತ್ತವೆ' ಎಂದು ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಸೋಮವಾರ ಟೀಕಿಸಿದ್ದಾರೆ.

ಇಸ್ರೇಲ್ ಖಂಡನೆ (ಜೆರುಸಲಂ ವರದಿ): ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣ ಖಂಡಿಸದೇ ಸಮತೋಲನದ ನಿಲುವು ಕಾಯ್ದುಕೊಂಡಿದ್ದ ಇಸ್ರೇಲ್, ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರ ಹೇಳಿಕೆಯಿಂದ ಕೆಂಡಾಮಂಡಲವಾಗಿದೆ. ಇಸ್ರೇಲ್ ವಿದೇಶಾಂಗ ಸಚಿವ ಯಾಯಿರ್ ಲ್ಯಾಪಿಡ್ ಅವರು, ಲಾವ್ರೊವ್ ಅವರ ಟೀಕೆಯನ್ನು ತೀವ್ರವಾಗಿ ಖಂಡಿಸಿದ್ದು, ರಷ್ಯಾದ ರಾಯಭಾರಿಯನ್ನು ಕರೆಸಿ ಸ್ಪಷ್ಟನೆ ಕೇಳಿದ್ದಾರೆ.

ರಷ್ಯಾ–ಉಕ್ರೇನ್ ಸಮರಾಂಗಣ

ಪೂರ್ವ ಉಕ್ರೇನಿನ ಲೈಮನ್ ನಗರದ ಮೇಲೆ ರಷ್ಯಾ ಪಡೆಗಳು ಶೆಲ್ ದಾಳಿ ತೀವ್ರಗೊಳಿಸಿರುವುದರಿಂದ ಸೋಮವಾರ ನಾಗರಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು – ಎಎಫ್‌ಪಿ ಚಿತ್ರ

ಉಕ್ಕಿನ ಸ್ಥಾವರದಿಂದ ನಾಗರಿಕರ ಸ್ಥಳಾಂತರ: ಮರಿಯುಪೋಲ್‌ನ ಬೃಹತ್ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಿಂದ ನಾಗರಿಕರನ್ನು ಸ್ಥಳಾಂತರಿಸಲು ಮುತ್ತಿಗೆ ಹಾಕಿರುವ ಸ್ಥಾವರದ ಬಳಿ ಸೀಮಿತ ಅವಧಿಗೆ ರಷ್ಯಾ ಕದನ ವಿರಾಮ ಘೋಷಿಸಿದ್ದು, ವಿಶ್ವಸಂಸ್ಥೆ ಮತ್ತು ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಹಕಾರದಲ್ಲಿ ಸ್ಥಳಾಂತರ ಕಾರ್ಯಾಚರಣೆ ಶನಿವಾರದಿಂದಲೇ ಆರಂಭವಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಅಕ್ಷಯ ತೃತೀಯ– ಬಸವಗೆ ಚಿನ್ನದ ಮೆರುಗು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುತ್ತೇವೆ: ಬಿಜೆಪಿ ಶಾಸಕ ಪ್ರತಿಜ್ಞೆ

ಅಂಬಾಲ (ಹರಿಯಾಣ): ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿಸಲು ತ್ಯಾಗ ಮಾಡಲಿದ್ದೇವೆ ಎಂದು ಹರಿಯಾಣದ ಅಂಬಾಲ ನಗರ ಕ್ಷೇತ್ರದ ಬಿಜೆಪಿ ಶಾಸಕ ಅಸೀಮ್ ಗೋಯೆಲ್ ಹಲವರ ಜತೆಗೂಡಿ ಪ್ರತಿಜ್ಞೆ ಮಾಡಿದ್ದಾರೆ.

ಗೋಯೆಲ್ ಹಾಗೂ ಇತರರು ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರತಿಜ್ಞೆ ಮಾಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

'ಹಿಂದೂಸ್ತಾನವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಿದ್ದೇವೆ. ಇದಕ್ಕೆ ನಾವು ಬದ್ಧರಾಗಿರಲಿದ್ದೇವೆ' ಎಂದು ಗೋಯೆಲ್ ಮತ್ತು ಇತರರು ಹೇಳುತ್ತಿರುವುದು ವಿಡಿಯೊದಲ್ಲಿದೆ.

'ಯಾವುದೇ ಬೆಲೆ ತೆತ್ತಾದರೂ ನಾವು ದೇಶವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಬೇಕಾಗಿದೆ. ಈ ಗುರಿಯನ್ನು ಸಾಧಿಸಲು ನಮ್ಮ ಪೂರ್ವಜರು ಮತ್ತು ದೇವತೆಗಳು ನಮಗೆ ಶಕ್ತಿ ನೀಡಲಿದ್ದಾರೆ ಎಂಬುದಾಗಿ ಭಾವಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಇದೇ ವೇಳೆ, ಶಾಸಕರ ಜತೆಗಿದ್ದವರು ಹಿಂದೂ ರಾಷ್ಟ್ರ ಪರ ಘೋಷಣೆಯನ್ನೂ ಕೂಗಿದ್ದಾರೆ. ಶಾಸಕರು ಇದಕ್ಕೆ ಎರಡೂ ಕೈಯೆತ್ತಿ ಬೆಂಬಲ ಸೂಚಿಸಿದ್ದಾರೆ.

ಈ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅಸೀಮ್ ಗೋಯೆಲ್, ನಾನೊಬ್ಬ ಹಿಂದೂವಾಗಿ ಪ್ರತಿಜ್ಞೆ ಮಾಡಿದ್ದೇನೆಯೇ ಹೊರತು ಬಿಜೆಪಿ ಶಾಸಕನಾಗಿ ಅಲ್ಲ ಎಂದು ಹೇಳಿದ್ದಾರೆ.

'ನಾನೊಬ್ಬ ಹಿಂದೂ ಎಂದು ಹೇಳಿಕೊಳ್ಳಲು ಹೆಮ್ಮೆ ಇದೆ' ಎಂದು ಅವರು ಹೇಳಿದ್ದಾರೆ. ಹಿಂದೂ ರಾಷ್ಟ್ರ ಪ್ರತಿಜ್ಞೆ ಸ್ವೀಕರಿಸಿದ ಬಳಿಕ, ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ವಿಚಾರ ಸಂಕಿರಣದಲ್ಲಿಯೂ ಅವರು ಭಾಗವಹಿಸಿದ್ದರು.

'ಅಡಗುದಾಣಗಳಿಂದ ಭಯೋತ್ಪಾದಕರು ಹೊರಬರುವುದು ಅನಿವಾರ್ಯ'

ಶ್ರೀನಗರ: 'ಕಾಶ್ಮೀರ ಕಣಿವೆಯಲ್ಲಿ ಉಗ್ರರ ಗುಂಪಿಗೆ ಸೇರುವ ಸ್ಥಳೀಯರ ಪ್ರಮಾಣ ಕ್ರಮೇಣ ಇಳಿಕೆಯಾದ ಹಿನ್ನೆಲೆಯಲ್ಲಿ ವಿದೇಶಿ ಉಗ್ರರು ಈಗ ಅಡಗುತಾಣಗಳಿಂದ ಹೊರಬರುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ' ಎಂದು ಭಾರತೀಯ ಸೇನೆಯ ಶ್ರೀನಗರದ ಜನರಲ್ ಕಮಾಡಿಂಗ್ ಆಫೀಸರ್(-ಜಿಒಸಿ) ಲೆಫ್ಟಿನೆಂಟ್ ಗವರ್ನರ್ ಡಿ.ಪಿ. ಪಾಂಡೆ ತಿಳಿಸಿದರು.

ಇಲ್ಲಿನ ಸೇನೆಯ ಕಾರ್ಪ್ಸ್–15ರ ಪ್ರಧಾನ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇತ್ತೀಚಿನವರೆಗೆ ವಿದೇಶಿ ಉಗ್ರರು ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಲು ಸ್ಥಳೀಯರನ್ನು ಮುಂಚೂಣಿಗೆ ಬಿಡುತ್ತಿದ್ದರು. ಆದರೆ ಈಗ ಸ್ಥಳೀಯ ಭಯೋತ್ಪಾದಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾದ ಹಿನ್ನೆಲೆಯಲ್ಲಿ ಅವರಿಗೆ ಅಡಗುತಾಣಗಳಿಂದ ಹೊರ ಬರುವುದು ಅನಿವಾರ್ಯವಾಗಿದ್ದು, ಹೀಗಾಗಿ ವಿದೇಶಿ ಉಗ್ರರ ಸಂಪರ್ಕವು ಭದ್ರತಾ ಪಡೆಗಳಿಗೆ ಗೋಚರವಾಗುತ್ತಿದೆ' ಎಂದು ಅವರು ಹೇಳಿದರು.

'ಪಾಕಿಸ್ತಾನ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಈಗ ಕಾಶ್ಮೀರದಲ್ಲಿ ಕಾರ್ಯಾಚರಣೆಗಾಗಿ ವಿದೇಶಿ ಉಗ್ರರನ್ನೇ ಅವಲಂಬಿಸಿದೆ' ಎಂದು ಅವರು ವಿವರಣೆ ನೀಡಿದರು.

ದೆಹಲಿ: ಆಸ್ಪತ್ರೆಗಳಲ್ಲಿ ಹಾಸಿಗೆ ಸಾಮರ್ಥ್ಯ ಹೆಚ್ಚಳ

ನವದೆಹಲಿ(ಪಿಟಿಐ): ಕೊರೊನಾ ಪ್ರಕರಣಗಳು ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ದೆಹಲಿ ಸರ್ಕಾರ ಲೋಕ ನಾಯಕ ಆಸ್ಪತ್ರೆ(ಎಲ್‌ಎನ್‌ಜೆಪಿ)ಯಲ್ಲಿ ಶೇ 80 ರಷ್ಟು ಸೇರಿದಂತೆ ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟಿರುವ ಎರಡು ಆಸ್ಪತ್ರೆಗಳಲ್ಲಿ ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸಿದೆ.

ಎರಡು ಸಾವಿರ ಹಾಸಿಗೆಗಳ ಸಾಮರ್ಥ್ಯ ಹೊಂದಿರುವ ಎಲ್‌ಎನ್‌ಜೆಪಿ ಆಸ್ಪತ್ರೆಯು ಕೋವಿಡ್ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದೆ. ಇತ್ತೀಚೆಗೆ ಇಲ್ಲಿ 450ರಷ್ಟು ಹಾಸಿಗೆಗಳನ್ನು ಹೆಚ್ಚಿಸಲಾಗಿದೆ. ಐಸಿಯು ಹಾಸಿಗೆಗಳನ್ನು 100ರಿಂದ 178ಕ್ಕೆ ಏರಿಕೆ ಮಾಡಲಾಗಿದೆ.

ಗುರು ತೇಜ್ ಬಹಾದ್ದೂರ್ ಆಸ್ಪತ್ರೆಯಲ್ಲಿ (ಜಿಟಿಬಿ) ಹಾಸಿಗೆ ಸಾಮರ್ಥ್ಯವನ್ನು 400ಕ್ಕೆ ಹೆಚ್ಚಿಸಲಾಗಿದ್ದು, ಹೊಸದಾಗಿ 50 ಐಸಿಯು ಹಾಸಿಗೆಗಳನ್ನು ಸೇರ್ಪಡೆ ಮಾಡಲಾಗಿದೆ. ಎರಡೂ ಆಸ್ಪತ್ರೆಗಳಲ್ಲಿ ಹೊಸದಾಗಿ 350–850 ಸಾಮಾನ್ಯ ಹಾಸಿಗೆಗಳು ಹಾಗೂ ಐಸಿಯು ಹಾಸಿಗೆಗಳನ್ನು 100ರಿಂದ 228ಕ್ಕೆ ಹೆಚ್ಚಿಸಲಾಗಿದೆ.

ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 9,577 ಹಾಸಿಗೆಗಳು ಲಭ್ಯವಿದ್ದು, 191(ಶೇ 1.99) ಹಾಸಿಗೆಗಳು ಮಾತ್ರ ಭರ್ತಿಯಾಗಿವೆ.

ಪ್ರಸ್ತುತ 178 ಸೋಂಕಿತರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 4,490 ಮಂದಿ ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ. ಸೋಮವಾರ ದೆಹಲಿಯಲ್ಲಿ 1,076 ಹೊಸ ಪ್ರಕರಣಗಳು ವರದಿಯಾಗಿದೆ. ಪ್ರತಿನಿತ್ಯದ ಕೋವಿಡ್ ದೃಢ ಪ್ರಮಾಣ ಶೇ 6.42 ರಷ್ಟು ದಾಖಲಾಗಿದೆ. ಇದುವರೆಗೆ 18,85,636 ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ 26,175 ಸೋಂಕಿತರು ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳು 5,997ಕ್ಕೆ ಏರಿಕೆಯಾಗಿದೆ.

ಸಾವಿನ ಸಂಖ್ಯೆ ಏರಿಕೆ

ನವದೆಹಲಿ: ಕೇಂದ್ರ ಆರೋಗ್ಯ ಸಚಿವಾಲಯ ನೀಡಿರುವ ಅಂಕಿಅಂಶಗಳ ಪ್ರಕಾರ, 24 ಗಂಟೆಗಳಲ್ಲಿ ದೇಶದಲ್ಲಿ 3,157 ಹೊಸ ಪ್ರಕರಣಗಳು ಮತ್ತು 26 ಜನರು ಸಾವಿಗೀಡಾಗಿದ್ದಾರೆ. ಆದರೆ, ದೇಶದ ದೈನಂದಿನ ಪಾಸಿಟಿವಿಟಿ ದರ ಮತ್ತೆ ಶೇ ಒಂದನ್ನು ಮೀರಿದೆ.

ಹೀಗಾಗಿ ದೇಶದಲ್ಲಿ ಈವರೆಗೆ 4,30,82,345 ಜನರಿಗೆ ಕೊರೊನಾ ಸೋಂಕು ತಗುಲಿದ್ದು, 5,23,869 ಜನರು ಸಾವಿಗೀಡಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 19,500 ರಷ್ಟಾಗಿದೆ.

ದೈನಂದಿನ ಪಾಸಿಟಿವಿಟಿ ಪ್ರಮಾಣ ಶೇ 1.07 ಆಗಿದ್ದು, ಎರಡು ತಿಂಗಳ ಬಳಿಕ ಮತ್ತೆ ಜಾಸ್ತಿಯಾಗಿದೆ. ಫೆ.27ರಂದು ಪಾಸಿಟಿವಿಟಿ ಪ್ರಮಾಣ ಶೇ 1.11 ರಷ್ಟಿತ್ತು. ವಾರದ ಪಾಸಿಟಿವಿಟಿ ದರ ಶೇ 0.70 ರಷ್ಟಿದೆ. ಮರಣ ಪ್ರಮಾಣ ಶೇ 1.22 ರಷ್ಟಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಈವರೆಗೆ 189.23 ಕೋಟಿಗೂ ಅಧಿಕ ಕೋವಿಡ್ ಲಸಿಕೆ ಡೋಸ್‌ಗಳನ್ನು ನೀಡಲಾಗಿದೆ.

ಬೈಕ್ ರ್‍ಯಾಲಿ ಅಕ್ಷಯ ತೃತೀಯದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ಕರಾಡ್ ನಗರದಲ್ಲಿ ಮಹಿಳೆಯರು ಸಾಂಪ್ರದಾಯಿಕ ಉಡುಗೆ ಮತ್ತು ಚಿನ್ನಾಭರಣ ಧರಿಸಿ ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡರು– ಪಿಟಿಐ ಚಿತ್ರ

ಮನೆ ಮೇಲೆ ಪೊಲೀಸರ ದಾಳಿ: ಯುವತಿ ಸಾವು

ಚಂದೌಲಿ, ಉತ್ತರ ಪ್ರದೇಶ(ಪಿಟಿಐ): ಮರಳು ಉದ್ಯಮಿಯೊಬ್ಬರ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆಯೇ ಆ ಮನೆಯಲ್ಲಿದ್ದ ಯುವತಿಯೊಬ್ಬರು ಶಂಕಾಸ್ಪದವಾಗಿ ಮೃತಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಉದ್ಯಮಿಯ ಮನೆ ಮೇಲೆ ದಾಳಿ ಮಾಡಿದ 6 ಪೊಲೀಸರ ವಿರುದ್ಧ ಉದ್ದೇಶಪೂರ್ವಕವಲ್ಲದ ಹತ್ಯೆ ಪ್ರಕರಣ ದಾಖಲಿಸಲಾಗಿದೆ.

ಆದರೆ ಯುವತಿ ಸಾವಿಗೂ ಮುನ್ನ ಆಕೆಯ ಮೇಲೆ ಅತ್ಯಾಚಾರ ನಡೆದಿದೆ ಎಂದು ಸಂತ್ರಸ್ತೆ ಕುಟುಂಬಸ್ಥರು ದೂರಿದ್ದಾರೆ. ಆದರೆ ಈ ಬಗ್ಗೆ ಪೊಲೀಸರು ಖಚಿತಪಡಿಸಿಲ್ಲ. ಏತನ್ಮಧ್ಯೆ, ಈ ಬಗ್ಗೆ ಪ್ರತಿಕ್ರಿಯಿಸಿದ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು, ಆರೋಪಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ.

₹1.25 ಕೋಟಿವರೆಗೂ ಬಿಕರಿ?

ಒಂದನೇ ಪುಟದಿಂದ

'ಪಿಎಸ್‌ಐ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಕೆಲ ಅಭ್ಯರ್ಥಿಗಳು, ಲಿಖಿತ ಪರೀಕ್ಷೆಗೂ ಮುನ್ನವೇ ಕೆಲ ಏಜೆಂಟರನ್ನು ಸಂಪರ್ಕಿಸಿದ್ದರು. ಅಕ್ರಮ ಎಸಗಲು ಅನುಕೂಲ ಮಾಡಿಕೊಡುವಂತೆ ₹ 30 ಲಕ್ಷದಿಂದ ₹ 1.25 ಕೋಟಿವರೆಗೂ ಹಣ ಕೊಟ್ಟಿದ್ದರೆಂಬ ಮಾಹಿತಿ ಇದೆ. ಯಾವ ಅಭ್ಯರ್ಥಿ ಬಳಿಯೂ ಲಿಖಿತ ಪುರಾವೆ ಇಲ್ಲ. ಹೀಗಾಗಿ, ಹಣ ಎಲ್ಲಿದೆ? ಎಂಬುದನ್ನು ಪತ್ತೆ ಮಾಡಲು ಕಾಲಾವಕಾಶ ಬೇಕು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಏಜೆಂಟರ ಜೊತೆ ಮಾತ್ರ ಅಭ್ಯರ್ಥಿಗಳು ಸಂಪರ್ಕದಲ್ಲಿದ್ದರು. ಆದರೆ, ಏಜೆಂಟರ ಮೇಲೆ ಯಾರೆಲ್ಲ ಇದ್ದಾರೆ ಹಾಗೂ ಯಾರಿಗೆಲ್ಲ ಹಣ ಹೋಗಿದೆ ಎಂಬ ಮಾಹಿತಿ ಅವರಿಗಿಲ್ಲ. ಇದನ್ನು ತಿಳಿದುಕೊಳ್ಳಲು ಪ್ರತ್ಯೇಕ ತಂಡ ತನಿಖೆ ಮುಂದುವರಿಸಿದೆ' ಎಂದೂ ಹೇಳಿವೆ.

ಅರ್ಧ ಹಣ ಕೊಟ್ಟಿದ್ದ ಕೆಲ ಅಭ್ಯರ್ಥಿಗಳು: 'ಲಿಖಿತ ಪರೀಕ್ಷೆಗೂ ಮುನ್ನ ಅರ್ಧ ಹಾಗೂ ಆಯ್ಕೆ ಪಟ್ಟಿಯಲ್ಲಿ ಹೆಸರು ಬಂದ ನಂತರ ಇನ್ನರ್ಧ ಹಣ ನೀಡುವ ಬಗ್ಗೆ ಕೆಲ ಅಭ್ಯರ್ಥಿಗಳು ಒಪ್ಪಂದ ಮಾಡಿಕೊಂಡಿದ್ದರು. ಹೀಗಾಗಿ, ಕೆಲವರು ₹ 30 ಲಕ್ಷದಿಂದ ₹ 65 ಲಕ್ಷದವರೆಗೂ ಹಣ ನೀಡಿರುವ ಶಂಕೆ ಇದೆ.'

'ಬಂಧಿತ ಅಭ್ಯರ್ಥಿಗಳಲ್ಲದೇ ಮತ್ತಷ್ಟು ಅಭ್ಯರ್ಥಿಗಳು ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಅವರೆಲ್ಲ ವಿಚಾರಣೆಗೂ ಬಾರದೇ ಗೈರಾಗಿದ್ದಾರೆ. ಅವರ ಪತ್ತೆಗೂ ಪ್ರತ್ಯೇಕ ತಂಡ ರಚಿಸಲಾಗಿದೆ. ಅಭ್ಯರ್ಥಿಗಳ ವಿಚಾರಣೆಯಿಂದ ಕೆಲ ಹೆಸರುಗಳು ಹೊರಬಿದ್ದಿವೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಲು ಚಿಂತನೆ ನಡೆಸಲಾಗುತ್ತಿದ್ದು, ಈ ಬಗ್ಗೆ ಹಿರಿಯ ಅಧಿಕಾರಿಗಳ ಸಲಹೆ ಪಡೆಯಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಕ್ಯಾಮೆರಾ ದೃಶ್ಯ ಸಂಗ್ರಹ: ಸಿಬ್ಬಂದಿ ವಿಚಾರಣೆ

ಬೆಂಗಳೂರಿನ 7 ಕೇಂದ್ರಗಳು ಮಾತ್ರವಲ್ಲದೇ ಮತ್ತಷ್ಟು ಕಡೆ ಅಕ್ರಮ ನಡೆದಿರುವ ಅನುಮಾನ ಸಿಐಡಿಗೆ ಬಂದಿದೆ.

'ಬೆಂಗಳೂರಿನ ಎಲ್ಲ ಪರೀಕ್ಷಾ ಕೇಂದ್ರಗಳ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಲಾಗುತ್ತಿದೆ. ಪರೀಕ್ಷೆ ದಿನದಂದು ಕೇಂದ್ರಗಳಲ್ಲಿ ಕೆಲಸ ಮಾಡಿದ್ದ ಸಿಬ್ಬಂದಿ ಹಾಗೂ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರನ್ನು ವಿಚಾರಣೆ ಮಾಡಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪ್ರಭಾವಿ' ಮುಖಂಡನ ಪಾತ್ರ ?

'ಅಭ್ಯರ್ಥಿಗಳಿಂದ ಹಣ ಪಡೆಯುವ ವೇಳೆ ಕೆಲ ಏಜೆಂಟರು, ರಾಜ್ಯದ ಪ್ರಭಾವಿ ಮುಖಂಡರೊಬ್ಬರ ಹೆಸರು ಬಳಸಿರುವ ಮಾಹಿತಿ ಗೊತ್ತಾಗಿದೆ. ಆದರೆ, ಅದಕ್ಕೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಪ್ರಭಾವಿ ರಾಜಕಾರಣಿ ಹೆಸರು ಹೇಳಿದ್ದ ಏಜೆಂಟರಿಗೆ ಹಣ ಕೊಟ್ಟಿದ್ದ ಕೆಲ ಅಭ್ಯರ್ಥಿಗಳು, ಪಿಎಸ್‌ಐ ಹುದ್ದೆಗೆ ಆಯ್ಕೆ ಆಗಿದ್ದಾರೆ. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿದ ಮೇಲೆಯೇ, ಆರೋಪಿತ ಅಭ್ಯರ್ಥಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಹಣ ನೀಡಲೆಂದೇ 'ರಕ್ತಚಂದನ' ಸುಲಿಗೆ ?

ಅಕ್ರಮ ಎಸಗಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗುವುದಕ್ಕಾಗಿಯೇ ಹೆಡ್ ಕಾನ್‌ಸ್ಟೆಬಲ್ ಎಸ್. ಮಮತೇಶ್ ಗೌಡ, ಹೊಸಕೋಟೆ ಠಾಣೆ ವ್ಯಾಪ್ತಿಯಲ್ಲಿ ರಕ್ತಚಂದನ ಸುಲಿಗೆ ಮಾಡಿದ್ದರೆಂಬ ಅನುಮಾನ ಸಿಐಡಿಗೆ ಲಭ್ಯವಾಗಿದೆ.

'ಮಮತೇಶ್ ಗೌಡ, ಅಕ್ಟೋಬರ್‌ನಲ್ಲಿ ಪಿಎಸ್‌ಐ ಲಿಖಿತ ಪರೀಕ್ಷೆ ಬರೆದಿದ್ದ. 2021ರ ಡಿಸೆಂಬರ್ 15ರಂದು ಹೊಸಕೋಟೆ ಸಂತೇಗೇಟ್ ಬಳಿ ವಾಹನ ಅಡ್ಡಗಟ್ಟಿ, ಚಾಲಕನಿಗೆ ಕೈಕೋಳ ತೋರಿಸಿ ₹ 13 ಲಕ್ಷ ಮೌಲ್ಯದ ರಕ್ತ ಚಂದನದ ತುಂಡುಗಳನ್ನು ಸುಲಿಗೆ ಮಾಡಿದ್ದ. ಇದೇ ಪ್ರಕರಣದಲ್ಲಿ ಆತನನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು' ಎಂದು ಮೂಲಗಳು ಹೇಳಿವೆ.

ಮುಖ್ಯ ಶಿಕ್ಷಕ ಕಾಶಿನಾಥ ಶರಣು

ಒಂದನೇ ಪುಟದಿಂದ

ಇದರೊಂದಿಗೆ ಸಿಐಡಿಗೆ ಬೇಕಿದ್ದ ಪ್ರಮುಖ ಆರೋಪಿ ಸಿಕ್ಕಂತಾಗಿದೆ.

ತನಿಖೆ ಆರಂಭವಾದ ದಿನದಿಂದಲೂ ತಲೆ ಮರೆಸಿಕೊಂಡಿದ್ದ ಕಾಶಿನಾಥ, ಮಹಾರಾಷ್ಟ್ರದ ಪುಣೆ ಹಾಗೂ ಲೋನಾವಳದಲ್ಲಿ ಉಳಿದುಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

'ಶಾಲೆಯಲ್ಲಿನ ಪಿಎಸ್‌ಐ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ಯೋಜನೆಯ ಸೂತ್ರಧಾರ ಕಾಶಿನಾಥ ಆಗಿದ್ದರು. ಒಎಂಆರ್ ಶೀಟ್ ಹಾಗೂ ಬ್ಲೂಟೂತ್ ಮೂಲಕ ಅಭ್ಯರ್ಥಿಗಳಿಗೆ ನೆರವು ನೀಡಲು ರುದ್ರಗೌಡ ಡಿ. ಪಾಟೀಲ ಹಾಗೂ ಮಂಜುನಾಥ ಮೇಳಕುಂದಿ ನಿರ್ದೇಶನದ ಮೇರೆಗೆ ಕಾಶಿನಾಥ ಯೋಜನೆ ರೂಪಿಸಿದ್ದರು. ಈ ಬಗ್ಗೆ ನನಗೂ ಹೇಳಿದ್ದರು' ಎಂದು ದಿವ್ಯಾ ಹಾಗರಗಿ ವಿಚಾರಣೆ ವೇಳೆ ಬಹಿರಂಗಪಡಿಸಿದ್ದರು ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಇಮ್ರಾನ್ ಖಾನ್ ಬಳಿ ಸರ್ಕಾರದ ದುಬಾರಿ ಕಾರು

ಇಸ್ಲಾಮಾಬಾದ್ (ಪಿಟಿಐ): ಅವಿಶ್ವಾಸ ಮತ ಗೆಲ್ಲಲಾಗದೆ ಪಾಕಿಸ್ತಾನದ ಪ್ರಧಾನಿ ಸ್ಥಾನದಿಂದ ಪದಚ್ಯುತರಾದ ಬಳಿಕ ಇಮ್ರಾನ್ ಖಾನ್ ಅವರು 15 ಕೋಟಿ (ಪಾಕಿಸ್ತಾನದ ರೂಪಾಯಿ ಮೌಲ್ಯ) ಮೌಲ್ಯದ ಸರ್ಕಾರಿ ವಾಹನವನ್ನು ಒಯ್ದಿದ್ದಾರೆ ಎಂದು ವಾರ್ತಾ ಸಚಿವೆ ಮರಿಯಂ ಔರಂಗಜೇಬ್ ಆರೋಪಿಸಿದ್ದಾರೆ. 'ವಿದೇಶಿ ಗಣ್ಯರಿಗಾಗಿ ಪ್ರಧಾನಿ ಕಾರ್ಯಾಲಯದಲ್ಲಿರುವ ಬಿಎಂಡಬ್ಲ್ಯು ಎಕ್ಸ್–5 ಕಾರನ್ನು ಖಾನ್ ಅವರು ಒಯ್ದಿದ್ದಾರೆ. ಇದು ಬಾಂಬ್ ಮತ್ತು ಗುಂಡು ನಿರೋಧಕ ವಾಹನವಾಗಿದೆ' ಎಂದು ಅವರು ಸೋಮವಾರ ತಿಳಿಸಿದ್ದಾರೆ.

ಇಮ್ರಾನ್ ಖಾನ್ ಅವರಿಗೆ ವಿದೇಶಿ ಗಣ್ಯರೊಬ್ಬರು ಉಡುಗೊರೆಯಾಗಿ ನೀಡಿದ್ದ ಹ್ಯಾಂಡ್‌ಗನ್ ಅನ್ನು ಸಹ ಇಮ್ರಾನ್ ಖಾನ್ ಅವರು ತಮ್ಮಲ್ಲೇ ಇಟ್ಟುಕೊಂಡಿದ್ದಾರೆ. ಇದನ್ನು ಸರ್ಕಾರದ ಬೊಕ್ಕಸಕ್ಕೆ ಮರಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಶಾಂಘೈ: ಶವಾಗಾರದಲ್ಲಿ ಜೀವಂತ ವ್ಯಕ್ತಿ ಪತ್ತೆ

ಬೀಜಿಂಗ್(ಪಿಟಿಐ): ಜೀವಂತ ವ್ಯಕ್ತಿಯನ್ನು ಮೃತಪಟ್ಟಿರುವುದಾಗಿ ಘೋಷಿಸಿ ದೇಹವನ್ನು ಶವಾಗಾರಕ್ಕೆ ಕಳುಹಿಸಿದ ಘಟನೆ ಚೀನಾದ ಶಾಂಘೈ ನಗರದ ಹಿರಿಯ ನಾಗರಿಕರ ಆರೈಕೆ ಕೇಂದ್ರದಲ್ಲಿ ನಡೆದಿದ್ದು, ಲಾಕ್‌ಡೌನ್‌ನಿಂದ ಈಗಾಗಲೇ ಸಂಕಷ್ಟದಲ್ಲಿರುವ ನಗರದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಈ ಬಗ್ಗೆ ಅಧಿಕಾರಿಗಳು ತನಿಖೆಗೆ ಆದೇಶಿಸಿದ್ದಾರೆ. ಶವವನ್ನು ಮುಚ್ಚಿಡುವ ಚೀಲವನ್ನು ಶವಾಗಾರದ ಸಿಬ್ಬಂದಿ ಸರಿಸಿದ ವೇಳೆ ಅಲ್ಲಿ ಹಿರಿಯ ವ್ಯಕ್ತಿಯೊಬ್ಬ ಬದುಕಿರುವುದು ಗೊತ್ತಾಗಿದೆ. ಈ ದೃಶ್ಯದ ವಿಡಿಯೊ ಚೀನಾದ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ ಎಂದು ಹಾಂಗ್‌ಕಾಂಗ್‌ನ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ಇಂಡೊನೇಷ್ಯಾದ ಲೋಕ್ಸೆಮಾವ್‌ನಲ್ಲಿ ಸೋಮವಾರ ಮುಸ್ಲಿಮರು ಈದ್ ಉಲ್ ಫಿತ್ರ್ ಆಚರಿಸಿದರು

ಇಂಡೊನೇಷ್ಯಾ, ಈಜಿಪ್ಟ್: ಸಂಭ್ರಮದ ಈದ್ ಉಲ್ ಫಿತ್ರ್

ಜಕಾರ್ತ (ಎಪಿ): ಇಂಡೊನೇಷ್ಯಾ ಮತ್ತು ಈಜಿಪ್ಟ್‌ನಲ್ಲಿ ಸೋಮವಾರ ಸಂಭ್ರಮದಿಂದ ಈದ್ ಉಲ್ ಫಿತ್ರ್ ಆಚರಿಸಲಾಯಿತು. ಕೋವಿಡ್ ಸ್ಥಿತಿ ಸುಧಾರಿಸಿದ್ದರಿಂದ ಈ ಬಾರಿ ಹಬ್ಬಕ್ಕೆ ಮೆರುಗು ಬಂದಿತ್ತು. ಎರಡು ವರ್ಷಗಳಿಂದ ಈದ್ ಹಬ್ಬ ಕಳೆಗುಂದಿತ್ತು.

ರಂಜಾನ್ ಮಾಸಾಚರಣೆ ಮತ್ತು ಈದ್ ಉಲ್ ಫಿತ್ರ್ ಹಬ್ಬಕ್ಕಾಗಿ ಸಾವಿರಾರು ಮಂದಿ ತಾಯ್ನಾಡಿಗೆ ವಾಪಸಾಗಿದ್ದರು. ಹೀಗಾಗಿ ಕುಟುಂಬದಲ್ಲಿ ಸಂತಸ ಮನೆ ಮಾಡಿತ್ತು. ಬೆಲೆ ಏರಿಕೆಯ ನಡುವೆಯೂ ವಾಣಿಜ್ಯ ಮಳಿಗೆಗಳಲ್ಲಿ ಜನರು ಕಿಕ್ಕಿರಿದು ಸೇರಿದ್ದರು.

'ಬೆಳವಣಿಗೆ ಸಹಿಸದೇ ಷಡ್ಯಂತ್ರ'

ಒಂದನೇ ಪುಟದಿಂದ

ತನಿಖೆ ವರದಿ ಬಂದ ನಂತರ ಉಪ್ಪು ತಿಂದವರು ನೀರು ಕುಡಿಯುತ್ತಾರೆ. ಶಿವಕುಮಾರ್ ಬಾಯಲ್ಲಿ ಹೇಳಿಕೆ ಬರುತ್ತದೆ ಎಂದರೆ ಅದರಲ್ಲಿ ದುರುದ್ದೇಶ ಇದ್ದೇ ಇರುತ್ತದೆ. ದರ್ಶನ್‌ಗೌಡ ಹೆಸರು ನಾನು ಈಗಲೇ ಕೇಳುತ್ತಿರುವುದು. ನನ್ನ ಅಣ್ಣ ಸತೀಶ್‌ಗೂ ಇದಕ್ಕೂ ಸಂಬಂಧ ಇಲ್ಲ.

- ಶಿವಕುಮಾರ್ ಅವರಿಗೆ ನನ್ನ ಏಳಿಗೆ ಸಹಿಸಲು ಆಗುತ್ತಿಲ್ಲ. ಹೀಗಾಗಿಯೇ ಅವರು ಹಲವರೊಂದಿಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು, ಕಟ್ಟುಕತೆಗಳನ್ನು ಸೃಷ್ಟಿಸುತ್ತಿದ್ದಾರೆ.
- ಇಲ್ಲ ಸಲ್ಲದ ಆರೋಪ ಮಾಡಲು ಉಗ್ರಪ್ಪನಿಗೆ ನಾಚಿಕೆ ಆಗೋದಿಲ್ವ. ಭ್ರಷ್ಟಾಚಾರ ಮಾಡಿದ್ದರೆ ಹೇಳಲಿ. ಶಿವಕುಮಾರ್ ಭ್ರಷ್ಟ ಎಂದು ಇದೇ ಉಗ್ರಪ್ಪ ಹೇಳಿದ್ದರು. ಇಂಥ ಸಾವಿರ ಆರೋಪ ಮಾಡಿ ನನ್ನ ಮುಖಕ್ಕೆ ಮಸಿ ಬಳಿಯಲು ಆಗುವುದಿಲ್ಲ
- ನನ್ನ ಜೀವನ ಅತ್ಯಂತ ಪಾರದರ್ಶಕ. ಕೇಂದ್ರ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ಬರುತ್ತಿರುವುದನ್ನು ನೋಡಿಕೊಂಡೇ ವಿರೋಧಿಗಳು ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ.
- ನಾನು ಮುಖ್ಯಮಂತ್ರಿ ಆಗಿಬಿಡುತ್ತೇನೆ ಎಂಬ ಭಯ ಡಿಕೆಶಿ ಅವರಿಗಿದೆ. ಡಿಕೆಶಿ ಭ್ರಷ್ಟಾಚಾರದ ಬಂಡವಾಳವನ್ನು ಬಿಚ್ಚಿಡುತ್ತೇನೆ. ನಾನು ಭ್ರಷ್ಟಾಚಾರ ರಹಿತವಾಗಿ ಕೆಲಸ ಮಾಡುತ್ತಿರುವುದನ್ನು ನೋಡಿ ಭ್ರಷ್ಟಾಚಾರಿಗಳಾದ ಅವರಿಗೆ ಒಳಗೆ ಚುಚ್ಚುತ್ತಿರುತ್ತದೆ. ಅದನ್ನು ತಡೆಯಲಾಗದೇ ಇಂತಹ ಹೇಳಿಕೆ ಕೊಡುತ್ತಿದ್ದಾರೆ.

'ಕುಂಬಳಕಾಯಿ ಕಳ್ಳ ಅಂದರೆ...'

ಒಂದನೇ ಪುಟದಿಂದ

- ಅವರು ದೊಡ್ಡವರು, ದೊಡ್ಡವರಾಗಬೇಕು ಎಂದುಕೊಂಡಿರುವವರು. ಅವರ ವಿಚಾರವನ್ನು ನಾನು ಬಿಚ್ಚಿಡಲಿಲ್ಲ. ಮಾಧ್ಯಮಗಳು ಮಾಗಡಿಯ ಮೂವರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಹೇಳಿದಾಗ ಸಂತೋಷವಾಗಿತ್ತು.
ಆನಂತರ ನಮ್ಮ ಪಕ್ಷದಲ್ಲಿದ್ದ ಕಾರ್ಯಕರ್ತರ ಕುಟುಂಬದವರು ಆಗಿದ್ದಾರೆ ಎಂದು ಹೇಳಿದ್ದು ಕೇಳಿ ಖುಷಿ ಆಯ್ತು. ಪರಿಸ್ಥಿತಿ ಹೀಗಿರುವಾಗ ಅನುಮಾನಗಳೆಲ್ಲವೂ ತಮ್ಮ ವಿರುದ್ಧವೇ ತಿರುಗುತ್ತಿದೆ ಎಂದು ಸಚಿವರು ಯಾಕೆ ಭಾವಿಸುತ್ತಿದ್ದಾರೆ?
- ಹೆಣದಲ್ಲಿ ಹಣ, ಸಹಾಯಕ ಪ್ರಾಧ್ಯಾಪಕ ಹುದ್ದೆ ಅಕ್ರಮ ಇವುಗಳನ್ನೆಲ್ಲಾ ನಾನು ಮಾಡಿದ್ದೀನಾ? ಈಗ ಸಾಲು ಸಾಲು ಹಗರಣಗಳು ಬೆಳಕಿಗೆ ಬಂದವಲ್ಲಾ? ಅದನ್ನು ನಾವು ಮಾಡಿದ್ದೇವಾ? ನಮ್ಮ ಸರ್ಕಾರದಲ್ಲಿ ಈ ರೀತಿ ಆಗಿದೆಯಾ? ದರ್ಶನ್ ಗೌಡಗೆ ನೋಟೀಸ್ ಜಾರಿ ಮಾಡಿದ್ದೀರಿ. ಅವನ ವಿಚಾರಣೆ ಮಾಡಿದ ವರದಿ ಬಂದಿಲ್ಲ. ಆತ ಏಕಾಏಕಿ ಬಿಡುಗಡೆಯಾದ ಎಂದರೆ ಆತ ನಿರ್ದೋಷಿ ಎಂದು ಸಾಬೀತಾಯ್ತಾ? ಅವನ ವಿರುದ್ಧ ಯಾವ ರೀತಿ ತನಿಖೆ ನಡೆದಿದೆ?
ಆತ ವಿಚಾರಣೆ ಮುಕ್ತನಾಗಲು ಯಾರು ಕಾರಣ? ಇದರ ಹಿನ್ನೆಲೆ ಏನು? ಯಾರು? ಸಮಯ ಬಂದಾಗ ಅದನ್ನೂ ಮಾಡುತ್ತೇವೆ.
- ಸಚಿವರು ಹೇಳಿದಂತೆ ನಾನು ಗಡಗಡನೆ ನಡುಗುತ್ತಿದ್ದೇನೆ. ಈಗಲೂ ಭಯವಾಗುತ್ತಿದೆ. ಮೊದಲು ಅವರು ವಿವಿಧ ನೇಮಕಾತಿ ಅಕ್ರಮದಲ್ಲಿ ಯುವಕರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಲಿ, ನಂತರ ಉಳಿದ ವಿಚಾರ ಮಾತನಾಡೋಣ.

ಕಳಪೆ ವಜ್ರ ಅಡ ಇಟ್ಟು ಸಾಲ • ಹೊಸ ಪ್ರಕರಣ ದಾಖಲಿಸಿಕೊಂಡ ಸಿಬಿಐ

'ಗಿರವಿ: ₹25 ಕೋಟಿ ಸಾಲ ಪಡೆದಿದ್ದ ಚೋಕ್ಸಿ'

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚಿಸಿದ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿ ವಿರುದ್ಧ ಸಿಬಿಐ ಸೋಮವಾರ ಹೊಸ ಪ್ರಕರಣ ದಾಖಲಿಸಿದೆ. ಹೆಚ್ಚಿನ ಮೌಲ್ಯವುಳ್ಳದ್ದು ಎಂದು ನಂಬಿಸಿ ವಜ್ರ ಹಾಗೂ ಚಿನ್ನಾಭರಣಗಳನ್ನು ಗಿರವಿ ಇಟ್ಟು, ಭಾರತೀಯ ಕೈಗಾರಿಕಾ ಹಣಕಾಸು ನಿಗಮದಿಂದ (ಐಎಫ್‌ಸಿಐ) ₹25 ಕೋಟಿ ಸಾಲ ಪಡೆದಿದ್ದಾರೆ ಎಂದು ಚೋಕ್ಸಿ ವಿರುದ್ಧ ಆರೋಪ ಹೊರಿಸಲಾಗಿದೆ.

ಚೋಕ್ಸಿ ಹಾಗೂ ಅವರ ಗೀತಾಂಜಲಿ ಜೆಮ್ಸ್ ಕಂಪನಿ, ಆಭರಣಗಳ ಮೌಲ್ಯಮಾಪನ ಮಾಡಿದ್ದ ಸುರಾಜ್‌ಮಲ್ ಲಲ್ಲು ಭಾಯ್ ಅಂಡ್ ಕಂಪನಿ, ನರೇಂದ್ರ ಝೂವೇರಿ, ಪ್ರದೀಪ್ ಶಾ ಮತ್ತು ಶ್ರೇಣಿಕ್ ಶಾ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ಐಎಫ್‌ಸಿಐ ನೀಡಿದ ದೂರಿನ ಆಧಾರದ ಮೇಲೆ ಸಿಬಿಐ ಕ್ರಮ ತೆಗೆದುಕೊಂಡಿದೆ. ಕಾರ್ಯಾಚರಣೆ ಬಂಡವಾಳ ಸಾಲವಾಗಿ ₹25 ಕೋಟಿ ನೀಡುವಂತೆ 2016ರಲ್ಲಿ ಸಂಸ್ಥೆಯನ್ನು ಚೋಕ್ಸಿ ಸಂಪರ್ಕಿಸಿದ್ದರು.

ಮೆಹುಲ್ ಚೋಕ್ಸಿ

ಈ ಸಾಲಕ್ಕೆ ಷೇರು ಹಾಗೂ ಚಿನ್ನ, ವಜ್ರಾಭರಣಗಳನ್ನು ಅವರು ಗಿರವಿ ಇಟ್ಟಿದ್ದರು. ಈ ಆಭರಣಗಳ ಮೌಲ್ಯ ₹34–₹45 ಕೋಟಿ ಎಂದು ನಾಲ್ವರು ಚಿನ್ನಾಭರಣ ಮೌಲ್ಯಮಾಪಕರು ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಈ ವರದಿ ಆಧರಿಸಿ ಐಸಿಎಫ್‌ಐ ಸಾಲ ಮಂಜೂರು ಮಾಡಿತ್ತು.

ಚೋಕ್ಸಿ ಅವರ ಕಂಪನಿ ಸರಿಯಾಗಿ ಮರು ಪಾವತಿ ಮಾಡದ ಕಾರಣ, 2018ರಲ್ಲಿ ಅವರ ಸಾಲ ಎನ್‌ಪಿಎ (ವಸೂಲಾಗದ ಸಾಲ) ಆಗಿತ್ತು. ಇದರಿಂದ ಐಎಫ್‌ಸಿಐಗೆ ₹22 ಕೋಟಿ ನಷ್ಟ ಉಂಟಾಗಿತ್ತು. ಹೀಗಾಗಿ, ಚೋಕ್ಸಿ ಗಿರವಿ ಇಟ್ಟಿದ್ದ ಷೇರು ಹಾಗೂ ಚಿನ್ನಾಭರಣಗಳನ್ನು ಮಾರಾಟ ಮಾಡಲು ಸಂಸ್ಥೆ ಮುಂದಾಯಿತು. ಆದರೆ, ₹4.07 ಕೋಟಿ ಮೌಲ್ಯದ 6,48,822 ಷೇರುಗಳನ್ನು ಮಾರಾಟ ಮಾಡಲಷ್ಟೇ ಸಾಧ್ಯವಾಯಿತು. ಚೋಕ್ಸಿ ಅವರ ಗ್ರಾಹಕ ಗುರುತುಪತ್ರವನ್ನು ಎನ್‌ಎಸ್‌ಡಿಎಲ್ ಸ್ಥಗಿತಗೊಳಿಸಿದ್ದ ಕಾರಣ, ಉಳಿದ ಷೇರುಗಳನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಚೋಕ್ಸಿ ಇರಿಸಿದ್ದ ಚಿನ್ನ ಹಾಗೂ ವಜ್ರದ ಆಭರಣಗಳತ್ತ ನಿಗಮ ಗಮನ ಹರಿಸಿತು. ಆದರೆ ಹೊಸದಾಗಿ ಅವುಗಳನ್ನು ಮೌಲ್ಯಮಾಪನ ಮಾಡಿದವರ ಪ್ರಕಾರ, ಚಿನ್ನ ಹಾಗೂ ವಜ್ರದ ಆಭರಣಗಳು ಸಾಲ ಪಡೆಯುವಾಗ ಸಲ್ಲಿಸಿದ್ದ ಮೂಲ ವರದಿಗಳಲ್ಲಿ ಉಲ್ಲೇಖಿಸಿದ್ದಕ್ಕಿಂತ ಶೇ 98ರಷ್ಟು ಕಡಿಮೆ ಮೌಲ್ಯ ಹೊಂದಿದ್ದವು. ಹೊಸ ಮೌಲ್ಯಮಾಪನದಲ್ಲಿ ಚಿನ್ನಾಭರಣಗಳ ಮೌಲ್ಯ ₹70 ಲಕ್ಷದಿಂದ ₹2 ಕೋಟಿ ಎಂದು ತಿಳಿದುಬಂದಿತು.

ಚಿನ್ನಾಭರಣ ಮೌಲ್ಯಮಾಪನ ಮಾಡಿದವರಿಗೆ ಸೇರಿದ ಕೋಲ್ಕತ್ತ, ಮುಂಬೈನ ಹಲವು ಸ್ಥಳಗಳಲ್ಲಿ ಶೋಧ ನಡೆಸಿದ್ದ ಸಿಬಿಐ, ದಾಖಲೆಗಳನ್ನು ವಶಪಡಿಸಿಕೊಂಡಿತ್ತು ಎಂದು ಸಿಬಿಐ ವಕ್ತಾರ ಆರ್.ಸಿ ಜೋಷಿ ಹೇಳಿದ್ದಾರೆ.

ಕೃತಕ ಆಭರಣ ಗಿರವಿ!

ಚೋಕ್ಸಿ ಅವರು ಗಿರವಿ ಇಟ್ಟಿದ್ದ ಚಿನ್ನ ಹಾಗೂ ವಜ್ರದ ಆಭರಣಗಳು ಕಳಪೆ ಗುಣಮಟ್ಟದ್ದು ಎಂದು ಭಾರತೀಯ ಕೈಗಾರಿಕಾ ಹಣಕಾಸು ನಿಗಮ ಆರೋಪಿಸಿದೆ. ಚೋಕ್ಸಿ ಅವರು ಚಿನ್ನಾಭರಣ ಮೌಲ್ಯಮಾಪನ ಮಾಡುವವರ ಜತೆಗೂಡಿ ಸಂಚು ರೂಪಿಸಿ, ಅವು ಹೆಚ್ಚು ಬೆಲೆಯುಳ್ಳ ಆಭರಣಗಳು ಎಂಬಂತೆ ನಂಬಿಸಿದ್ದರು ಎಂದು ನಿಗಮ ಆರೋಪಿಸಿದೆ. ಹೊಸ ಮೌಲ್ಯಮಾಪಕರ ಪ್ರಕಾರ, ಚೋಕ್ಸಿ ಗಿರವಿ ಇರಿಸಿದ್ದ ಆಭರಣಗಳನ್ನು ಪ್ರಯೋಗಾಲಯದಲ್ಲಿ ರಾಸಾಯನಿಕಗಳನ್ನು ಬಳಸಿ ತಯಾರಿಸಲಾಗಿದ್ದು, ಅವು ನಿಜವಾದ ಹರಳುಗಳಲ್ಲ ಎಂಬ ಅಂಶ ಪತ್ತೆಯಾಗಿದೆ.

ಅಕ್ಷಯ ಫಲದ ತೃತೀಯಾ

● ಶಾಂತಾ ನಾಗಮಂಗಲ

ಇಂದು ಅಕ್ಷಯ ತೃತೀಯಾ

ಚೈತ್ರಮಾಸದ ಯುಗಾದಿಯ ನಂತರ ಬರುವ ಪ್ರಮುಖವಾದ ಹಬ್ಬ 'ಅಕ್ಷಯ ತೃತೀಯಾ'. ಈ ವ್ರತ-ಪರ್ವದ ಪ್ರಶಂಸೆಯನ್ನು ಭವಿಷ್ಯಪುರಾಣದಲ್ಲಿ ಶ್ರೀಕೃಷ್ಣ ಪರಮಾತ್ಮನೇ ಮಾಡಿದ್ದಾನೆ. ವೈಶಾಖಮಾಸದ ಶುಕ್ಲಪಕ್ಷದ ತೃತೀಯಾ ತಿಥಿಯಂದು ಈ ಪರ್ವದ ಆಚರಣೆಯನ್ನು ಹೇಳಿದೆ. ಈ ತೃತೀಯಾ ತಿಥಿಯನ್ನು 'ಜಯಾತಿಥಿ' ಎಂದೂ ಕರೆಯಲಾಗುತ್ತದೆ. ಇದು ಬಹು ವಿಶೇಷವೂ ಪವಿತ್ರವೂ ಆದ ತಿಥಿ ಎಂದು 'ಧರ್ಮಸಿಂಧು'ವು ಹೇಳಿದೆ.

ನಾಲ್ಕು ಯುಗಗಳಲ್ಲಿ ಮೊದಲನೆಯ ಯುಗವಾದ ಕೃತಯುಗವು ಆರಂಭವಾದ ದಿನ ಇದು ಎಂಬ ವಿಶ್ವಾಸವೂ ಪ್ರಚಲಿತವಿದೆ. ಹಾಗಾಗಿ ಈ ದಿನವನ್ನು 'ಕೃತ ಯುಗಾದಿ' ಎಂದೂ ಕರೆಯುವುದುಂಟು. ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಬ್ರಹ್ಮ-ಕ್ಷಾತ್ರಗಳ ಸಮಾಹಾರದ ಅವತಾರವಾದ 'ಪರಶುರಾಮ ಜಯಂತಿ'ಯೂ ಅಕ್ಷಯ ತೃತೀಯೆಯಂದೇ ಬರುತ್ತದೆ.

ಜ್ಯೋತಿಶ್ಶಾಸ್ತ್ರವು ಅಕ್ಷಯ ತೃತೀಯೆಯನ್ನು 'ಮೂರೂವರೆ' ಮುಹೂರ್ತಗಳಲ್ಲಿ ಒಂದು ಎಂದು ಪರಿಗಣಿಸಿದೆ. ಈ ಮುಹೂರ್ತದಲ್ಲಿ ಯಾರು ಬೇಕಾದರೂ, ಇತರ ಯಾವ ಶುದ್ಧಿಗಳನ್ನೂ ನೋಡದೆ, ಯಾವ ಒಳ್ಳೆಯ ಕೆಲಸವನ್ನು ಬೇಕಾದರೂ ಆರಂಭಿಸಬಹುದಾಗಿದೆ. ಸತ್ಪಾತ್ರರಿಗೆ ದಾನ ಕೊಡುವುದನ್ನು 'ನಿರ್ಣಯ-ಸಿಂಧು'ವಿನಲ್ಲಿ ವಿಶೇಷವಾಗಿ ಹೇಳಲಾಗಿದೆ. ಈ ಪರ್ವದಿನದಂದು ಆಚರಿಸುವ ಸ್ನಾನ, ಜಪ, ತಪ, ಅಧ್ಯಯನ, ತರ್ಪಣ, ದಾನಗಳೆಲ್ಲವೂ ಅತಿಶಯವಾದ, ಅಕ್ಷಯವಾದ ಫಲಗಳನ್ನು ಕೊಡುತ್ತವೆ ಎಂದು 'ವ್ರತರಾಜ' ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಈ ದಿನ ಹೊಲಗದ್ದೆಗಳಲ್ಲಿ ಬಿತ್ತನೆ ಮಾಡಿದರೆ ಫಸಲು ಅಕ್ಷಯವಾಗುತ್ತದೆ ಎಂಬ ನಂಬಿಕೆಯೂ ಇದೆ. ಅಕ್ಷಯವಾದ ಫಲವು ಸಿಗುವುದರಿಂದಲೇ ಈ ದಿನವನ್ನು 'ಅಕ್ಷಯ ತೃತೀಯಾ' ಎಂದು ಕರೆದಿದ್ದಾರೆ.

'ಭವಿಷ್ಯಪುರಾಣ'ವು ಈ ದಿನ ಪ್ರಾತಃಕಾಲದಲ್ಲಿ ಸಂಕಲ್ಪಪೂರ್ವಕವಾಗಿ ಗಂಗಾಸ್ನಾನ ಮಾಡಬೇಕು. ಸಾಕ್ಷಾತ್ತಾಗಿ ಗಂಗಾಸ್ನಾನ ಸಾಧ್ಯವಿಲ್ಲದಾಗ, ನಾವು ಸ್ನಾನಮಾಡುವ ನೀರಿನಲ್ಲೇ ಗಂಗೆಯನ್ನು ಪರಿಭಾವಿಸಿ, ಭಕ್ತಿಯಿಂದ ಮಜ್ಜನ ಮಾಡಿ ಹಬ್ಬವನ್ನು ಆಚರಿಸಬೇಕು. ಶ್ರೀಕೃಷ್ಣನನ್ನು ಚಂದನಲೇಪದಿಂದ ಪೂಜಿಸಬೇಕು; ತರ್ಪಣ ದಾನಾದಿಗಳಿಂದ ಪಿತೃಗಳಿಗೆ ಪೂಜೆ ಸಲ್ಲಿಸಬೇಕು– ಎನ್ನುತ್ತದೆ. ಗೋಧಿ, ಯವ (ಜವೆಗೋಧಿ), ಯವೆಯ ಹುರಿಹಿಟ್ಟು, ಕಡಲೆ, ಮೊಸರನ್ನ, ನೀರು ತುಂಬಿದ ಬಿಂದಿಗೆ, ಬಿಸಿಲಿನ ತಾಪದ ಉಪಶಮನಕ್ಕೆ ಬೇಕಾಗುವ ಬೀಸಣಿಗೆ, ಮಂದಳಿಗೆ, ಚಂದನಗಳನ್ನು ದಕ್ಷಿಣೆಯ ಜೊತೆ ದಾನ ಮಾಡಬೇಕೆಂದು ಹೇಳಲಾಗಿದೆ. ಸುವರ್ಣದಾನವನ್ನೂ ಹೇಳಿದೆ. ಚಿನ್ನವನ್ನು ದಾನ ಕೊಡಲಾಗದವರು ಯವೆಯ ದಾನವನ್ನು ಮಾಡಬಹುದು ಎಂಬ ರಿಯಾಯಿತಿಯೂ ಇದೆ. ಇದು ಈಗ ಚಿನ್ನದ ಖರೀದಿಯ ವ್ಯಾಪಾರೀ ತಂತ್ರವಾಗಿ ಬದಲಾಗಿದೆ. ಇಂದು ಮಹಿಳೆಯರು ವಿಶೇಷವಾಗಿ ತದಿಗೆಯ ಗೌರಿಯನ್ನು ಪೂಜಿಸುವ ಪದ್ಧತಿಯೂ ಇದೆ.

ಅಕ್ಷಯ ತೃತೀಯೆಯಂದು ಮಾಡುವ ಧಾರ್ಮಿಕ ಆಚರಣೆಗಳ ಹಿಂದೆ ಋತುಮಾನಕ್ಕೆ ಅನುಗುಣವಾದ ಸೂಕ್ಷ್ಮವಾದ ಅಂಶವೂ ಅಡಕವಾಗಿರುವುದನ್ನು ಗಮನಿಸಬಹುದು. ಗಂಗಾಸ್ನಾನ, ಚಂದನ ಜಲಕುಂಭ ಬೀಸಣಿಗೆ ಮೊದಲಾದ ದಾನಗಳೆಲ್ಲವೂ ವೈಶಾಖದ ಬಿಸಿಲಿನ ಧಗೆಗೆ ಉಪಶಮನವನ್ನು ತರುವಂತಹವೇ ಆಗಿವೆ. ಯವದ ಹುರಿಹಿಟ್ಟು ಶರೀರಕ್ಕೆ ಶೈತ್ಯಕಾರಕವಾದ್ದು.

ಬಸವಣ್ಣ ಎಂಬ ಕೂಡಲಸಂಗಮ

● ಎಚ್.ಎಸ್. ಮುರಳೀಧರ

ಇಂದು ಬಸವ ಜಯಂತಿ

ಬಸವಣ್ಣನಲ್ಲಿಯೇ ಒಂದು ಕೂಡಲಸಂಗಮವಿದೆ. ಹಾಗೆ ನೋಡಿದರೆ ತಾನೇ ಅದಾಗದೆ ಅದನ್ನು ತನ್ನೊಳಗೆ ಇರಿಸಿಕೊಳ್ಳಲು ಬರುವುದಿಲ್ಲವಾದ್ದರಿಂದ ಯಾವುದು ಬಸವಣ್ಣನೋ ಅದೇ ಕೂಡಲಸಂಗಮವೂ ಆಗಿದೆ. ಏಕಾಣು ಜೀವಿಯು ವಿಕಸನಗೊಂಡು ಮಾನವನಾದುದು ವಿಕಸನದ ಒಂದು ಆಯಾಮವಾದರೆ ಮಾನವಜೀವಿಯ ಆಂತರಿಕ ವಿಕಸನದ ಇನ್ನೊಂದು ಆಯಾಮದಲ್ಲಿ ಕೂಡಲಸಂಗಮವಿದೆ. ಅಳಿಯುವ ಸ್ಥಾವರತೆಯನ್ನು ಕಳಚಿಕೊಂಡು ಅಳಿಯದ ಜಂಗಮತೆಯೆಡೆಗೆ ಬೆಳೆಯುವುದರಲ್ಲಿ ಈ ವಿಕಾಸದ ಚಲನೆಯಿದೆ.

ಮೊದಲಿಗೆ ಇಲ್ಲೊಂದು ಮನೆಯಿದೆ. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ಕಸ ತುಂಬಿಕೊಂಡರೆ ಅದು ಮನೆಯೊಡೆಯನ ನೆಲೆಯನ್ನೇ ನಿರಾಕರಿಸಿಬಿಡುತ್ತದೆ. ಹಾಗಾಗದಿರಬೇಕಾದರೆ ಅವನು ಕೂಡಲಸಂಗಮನ ಮನೆಯ ಮಗನಾಗಿ ಮರುಹುಟ್ಟು ಪಡೆಯಬೇಕಾಗುತ್ತದೆ. ತನ್ನ ಮನೆಯೆಂಬುದು ವ್ಯಷ್ಟಿಯಾದರೆ ಕೂಡಲಸಂಗಮನ ಮನೆಯೆಂಬುದು ಸಮಷ್ಟಿಯಾಗಿದೆ. ತನ್ನ ಮನೆಯ ಸ್ಥಾಪನೆಗೆ ವಿಳಾಸವೊಂದರ ಅಗತ್ಯವಿದೆ. ಏಕೆಂದರೆ ಅದು ಇನ್ನಿತರ ಮನೆಗಳಿಂದ ತನ್ನನ್ನು ತಾನು ಪ್ರತ್ಯೇಕಿಸಿಕೊಳ್ಳುವ ಸಾಧನವೂ ಆಗಿದೆ. ಆದರೆ ಕೂಡಲಸಂಗಮನ ಮನೆಯೆಂದರೆ ಅದು ಎಲ್ಲ ವಿಳಾಸಗಳಿಂದ ಬಿಡಿಸಿಕೊಳ್ಳುವುದೇ ಆಗಿದೆ. ಏಕೆಂದರೆ ಕೂಡಲಸಂಗಮನು ವಿಶ್ವತೋಮುಖನಾಗಿದ್ದಾನೆ; ವಿಶ್ವತೋ ಬಾಹುವಾಗಿದ್ದಾನೆ; ವಿಶ್ವತೋ ಚಕ್ಷುವಾಗಿದ್ದಾನೆ. ತಾನು ತನ್ನ ಮನೆಯ ಮಗನಾಗಿದ್ದರೆ ಆಗ ಅವನನ್ನು 'ಇವನಾರವ, ಇವನಾರವ, ಇವನಾರವ' ಎಂದು ಕೇಳುವಂತಾಗುತ್ತದೆ. ಆದರೆ ಕೂಡಲಸಂಗಮನ ಮನೆಯ ಮಗನಾದರೆ ಎಲ್ಲರೂ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನುವಂತಾಗುತ್ತದೆ.

ಇಲ್ಲೊಂದು ಕೂಡುವಿಕೆಯಿದೆ. ಒಂದು ನೆಲೆಯಲ್ಲಿ ಕೂಡಲಸಂಗಮನು ಜಗದಗಲ, ಮುಗಿಲಗಲ, ಮಿಗೆಯಗಲವಾಗಿದ್ದಾನೆ. ಇದಕ್ಕೆ ವೈದೃಶ್ಯವೋ ಎಂಬಂತೆ ಇಲ್ಲಿ ಇನ್ನೊಂದು ನೆಲೆಯಲ್ಲಿ ಭಕ್ತನ ಕರಸ್ಥಲವಿದೆ. ಕರಸ್ಥಲವೆನ್ನುವಲ್ಲಿಯೇ ಅದರ ಸೀಮಿತತೆಯ ಸೂಚನೆಯೂ ಇದೆ. ಆದರೆ ಈ ಸೀಮಿತತೆಯು ಅಸೀಮವಾಗುವುದೇ ಇಲ್ಲಿನ ಪ್ರಧಾನ ನೆಲೆಯೂ ಆಗಿದೆ. ಅತೀತವಾದುದು ಹ್ರಸ್ವಗೊಂಡಿತೋ ಎಂಬಂತೆ ಕರಸ್ಥಲಕ್ಕೆ ಬಂದು ಚುಳುಕಾಗುತ್ತದೆ. ಮೇಲಿನ ಸ್ತರದಲ್ಲಿ ಇದು ಹಿಗ್ಗಿಕೊಂಡಿದ್ದುದು ಕುಗ್ಗಿದುದರ ನಿರೂಪಣೆಯಾಗಿದ್ದರೆ ಅಂತರಾಳದಲ್ಲಿ ಇದು ಕುಗ್ಗಿದಂತಿದ್ದುದು ಹಿಗ್ಗಿದುದರ ಕಥನವೇ ಆಗಿದೆ. ಕರಸ್ಥಲವು ಇಲ್ಲಿ ವಿಶ್ವಸ್ಥಲವಾಗುತ್ತದೆ. ಈ ಕೂಡುವಿಕೆಯೇ ಕೂಡಲಸಂಗಮವು ವಾಸ್ತವವಾಗುವ ವಿಧಾನವೂ ಆಗಿದೆ. ಕರಸ್ಥಲ-ವಿಶ್ವಸ್ಥಲಗಳ ಕೂಡುವಿಕೆಯಲ್ಲಿಯೇ ಭಕ್ತಿಯ ವಾಸ್ತವತೆಯೂ ಇದೆ. ಇಲ್ಲಿ ಭಕ್ತಿಯೂ ಆಯ್ಕೆಯ ಸಂಗತಿಯಾಗಿದೆ ಅಸ್ತಿತ್ವವಾಗುತ್ತದೆ. ಅಸ್ತಿತ್ವದ ಸಮಗ್ರತೆಯಲ್ಲಿ ತನ್ನ ವ್ಯಕ್ತಿಗತ ಅಸ್ತಿತ್ವದ ಬಿಂದುವನ್ನು ಗುರುತಿಸಿಕೊಳ್ಳುವಲ್ಲಿ ಮತ್ತು ಆ ಮೂಲಕ ಉಳಿದೆಲ್ಲ ಬಿಂದುಗಳೊಂದಿಗೆ ತನ್ನ ಸಾವಯವ ಸಂಬಂಧವನ್ನು ಕಂಡುಕೊಳ್ಳುವಲ್ಲಿ ಭಕ್ತಿಯ ಸಾರ್ಥಕ್ಯವಿದೆ. ಹೀಗಾಗಿ ಒಂದು ಪ್ರಾಥಮಿಕ ನೆಲೆಯಲ್ಲಿ ಖಾಸಗಿಯೆಂಬಂತೆ ತೋರುವ ಭಕ್ತಿ ಕೂಡ ಲೋಕಜಂಗಮದೊಂದಿಗೆ ತನ್ನನ್ನು ತಾನು ಹೆಣೆದುಕೊಳ್ಳುವ ಬಗೆಯೇ ಆಗಿದೆ. 'ಒಡಲಿಲ್ಲದ ನಿರಾಳ ಕರ್ತೃ' ಕೂಡಲ ಸಂಗಮದೇವನು ತನ್ನನ್ನು ತಾನು ಪ್ರಕಟಿಸಿಕೊಳ್ಳುವುದೇ 'ಜಂಗಮಮುಖ ಲಿಂಗ' ವಾಗುವುದರ ಮೂಲಕ. ಹೀಗಾಗಿ ದೈವಿಕವೆಂದು ಹೇಳಲಾಗುವ ಭಕ್ತಿಯಾದರೂ ತನ್ನನ್ನು ತಾನು ವಾಸ್ತವಗೊಳಿಸಿಕೊಳ್ಳಬೇಕಾಗಿರುವುದು ಲೋಕಜಂಗಮದ ದಿನನಿತ್ಯದ ಸಾಧಾರಣ ವಿವರಗಳಲ್ಲಿಯೇ ಆಗಿದೆ. 'ಭಕ್ತಿಯೆಂಬ ಭಂಡಕ್ಕೆ ಜಂಗಮವೇ ಸುಂಕಿಗ, ಕೂಡಲಸಂಗಮದೇವಾ'. ಜಂಗಮಕ್ಕೆ ಸಲ್ಲಬೇಕಾದ ಸುಂಕವನ್ನು ಸಲ್ಲಿಸಿದಾಗಲೇ ಭಕ್ತಿಯ ಭಂಡಾರ 'ಸಾಚಾ' ಆಗುತ್ತದೆ. ಹಾಗೆ ಸಲ್ಲಿಸದ ಸಲುಗೆಯಿಂದ ತಪ್ಪಿಸಿಕೊಂಡದ್ದು 'ಕಳ್ಳನಾಣ್ಯ'ವಾಗುತ್ತದೆ. ಈ ಮಂಡನೆಯ ಮೂಲಕ ಇಲ್ಲಿ ಲಿಂಗ-ಜಂಗಮಗಳ ಕೂಡಲಸಂಗಮವೊಂದು ಸ್ಥಾಪನಗೊಳ್ಳುತ್ತಿದೆ. ದೇವನಿಷ್ಠೆ-ಲೋಕನಿಷ್ಠೆಗಳು ಒಂದೊಳಗೊಂದು ಕರಗಿಹೋಗುತ್ತಿವೆ. ಈ ಕೂಡಲಸಂಗಮದಲ್ಲಿ ದೇವಲೋಕ-ಮರ್ತ್ಯಲೋಕಗಳೆಂಬ ವಿಭಜನೆಯೂ ನಿರಾಕರಣೆಗೆ ಒಳಗಾಗುತ್ತದೆ.

ಈ ಎಲ್ಲದರ ಮೂಲಕ ಇನ್ನೊಂದು ನೆಲೆಯಲ್ಲಿ ತಥಾಕಥಿತ ಭಕ್ತಿ-ಧರ್ಮಾಚರಣೆಗಳ ಮೌಲ್ಯಮಾಪನವೂ ಆಗುತ್ತದೆ. ಹಾಗೆ ಆಗುವುದರಿಂದಲೇ ಇಲ್ಲಿ ಧರ್ಮವನ್ನಾಧರಿಸಿಕೊಂಡು ದಯೆಯು ನಿಂತಿದೆಯೆಂಬ ರೂಢಿಯ ಗ್ರಹಿಕೆಯನ್ನು ಪಲ್ಲಟಿಸಿ ದಯೆಯ ಆಧಾರದ ಮೇಲೆ ಧರ್ಮವನ್ನು ನಿಲ್ಲಿಸಲಾಗುತ್ತದೆ. 'ದಯವಿಲ್ಲದ ಧರ್ಮವದೇವುದಯ್ಯ?' (ದಯವಿಲ್ಲದ ಧರ್ಮವು ಏತಕ್ಕೆ ಬರುತ್ತದೆ?) ಎಂಬ ಮಾತು ಧರ್ಮಪರೀಕ್ಷೆಯ ಎಲ್ಲ ಕಾಲದ ಮಾನದಂಡವಾಗುತ್ತದೆ. ಜೊತೆಗೆ ದಯೆ ಮತ್ತು ಧರ್ಮಗಳ ಕೂಡಲಸಂಗಮದ ಸ್ಥಾಪನೆಯೆಂಬುದು ಮಾನವತೆಯ ಶಾಶ್ವತವಾದ ಕನಸಾಗಿಯೂ ನಿಲ್ಲುತ್ತದೆ.

ಷೇರುಪೇಟೆ ವಹಿವಾಟು

85



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,103
ಇಂದಿನ ಅಂತ್ಯ	17,069
▼	34
ದಿನದ ಕನಿಷ್ಠ	16,917

ವಿನಿಮಯ ದರ

$ ಡಾಲರ್	76.51
£ ಪೌಂಡ್	96.2
€ ಯುರೊ	80.53
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹394

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1595 (1610)
ಸೂರ್ಯಕಾಂತಿ (ರಿಫೈನ್ಡ್)	₹1925 (1935)
ಪಾಮೋಲಿನ್	₹1590 (1612)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹320-620
ದ್ವಿತಳಿ (ಬಿ.ವಿ)	₹177-785

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹166
ಆರ್‌ಎಸ್‌ಎಸ್-5	₹160
ಗುಡ್ ಲಾಟ್	₹156

ಚಿನ್ನ, ಬೆಳ್ಳಿ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹54900
ಆಭರಣ ಚಿನ್ನ (1 ಗ್ರಾಂ)	₹5,120
ಬೆಳ್ಳಿ (ಕೆ.ಜಿಗೆ)	₹71600

ಎಸ್‌ಬಿಐ ವರದಿ: ಹಣದುಬ್ಬರದ ನಡುವೆಯೇ ಅರ್ಥ ವ್ಯವಸ್ಥೆ ಚೇತರಿಕೆ

ಸಾಲ: ಆರ್ಥಿಕ ಚಟುವಟಿಕೆ ಚುರುಕು

● ಅನ್ನಪೂರ್ಣಾ ಸಿಂಗ್

ಮುಖ್ಯಾಂಶಗಳು

- ಅರ್ಥ ವ್ಯವಸ್ಥೆಯಲ್ಲಿ ಬ್ಯಾಂಕ್‌ಗಳ ಸಕ್ರಿಯ ಪಾಲ್ಗೊಳ್ಳುವಿಕೆ ಹೆಚ್ಚಳ
- ಎಲ್ಲ ವಲಯಗಳಲ್ಲಿ ಸಾಲ ಪಡೆಯುವ ಪ್ರಮಾಣ ಏರಿಕೆ

ನವದೆಹಲಿ: 2021–22ನೆಯ ಹಣಕಾಸು ವರ್ಷದಲ್ಲಿ ಬ್ಯಾಂಕ್‌ಗಳು ನೀಡಿರುವ ಸಾಲದ ಪ್ರಮಾಣವು ಶೇಕಡ 10.5ರಷ್ಟು ಹೆಚ್ಚಳ ಕಂಡಿದೆ. ಹಿಂದಿನ ವರ್ಷದಲ್ಲಿ ಸಾಲ ನೀಡುವ ಪ್ರಮಾಣದ ಹೆಚ್ಚಳವು ಶೇ 5.8ರಷ್ಟು ಆಗಿತ್ತು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಿದ್ಧಪಡಿಸಿರುವ ವರದಿಯು ಹೇಳಿದೆ.

ಹಣದುಬ್ಬರ ಹೆಚ್ಚಿನ ಮಟ್ಟದಲ್ಲಿ ಇದ್ದರೂ ಅರ್ಥ ವ್ಯವಸ್ಥೆಯು ಚೇತರಿಕೆಯ ಹಾದಿಯಲ್ಲಿ ಇದೆ ಎಂಬುದನ್ನು ಸಾಲ ನೀಡುವ ಪ್ರಮಾಣ ಹೆಚ್ಚಳವಾಗಿರುವುದು ಸೂಚಿಸುತ್ತಿದೆ.

2021–22ರಲ್ಲಿ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಮತ್ತು ಮೂಲಸೌಕರ್ಯ ವಲಯಕ್ಕೆ ನೀಡಿದ ಸಾಲದ ಮೊತ್ತವು ₹ 2.3 ಲಕ್ಷ ಕೋಟಿ ಆಗಿದೆ. ಗೃಹ ನಿರ್ಮಾಣ ವಲಯಕ್ಕೆ ನೀಡಿರುವ ಸಾಲವು ₹ 2 ಲಕ್ಷ ಕೋಟಿ ಆಗಿದೆ. ವೈಯಕ್ತಿಕ ಸಾಲ ಪಡೆಯುವ ಪ್ರಮಾಣವು ಹೆಚ್ಚಳವಾಗಿದ್ದು, ಇದರಿಂದಾಗಿ ಸಣ್ಣ ಸಾಲಗಳ ಮೊತ್ತವು ₹ 3.7 ಲಕ್ಷ ಕೋಟಿಯಷ್ಟು ಹೆಚ್ಚಳ ಕಂಡಿದೆ. ಕೃಷಿ ವಲಯಕ್ಕೆ ನೀಡಿರುವ ಸಾಲದ ಮೊತ್ತ ₹ 1.3 ಲಕ್ಷ ಕೋಟಿ.

'ಸಾಲ ಪಡೆಯುವ ಪ್ರಮಾಣವು ಎಲ್ಲ ವಲಯಗಳಲ್ಲಿಯೂ ಹೆಚ್ಚಳ ಕಂಡಿದೆ. ಹೀಗಾಗಿ, ಸಾಂಕ್ರಾಮಿಕದ ನಂತರದ ಕೆಲವು ಪರಿಣಾಮಗಳನ್ನು ಕೊಡವಿಕೊಂಡು ಮೇಲೆದ್ದು ಬರಲು ಅರ್ಥ ವ್ಯವಸ್ಥೆಗೆ ಸಾಧ್ಯವಾಗಿದೆ ಎಂದು ಅನಿಸುತ್ತಿದೆ' ಎನ್ನುವ ಮಾತನ್ನು ಎಸ್‌ಬಿಐನ ಮುಖ್ಯ ಆರ್ಥಿಕ ಸಲಹೆಗಾರ ಹಾಗೂ ವರದಿಯನ್ನು ಸಿದ್ಧಪಡಿಸಿರುವ ಸೌಮ್ಯಕಾಂತಿ ಘೋಷ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಜಿಡಿಪಿಯಲ್ಲಿ ಬ್ಯಾಂಕ್ ಸಾಲಗಳ ಪ್ರಮಾಣವು ಶೇ 50ರ ಗಡಿಯನ್ನು ಮೀರುವ ನಿರೀಕ್ಷೆ ಇದೆ. ಈ ಪ್ರಮಾಣವು 2021–22ರಲ್ಲಿ ದಶಕದ ಕನಿಷ್ಠ ಪ್ರಮಾಣವಾದ ಶೇ 27ರಷ್ಟು ಇತ್ತು. ಸಾಂಕ್ರಾಮಿಕ ಆವರಿಸುವ ಮೊದಲು ಈ ಪ್ರಮಾಣವು ಶೇ 63ರಷ್ಟು ಆಗಿತ್ತು ಎಂದು ವರದಿ ಹೇಳಿದೆ.

ಜಿಡಿಪಿಯಲ್ಲಿ ಬ್ಯಾಂಕ್ ಸಾಲದ ಅನುಪಾತ ಹೆಚ್ಚಿದೆ ಅಂದರೆ, ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಸಾಲ ವಿತರಣೆ ಮಾಡಿ ಅರ್ಥ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿವೆ ಎಂದು ಅರ್ಥ. 'ಉಕ್ರೇನ್ ಬಿಕ್ಕಟ್ಟು ಮತ್ತು ಬ್ಯಾಂಕ್ ಬಡ್ಡಿ ದರ ಹೆಚ್ಚಳದಿಂದ ಸಾಲಕ್ಕೆ ಬೇಡಿಕೆ ತಗ್ಗಬಹುದು. ಈಗಿನ ಹಣದುಬ್ಬರ ದರ ಕೂಡ ಒಂದಿಷ್ಟು ದುಷ್ಪರಿಣಾಮ ಉಂಟುಮಾಡಬಹುದು ಎಂದು ವರದಿಯು ಎಚ್ಚರಿಸಿದೆ.

ಚಿನ್ನದ ದರ ₹ 745, ಬೆಳ್ಳಿ ₹ 1,228ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹ 745ರಷ್ಟು ಇಳಿಕೆ ಕಂಡಿದ್ದು ₹ 50,936ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,228ರಷ್ಟು ಇಳಿಕೆಯಾಗಿ ₹ 63,028ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಕ್ಯಾಸಿನೊ, ಕುದುರೆ ರೇಸ್ ತೆರಿಗೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ (ಜಿಎಸ್‌ಟಿ) ಅಡಿಯಲ್ಲಿ ಶೇಕಡ 28ರಷ್ಟು ತೆರಿಗೆ ವಿಧಿಸಬೇಕು ಎಂಬ ವಿಚಾರವಾಗಿ ರಾಜ್ಯಗಳ ಹಣಕಾಸು ಸಚಿವರ ಸಮಿತಿಯು ಸಹಮತ ಹೊಂದಿದೆ ಎಂದು ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಹೇಳಿದ್ದಾರೆ.

ಈ ಸೇವೆಗಳ ಮೌಲ್ಯ ಅಂದಾಜಿಸುವುದು ಹೇಗೆ ಎಂಬುದನ್ನು ಸಮಿತಿಯು ತೀರ್ಮಾನಿಸಬೇಕಿದೆ. ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಈಗ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ಕ್ಯಾಸಿನೊ, ಗೇಮಿಂಗ್ ಪೋರ್ಟಲ್‌ಗಳು ಮತ್ತು ಕುದುರೆ ರೇಸ್‌ನ ಮೌಲ್ಯ ನಿಗದಿಯನ್ನು ಇನ್ನಷ್ಟು ಸಮರ್ಪಕವಾಗಿ ಮಾಡಲು ಕೇಂದ್ರ ಸರ್ಕಾರವು ಕಳೆದ ವರ್ಷದ ಮೇ ತಿಂಗಳಿನಲ್ಲಿ ಸಚಿವರ ಸಮಿತಿಯನ್ನು ರಚಿಸಿತ್ತು.

ಮೇಘಾಲಯ ಹಣಕಾಸು ಸಚಿವ ಕಾನ್‌ರಾಡ್ ಸಂಗ್ಮಾ ನೇತೃತ್ವದಲ್ಲಿ ಸಮಿತಿಯ ಸಭೆಯು ಸೋಮವಾರ ನಡೆಯಿತು. ಸಚಿವರ ಸಮಿತಿಯ ವರದಿಯನ್ನು ಜಿಎಸ್‌ಟಿ ಮಂಡಳಿಯು ಮುಂದಿನ ಬಾರಿ ಸಭೆ ಸೇರಿದಾಗ ಪರಿಶೀಲನೆಗೆ ಎತ್ತಿಕೊಳ್ಳಲಿದೆ. ಜಿಎಸ್‌ಟಿ ಮಂಡಳಿ ಸಭೆಯು ಇದೇ ತಿಂಗಳಿನಲ್ಲಿ ನಡೆಯುವ ನಿರೀಕ್ಷೆ ಇದೆ.

'ಪರ್ಯಾಯ ಇಂಧನ ತಯಾರಿಕಾ ಕಂಪನಿಗೆ ಆದ್ಯತಾ ಸಾಲ'

ನವದೆಹಲಿ (ಪಿಟಿಐ): ಬಯೊ ಎಥೆನಾಲ್, ಸಿಎನ್‌ಜಿ ಮತ್ತು ಎಲ್‌ಎನ್‌ಜಿ ತಯಾರಿಕೆಯಲ್ಲಿ ತೊಡಗಿರುವ ಕಂಪನಿಗಳನ್ನು ಸಹ ಆದ್ಯತಾ ವಲಯದ ಸಾಲ ಸೌಲಭ್ಯ ವ್ಯಾಪ್ತಿಗೆ ತರಬೇಕಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಈ ಸಂಬಂಧ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಜೊತೆ ಮಾತನಾಡುವುದಾಗಿಯೂ ಗಡ್ಕರಿ ಅವರು ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಆದ್ಯತಾ ವಲಯದ ಸಾಲದ ವ್ಯಾಪ್ತಿಗೆ ತರುವುದರಿಂದ ಕಂಪನಿಗಳಿಗೆ ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಪಡೆಯಲು ಸಾಧ್ಯವಾಗುತ್ತದೆ. ಅದರಿಂದ, ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಪ್ರಮಾಣ ತಗ್ಗಿಸಲು ಸಹ ಸಹಾಯ ಆಗುತ್ತದೆ ಎಂದು ಹೇಳಿದ್ದಾರೆ.

ಫೇಮ್–2 ಯೋಜನೆ ಅಡಿಯಲ್ಲಿ 5,400 ವಿದ್ಯುತ್ ಚಾಲಿತ ಬಸ್‌ಗಳ ಖರೀದಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಮುಂದಿನ ಆರು ತಿಂಗಳಲ್ಲಿ ಸಂಚಾರ ಆರಂಭ ಆಗಲಿದೆ ಎಂದು ಬೃಹತ್ ಉದ್ದಿಮೆಗಳ ಸಚಿವ ಮಹೇಂದ್ರ ನಾಥ್ ಪಾಂಡೆ ತಿಳಿಸಿದ್ದಾರೆ.

'ಹರಿಯಾಣದಲ್ಲಿ ಅತಿಹೆಚ್ಚು ನಿರುದ್ಯೋಗ'

ಮುಂಬೈ (ಪಿಟಿಐ): ದೇಶದಲ್ಲಿ ನಿರುದ್ಯೋಗ ಪ್ರಮಾಣವು ಏಪ್ರಿಲ್‌ನಲ್ಲಿ ಶೇಕಡ 7.83ಕ್ಕೆ ಏರಿಕೆ ಆಗಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆ ಹೇಳಿದೆ. ನಿರುದ್ಯೋಗ ಪ್ರಮಾಣವು ಮಾರ್ಚ್‌ನಲ್ಲಿ ಶೇ 7.6ರಷ್ಟು ಇತ್ತು.

ನಗರ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣವು ಶೇ 9.22ರಷ್ಟು ಆಗಿತ್ತು ಎಂದು ಸಂಸ್ಥೆಯು ಹೇಳಿದೆ. ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ಶೇ 7.18ರಷ್ಟು ಆಗಿತ್ತು. ಹರಿಯಾಣದಲ್ಲಿ ನಿರುದ್ಯೋಗ ಪ್ರಮಾಣವು ಅತಿಹೆಚ್ಚಿನ ಮಟ್ಟದಲ್ಲಿ (ಶೇ 34.5) ಇದೆ. ರಾಜಸ್ಥಾನದಲ್ಲಿ ಶೇ 28.8ರಷ್ಟು, ಬಿಹಾರದಲ್ಲಿ ಶೇ 21.1ರಷ್ಟು, ಜಮ್ಮು ಮತ್ತು ಕಾಶ್ಮೀರದಲ್ಲಿ ಶೇ 15.6ರಷ್ಟು ನಿರುದ್ಯೋಗ ಇದೆ.

ಫ್ಯಾಬ್ ಇಂಡಿಯಾ ಐಪಿಒಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಫ್ಯಾಬ್ ಇಂಡಿಯಾ, ಏಥರ್ ಇಂಡಸ್ಟ್ರೀಸ್ ಸೇರಿದಂತೆ ಒಟ್ಟು ಏಳು ಕಂಪನಿಗಳಿಗೆ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅನುಮತಿ ನೀಡಿದೆ.

ಸಿರ್ಮಾ ಎಸ್‌ಜಿಎಸ್ ಟೆಕ್ನಾಲಜಿ, ಏಷ್ಯಾನೆಟ್ ಸ್ಯಾಟಲೈಟ್ ಕಮ್ಯುನಿಕೇಷನ್ಸ್, ಸನಾತನ್ ಟೆಕ್ಸ್‌ಟೈಲ್ಸ್, ಕ್ಯಾಪಿಲ್ಲರಿ ಟೆಕ್ನಾಲಜೀಸ್ ಇಂಡಿಯಾ ಮತ್ತು ಹರ್ಷ ಎಂಜಿನಿಯರ್ಸ್ ಇಂಟರ್‌ನ್ಯಾಷನಲ್ ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಒಪ್ಪಿಗೆ ಪಡೆದಿರುವ ಇತರ ಕಂಪನಿಗಳು.

ಫ್ಯಾಬ್ ಇಂಡಿಯಾ ಕಂಪನಿ ಸಲ್ಲಿಸಿರುವ ಕರಡು ದಾಖಲೆಪತ್ರಗಳ ಅನ್ವಯ, ಒಟ್ಟು ಏಳು ಲಕ್ಷ ಷೇರುಗಳನ್ನು ರೈತರು ಹಾಗೂ ಕುಶಲಕರ್ಮಿಗಳಿಗೆ ಉಡುಗೊರೆಯಾಗಿ ನೀಡಲಾಗುತ್ತದೆ. ಕಂಪನಿಯ ಐಪಿಒ ಗಾತ್ರವು ಅಂದಾಜು ₹ 4 ಸಾವಿರ ಕೋಟಿ ಆಗಿರುತ್ತದೆ ಎಂದು ಮೂಲಗಳು ತಿಳಿಸಿವೆ.

ರಾಣಾ ದಂಪತಿಗೆ ಜಾಮೀನು: ನಾಳೆ ಆದೇಶ

ಮುಂಬೈ (ಪಿಟಿಐ): ಹನುಮಾನ್ ಚಾಲೀಸಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಸಂಸದೆ ನವನೀತ್ ರಾಣಾ ಮತ್ತು ಅವರ ಪತಿ, ಶಾಸಕ ರವಿ ರಾಣಾ ಅವರ ಜಾಮೀನು ಅರ್ಜಿ ಕುರಿತ ಆದೇಶವನ್ನು ಮೇ 4ರಂದು ಪ್ರಕಟಿಸಲಾಗುವುದು ಎಂದು ಇಲ್ಲಿನ ವಿಶೇಷ ನ್ಯಾಯಾಲಯ ಸೋಮವಾರ ತಿಳಿಸಿದೆ.

ವಿಶೇಷ ನ್ಯಾಯಾಧೀಶ ಆರ್. ಎನ್.ರೋಕಡೆ ಅವರು ಈ ಹಿಂದೆ ಆದೇಶವನ್ನು ಸೋಮವಾರಕ್ಕೆ ಕಾಯ್ದಿರಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250

ಕಾಳು ಮೆಣಸು	500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15950	213.60 ಸೆಂಟ್ಸ್
ಎಸಿ	8900	8300	8550	
ಆರ್‌ಪಿ	9600	9550	9750	ಲಂಡನ್
ಆರ್‌ಸಿ	4215	4050	4350	2089ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

2-5-2022

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10200-10250

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	1602 (1635)
ಪಾಮ್ ವಾರದ ಡೆಲಿವರಿ	1588 (1608)
ಸೂರ್ಯಕಾಂತಿ ಎಣ್ಣೆ ಕಚ್ಚಾ	1850 (1890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,800 (51,600)
ಬೆಳ್ಳಿ ಕೆ.ಜಿ 62,800 (63,700)

ಆವರಣದಲ್ಲಿ ಶನಿವಾರದ ಧಾರಣೆ

ಸ್ಪೈಸ್‌ಜೆಟ್‌ನಲ್ಲಿ ತಲ್ಲಣ: ತನಿಖೆ ಆರಂಭ

ನವದೆಹಲಿ (ಪಿಟಿಐ): ಮುಂಬೈ–ದುರ್ಗಾಪುರ ನಡುವೆ ಭಾನುವಾರ ಸಂಚರಿಸುತ್ತಿದ್ದ ಸ್ಪೈಸ್‌ಜೆಟ್ ಸಂಸ್ಥೆಯ ವಿಮಾನವು ಇಳಿಯುವ ವೇಳೆ ಗಾಳಿಯ ಒತ್ತಡಕ್ಕೆ ಸಿಲುಕಿ ಅಲುಗಾಡಿದ್ದ ಪ್ರಕರಣದ ಕುರಿತು ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಪ್ರಧಾನ ನಿರ್ದೇಶನಾಲಯದ (ಡಿಜಿಸಿಎ) ಮುಖ್ಯಸ್ಥ ಅರುಣ್ ಕುಮಾರ್ ಸೋಮವಾರ ತಿಳಿಸಿದ್ದಾರೆ.

ವಿಮಾನದ ಸಿಬ್ಬಂದಿ, ವಿಮಾನ ನಿರ್ವಹಣಾ ಇಂಜಿನಿಯರ್ (ಎಎಂಇ) ಮತ್ತು ಸ್ಪೈಸ್‌ಜೆಟ್‌ನ ನಿರ್ವಹಣಾ ನಿಯಂತ್ರಣ ಕೇಂದ್ರದ ಉಸ್ತುವಾರಿಯನ್ನು ಸಹ ತನಿಖೆಗೆ ಒಳಪಡಿಸಿದೆ ಎಂದು ಡಿಜಿಸಿಎ ತಿಳಿಸಿದೆ.

'ತನಿಖೆ ಪೂರ್ಣಗೊಂಡ ನಂತರ ಕಾರಣಗಳ ಕುರಿತು ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳಲಾಗುವುದು' ಎಂದು ಅವರು ತಿಳಿಸಿದ್ದಾರೆ.

ವಿಮಾನದೊಳಗಿನ ತಲ್ಲಣದ ಸ್ಥಿತಿಯಿಂದ 17 ಮಂದಿ (14 ಪ್ರಯಾಣಿಕರು, ಮೂವರು ಕ್ಯಾಬಿನ್ ಸಿಬ್ಬಂದಿ) ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ ಎಂಟು ಮಂದಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ ಎಂದು ಸ್ಪೈಸ್‌ಜೆಟ್‌ನ ವಕ್ತಾರರು ಮಾಹಿತಿ ನೀಡಿದ್ದಾರೆ.

ವಿಮಾನದಲ್ಲಿ 'ಸೀಟ್ ಬೆಲ್ಟ್' ಸಂಕೇತ ಆನ್‌ನಲ್ಲಿತ್ತು ಮತ್ತು ಪ್ರಯಾಣಿಕರನ್ನು ಕುಳಿತುಕೊಳ್ಳುವಂತೆ ವಿಮಾನ ಸಿಬ್ಬಂದಿ ಹಲವು ಬಾರಿ ಘೋಷಣೆಗಳನ್ನು ಮಾಡಿದ್ದರು ಎಂದು ಸ್ಪೈಸ್‌ಜೆಟ್ ತಿಳಿಸಿದೆ.

ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, 'ದುರ್ಗಾಪುರದಲ್ಲಿ ಇಳಿಯುವಾಗ ವಿಮಾನ ಅಲುಗಾಡಿದ್ದರಿಂದ ಪ್ರಯಾಣಿಕರಿಗೆ ಹಾನಿಯಾಗಿದೆ. ಇದು ದುರದೃಷ್ಟಕರ. ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣದ ತನಿಖೆಗೆ ಡಿಜಿಸಿಎ ತಂಡವನ್ನು ನಿಯೋಜಿಸಿದೆ' ಎಂದು ಹೇಳಿದ್ದಾರೆ.

ಸ್ಪೈಸ್‌ಜೆಟ್‌ನ ಉಳಿದ ವಿಮಾನಗಳು ಕಾರ್ಯಾಚರಣೆಯಲ್ಲಿವೆ.

ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ಹರ್ಷದಾ ಮುಡಿಗೇರಿದ ಚಿನ್ನ



ಹರ್ಷದಾ –ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಭಾರತದ ಹರ್ಷದಾ ಶರದ್ ಗರುಡ ಸೋಮವಾರ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಚಾಂಪಿಯನ್‌ಷಿಪ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ವೇಟ್‌ಲಿಫ್ಟರ್ ಗೌರವಕ್ಕೆ ಪಾತ್ರರಾದರು.

ಗ್ರೀಸ್‌ನ ಹೆರಾಕ್ಲಿಯನ್‌ನಲ್ಲಿ ಸೋಮವಾರ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಜೂನಿಯರ್ ಮಹಿಳೆಯರ 45 ಕೆ.ಜಿ ವಿಭಾಗದಲ್ಲಿ ಅವರು ಪ್ರಥಮರಾದರು. ಒಟ್ಟು 153 ಕೆ.ಜಿ (ಸ್ನ್ಯಾಚ್ 70ಕೆ.ಜಿ + ಕ್ಲೀನ್ ಮತ್ತು ಜರ್ಕ್ 83ಕೆ.ಜಿ) ಭಾರ ಎತ್ತಿ ಚಿನ್ನದ ಪದಕ ಜಯಿಸಿದರು.

ಟರ್ಕಿಯ ಬೆಕ್ತಾಸ್ ಕೆನ್ಸು (150ಕೆ.ಜಿ) ಬೆಳ್ಳಿ ಮತ್ತು ಮಾಲ್ಡೊವಾದ ಹಿನ್ಸು ಟೆಡೊರಾ ಲುಮಿನಿತಾ (149 ಕೆ.ಜಿ) ಕಂಚು ಗಳಿಸಿದರು. ಈ ವಿಭಾಗದಲ್ಲಿ 2013ರಲ್ಲಿ ಮೀರಾಬಾಯಿ ಚಾನು ಕಂಚು ಮತ್ತು ಹೋದ ವರ್ಷ ಅಚಿಂತಾ ಶೆವುಲಿ ಬೆಳ್ಳಿ ಪದಕ ಜಯಿಸಿದ್ದರು.

ಕುಸ್ತಿ ಟ್ರಯಲ್ಸ್ 6ರಂದು

ಬೆಂಗಳೂರು: 15 ವರ್ಷದೊಳಗಿನ ಬಾಲಕರ, ಬಾಲಕಿಯರ ಮತ್ತು ಗ್ರೀಕೊ ರೋಮನ್ ವಿಭಾಗಗಳಲ್ಲಿ ನಡೆಯುವ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಗಾಗಿ ಇದೇ ಶುಕ್ರವಾರ ಟ್ರಯಲ್ಸ್ ಗದುಗಿನಲ್ಲಿ ನಡೆಯಲಿದೆ.

ಕೆ.ಎಚ್. ಪಾಟೀಲ್ ಕ್ರೀಡಾಂಗಣದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಟ್ರಯಲ್ಸ್ ನಡೆಯಲಿದೆ.ರಾಷ್ಟ್ರೀಯ ಚಾಂಪಿಯನ್‌ಷಿಪ್ ಮೇ 27ರಿಂದ 29ರವರೆಗೆ ಜಾರ್ಖಂಡ್‌ನಲ್ಲಿ ರಾಂಚಿ ಯಲ್ಲಿ ನಿಗದಿಯಾಗಿದೆ.ಹೆಚ್ಚಿನ ಮಾಹಿತಿಗಾಗಿ ಶರಣಗೌಡ ಬೇಲೇರಿ (ಮೊಬೈಲ್ ಸಂಖ್ಯೆ 9632052765) ಅವರನ್ನು ಸಂಪರ್ಕಿಸಲು ಕರ್ನಾಟಕ ಕುಸ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್. ನರಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಫ್‌ಐಎಚ್ ರ‍್ಯಾಂಕಿಂಗ್: ಭಾರತ ತಂಡಗಳ ಜಿಗಿತ

ಭಾರತ ತಂಡದ ನಾಯಕ ಮನ್‌ಪ್ರೀತ್ ಸಿಂಗ್– ಪಿಟಿಐ ಚಿತ್ರ

ಲಾಸೇನ್ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ರ‍್ಯಾಂಕಿಂಗ್‌ನಲ್ಲಿ ಬಡ್ತಿ ಪಡೆದುಕೊಂಡಿವೆ. ಪುರುಷರ ತಂಡ ಮೂರು ಮತ್ತು ಮಹಿಳಾ ತಂಡ ಏಳು ಸ್ಥಾನಗಳ ಏರಿಕೆ ಕಂಡಿದೆ.

ಈಚೆಗೆ ನಡೆದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಪಂದ್ಯಗಳಲ್ಲಿ ಭಾರತ ತಂಡಗಳು ಉತ್ತಮ ಸಾಧನೆ ಮಾಡಿದ್ದವು. ಪುರುಷರ ತಂಡ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ 3–3ರ ಡ್ರಾ ಮತ್ತು 4–3ರ ಜಯ ಸಾಧಿಸಿತ್ತು. ಜರ್ಮನಿ ವಿರುದ್ಧ 3–0 ಹಾಗೂ 3–1ರಿಂದ ಗೆಲುವು ಸಾಧಿಸಿತ್ತು. ಇದು, ನೆದರ್ಲೆಂಡ್ಸ್ ತಂಡವನ್ನು ಹಿಂದಿಕ್ಕಲು ತಂಡಕ್ಕೆ ನೆರವಾಯಿತು. ನೆದರ್ಲೆಂಡ್ಸ್ ನಾಲ್ಕನೇ ಸ್ಥಾನಕ್ಕೆ ಕುಸಿಯಿತು. ಮಲೇಷ್ಯಾ ಎದುರಿನ ಟೆಸ್ಟ್ ಸರಣಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ ಆಸ್ಟ್ರೇಲಿಯಾ ಮೊದಲ ಸ್ಥಾನದಲ್ಲಿ ಮುಂದುವರಿದಿದೆ. ಬೆಲ್ಜಿಯಂ ಎರಡನೇ ಸ್ಥಾನ ಗಳಿಸಿದೆ. ಜರ್ಮನಿ, ಅರ್ಜೆಂಟೀನಾ ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಕ್ರಮವಾಗಿ ಐದು, ಆರು, ಏಳು ಮತ್ತು 8ನೇ ಸ್ಥಾನಗಳಲ್ಲಿವೆ.

ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಅಗ್ರ ಕ್ರಮಾಂಕದ ನೆದರ್ಲೆಂಡ್ಸ್ ವಿರುದ್ಧ ಜಯ ಗಳಿಸಿದ ಭಾರತದ ಮಹಿಳೆಯರ ತಂಡ 7ನೇ ಸ್ಥಾನಕ್ಕೆ ಜಿಗಿದಿದೆ. ಅರ್ಜೆಂಟೀನಾ 2ನೇ ಸ್ಥಾನ ಗಳಿಸಿದ್ದು ಆಸ್ಟ್ರೇಲಿಯಾ 3ನೇ ಸ್ಥಾನದಲ್ಲಿ, ಇಂಗ್ಲೆಂಡ್ ನಾಲ್ಕನೇ ಸ್ಥಾನದಲ್ಲಿದೆ. ಜರ್ಮನಿ ಮತ್ತು ಸ್ಪೇನ್ ಕ್ರಮವಾಗಿ 5 ಮತ್ತು 6ನೇ ಸ್ಥಾನಗಳಲ್ಲಿವೆ.

'ಚೋಪ್ರಾ ತವರೂರಿನಲ್ಲಿ ಕ್ರೀಡಾಂಗಣ'

ಚಂಡೀಗಡ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್ ನೀರಜ್ ಚೋಪ್ರಾ ಅವರ ತವರೂರು ಪಾಣಿಪತ್‌ನ ಖಾಂಡ್ರಾದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದು ಹರಿಯಾಣ ಮುಖ್ಯಮಂತ್ರಿ ಮನೋಹರ್‌ಲಾಲ್ ಖಟ್ಟರ್ ಹೇಳಿದ್ದಾರೆ.

ಪಾಣಿಪತ್‌ನಲ್ಲಿ ಭಾನುವಾರ ಸಹಕಾರಿ ಸಕ್ಕರೆ ಕಾರ್ಖಾನೆಯೊಂದನ್ನು ಉದ್ಘಾಟಿಸಿ ಮಾತನಾಡಿದ ಅವರು, ನೀರಜ್ ಚಿನ್ನ ಗೆಲ್ಲುವ ಮೂಲಕ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ₹ 10 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಿಸಲಾಗುವುದು' ಎಂದು ತಿಳಿಸಿದರು.

ಟಿ20: ಫೈನಲ್‌ಗೆ ಮಹಾರಾಷ್ಟ್ರ

ಸೂರತ್ (ಪಿಟಿಐ): ಯಷ್ಟಿಕಾ ಭಾಟಿಯಾ ಗಳಿಸಿದ ಅರ್ಧಶತಕ (71) ವ್ಯರ್ಥವಾಯಿತು. ಬರೋಡಾ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿದ ಮಹಾರಾಷ್ಟ್ರ ತಂಡ ರಾಷ್ಟ್ರೀಯ ಸೀನಿಯರ್ ಮಹಿಳಾ ಟ್ವೆಂಟಿ–20 ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ಫೈನಲ್‌ನಲ್ಲಿ ರೈಲ್ವೇಸ್ ಅನ್ನು ಮಹಾರಾಷ್ಟ್ರ ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಬರೋಡಾ: 20 ಓವರ್‌ಗಳಲ್ಲಿ 7ಕ್ಕೆ 121 (ಯಷ್ಟಿಕಾ ಭಾಟಿಯಾ 71, ಜೆ. ಮೋಹಿತೆ 22; ಉತ್ಕರ್ಷಾ ಪವಾರ್ 21ಕ್ಕೆ 3, ಎಂ.ಆರ್. ಮಾಗ್ರೆ 32ಕ್ಕೆ 2; ಮಹಾರಾಷ್ಟ್ರ: 19.1 ಓವರ್‌ಗಳಲ್ಲಿ 4ಕ್ಕೆ 125 (ಸ್ಮೃತಿ ಮಂದಾನ 13, ಶಿವಾಲಿ ಶಿಂಧೆ 44, ತೇಜಲ್ ಹಸನ್‌ಬಿಸ್ 33; ಎನ್. ವೈ ಪಟೇಲ್ 23ಕ್ಕೆ 1, ಜೆ. ಮೋಹಿತೆ 12ಕ್ಕೆ 1). ಫಲಿತಾಂಶ: ಮಹಾರಾಷ್ಟ್ರ ತಂಡಕ್ಕೆ ಆರು ವಿಕೆಟ್‌ಗಳ ಜಯ.

ಲಯಕ್ಕೆ ಪೂಜಾರ; ತಂದೆಗೆ ಸಂತಸ

ನವದೆಹಲಿ (ಪಿಟಿಐ): ಸುಮಾರು ಒಂದೂವರೆ ವರ್ಷ ರನ್‌ಗಳ ಬರ ಎದುರಿಸಿದ್ದ ಚೇತೇಶ್ವರ್ ಪೂಜಾರ ಭಾರತ ತಂಡದಿಂದ ಸ್ಥಾನ ಕೂಡ ಕಳೆದುಕೊಂಡಿದ್ದರು. ಆದರೆ ಇಂಗ್ಲಿಷ್ ಕೌಂಟಿಯಲ್ಲಿ ಆಡಿ ತಮ್ಮ ಲಯ ಕಂಡುಕೊಂಡಿದ್ದಾರೆ. ಕೌಂಟಿಯಲ್ಲಿ ಸಸೆಕ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಪೂಜಾರ ಎರಡು ದ್ವಿಶತಕ ಗಳಿಸಿದ್ದಾರೆ.

ಅವರ ಬಾಲ್ಯದ ಕೋಚ್, ತಂದೆ ಅರವಿಂದ್ ಪೂಜಾರ ತಮ್ಮ ಮಗ ಲಯಕ್ಕೆ ಮರಳಿರುವುದರಿಂದ ಸಂತಸಗೊಂಡಿದ್ದಾರೆ. 'ಕಳೆದ 3 ಋತುಗಳಲ್ಲಿ ನಿರಂತರವಾಗಿ ಪಂದ್ಯಗಳು ನಡೆದಿರಲಿಲ್ಲ. ಆದ್ದರಿಂದ ಪೂಜಾರ ಫಾರ್ಮ್‌ನಲ್ಲಿರಲಿಲ್ಲ. ಈಗ ಅವರು ಮತ್ತೆ ಲಯಕ್ಕೆ ಮರಳಿದ್ದಾರೆ' ಎಂದು ಅರವಿಂದ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಾಂಪಿಯನ್ಸ್ ಲೀಗ್: ಪುಟಿದೇಳುವುದೇ ವಿಲಾರಿಯಲ್?

ಬೆಂಗಳೂರು: ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಮೊದಲ ಲೆಗ್‌ನಲ್ಲಿ ಲಿವರ್‌ಪೂಲ್‌ಗೆ ಮಣಿದಿರುವ ವಿಲಾರಿಯಲ್ ಎರಡನೇ ಲೆಗ್‌ನಲ್ಲಿ ತಿರುಗೇಟು ನೀಡುವ ಛಲದಲ್ಲಿದೆ.

ಮೊದಲ ಲೆಗ್‌ನಲ್ಲಿ ಲಿವರ್‌ಪೂಲ್ 2–0ಯಿಂದ ಗೆದ್ದಿತ್ತು. ಫೈನಲ್ ತಲುಪಲು ವಿಲಾರಿಯಲ್ ಈ ಪಂದ್ಯದಲ್ಲಿ 3 ಗೋಲುಗಳ ಅಂತರದಿಂದ ಗೆಲ್ಲಬೇಕಿದೆ. ಮಂಗಳವಾರ ತಡರಾತ್ರಿ ಎರಡನೇ ಲೆಗ್ ಪಂದ್ಯ ನಡೆಯಲಿದೆ.

ಬುಧವಾರ ನಡೆಯುವ ಇನ್ನೊಂದು ಸೆಮಿಫೈನಲ್‌ನ ಎರಡನೇ ಲೆಗ್‌ನಲ್ಲಿ ರಿಯಲ್ ಮ್ಯಾಡ್ರಿಡ್ ಮತ್ತು ಮ್ಯಾಂಚೆಸ್ಟರ್ ಸಿಟಿ ತಂಡಗಳು ಮುಖಾಮುಖಿಯಾಗಲಿವೆ.

ವಿಲಾರಿಯಲ್– ಲಿವರ್‌ಪೂಲ್

ಪಂದ್ಯ ಆರಂಭ: ರಾತ್ರಿ 12.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಸಬೀಲ್ ಹ್ಯಾಟ್ರಿಕ್

ಬೆಂಗಳೂರು: ಸಬೀಲ್ ಅಹಮದ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊಹಮ್ಮಡನ್ 4–0ಯಿಂದ ಆರ್.ಎಸ್. ಸ್ಪೋರ್ಟ್ಸ್ ತಂಡವನ್ನು ಮಣಿಸಿತು. ಸಬೀಲ್ 8, 53 ಮತ್ತು 69ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ರಾಹುಲ್ (25ನೇ ನಿ.) ಕಾಣಿಕೆ ನೀಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಅಸೂಯೆ ಹೊಂದಿರುವ ವ್ಯಕ್ತಿಗಳನ್ನು ಎಂದಿಗೂ ದ್ವೇಷಿಸಬೇಡಿ. ನೀವು ಅವರಿಗಿಂತ ಉತ್ತಮರು ಎಂದು ತಿಳಿದಿರುವುದರಿಂದಲೇ ಅವರು ನಿಮ್ಮ ಬಗ್ಗೆ ಅಸೂಯೆ ಹೊಂದಿರುತ್ತಾರೆ. **-ಗೌತಮ ಬುದ್ಧ**

ಮಾಹಿತಿ ಆಯುಕ್ತರ ನೇಮಕ ಆದೇಶ ಹಿಂಪಡೆದು ತಪ್ಪು ಸರಿಪಡಿಸಿ

ಕರ್ನಾಟಕ ರಾಜ್ಯ ಮಾಹಿತಿ ಆಯೋಗದಲ್ಲಿ ಖಾಲಿ ಇದ್ದ ರಾಜ್ಯ ಮಾಹಿತಿ ಆಯುಕ್ತರ ಮೂರು ಹುದ್ದೆಗಳಿಗೆ ನೇಮಕಾತಿ ಮಾಡಿ ಏಪ್ರಿಲ್ 20ರಂದು ಆದೇಶ ಹೊರಡಿಸಲಾಗಿದೆ. ನಿವೃತ್ತ ಐಎಎಸ್ ಅಧಿಕಾರಿ ಎಸ್.ಬಿ.ಬೊಮ್ಮನಹಳ್ಳಿ, ಉದ್ಯಮಿ ರವೀಂದ್ರ ಗುರುನಾಥ ಢಾಕಪ್ಪ ಮತ್ತು ಸಾರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿ ನಿವೃತ್ತರಾಗಿರುವ ಎಚ್.ಸಿ.ಸತ್ಯನ್ ಅವರನ್ನು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಸತ್ಯನ್ ಅವರು ಸರ್ಕಾರಿ ಅಧಿಕಾರಿಯಾಗಿದ್ದ ಅವಧಿಯಲ್ಲಿ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪ ಎದುರಿಸುತ್ತಿದ್ದಾರೆ. ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಇವರ ವಿರುದ್ಧ ದಾಖಲಿಸಿರುವ ಪ್ರಕರಣ ಮೈಸೂರಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಇನ್ನೂ ವಿಚಾರಣಾ ಹಂತದಲ್ಲಿದೆ. ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವ ಮತ್ತು ಭ್ರಷ್ಟಾಚಾರ ನಿಯಂತ್ರಿಸುವ ಉದ್ದೇಶದಿಂದ ಮಾಹಿತಿ ಹಕ್ಕು ಕಾಯ್ದೆ–2005 ಅನ್ನು 16 ವರ್ಷಗಳ ಹಿಂದೆ ಜಾರಿಗೆ ತರಲಾಗಿದೆ. ಈ ಕಾಯ್ದೆಯ ಅಡಿಯಲ್ಲಿ ಅಸ್ತಿತ್ವಕ್ಕೆ ತಂದಿರುವ ಸ್ವಾಯತ್ತ ಸಂಸ್ಥೆಯಾಗಿರುವ ರಾಜ್ಯ ಮಾಹಿತಿ ಆಯೋಗವು ಸರ್ಕಾರದ ವಿವಿಧ ಇಲಾಖೆಗಳು, ಪ್ರಾಧಿಕಾರಗಳು ಮತ್ತು ಸಂಸ್ಥೆಗಳ ಮಾಹಿತಿಯನ್ನು ಸಾರ್ವಜನಿಕರು ಪಡೆಯುವುದಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ವಿಚಾರಣೆ ನಡೆಸಿ, ಇತ್ಯರ್ಥಪಡಿಸುವ ಅಧಿಕಾರವನ್ನು ಹೊಂದಿದೆ. ಹೆಚ್ಚಿನ ಸಂದರ್ಭಗಳಲ್ಲಿ ಸರ್ಕಾರದ ವಿವಿಧ ಹಂತಗಳಲ್ಲಿ ನಡೆಯುವ ತಪ್ಪುಗಳು, ಅಕ್ರಮಗಳು, ಭ್ರಷ್ಟಾಚಾರ ಮತ್ತು ಅಧಿಕಾರ ದುರ್ಬಳಕೆಗೆ ಸಂಬಂಧಿಸಿ ಮಾಹಿತಿ ಕೋರಿದ ಪ್ರಕರಣಗಳೇ ಮಾಹಿತಿ ಆಯೋಗದ ಮುಂದೆ ಬರುತ್ತವೆ. ಇಂತಹ ಅರ್ಜಿಗಳ ಕುರಿತು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ ತೀರ್ಮಾನ ನೀಡಬೇಕಾದ ಹೊಣೆಗಾರಿಕೆ ಮಾಹಿತಿ ಆಯುಕ್ತರ ಮೇಲಿರುತ್ತದೆ. ಆದರೆ, ಸೇವೆಯಲ್ಲಿರುವಾಗ ಭ್ರಷ್ಟಾಚಾರದ ಮೂಲಕ ಅಕ್ರಮ ಆಸ್ತಿ ಸಂಪಾದಿಸಿರುವ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನು ಮಾಹಿತಿ ಆಯುಕ್ತರನ್ನಾಗಿ ನೇಮಿಸಿರುವ ರಾಜ್ಯ ಸರ್ಕಾರದ ನಡೆಯು ಮಾಹಿತಿ ಹಕ್ಕು ಕಾಯ್ದೆಯ ಮೂಲ ಆಶಯಕ್ಕೆ ತದ್ವಿರುದ್ಧವಾಗಿದೆ. ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಅತಿಯಾದ ಭ್ರಷ್ಟಾಚಾರ ಮತ್ತು ನೇಮಕಾತಿ ಅಕ್ರಮಗಳು ಸರಣಿಯೋಪಾದಿಯಲ್ಲಿ ಹೊರಬರುತ್ತಿರುವಾಗಲೇ ರಾಜ್ಯ ಮಾಹಿತಿ ಆಯುಕ್ತರ ನೇಮಕಾತಿ ಪ್ರಕ್ರಿಯೆ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ.

ಮಾಹಿತಿ ಆಯುಕ್ತರ ಹುದ್ದೆ ಭರ್ತಿಗೆ ನಡೆಸಿದ ಪ್ರಕ್ರಿಯೆಯ ಎಲ್ಲ ದಾಖಲೆಗಳನ್ನೂ ಸರ್ಕಾರ ಬಹಿರಂಗಪಡಿಸಬೇಕು

ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 15ರ ಪ್ರಕಾರ, ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ವ್ಯವಸ್ಥಾಪನೆ, ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ನಿರ್ವಹಣೆ ಮತ್ತು ಆಡಳಿತದಲ್ಲಿ ಆಳವಾದ ಜ್ಞಾನ ಮತ್ತು ಅನುಭವ ಹೊಂದಿರುವುದರೊಂದಿಗೆ ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನ ಗಳಿಸಿರುವಂಥ ವ್ಯಕ್ತಿಗಳನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಮತ್ತು ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗೆ ನೇಮಿಸಲು ಅವಕಾಶವಿದೆ. ಮುಖ್ಯಮಂತ್ರಿ ಅಧ್ಯಕ್ಷರಾಗಿರುವ ನೇಮಕಾತಿ ಸಮಿತಿಯು ಮಾಡುವ ಶಿಫಾರಸುಗಳ ಆಧಾರದಲ್ಲಿ ಇವರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿಯವರಿಂದ ನಾಮನಿರ್ದೇಶಿತರಾಗುವ ಒಬ್ಬ ಸಚಿವರೂ ಈ ಸಮಿತಿಯಲ್ಲಿ ಇರುತ್ತಾರೆ. ಈ ಬಾರಿ ರಾಜ್ಯ ಮಾಹಿತಿ ಆಯುಕ್ತರ ಮೂರು ಹುದ್ದೆಗಳಿಗೆ 186 ಮಂದಿ ಅರ್ಜಿ ಸಲ್ಲಿಸಿದ್ದರು. ಹಿರಿಯ ವಕೀಲರು, ಹಾಲಿ ಮತ್ತು ನಿವೃತ್ತ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳು, ಇತರ ಶ್ರೇಣಿಯ ಅಧಿಕಾರಿಗಳು ಮತ್ತು ಪತ್ರಕರ್ತರು ಅರ್ಜಿದಾರರಲ್ಲಿ ಸೇರಿದ್ದರು. ಅರ್ಜಿದಾರರ ಪೈಕಿ ಕೆಲವರು ಮಾಹಿತಿ ಹಕ್ಕು ಕಾಯ್ದೆಯ ವಿಷಯದಲ್ಲಿ ಆಳವಾದ ಜ್ಞಾನ ಮತ್ತು ಪರಿಣತಿ ಹೊಂದಿದ್ದರು. ಈ ಎಲ್ಲರನ್ನೂ ಕಡೆಗಣಿಸಿ, ಭ್ರಷ್ಟಾಚಾರದ ಆರೋಪದ ಮೇಲೆ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿರುವ ನಿವೃತ್ತ ಅಧಿಕಾರಿಗೆ ಮಣೆ ಹಾಕಿರುವುದು ಆಯ್ಕೆ ಪ್ರಕ್ರಿಯೆಯ ಕುರಿತು ಅನುಮಾನಗಳು ಏಳುವಂತೆ ಮಾಡಿದೆ. ನೇಮಕಾತಿಗೂ ಮೊದಲು ಅಭ್ಯರ್ಥಿಗಳ ಪೂರ್ವಾಪರ ಕುರಿತು ತನ್ನದೇ ಸಂಸ್ಥೆಗಳಿಂದ ಸರ್ಕಾರವು ಸರಿಯಾದ ಮಾಹಿತಿ ಪಡೆದಿಲ್ಲವೇ? ಈ ವಿಚಾರದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರು ತಮ್ಮ ವಿರೋಧವನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ದಾಖಲಿಸಿದ್ದರೇ ಎಂಬುದು ಇನ್ನೂ ಖಚಿತವಾಗಿಲ್ಲ.

ಹಿಂದೆ ನಡೆದ ರಾಜ್ಯ ಮಾಹಿತಿ ಆಯುಕ್ತರ ನೇಮಕಾತಿಯನ್ನು ಪ್ರಶ್ನಿಸಿರುವ ಅರ್ಜಿಗಳು ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ವಿಚಾರಣೆಗೆ ಬಾಕಿ ಇವೆ. ಮಾಹಿತಿ ಆಯುಕ್ತರ ಹುದ್ದೆ ನೇಮಕಾತಿಯಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಕೆಲವು ಅಭ್ಯರ್ಥಿಗಳು ಆರೋಪಿಸಿದ್ದಾರೆ. ಈಗ ಕಳಂಕಿತರನ್ನೇ ಮಾಹಿತಿ ಆಯುಕ್ತರ ಹುದ್ದೆಯಲ್ಲಿ ಮುಂದುವರಿಸುವುದರಿಂದ ಆಯೋಗದ ಗೌರವಕ್ಕೆ ಧಕ್ಕೆಯಾಗುತ್ತದೆ. ರಾಜ್ಯ ಸರ್ಕಾರವು ಸತ್ಯನ್ ಅವರ ನೇಮಕಾತಿಯನ್ನು ರದ್ದುಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಬೇಕು. 2019ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನದಂತೆ, ರಾಜ್ಯ ಸರ್ಕಾರವು ಮಾಹಿತಿ ಆಯುಕ್ತರ ಹುದ್ದೆ ಭರ್ತಿಗೆ ನಡೆಸಿದ ಪ್ರಕ್ರಿಯೆಯ ಎಲ್ಲ ದಾಖಲೆಗಳನ್ನೂ ಬಹಿರಂಗಪಡಿಸಬೇಕು. ಅಭ್ಯರ್ಥಿಗಳ ವಿವರ, ಆಯ್ಕೆಪಟ್ಟಿ ಸಿದ್ಧಪಡಿಸಲು ನಿಗದಿಪಡಿಸಿದ್ದ ಅರ್ಹತಾ ಮಾನದಂಡ, ಆಯ್ಕೆ ಸಮಿತಿಯ ನಡಾವಳಿ ಹಾಗೂ ಈ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಾರಣ ಸೇರಿದಂತೆ ಎಲ್ಲ ದಾಖಲೆಗಳನ್ನೂ ಸಾರ್ವಜನಿಕರ ಎದುರು ತೆರೆದಿಡಬೇಕು. ಮಾಹಿತಿ ಆಯುಕ್ತರ ಹುದ್ದೆಗಳ ಭರ್ತಿಗೆ ನೇಮಕಾತಿ ಮಾಡುವಾಗ ಅರ್ಹತೆಯ ಜತೆಯಲ್ಲಿ ಅಭ್ಯರ್ಥಿಯ ಪೂರ್ವಾಪರವನ್ನೂ ಪರಿಗಣಿಸಬೇಕು. ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಬದ್ಧತೆಯನ್ನು ಉತ್ತೇಜಿಸಬಲ್ಲ ಹಿನ್ನೆಲೆ ಹೊಂದಿರುವ ವ್ಯಕ್ತಿಗಳಿಗೇ ಅವಕಾಶ ನೀಡಬೇಕು.

ದಿನದ ಟ್ವೀಟ್

ಸಾಂಕೇತಿಕವಾಗಿರುವುದೂ ಮುಖ್ಯ

‘ಒರಿಜಿನಲ್’ ಹಿಂದುತ್ವ ಪಕ್ಷವು ಪುಣೆ ನಗರದಾದ್ಯಂತ ಈದ್ ಮುಬಾರಕ್ ಪೋಸ್ಟರ್‌ಗಳನ್ನು ಹಾಕಿದೆ. ಒಳ್ಳೆಯದು. ಇದು ಸಾಂಕೇತಿಕ ಮಾತ್ರ ಆಗಿರಬಹುದು. ಆದರೂ, ಇಂದಿನ ಸಂದರ್ಭದಲ್ಲಿ ಸಾಂಕೇತಿಕವಾಗಿರುವುದೂ ಮುಖ್ಯ. ಭಾರತದ ಅನನ್ಯತೆಯನ್ನು ಸೌಹಾರ್ದದ ಆಧಾರದಲ್ಲಿ ಕಟ್ಟಲಾಗಿದೆ, ದ್ವೇಷದ ಆಧಾರದಲ್ಲಿ ಅಲ್ಲ ಎಂಬುದನ್ನು ನೆನಪಿಸುತ್ತಿದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕೇರಳದಲ್ಲಿ ನಾಲ್ವರು ಹುಡುಗರ ಮೇಲೆ 2017ರಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದ ಪಾದ್ರಿ ಫಾದರ್ ಥಾಮಸ್ ಪರೆಕ್ಕುಲಂ ಅವರಿಗೆ ಕೋರ್ಟ್ 18 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಹುಡುಗರು/ಪುರುಷರ ಮೇಲೆ ಲೈಂಗಿಕ ದೌರ್ಜನ್ಯ, ನಕಲಿ ವರದಕ್ಷಿಣೆ ಕಿರುಕುಳ ಹಾಗೂ ಸುಳ್ಳು ಅತ್ಯಾಚಾರ ಆರೋಪ ಪ್ರಕರಣಗಳು ಹೆಚ್ಚುತ್ತಿವೆ. ಭಾರತಕ್ಕೆ ರಾಷ್ಟ್ರೀಯ ಪುರುಷರ ಆಯೋಗದ ಅಗತ್ಯ ಇರುವುದನ್ನು ಸರ್ಕಾರ ಅರಿಯುವುದು ಯಾವಾಗ?

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

25 ವರ್ಷಗಳ ಹಿಂದೆ

ಶನಿವಾರ, 3-5-1997

• ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗಕ್ಕೆ ಒಪ್ಪಿಗೆ

ನವದೆಹಲಿ, ಮೇ 2– ಹುಬ್ಬಳ್ಳಿ- ಅಂಕೋಲಾ ನೂತನ ರೈಲು ಮಾರ್ಗಕ್ಕೆ ಯೋಜನಾ ಆಯೋಗದ ಒಪ್ಪಿಗೆ ದೊರೆತಿದ್ದು, ಅದರ ಕಾಮಗಾರಿಯನ್ನು ಪ್ರಸ್ತುತ ವರ್ಷವೇ ಕೈಗೆತ್ತಿಕೊಳ್ಳುವುದಾಗಿ ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಲೋಕಸಭೆಗೆ ತಿಳಿಸಿದರು.

1997-98ರ ರೈಲ್ವೆ ಬಜೆಟ್ ಇಂದು ಲೋಕಸಭೆಯಲ್ಲಿ ಮಂಜೂರಾಯಿತು. ಬಜೆಟ್‌ನ ಪ್ರಸ್ತಾವಗಳನ್ನು ಸ್ಥಾಯಿ ಸಮಿತಿ ಪರಿಶೀಲಿಸಿದ ನಂತರ ಮತ್ತೆ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಸಚಿವ ಪಾಸ್ವಾನ್ ಅವರು ಸುಮಾರು ಎರಡೂ ಮುಕ್ಕಾಲು ಗಂಟೆಗಳ ಕಾಲ ಸುದೀರ್ಘ ಉತ್ತರ ನೀಡಿದರು. ಬೆಂಗಳೂರು- ಸತ್ಯಮಂಗಲ, ಮುನಿರಾಬಾದ್- ಮೆಹಬೂಬ್‌ನಗರ, ಹುಬ್ಬಳ್ಳಿ- ಅಂಕೋಲಾ ನೂತನ ರೈಲು ಮಾರ್ಗಗಳ ನಿರ್ಮಾಣ ಯೋಜನೆಗಳನ್ನು ಯೋಜನಾ ಆಯೋಗದ ಒಪ್ಪಿಗೆ ದೊರೆತ ಕೂಡಲೇ ಕೈಗೆತ್ತಿಕೊಳ್ಳುವುದಾಗಿ ರೈಲ್ವೆ ಸಚಿವರು ಭರವಸೆ ನೀಡಿದರು.

50 ವರ್ಷಗಳ ಹಿಂದೆ

ಬುಧವಾರ, 3-5-1972

• ಶಾಲೆಗಳಲ್ಲಿ ಜಾತಿ ಪ್ರಚಾರ ನಿಗ್ರಹಕ್ಕೆ ಕ್ರಮ

ನವದೆಹಲಿ, ಮೇ 2–‘ಶಿಕ್ಷಣ ಸಂಸ್ಥೆಗಳಲ್ಲಿ ಕೋಮು ಸ್ವರೂಪದ ಚಟುವಟಿಕೆಗಳ ಬಗೆಗೆ ವಿಚಾರಣೆ ನಡೆಸಲು ಒಂದು ಸಮಿತಿ ನೇಮಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ’ ಎಂದು ಶಿಕ್ಷಣ ಖಾತೆ ಉಪಸಚಿವ ಡಿ.ಪಿ. ಯಾದವ್ ಅವರು ಇಂದು ಲೋಕಸಭೆಗೆ ತಿಳಿಸಿದರು.

‘ರಾಷ್ಟ್ರದ ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಭಾವ ಮತ್ತು ಕೋಮು ಪ್ರಚಾರ ತಡೆಗಟ್ಟಲು ಸರ್ಕಾರ ಯಾವುದಾದರೂ ಯೋಜನೆ ರೂಪಿಸಿದೆಯೇ’ ಎಂದು ರಾಮಾವತಾರ ಶಾಸ್ತ್ರಿ ಅವರು ಕೇಳಿದ್ದರು.

‘ಆರ್.ಎಸ್.ಎಸ್. ಸೇರಿದಂತೆ ಕೋಮುವಾರು ಚಟುವಟಿಕೆಗಳಲ್ಲಿ ತೊಡಗಿರುವ ಯಾವುದೇ ಸಂಸ್ಥೆಗೂ ನೆರವು ಕೊಡಬಾರದೆಂಬುದು ಸರ್ಕಾರದ ನೀತಿ’ ಎಂದು ಯಾದವ್ ತಿಳಿಸಿದರು.

• ಅಣ್ವಸ್ತ್ರ ತಯಾರಿಸುವ ಯೋಜನೆ ಕೈಬಿಟ್ಟಿಲ್ಲ: ಸಚಿವ ರಾಮ್ ವಿವರಣೆ

ನವದೆಹಲಿ, ಮೇ 2– ಭಾರತದ ಅಣ್ವಸ್ತ್ರ ನೀತಿಯಲ್ಲಿ ಬದಲಾವಣೆಗೆ ಅಂತರರಾಷ್ಟ್ರೀಯ ವಿದ್ಯಮಾನಗಳು ಒತ್ತಾಯಪಡಿಸುತ್ತಿವೆ ಎಂದು ತಾವು ಭಾವಿಸುವುದಿಲ್ಲವಾದರೂ ಅಣ್ವಸ್ತ್ರ ತಯಾರಿಕೆ ಯೋಚನೆಯನ್ನು ಸರ್ಕಾರ ಕೈಬಿಟ್ಟಿಲ್ಲವೆಂದು ರಕ್ಷಣಾ ಸಚಿವ ಜಗಜೀವನ ರಾಮ್ ಲೋಕಸಭೆಯಲ್ಲಿ ಹೇಳಿದರು.

ನಿಧಾನಗತಿಯಲ್ಲಾಗುವ ಕಡಲಕೊರೆತದ ನಿರ್ವಹಣೆಗೆ ಪ್ರಾಶಸ್ತ್ಯ ಸಿಗುವುದೂ ನಿಧಾನವಾಗುತ್ತಿದೆ

ಕಡಲಕೊರೆತ: ನಮ್ಮ ಪಾಲೆಷ್ಟು?

ವಿಶ್ಲೇಷಣೆ

ಟಿ.ಆರ್.ಅನಂತರಾಮು

ನೈಸರ್ಗಿಕ ವಿಕೋಪ ಎಂದೊಡನೆ ಥಟ್ಟನೆ ಕಣ್ಣಮುಂದೆ ಬರುವುದು ಅತಿವೃಷ್ಟಿ, ಅನಾವೃಷ್ಟಿ, ಬರ, ಪ್ರವಾಹ, ಚಂಡಮಾರುತ, ಭೂಕುಸಿತ, ಭೂಕಂಪ ಇತ್ಯಾದಿ. ಇವು ಇಡೀ ಭೂಮಿಯ ಎಲ್ಲ ಖಂಡಗಳನ್ನೂ ಪೀಡಿಸುತ್ತಿವೆ. ಕೆಲವಕ್ಕೆ ಹೊಡೆತ ಹೆಚ್ಚು, ಕೆಲವಕ್ಕೆ ಕಡಿಮೆ.

ಸಾಮಾನ್ಯವಾಗಿ ಈ ಪಟ್ಟಿಗೆ ಸೇರಿಸದ, ಆದರೆ ದೊಡ್ಡ ಸಮಸ್ಯೆಯಾಗಿಯೇ ತಲೆದೋರಿರುವ ಮತ್ತೊಂದು ವಿಕೋಪ ಕಡಲಕೊರೆತ. ಇದರ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಮೌಲ್ಯಮಾಪನ ಹೆಚ್ಚು ನಡೆದಿಲ್ಲ. ಸಮುದ್ರ ತೀರದಲ್ಲಿರುವ ಎಲ್ಲ ಭೂಭಾಗಗಳೂ ಕೊರೆತ ಅನುಭವಿಸುತ್ತವೆ. ಆದರೆ ಪರಿಹಾರದ ಪ್ರಶ್ನೆ ಬಂದಾಗ ಕಡಲಕೊರೆತದಿಂದ ಭೂಮಿಯಷ್ಟೇ ನಷ್ಟವಾಗುತ್ತದೆ, ಜೀವಹಾನಿ ಕಡಿಮೆ ಎಂಬ ನಿಲುವನ್ನು ಇತರ ದೇಶಗಳಂತೆ ನಮ್ಮ ದೇಶವೂ ತಳೆದಿದೆ. ಹೀಗಾಗಿ ಪ್ರವಾಹಪೀಡಿತರಿಗೆ ಸಿಕ್ಕುವ ಪರಿಹಾರವು ಕಡಲಕೊರೆತದ ಪರಿಣಾಮ ಎದುರಿಸುವ ಸಮುದಾಯಕ್ಕೆ ಎಂದೂ ಸಿಕ್ಕುವುದಿಲ್ಲ. ಜೊತೆಗೆ ಇದು ಪ್ರವಾಹದಂತೆ ಥಟ್ಟನೆ ಕಾಣಿಸಿಕೊಳ್ಳುವ ವಿದ್ಯಮಾನವಲ್ಲ, ಬಲು ನಿಧಾನಗತಿಯದು.

ಕಡಲಕೊರೆತ ಅನುಭವಿಸುತ್ತಿರುವ ದೇಶಗಳಲ್ಲಿ ಭಾರತವೂ ಸೇರಿದೆ. ಭೌಗೋಳಿಕವಾಗಿ ತ್ರಿಕೋನಾಕಾರದಲ್ಲಿರುವ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಒಟ್ಟು ಉದ್ದ 6,907 ಕಿಲೊಮೀಟರು. ಎರಡೂ ತೀರಗಳು ಕೊರೆತಕ್ಕೆ ಒಡ್ಡಿಕೊಂಡಿದ್ದರೂ ಪೂರ್ವ ಕರಾವಳಿಯಲ್ಲಿ ಇದರ ದಾಂದಲೆ ಹೆಚ್ಚು. ಏಕೆಂದರೆ ಭಾರತದ ಮಟ್ಟಿಗೆ ಸುನಾಮಿ ಮತ್ತು ಚಂಡಮಾರುತಗಳು ಹೆಚ್ಚು ಏಳುವುದು ಬಂಗಾಳಕೊಲ್ಲಿಯಲ್ಲಿ. ವರ್ಷಕ್ಕೆ ಕನಿಷ್ಠ ನಾಲ್ಕು ಚಂಡಮಾರುತಗಳನ್ನು ಈ ಭಾಗ ಎದುರಿಸುತ್ತಿದೆ. ಇದೊಂದು ಗಂಭೀರ ಸಮಸ್ಯೆ ಎಂಬುದು ಸಂಶೋಧನಾ ಸಂಸ್ಥೆಗಳಿಗೂ ಗೊತ್ತು, ಸರ್ಕಾರಕ್ಕೂ ಗೊತ್ತು.

ಭೂವಿಜ್ಞಾನ ಸಚಿವಾಲಯದಡಿ ಕೆಲಸ ಮಾಡುವ ರಾಷ್ಟ್ರೀಯ ಕಡಲ ಸಂಶೋಧನಾ ಕೇಂದ್ರ ನಾಲ್ಕು ವರ್ಷಗಳ ಹಿಂದೆ ಮಾಡಿದ ಸಂಶೋಧನೆ ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಸರ್ಕಾರ ಕೂಡ ಇದರತ್ತ ಗಮನ ಹರಿಸುವಂತೆ ಮಾಡಿದ್ದು ಇತ್ತೀಚೆಗಷ್ಟೇ ಲೋಕಸಭೆಯಲ್ಲಿ ಎತ್ತಿದ ಒಂದು ಪ್ರಶ್ನೆ: ‘ಕಡಲ ಕೊರೆತಕ್ಕೆ ಸರ್ಕಾರ ಕೊಡುತ್ತಿರುವ ಪರಿಹಾರ ಏನು?’

ರಾಷ್ಟ್ರೀಯ ಕಡಲ ಸಂಶೋಧನಾ ಕೇಂದ್ರವು ಉಪಗ್ರಹಗಳು ತೆಗೆದ ಛಾಯಾಚಿತ್ರಗಳು ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಿಕೊಂಡು 1990ರಿಂದಲೂ ಕಡಲಕೊರೆತದ ಬಗ್ಗೆ ಗಾಢ ಸಂಶೋಧನೆ ಮಾಡುತ್ತಿದೆ. ಭಾರತದ ಕಡಲತೀರದ ಶೇ 34ರಷ್ಟು ಭಾಗ ಕೊರೆತದ ಬೇರೆ ಬೇರೆ ತೀವ್ರತೆಯನ್ನು ಅನುಭವಿಸುತ್ತಿದೆ. 1990- 2016ರ ನಡುವೆ ಭಾರತದ ಸುಮಾರು 235 ಚದರ ಕಿಲೊಮೀಟರ್ ಭೂಭಾಗವನ್ನು ಅಲೆಗಳು ಕೊಚ್ಚಿಹಾಕಿವೆ. ಅಂದರೆ ಭೋಪಾಲ್ ನಗರದ ಅರ್ಧದಷ್ಟು. ಕಾರವಾರ, ಪುದುಚೇರಿ ಸುತ್ತ ಅಲೆಗಳು ಕಡಲ ತೀರವನ್ನು ಕೊಚ್ಚಿ ಹಾಕುತ್ತಿರುವುದನ್ನು ಉಪಗ್ರಹಗಳು ತೋರಿಸಿಕೊಟ್ಟಿವೆ. ಅದರಲ್ಲೂ ಪಶ್ಚಿಮ ಬಂಗಾಳದ ಸುಮಾರು 534 ಕಿಲೊಮೀಟರ್ ಉದ್ದದ ಕಡಲಿನಲ್ಲಿ 320 ಮೀಟರ್ ತೀರವು ಕಡಲ ಅಲೆಗಳ ಗುದ್ದಾಟದಿಂದ ಸಾಗರದ ಪಾಲಾಗಿದೆ.

ಸುಮಾರು 320 ಕಿಲೊಮೀಟರ್ ಉದ್ದವಿರುವ ಕರ್ನಾಟಕದ ಕಡಲ ತೀರವು ಕೊರೆತದಿಂದ ಮುಕ್ತವಾಗಿಲ್ಲ. ಮಂಗಳೂರು ವಿಶ್ವವಿದ್ಯಾಲಯದ ಸಾಗರ ಭೂವಿಜ್ಞಾನ ವಿಭಾಗ ಮತ್ತು ಗೋವಾ ರಾಷ್ಟ್ರೀಯ ಸಾಗರಾಧ್ಯಯನ ಸಂಸ್ಥೆ ಮಾಡಿದ ಸಮೀಕ್ಷೆಯಿಂದ, ಉತ್ತರ ಕನ್ನಡ ಜಿಲ್ಲೆಯ ಭಾವಿಕೇರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳವು ಕಡಲಕೊರೆತದಿಂದ ಪ್ರತಿವರ್ಷ ಸುಮಾರು ಒಂದೂವರೆ ಮೀಟರು ತೀರವನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತಿವೆ ಎಂಬುದು ದೃಢಪಟ್ಟಿದೆ. ಅದರಲ್ಲೂ ಉಲ್ಲಾಳದಲ್ಲಿ ಊರೇ ಅಪಾಯಕ್ಕೆ ಸಿಲುಕಿತ್ತು. ಅಲೆ ತಡೆಯಲು 2.50 ಮೀಟರ್ ಸಮುದ್ರ ಗೋಡೆ ಏಳಿಸಿದ ಮೇಲೆ ಕೊರೆತಕ್ಕೆ ತಾತ್ಕಾಲಿಕ ತಡೆಯಾಗಿದೆ. ಆದರೆ ಸಾಗರದ ಅಲೆಗಳಿಗೆ ಇದನ್ನೂ ಹೈಜಂಪ್ ಮಾಡುವ ಕಲೆ ಗೊತ್ತು. ವಿಶ್ವಸಂಸ್ಥೆಯ ಹವಾಗುಣ ಬದಲಾವಣೆ ಕುರಿತ ಇಂಟರ್‌ಗವರ್ನಮೆಂಟಲ್ ಪ್ಯಾನಲ್ (ಐಪಿಸಿಸಿ) ಅದನ್ನೇ ಪುನರುಚ್ಚರಿಸಿದೆ. ಅಲೆಗಳ ವಿರುದ್ಧ ಕಟ್ಟುವ ಯಾವುದೇ ಗೋಡೆಯು ರಕ್ಷಣೆಯ ಹುಸಿ ಭರವಸೆ ಕೊಡುತ್ತದೆ ಅಷ್ಟೇ, ಶಾಶ್ವತ ಪರಿಹಾರವನ್ನಲ್ಲ. ಏಕೆಂದರೆ ಭೂಉಷ್ಣತೆ ಏರುತ್ತಿರುವುದರಿಂದ ಸಾಗರ ಉಬ್ಬುತ್ತಿದೆ, ಅಲೆಗಳ ತೀವ್ರತೆ ಹೆಚ್ಚುತ್ತಿದೆ. ಇದರಲ್ಲಿ ನಿಸರ್ಗವನ್ನು ದೂಷಿಸುವುದು ಏನೂ ಇಲ್ಲ, ಇದೆಲ್ಲ ಮಾನವಕೃತ ಎಂದು ಸಾರಿದೆ.

ಮಂಗಳೂರಿನ ಹಳೆಯ ಬಂದರನ್ನು ನಿರ್ಮಿಸುವಾಗಲೇ ಅಲೆಗಳು ಬಡಿಯದಂತೆ ಅಡ್ಡಡ್ಡವಾಗಿ ತಡೆಯನ್ನು ಎಬ್ಬಿಸಲಾಗಿತ್ತು. ಬಂದರೇನೋ ಉಳಿಯಿತು, ಆದರೆ ಅಲೆಗಳ ಅಬ್ಬರ ಉಲ್ಲಾಳ ಭಾಗದಲ್ಲಿ ಹೆಚ್ಚಾಯಿತು ಎನ್ನುವುದು ಸಮೀಕ್ಷೆಗಳು ತಿಳಿಸುವ ಅಂಶ. ಒಂದೆಡೆ ತೀರದ ಮರಳನ್ನು ದೋಚುವುದು, ಇನ್ನೊಂದೆಡೆ ನದಿಗೆ ಅಣೆಕಟ್ಟು ಕಟ್ಟಿ ಹರಿವನ್ನು ನಿಯಂತ್ರಿಸುವುದು ಅಲೆಗಳು ತೀರವನ್ನು ಕೊಚ್ಚಲು ಕಾರಣ ಎಂಬುದು ಸಾಬೀತಾಗಿರುವ ಸಂಗತಿ.

‘ಟೌಕ್ಟೇ’ ಚಂಡಮಾರುತವು ಪಶ್ಚಿಮ ಕರಾವಳಿಯಲ್ಲಿ ಮಾಡಿದ ಕೊರೆತದಿಂದಾಗಿ ಸುಮಾರು ಒಂಬತ್ತು ಕಿಲೊಮೀಟರು ಉದ್ದದ ತೀರ ಗಾಸಿಯಾಯಿತು. ಆದ ನಷ್ಟ ₹ 90 ಕೋಟಿ ಎಂದು ಹೇಳಿದರೂ ಅದು ಕಡಿಮೆ ಅಂದಾಜು. ಅತ್ತ ಬಂಗಾಳ ಕೊಲ್ಲಿಯ ಸುಂದರಬನ್ ದ್ವೀಪವು ಕಾಂಡ್ಲಾ ವನಗಳಿಗೆ ಹೆಸರುವಾಸಿ. ಸಮುದ್ರ ಮಟ್ಟದಿಂದ ಕೇವಲ ಐದು ಮೀಟರ್ ಎತ್ತರವಿದೆ. ಬಂಗಾಳ ಹುಲಿಗಳಿಗೆ ಏಕೈಕ ಆವಾಸ. ಪಶ್ಚಿಮ ಬಂಗಾಳ- ಬಾಂಗ್ಲಾ ನಡುವೆ ಇದು ಹಂಚಿಕೆಯಾಗಿದೆ. ಕಳೆದ 20 ವರ್ಷಗಳಲ್ಲಿ ಚಂಡಮಾರುತದಿಂದಾಗಿ ಸುಮಾರು 137 ಚದರ ಮೀಟರ್ ವಿಸ್ತೀರ್ಣವನ್ನು ಕಳೆದುಕೊಂಡಿದೆ. ಇಲ್ಲಿ ಅಲೆಗಳದ್ದೇ ಅಬ್ಬರ. ಒಡಿಶಾದ ಗಂಜಾಂ ಜಿಲ್ಲೆಯ ತೀರದಲ್ಲಿ ಮೀನುಗಾರರ ವಸಾಹತುಗಳನ್ನು ಮೂಲ ನೆಲೆಯಿಂದ 300 ಮೀಟರ್ ಆಚೆಗೆ ವಿಸ್ತರಿಸಬೇಕಾಯಿತು. ಭಾರತದ ಕಡಲ ತೀರದ ಭಾಗಗಳಲ್ಲಿ 42 ಕೋಟಿ ಜನ ವಾಸಿಸುತ್ತಿದ್ದಾರೆ ಎಂಬುದನ್ನು ಮರೆಮಾಚಲಾಗದು.

ವಿಚಿತ್ರವೆಂದರೆ, ಕಡಲ ಕೊರೆತವನ್ನು ನೈಸರ್ಗಿಕ ವಿಕೋಪಗಳ ಪಟ್ಟಿಗೆ ಸೇರಿಸಿಲ್ಲ. ಹೀಗಾಗಿ ಪರಿಹಾರದ ಪ್ರಶ್ನೆ ಬಂದಾಗ, ಯಾವ ಮೂಲದಿಂದ ಕೊಡಬೇಕು ಎಂಬುದರ ಬಗ್ಗೆಯೂ ಸರ್ಕಾರ ನಿರ್ದಿಷ್ಟ ಸೂಚನೆ ಕೊಟ್ಟಿಲ್ಲ. ಭೂಪಾತವಾಗಿ ಜಮೀನನ್ನು ಕಳೆದುಕೊಂಡರೆ ಸರ್ಕಾರ ಎಕರೆಗೆ ₹ 37,500 ಪರಿಹಾರ ಕೊಡುತ್ತದೆ. ಇನ್ನು ನೈಸರ್ಗಿಕ ವಿಕೋಪಗಳಿಗೆ ಬಲಿಯಾದ ಜನರಿಗೆ ಅದಕ್ಕೆಂದೇ ಸ್ಥಾಪಿಸಿರುವ ನಿಧಿ ಇದೆ, ಕೊಡಲು ಅಡ್ಡಿಯಿಲ್ಲ. ಹಾಗೆಂದು ಕಡಲಕೊರೆತದ ಬಗ್ಗೆ ಸರ್ಕಾರ ನಿಗಾ ಇಟ್ಟಿಲ್ಲವೆಂದಲ್ಲ. ಪರಿಸರ ಸಚಿವಾಲಯದಡಿ ಸುಸ್ಥಿರ ಕಡಲ ತೀರದ ನಿರ್ವಹಣಾ ಕೇಂದ್ರವಿದೆ. ಹಾಗೆಯೇ ಜಲಶಕ್ತಿ ಸಚಿವಾಲಯದಡಿ ಕೇಂದ್ರೀಯ ಜಲ ನಿಗಮವಿದೆ. ಇವು ಕಡಲ ತೀರದ ಕೊರೆತ, ಜಲದ ಗುಣಮಟ್ಟ ಮುಂತಾದವುಗಳ ಕುರಿತು ವರದಿ ನೀಡುತ್ತವೆ. ಕಡಲ ತೀರದ ಅಭಿವೃದ್ಧಿಯನ್ನು ನೋಡಿಕೊಳ್ಳಲು ನಿರ್ವಹಣಾ ಕಾನೂನೇ ಇದೆ. ಇಷ್ಟಿದ್ದರೂ ಕಡಲಕೊರೆತದ ಸಮಸ್ಯೆಗೆ ಸಿಕ್ಕಬೇಕಾದ ಪ್ರಾಶಸ್ತ್ಯ ಸಿಕ್ಕಿಲ್ಲ.

ಹದಿನೈದನೇ ಆರ್ಥಿಕ ಆಯೋಗ ಇದನ್ನು ಗಮನಿಸಿತ್ತು. ಹೀಗಾಗಿ ರಾಷ್ಟ್ರೀಯ ವಿಕೋಪ ನಿರ್ವಹಣಾ ನಿಧಿಯಲ್ಲಿ ಈ ಬಾಬತ್ತಿಗೆ ₹ 300 ಕೋಟಿ ತೆಗೆದಿಡಿ ಎಂದು ಸರ್ಕಾರಕ್ಕೆ ಆದೇಶಿಸಿದೆ. ಏಕೆಂದರೆ ಕೇಂದ್ರ ಸರ್ಕಾರದ ಅನುದಾನವನ್ನು ಆಧರಿಸಿ, ರಾಜ್ಯ ಸರ್ಕಾರದಲ್ಲೂ ಈ ನಿಧಿಯನ್ನು ಸ್ಥಾಪಿಸಲಾಗಿದೆ. ಆದರೆ ಇದು ಶಿಫಾರಸೇ ವಿನಾ ಇದಕ್ಕಾಗಿ ಕಾನೂನುಗಳನ್ನು ರೂಪಿಸಿಲ್ಲ.

ಬೇರೆ ವಿಕೋಪಗಳಂತೆ ಜನ, ಜಾನುವಾರು, ಆಸ್ತಿಪಾಸ್ತಿಯ ನಷ್ಟ ಒಡನೆಯೇ ಕಣ್ಣಿಗೆ ಕಾಣುವಂತಿದ್ದರೆ ಸರ್ಕಾರವೂ ತ್ವರಿತವಾಗಿ ಕಡಲಕೊರೆತದ ನಿರ್ವಹಣೆ ಕುರಿತು ಕಾಯ್ದೆ ರೂಪಿಸುತ್ತಿತ್ತೋ ಏನೋ.

ಚುರುಮುರಿ



ಅಕ್ಷಯ ತೃತೀಯ

• ಲಿಂಗರಾಜು ಡಿ.ಎಸ್.

‘ಸಾ, ಅಕ್ಷಯ ತೃತೀಯ ಅಂತ ಚಿನ್ನದ ಅಂಗಡೀಲಿ ನೂಕುನುಗ್ಗಲಂತೆ!’ ತುರೇಮಣೆಗೆ ಸುದ್ದಿ ಮುಟ್ಟಿಸಿದೆ.

‘ಅಯ್ಯೋ ಬೊಡ್ಡಿಹೈದ್ರಾ, ಲಕ್ಷಗಟ್ಟಲೇ ಕಾಸು ಕೊಟ್ಟು ಗ್ರಾಮು ಚಿನ್ನ ತಕ್ಕೊಳ್ಳ ಕೋಯ್ತಾವ್ರ? ನಮ್ಮ ಕಾಲದೇಲಿ ಇವೆಲ್ಲಾ ಇರನೇ ಇಲ್ಲ. ಬಸವಣ್ಣೋರ ಸ್ಮರಣೆ ಮಾಡಿಕ್ಯತಿದ್ದೋ’ ಅಂದರು.

‘ಈವತ್ತು ತಕ್ಕಂದಿದ್ದಲ್ಲಾ ಡಬಲ್ಲಾಯ್ತದೆ ಅಂದವ್ರೆ ಟೀವಿ ಗುರುಗಳು!’ ನನ್ನ ಬುದ್ಧಿವಂತಿಕೆ ತೋರಿಸಿದೆ.

‘ದಿಟ ಕಲಾ. ಒಳ್ಳೇದೆಲ್ಲಾ ಉಳ್ಳೋರಿಗೆ ಹೋಯ್ತದೆ, ಕೆಟ್ಟುವೆಲ್ಲಾ ಎರಡು ಪಟ್ಟಾಗಿ ಜನದ ಹೆಗಲೇರ್ತವೆ’ ಅಂದ್ರು.

‘ಅದೇನೋ ಅರ್ಥಾಗದಂಗೆ ಹೇಳ್ತವ್ನೆ!’ ಯಂಟಪ್ಪಣ್ಣನಿಗೆ ಕನ್‌ಫ್ಯೂಸ್ ಆಯ್ತು.

‘ತಿಂಗಳಿಗೆರಡು ಹಗರಣ ಬಯಲಾದ್ರೂ ರಾಜಕೀಯದೋವು ಅದು ನಾವಲ್ಲ, ಅದು ನಾವಲ್ಲ ಅಂತ ಅಡ್ಡಗ್ಯಾನ ಮಾಡ್ಕಂಡು ಮುಂದ್ಲ ಗಾಳಿಗಂಟಲಿಗೆ ರೆಡಿಯಾಯ್ತವೆ! ತಮ್ಮ ಹೆಸರು ಆಚೆಗೆ ಕಡದದೇನೋ ಅಂತ ಸೀನಿಯರ್ ಸರ್ ಚಿಂತೆ! ನಾವು 20 ಪರ್ಸೆಂಟು ಕಡಿತದ ಜಾಹೀರಾತಿಗೆ ಮರುಳಾದ್ರೆ ಯಾರೂ ನಮ್ಮ ಬೆನ್ನು ಕೆರೆಯಕೆ ಬರಂಗಿಲ್ಲ. ನಾವೇ ಕೆರಕಬಕು ಕಪ್ಪಾ!’ ಅಂದ್ರು ತುರೇಮಣೆ.

‘ಹಂಗಾದ್ರೆ ನಮ್ಮ ಗತಿ?’ ಅಂತ ಗಾಬರಿಯಾದೆ.

‘ದೇವರೇಗತಿ! ಅಕ್ರಮ ಗಿಲೀಟುಗಾರರು ಜೈಲಾಸ್ಪತ್ರೇಲಿ ರಾಜೋಪಚಾರ ತಕ್ಕೋತಿದ್ರೆ ‘ಸಮಗ್ರ ತನಿಖೆ’ ಅಂತ ಬಸಣ್ಣ, ಅರಗಣ್ಣ ಜೋಕ್ ಮಾಡ್ತವ್ರೆ! ಯವಸ್ಥೆ ಹದ್ದುಮೀರಿ ಹೋಯ್ತಾ ಅದೆ! ಜನದ ಕ್ವಾಟ್ಲೆ ಕೇಳೋರೆ ಇಲ್ಲ! ನಾವು ಏಟು ಜಂಜಾಟದಲ್ಲಿದ್ರೂ ಕೊನೆಗೆ ನಮಗೇ ನಿಪ್ಪೂರ’ ತುರೇಮಣೆ ಸಿಟ್ಟಾದರು.

‘ಹಂಗಾದ್ರೆ ಅಕ್ಷಯ ತೃತೀಯದ ಅರ್ಥ ಏನು ಸಾ?’ ನಾನು ಕೇಳಿದೆ.

‘ಈ ವೈ-ಶಾಖ ಮಾಸದೇಲಿ ಅರ್ಥ ಅಂದರೆ ನಮ್ಮ ಕಾಸು ಅಂಗಡಿಯ ಗಲ್ಲಾ ಸೇರಿಕ್ಯಂಡು ಅವರ ಸಂಪತ್ತು ಅಕ್ಷಯವಾಯ್ತದೆ. ನಮ್ಮ ಹಣೇಮ್ಯಾಲೆ ತೃತೀಯ ಅಂದ್ರೆ ಎರಡು ಬಿಳಿ ಒಂದು ಕೆಂಪು ನಾಮ ಬೀಳ್ತವೆ! ನಮಗೆ ಕುಲಸ್ವಾಮಿ, ಮನೆಸ್ವಾಮಿ ಪಾದವೇ ಗತಿ, ಗೋವಿಂದಾ!’ ಅಂತ ನಾಮ ತೇದರು.

ಸಂಗತ

ಶಿಕ್ಷಣ: ಮರುವಿಶ್ಲೇಷಣೆಯ ಸಮಯ

ಯಾಂತ್ರಿಕತೆ– ತಾಂತ್ರಿಕತೆಯ ಸುಳಿಯಲ್ಲಿ ಸೊರಗದಿರಲಿ ಕಲಿಕೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮನೋವಿಜ್ಞಾನದ ಪ್ರಕಾರ, ಜೀವಿಯ ವರ್ತನೆಯಲ್ಲಿ ಅಂದರೆ ತಿಳಿವಳಿಕೆ ಮತ್ತು ನಡವಳಿಕೆಯಲ್ಲಿ ಉಂಟಾಗುವ ಬದಲಾವಣೆಯೇ ಕಲಿಕೆ. ಶಿಕ್ಷಣವು ಸಕಾರಾತ್ಮಕ ಬದಲಾವಣೆಯ ಮೂಲ ಉದ್ದೇಶದೊಟ್ಟಿಗೆ ಮಗುವಿನ ವ್ಯಕ್ತಿತ್ವವನ್ನು ಕಟ್ಟಿಕೊಡುವ ಮತ್ತು ಅನ್ನದ ಮೂಲವನ್ನು ಹುಡುಕಿಕೊಡುವ ಮಹತ್ವಾಕಾಂಕ್ಷೆಯನ್ನೂ ಹೊಂದಿರುತ್ತದೆ. ಹಾಗಾಗಿ, ಶಿಕ್ಷಣ ಎಲ್ಲರ ಮೂಲಭೂತ ಅಗತ್ಯ ಮತ್ತು ಹಕ್ಕು. ಆದರೆ ವರ್ತಮಾನದ ಸಂದರ್ಭದಲ್ಲಿ ಅದು ತನ್ನ ಆಶಯವನ್ನು ಈಡೇರಿಸುವಲ್ಲಿ ಸೋಲುತ್ತಿರುವುದರಿಂದ ಶಿಕ್ಷಣದ ಸ್ವರೂಪ, ನೆಲೆ- ಬೆಲೆಯನ್ನು ಮರುವಿಶ್ಲೇಷಿಸಬೇಕಾಗಿದೆ.

ಅಂದು ‘ಸ್ವಚ್ಛತಾ ಆಂದೋಲನ’ದ ಬಗ್ಗೆ ಪಟ್ಟಣದ ಪ್ರತೀ ಮನೆಗೂ ಹಸ್ತಾಕ್ಷರದ ಪತ್ರ ಕಳಿಸಲು ಪಟ್ಟಣ ಪಂಚಾಯಿತಿ ನಿರ್ಧರಿಸಿ, ಸಾವಿರ ವಿದ್ಯಾರ್ಥಿಗಳಿರುವ ಕಾಲೇಜೊಂದನ್ನು ಸಹಾಯಕ್ಕಾಗಿ ಕೋರಿತ್ತು. ಅದರಂತೆ ಪದವಿ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ಮೂರು ಸಾಲುಳ್ಳ ಮಾಹಿತಿಯನ್ನು ಅಂಚೆಕಾರ್ಡಿನಲ್ಲಿ ಬರೆಸಿ ಸಂಗ್ರಹಿಸಲಾಯಿತು. ಪೋಸ್ಟ್ ಮಾಡುವ ಮೊದಲು ಪರಿಶೀಲಿಸುವಾಗ ಆಶ್ಚರ್ಯ ಕಾದಿತ್ತು. ಅರ್ಧಕ್ಕಿಂತ ಹೆಚ್ಚಿನ ಪತ್ರಗಳು ಕಳಿಸಲು ಯೋಗ್ಯವೇ ಆಗಿರಲಿಲ್ಲ! ಅಷ್ಟು ವರ್ಷಗಳಪರ್ಯಂತ ಶಾಲೆಯಲ್ಲಿ ಕೂತು ಕಲಿತರೂ ಬರೀ ಮೂರು ಸಾಲುಗಳನ್ನು ಕನ್ನಡದಲ್ಲಿ ತಪ್ಪಿಲ್ಲದೆ ಬರೆಯಲು ಬಹುತೇಕ ವಿದ್ಯಾರ್ಥಿಗಳಿಗೆ ಸಾಧ್ಯವಾಗಿರಲಿಲ್ಲ.

ಶಾಲಾ ಕಲಿಕೆ ಸೊರಗುತ್ತಿರುವುದೆಲ್ಲಿ? ಅದೆಲ್ಲಾ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಕಡೆಗಣಿಸಿ, ಸ್ಮರಣಶಕ್ತಿಯನ್ನಷ್ಟೇ ಕೇಂದ್ರೀಕರಿಸಿದುದರ ಫಲವೇ? ಕೇವಲ ಮಾರ್ಕ್ಸು- ಮೆರಿಟ್ಟು, ಪದವಿ- ಪ್ರಮಾಣಪತ್ರಗಳನ್ನು ಕಲಿಕೆ, ಪ್ರತಿಭೆ, ಸಾಧನೆಗಳ ಮಾನದಂಡಗಳಂತೆ ಭಾವಿಸಿದ ಶೈಕ್ಷಣಿಕ- ಸಾಮಾಜಿಕ ವ್ಯವಸ್ಥೆ ಕಾರಣವೇ? ಬಹಳಷ್ಟು ಸಾರಿ ಮಕ್ಕಳ ಇಂದಿನ ಕಲಿಕೆಗೂ ನಾಳಿನ ಬದುಕಿಗೂ ಸಂಬಂಧವೇ ಇರುವುದಿಲ್ಲ! ಇದಕ್ಕೇನು ಪರಿಹಾರ? ಶಿಕ್ಷಣವು ವ್ಯಕ್ತಿಗೆ ಅವಶ್ಯವಾದ ಶಿಸ್ತು, ಧೈರ್ಯ, ಹೊಣೆಗಾರಿಕೆ, ಕೌಶಲ, ಪ್ರಾಮಾಣಿಕತೆ, ನೈತಿಕತೆ ಮತ್ತು ಮಾನವೀಯತೆಯನ್ನು ಕಲಿಸುವಲ್ಲಿ ಸೋಲುತ್ತಿರುವುದಕ್ಕೆ ಕಾರಣ ಏನು? ಓದುವ ಮಕ್ಕಳೆದುರು ತೆರೆದುಕೊಳ್ಳಬೇಕಾದ ವಿಭಿನ್ನ ಕ್ಷೇತ್ರಗಳ ವಿಪುಲ ಅವಕಾಶಗಳನ್ನು ಕಡೆಗಣಿಸುತ್ತಿರುವುದೇ ಕಳಪೆ ಶೈಕ್ಷಣಿಕ ಸಾಧನೆಗಿರುವ ಮುಖ್ಯ ಕಾರಣವೆಂಬುದು ಹಲವರ ಅಭಿಪ್ರಾಯ.

ನಿವೃತ್ತ ಮೇಷ್ಟ್ರೊಬ್ಬರ ಪ್ರಕಾರ, ಅಪೇಕ್ಷಣೀಯ ಸಾಧ್ಯತೆಗಳು ಕೈಗೂಡಬೇಕಾದರೆ ಇಡೀ ಶಿಕ್ಷಣ ಕ್ರಮವು ಪುನರ್ ಸಂಯೋಜನೆಗೊಳ್ಳಬೇಕಾದ ತುರ್ತಿದೆ. ಕಲಿಕಾ ಮಾಧ್ಯಮ, ಪಠ್ಯಕ್ರಮ ಮತ್ತು ಕಲಿಕಾ ವಿಧಾನಗಳಲ್ಲಿ ಆಮೂಲಾಗ್ರ ಬದಲಾವಣೆ ಬೇಕು. ಪ್ರಾಥಮಿಕ ಶಿಕ್ಷಣವು ಉಚಿತ, ಕಡ್ಡಾಯ ಮತ್ತು ಸಂಪೂರ್ಣವಾಗಿ ಏಕರೂಪದ ಶಿಕ್ಷಣ ವ್ಯವಸ್ಥೆಯಾಗಬೇಕಾದದ್ದು ಮೊದಲ ಅಗತ್ಯ. ಅಲ್ಲಿ ಎರಡು ಭಾಷೆಗಳು ಆಯ್ಕೆಗೆ ಸಿಗಬೇಕು. ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೂ ಅಗತ್ಯವಾದ ಇತಿಹಾಸ, ಪರಿಸರ, ರಾಜಕೀಯ, ಆರೋಗ್ಯ, ವಿಜ್ಞಾನ- ತಂತ್ರಜ್ಞಾನ ಮತ್ತು ಲೆಕ್ಕಾಚಾರಗಳ ಅರಿವನ್ನು ಹಂತಹಂತವಾಗಿ ಸರಳ ನಿರೂಪಣೆಯಲ್ಲಿ ಕಟ್ಟಿಕೊಡುವಂತೆ ಇರಬೇಕು. ಒತ್ತಡರಹಿತ ವಾತಾವರಣದಲ್ಲಿ ಅನುಭವ ಜನ್ಯ ಕಲಿಕೆಯನ್ನು ಅದು ಒಳಗೊಳ್ಳಬೇಕು.

ಪ್ರೌಢಹಂತದ ನಂತರದಲ್ಲಿ ‘ಐಚ್ಛಿಕ’ ಮತ್ತು ‘ಕಡ್ಡಾಯ ಕಲಿಕಾ ಶಾಖೆ’ಗಳೆಂಬ ಎರಡು ಪ್ರಕಾರದ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳಬೇಕು. ಐಚ್ಛಿಕ ಶಾಖೆಯಲ್ಲಿ, ವಿದ್ಯಾರ್ಥಿ- ಪೋಷಕರ ಆಯ್ಕೆಯನುಸಾರ ಕೇವಲ ಜ್ಞಾನಾರ್ಜನೆ ಅಥವಾ ಪದವಿ ಗಳಿಕೆಯ ಉದ್ದೇಶವುಳ್ಳ, ಪರೀಕ್ಷಾರಹಿತ, ಮುಕ್ತ ಕಲಿಕಾ ಪರಿಸರವನ್ನು ಕಲ್ಪಿಸಬೇಕು. ಔದ್ಯೋಗಿಕ ತರಬೇತಿಯನ್ನು ಇಲ್ಲಿ ಆದ್ಯತೆಯಾಗಿರಿಸದ ಕಾರಣ ನಿರ್ದಿಷ್ಟ ಉದ್ಯೋಗ ನಿರೀಕ್ಷೆಯಿಂದ ವಿದ್ಯಾರ್ಥಿಗಳು ಹೊರತಾಗಿರುತ್ತಾರೆ. ನಿರ್ಬಂಧಗಳಿಗೆ ಒಗ್ಗದ ಮನಃಸ್ಥಿತಿಯ ವಿದ್ಯಾರ್ಥಿಗಳಿಗಿದು ಸೂಕ್ತ ಮಾದರಿ. ಈ ವ್ಯವಸ್ಥೆಯು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನ, ದುಡಿಮೆಯ ಅವಕಾಶವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿರಬೇಕು. ಅಲ್ಲಿ ಆಸಕ್ತಿಯ ಕಸುಬನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಿರುತ್ತದೆ.

ಮತ್ತೊಂದು ಪ್ರಕಾರವಾದ ‘ಕಡ್ಡಾಯ ಕಲಿಕಾ ಶಾಖೆ’ಯಲ್ಲಿ ಕಲಿಯಬಯಸುವ ಉದ್ಯೋಗಾಕಾಂಕ್ಷಿಗಳು ಅಪೇಕ್ಷಿತ ಮಾನದಂಡಗಳನ್ನು ಖಚಿತವಾಗಿ ಪೂರೈಸುವಂತಿರಬೇಕು. ಕೋರ್ಸ್ ಮುಗಿಯುವಷ್ಟರಲ್ಲಿ ಆಯ್ಕೆಯ ಉದ್ಯೋಗಗಳು ನಿರೀಕ್ಷಿಸುವ ಕೌಶಲ, ಪರಿಣತಿಯನ್ನು ಕಲಿಕಾರ್ಥಿಯು ಪಡೆದಿರಬೇಕಾದದ್ದು ಅಲ್ಲಿ ಕಡ್ಡಾಯ. ಗುಣಮಟ್ಟದಲ್ಲಿ ರಾಜಿ ಇರಕೂಡದು. ಅರ್ಹತೆಯಲ್ಲಿ ಔನ್ನತ್ಯವನ್ನು ಮತ್ತು ಪರಿಪೂರ್ಣತೆಯನ್ನು ಗಳಿಸಿಕೊಂಡ ಅಭ್ಯರ್ಥಿಗೆ ಉದ್ಯೋಗ ಖಾತರಿ ನೀಡಬೇಕಾದ ಜವಾಬ್ದಾರಿಯನ್ನು ಆಡಳಿತ ವ್ಯವಸ್ಥೆಯೇ ಸಂಪೂರ್ಣವಾಗಿ ಹೊರಬೇಕು. ಅಲ್ಲಿ ವ್ಯಕ್ತಿ ಮತ್ತು ಕಸುಬುಗಳೆರಡಕ್ಕೂ ಸಾರ್ಥಕ್ಯಭಾವ!

ಒಟ್ಟಿನಲ್ಲಿ ಪ್ರತಿಯೊಂದು ಮಗುವೂ ತನ್ನ ಬದುಕನ್ನು ಸಮರ್ಥವಾಗಿ, ಸಾರ್ಥಕವಾಗಿ ಬದುಕಲು ಬೇಕಾಗುವ ಅರ್ಹತೆಯನ್ನು ಕಲಿಸಲು ಶಿಕ್ಷಣ ಎಂದಿಗೂ ಶಕ್ತವೇ. ಸರ್ಕಾರವು ಜಾರಿಗೊಳಿಸಲು ಹೊರಟಿರುವ ‘ಹೊಸ ಶಿಕ್ಷಣ ನೀತಿ’ಯಲ್ಲಾದರೂ ಇಂತಹ ಪಠ್ಯಕ್ರಮವನ್ನು ಪರಿಣಾಮಕಾರಿಯಾಗಿ ರೂಪಿಸಲಿ. ಗಾಂಧಿಪ್ರಣೀತ ಮೂಲಶಿಕ್ಷಣದ ಬೆಳಕಲ್ಲಿ ವೃತ್ತಿಯಾಧಾರಿತ ಕಲಿಕಾ ಕ್ರಮವನ್ನು ರೂಪಿಸಿದಲ್ಲಿ ಮಾತ್ರ ಕ್ರಿಯಾತ್ಮಕ ಬೆಳವಣಿಗೆಯೊಟ್ಟಿಗೆ ವೃತ್ತಿಘನತೆಯನ್ನು ಕಾಪಾಡುವುದು ಮತ್ತು ಸಾಮಾಜಿಕ ತಾರತಮ್ಯವನ್ನು ನಿವಾರಿಸುವುದು ಸಾಧ್ಯವಾಗುತ್ತದೆ. ಬಹುಮುಖ್ಯವಾಗಿ ನಿರುದ್ಯೋಗ ಸಮಸ್ಯೆಗೂ ಅದೊಂದು ಮದ್ದಾದೀತು.

ಲೇಖಕ: ಉಪನ್ಯಾಸಕ, ಸರ್ಕಾರಿ ಪದವಿಪೂರ್ವ ಕಾಲೇಜು, ಹೆಬ್ರಿ, ಉಡುಪಿ ಜಿಲ್ಲೆ

ವಾಚಕರ ವಾಣಿ

ರಂಜಾನ್‌ಗೆ ಅಮೂಲ್ಯ ಉಡುಗೊರೆ

‘ಈದ್ಗಾ ಗೋಡೆ ನಿರ್ಮಾಣಕ್ಕೆ ಹಿಂದೂಗಳ ಭೂಮಿ’ ಸುದ್ದಿ (ಪ್ರ.ವಾ., ಮೇ 2) ಓದಿ ‘ಆಹಾ ನನ್ನ ಭಾರತವೇ’ ಎಂಬ ಭಾವನೆ ಮನದುಂಬಿ ಬಂತು. ದಾವಣಗೆರೆ ತಾಲ್ಲೂಕಿನ ಅಣಬೇರು ಗ್ರಾಮದಲ್ಲಿ ಈದ್ಗಾ ಮೈದಾನದ ಗೋಡೆ ನಿರ್ಮಾಣಕ್ಕೆ ರಾಜಪ್ಪ ಎಂಬುವರು ತಮ್ಮ ಜಮೀನಿನ ಸ್ವಲ್ಪ ಭಾಗವನ್ನು ನೀಡಿ ಸಾಮರಸ್ಯ ಮೆರೆದಿರುವುದು ಕೋಮು ಕೊಳ್ಳಿ ಹಿಡಿದ ಸೀಮಿತ ಮಂದಿಗೆ ಪಾಠವಾಗಿದೆ.

ಎಲ್ಲರೊಳಗೊಂದಾಗುವ, ಎಲ್ಲರೊಂದೆನ್ನುವ ಭಾವ, ಭಾರತೀಯ ಹಳ್ಳಿ ಹಳ್ಳಿಗಳಲ್ಲಿ ಇಂದಿಗೂ ಜೀವಂತ. ರಾಮಾಯಣ, ಮಹಾಭಾರತ, ಭಗವದ್ಗೀತೆ, ಕುರಾನ್, ಬೈಬಲ್, ಗ್ರಂಥಸಾಹಿಬ್‌ಗಳ ಸಾರ ಇಷ್ಟೇ: ಬದುಕು, ಬದುಕಲು ಬಿಡು. ಅಣಬೇರು ಗ್ರಾಮದ ಜನತೆ ನಿಜಕ್ಕೂ ಮುಸ್ಲಿಂ ಸಮುದಾಯದವರಿಗೆ ನೀಡಿದ ರಂಜಾನ್‌ನ ಅಮೂಲ್ಯ ಉಡುಗೊರೆ ಇದು. ಈ ಭಾವ ಭಾರತದಾದ್ಯಂತ ಹರಡಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಎಚ್ಚರಿಕೆಯ ಸಂದೇಶ ರವಾನೆಯಾಗಲಿ

ಸಾಮಾಜಿಕ ಭದ್ರತಾ ಯೋಜನೆಗಳಡಿ ಸುಮಾರು ಮೂರೂವರೆ ಲಕ್ಷದಷ್ಟು ಬೋಗಸ್ ಫಲಾನುಭವಿಗಳನ್ನು ಪತ್ತೆ ಹಚ್ಚಿ, ಅಕ್ರಮವಾಗಿ ಪಡೆಯುತ್ತಿದ್ದ ಪಿಂಚಣಿ ಸೌಲಭ್ಯ ರದ್ದು ಮಾಡಲಾಗಿದೆ ಎಂದು ಕಂದಾಯ ಸಚಿವರು ತಿಳಿಸಿದ್ದಾರೆ. ಪಿಂಚಣಿ ಸೌಲಭ್ಯ ರದ್ದು ಮಾಡಿದರಷ್ಟೇ ಸಾಲದು, ಯೋಜನೆಯನ್ನು ದುರುಪಯೋಗ ಮಾಡಿಕೊಂಡವರು ಹಾಗೂ ಅದಕ್ಕೆ ಸಹಕರಿಸಿದ ಕಂದಾಯ ಇಲಾಖೆಯ ಸಿಬ್ಬಂದಿ ವಿರುದ್ಧವೂ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಈ ಮೂಲಕ, ಮುಂದೆ ಯಾವುದೇ ಸರ್ಕಾರಿ ಯೋಜನೆಗಳಲ್ಲಿ ಅಕ್ರಮ ನಡೆಯದಂತೆ ಎಚ್ಚರಿಕೆಯ ಸಂದೇಶ ರವಾನೆಯಾಗಬೇಕು.

ಎ.ಜೆ.ಜಾವೀದ್, ಹಾಸನ

ಸಚಿವರಿಗೆ ಅಧಿಕಾರ ವೈರಾಗ್ಯವೇಕೆ?

ಪಕ್ಷಾಂತರ ಮಾಡಿ ತಪ್ಪೆಸಗಿದೆ ಎಂದು ಸಚಿವ ಎಂ.ಟಿ.ಬಿ. ನಾಗರಾಜ್ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಮೇ 1). ಸಚಿವರಿಗೆ ಇಂಥ ಅಧಿಕಾರ ವೈರಾಗ್ಯ ಯಾಕೆ ಎಂಬುದು ತಿಳಿಯದಾಗಿದೆ. ‘ರಾಜಕೀಯದಲ್ಲಿ ನಾನು ಹಣ ಮಾಡಬೇಕೆಂದೇನೂ ಇಲ್ಲ’ ಎಂದೂ ಹೇಳಿದ್ದಾರೆ. ರಾಜಕೀಯದ ಮೂಲಕ ಹಣ ಮಾಡುವುದೂ ಒಂದು ಮಾರ್ಗ ಎಂದು ಈ ಮೂಲಕ ಅವರು ಸೂಚ್ಯವಾಗಿ ಹೇಳಿದ್ದಾರೆ. ಎಂ.ಟಿ.ಬಿ. ಸಹಿತ 18 ಮಂದಿ ಶಾಸಕರು ರಾಜೀನಾಮೆ ನೀಡಿ ಚುನಾವಣೆಗೆ ಬಿಜೆಪಿಯಿಂದ ಸ್ಪರ್ಧಿಸಿ, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾದರು. ಅವರ ಈ ತ್ಯಾಗಕ್ಕೆ ಪ್ರತಿಫಲವಾಗಿ ಸಚಿವ ಸ್ಥಾನ ನೀಡಲಾಗಿದೆ.

ಬಹುತೇಕ ಆಯ್ಕೆಯಾದ ಶಾಸಕರಿಗೆ ಸಚಿವರಾಗಬೇಕು ಎಂಬ ಬಲವಾದ ಆಕಾಂಕ್ಷೆ ಇದ್ದೇ ಇರುತ್ತದೆ. ರಾಜಕಾರಣವು ಸೇವೆಯ ಒಂದು ಭಾಗ ಎಂದು ಯಾವ ರಾಜಕಾರಣಿಯೂ ತಿಳಿದಿಲ್ಲ. ಇಂಥ ಮನೋಭಾವ ಹೊಂದಿದ್ದರೆ ಇವತ್ತು ಗುತ್ತಿಗೆ ಕಾಮಗಾರಿಯಲ್ಲಿ ಶೇ 40 ಕಮಿಷನ್ ಸುದ್ದಿ ಮಾಡುತ್ತಿರಲಿಲ್ಲ. ಎಂ.ಟಿ.ಬಿ. ಅವರಿಗೆ ಖಾತೆಯ ಮೇಲೆ ಮುನಿಸೋ, ಸರ್ಕಾರದ ನಡೆಯ ಬಗ್ಗೆ ಅತೃಪ್ತಿಯೋ? ಅಂತೂ ಸಚಿವರಿಗೆ ಅಧಿಕಾರ ವೈರಾಗ್ಯವೇಕೆ ಎಂಬುದು ಪ್ರಶ್ನಾರ್ಹವಾಗಿದೆ.

ಗಣಪತಿ ಶಿರಳಗಿ, ಸಾಗರ

ರಾಜಕೀಯ ಸಭೆ ನಾಚಿಸಿದ ನಡೆ

ಕಾಗಿನೆಲೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಕೆಲವು ಸಾಹಿತಿಗಳು ಬೈಲಾ ತಿದ್ದುಪಡಿ ವಿಚಾರವಾಗಿ ವಿರೋಧ ವ್ಯಕ್ತಪಡಿಸಿದಾಗ, ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರು ನಡೆದುಕೊಂಡ ರೀತಿ ರಾಜಕೀಯ ಸಭೆಗಳನ್ನು ನಾಚಿಸುವಂತಹದ್ದು. ಸಾಹಿತ್ಯ ಪರಿಷತ್ತಿನಲ್ಲೇ ಗುಂಪುಗಾರಿಕೆಯಾದರೆ ಕನ್ನಡ ಬೆಳೆಯುವುದಾದರೂ ಹೇಗೆ? ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದವರಿಗೆ ತಾಳ್ಮೆ ಮುಖ್ಯ ಮತ್ತು ಅದರ ಜೊತೆಗೆ ಮುಂದಾಲೋಚನೆಯೂ ಅಗತ್ಯ. ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಪದಾಧಿಕಾರಿಗಳ ಆಸ್ತಿಯಲ್ಲ, ಅದು ಆರೂವರೆ ಕೋಟಿ ಕನ್ನಡಿಗರ ಆಸ್ತಿ ಎಂದು ತಿಳಿದು ಅದು ಕಾರ್ಯನಿರ್ವಹಿಸಬೇಕು.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

‘ರಂಭಾ ಗಾಳ’ಕ್ಕೆ ಬಲಿಬಿದ್ದರು!

ವಿಶ್ವಾಮಿತ್ರ ಎಂಬ ಮುನಿ ತನ್ನ ತಪಸ್ಸು ಫಲಿಸುವ ಮುನ್ನವೇ ವಿಧಿಯ ಕೈವಾಡದಿಂದ ರಂಭೆ ಎಂಬ ಗಾಳಕ್ಕೆ ಬಲಿಬೀಳಬೇಕಾಗುತ್ತದೆ. ಅದರಂತೆಯೇ ಪಿಎಸ್‌ಐ ಅಭ್ಯರ್ಥಿಗಳು ವರ್ಷಗಟ್ಟಲೇ ಕಷ್ಟಪಟ್ಟು ಓದಿ, ಸ್ಪರ್ಧಾತ್ಮಕ ಪರೀಕ್ಷೆ ಬರೆದು ಯಶಸ್ವಿಯಾಗಿ, ಇನ್ನೇನು ಯಶಸ್ಸಿನ ಫಲ ಕೈಗೆ ಎಟಕುತ್ತದೆ ಎನ್ನುವ ಹೊತ್ತಿಗೆ ವ್ಯವಸ್ಥೆಯ ‘ರಂಭಾ ಗಾಳ’ಕ್ಕೆ ಬಲಿಯಾಗಿದ್ದಾರೆ. ವ್ಯವಸ್ಥೆ ನಿರ್ದಯವಾಗಿ ಮತ್ತೊಮ್ಮೆ ಪರೀಕ್ಷೆ ಬರೆಸಲು ಮುಂದಾಗಿರುವುದು ವಿಪರ್ಯಾಸ.

ಸರ್ಕಾರದಲ್ಲಿರುವ ‘ದೊಡ್ಡವರು’ ಮರುಪರೀಕ್ಷೆ ಪರವಾಗಿ ಮಾತನಾಡುತ್ತಿದ್ದಾರೆ. ಪ್ರಜ್ಞಾವಂತರು ಗಂಟಲಲ್ಲಿ ಕಡುಬು ತುರುಕಿಸಿಕೊಂಡಿದ್ದಾರೆ. ಮತ್ತೊಮ್ಮೆ ಪರೀಕ್ಷೆ ಬರೆಯುವುದು ಸಾಮಾನ್ಯ ಕೆಲಸವೇ? ಈಗಾಗಲೇ ಪಾಸಾದವರು (ನ್ಯಾಯವಾಗಿ) ಅದೇ ಮನಃಸ್ಥಿತಿಯಲ್ಲಿ ಇರುತ್ತಾರೆಯೇ? ಒಮ್ಮೆ ರಿಲ್ಯಾಕ್ಸ್ ಆದ ಮನಸ್ಸು ಮತ್ತದೇ ಒತ್ತಡಕ್ಕೆ ಸಿಲುಕಿ ಸಿದ್ಧಗೊಳ್ಳುವುದು ಅಷ್ಟು ಸುಲಭವೇ? ಕೆಲವು ಹಳ್ಳಿಗಳಲ್ಲಿ ಜಾತಿಭೇದ ಮರೆತು ಪ್ರೀತಿಯಿಂದ ಮಾಡಿದ ಸನ್ಮಾನಗಳನ್ನು ಅಭ್ಯರ್ಥಿಗಳು ಈಗ ಹಿಂದಿರುಗಿಸಲು ಸಾಧ್ಯವೇ? ಎಂತಹ ಮುಮ್ಮಲ ಮರುಗುವ ಸ್ಥಿತಿಗೆ ನಮ್ಮನ್ನು ನೂಕಿದೆ ನಮ್ಮ ವ್ಯವಸ್ಥೆ? ಆದರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ನಾವು ಈಗ ನಡೆಯುತ್ತಿರುವ ವಿಚಾರಣೆ ‘ದೊಡ್ಡವರನ್ನೂ’, ‘ಸರ್’ಗಳನ್ನೂ ಕರ್ನಾಟಕದ ಪ್ರಜೆಗಳೆದುರು ತಂದು ನಿಲ್ಲಿಸುತ್ತದೆಂಬ ವಿಶ್ವಾಸ ಹೊಂದೋಣ. ಅಭ್ಯರ್ಥಿಗಳು ಯಾವ ಹಂತದಲ್ಲೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು, ಅಲ್ಲದೆ ಮರುಪರೀಕ್ಷೆಗೆ ಸಿದ್ಧರಾಗಬೇಕು.

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇ-ಸ್ಕೂಟರ್‌ಗೆ ಬೆಂಕಿ ಭೀತಿ

ಪುಣೆಯಲ್ಲಿ ಓಲಾ ಎಸ್ 1 ಪ್ರೊ ಇ.ವಿ. ಸ್ಕೂಟರ್‌ನಲ್ಲಿ ಕಾಣಿಸಿಕೊಂಡ ಬೆಂಕಿ –ಟ್ವಿಟರ್ ವಿಡಿಯೊ ಸ್ಕ್ರೀನ್‌ಶಾಟ್ ಚಿತ್ರ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ವಿದ್ಯುತ್‌ಚಾಲಿತ (ಇ.ವಿ) ಸ್ಕೂಟರ್‌ಗಳಿಗೆ ಬೆಂಕಿ ಹೊತ್ತಿಕೊಳ್ಳುತ್ತಿರುವ ಪ್ರಕರಣಗಳು ಒಂದೆರಡು ತಿಂಗಳಿನಿಂದ ಹೆಚ್ಚಾಗಿ ವರದಿಯಾಗುತ್ತಿವೆ. ಇದು ಭವಿಷ್ಯದ ಇ.ವಿ ಮಾರುಕಟ್ಟೆ ಹಾಗೂ ಸ್ಕೂಟರ್ ಖರೀದಿಸುವವರನ್ನು ಆತಂಕಕ್ಕೆ ತಳ್ಳಿದೆ. ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ಮೊದಲಾದ ಕಡೆಗಳಲ್ಲಿ ವರದಿಯಾಗಿರುವ ಇಂತಹ ಹಲವು ಪ್ರಕರಣಗಳು ಭೀತಿ ಮೂಡಿಸಿವೆ.

ಓಲಾ, ಒಕಿನಾವಾ, ಜಿತೇಂದ್ರ ಇವಿ, ಪ್ಯೂರ್ ಇವಿ ಮೊದಲಾದ ಸಂಸ್ಥೆಗಳು ತಯಾರಿಸಿದ ಸ್ಕೂಟರ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ಸಂಸ್ಥೆಗಳು ತನಿಖೆಗೆ ಮುಂದಾಗಿವೆ. ಓಲಾ ಕಂಪನಿಯ ಎಸ್1 ಪ್ರೊ ಹೆಸರಿನ ಸ್ಕೂಟರ್ ಪುಣೆಯಲ್ಲಿ ರಸ್ತೆ ಬದಿ ನಿಲ್ಲಿಸಿದ್ದಾಗ ಬೆಂಕಿಗಾಹುತಿಯಾಯಿತು. ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡಿತು. ಸ್ಕೂಟರ್‌ನಲ್ಲಿ ಬ್ಯಾಟರಿ ಇರಿಸಿದ್ದ ಜಾಗದಿಂದ ದೊಡ್ಡ ಪ್ರಮಾಣದ ಹೊಗೆ ಬಂದಿತ್ತು. ನಂತರ ಬೆಂಕಿ ತಗುಲಿತ್ತು. ಅದೃಷ್ಟವಶಾತ್ ಯಾರಿಗೂ ಪ್ರಾಣಾಪಾಯ ಆಗಲಿಲ್ಲ.

ಜಿತೇಂದ್ರ ಇವಿ ಸಂಸ್ಥೆಯ 40 ಸ್ಕೂಟರ್‌ಗಳನ್ನು ಟ್ರಕ್‌ನಲ್ಲಿ ಸಾಗಿಸುತ್ತಿದ್ದಾಗ, ಅದರಲ್ಲಿದ್ದ ಸ್ಕೂಟರ್‌ಗಳಿಗೆ ಬೆಂಕಿ ಹೊತ್ತಿಕೊಂಡಿತ್ತು. ತನಿಖೆ ನಡೆಸಿ ಈ ಘಟನೆಗೆ ನಿಖರ ಕಾರಣ ಕಂಡುಕೊಳ್ಳುವುದಾಗಿ ಸಂಸ್ಥೆ ತಿಳಿಸಿದೆ.

ತಮಿಳುನಾಡಿನಲ್ಲಿ ಒಕಿನಾವಾ ಸಂಸ್ಥೆಯ ಸ್ಕೂಟರ್‌ಗೆ ಬೆಂಕಿ ಹೊತ್ತಿಕೊಂಡು ತಂದೆ-ಮಗಳು ಮೃತಪಟ್ಟಿದ್ದರು. ಸ್ಕೂಟರ್ ಅನ್ನು ಚಾರ್ಜ್‌ಗೆ ಹಾಕುವ ವೇಳೆ ನಿರ್ಲಕ್ಷ್ಯ ತೋರಿದ್ದರಿಂದ ಈ ಅವಘಡ ಸಂಭವಿಸಿದೆ ಎಂದು ಒಕಿನಾವಾ ಹೇಳಿಕೆ ನೀಡಿತ್ತು. ನಂಬಲರ್ಹ ಮಾಹಿತಿಗಳು, ಸ್ಥಳೀಯ ಪ್ರಾಧಿಕಾರಗಳು ಹಾಗೂ ಪೊಲೀಸರ ಮಾಹಿತಿಯಂತೆ, ಚಾರ್ಜ್‌ಗೆ ಹಾಕುವಾಗ ಶಾರ್ಟ್ ಸರ್ಕಿಟ್ ಆಗಿ ದುರಂತ ಸಂಭವಿಸಿದೆ ಎಂದು ವಿವರಣೆ ನೀಡಿತ್ತು. ಆದರೂ, ತನಿಖೆಯ ಸಂಪೂರ್ಣ ವರದಿ ಬಂದ ಬಳಿಕ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿತ್ತು. 2021ರ ಅಕ್ಟೋಬರ್‌ನಲ್ಲಿ ಇದೇ ಸಂಸ್ಥೆಯ ಸ್ಕೂಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಈ ಎರಡೂ ಘಟನೆಗಳ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಒಕಿನಾವಾ ತಿಳಿಸಿದೆ. ದೋಷಪೂರಿತ ಸ್ವಿಚ್‌ನಿಂದಾಗಿ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಸ್ಥಳೀಯ ಪೊಲೀಸರು ಅಭಿಪ್ರಾಯಪಟ್ಟಿದ್ದರು.

ತಮಿಳುನಾಡಿನ ಹೊಸೂರಿನಲ್ಲಿ ಇದೇ ಶನಿವಾರ ಮತ್ತೊಂದು ಬ್ಯಾಟರಿ ಚಾಲಿತ ಸ್ಕೂಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಸವಾರ ಯಾವುದೇ ಅಪಾಯ ಇಲ್ಲದೆ ಪಾರಾಗಿದ್ದರು. ಸೀಟಿನ ಕೆಳಗಡೆ ಬೆಂಕಿ ಹೊತ್ತಿಕೊಳ್ಳುತ್ತಿದ್ದುದನ್ನು ಗಮನಿಸಿದ ಅವರು, ಸ್ಕೂಟರ್‌ನಿಂದ ಜಿಗಿದು ಪಾರಾಗಿದ್ದರು. ವರ್ಷದ ಹಿಂದೆಯಷ್ಟೇ ಈ ಸ್ಕೂಟರ್ ಖರೀದಿಸಲಾಗಿತ್ತು. ತಿರುಚಿನಾಪಳ್ಳಿ ಜಿಲ್ಲೆಯ ಮನಪ್ಪಾರೈ ಎಂಬಲ್ಲಿ ಬ್ಯಾಟರಿಚಾಲಿತ ದ್ವಿಚಕ್ರವಾಹನಕ್ಕೆ ಬೆಂಕಿ ತಗುಲಿತ್ತು. ತೆಲಂಗಾಣದಲ್ಲಿ ಸ್ಕೂಟರ್‌ನಿಂದ ಬ್ಯಾಟರಿ ತೆಗೆದು ಮನೆಯಲ್ಲಿ ಚಾರ್ಜ್‌ಗೆ ಹಾಕಿದಾಗ ಅದು ಸ್ಫೋಟಗೊಂಡಿದ್ದು ವರದಿಯಾಗಿತ್ತು.

ಬಹುತೇಕ ಪ್ರಕರಣಗಳಲ್ಲಿ ಸ್ಕೂಟರ್‌ನ ಬ್ಯಾಟರಿ ಇದ್ದ ಜಾಗದಲ್ಲಿ ಹೊಗೆ ಹಾಗೂ ಬೆಂಕಿ ಸೃಷ್ಟಿಯಾಗಿರುವುದನ್ನು ಗಮನಿಸಿದರೆ, ಬ್ಯಾಟರಿ ದೋಷ ಕಾರಣ ಇರಬಹುದು ಎಂದು ತಜ್ಞರು ಅಭಿಪ್ರಾಯಟ್ಟಿದ್ದಾರೆ. ಹೀಗಾಗಿ, ಬ್ಯಾಟರಿಚಾಲಿತ ಸ್ಕೂಟರ್‌ಗಳ ಸುರಕ್ಷತೆ ಬಗ್ಗೆ ದೇಶದೆಲ್ಲೆಡೆ ಭಾರಿ ಚರ್ಚೆ ನಡೆಯುತ್ತಿದೆ. ಈ ವಿಚಾರವು ದೇಶದ ಇ.ವಿ ಮಾರುಕಟ್ಟೆಯ ಭವಿಷ್ಯದ ಪ್ರಶ್ನೆಯಾಗಿದೆ ಎನ್ನುತ್ತಾರೆ ತಜ್ಞರು.

ತನಿಖೆಗೆ ಸೂಚನೆ

ಇ.ವಿಗಳಲ್ಲಿ ಬೆಂಕಿ ಪ್ರಕರಣಗಳ ಬಗ್ಗೆ ತನಿಖೆ ನಡೆಸುವಂತೆ ಡಿಆರ್‌ಡಿಒ ಅಧೀನದ 'ಸೆಂಟರ್ ಫಾರ್ ಫೈರ್ ಅಂಡ್ ಎಕ್ಸ್‌ಪ್ಲೋಸಿವ್ ಅಂಡ್ ಎನ್ವಿರಾನ್‌ಮೆಂಟ್ ಸೇಫ್ಟಿ' (ಸಿಎಫ್‌ಇಇಎಸ್) ಎಂಬ ರಕ್ಷಣಾ ಪ್ರಯೋಗಾಲಯಕ್ಕೆ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಸೂಚನೆ ನೀಡಿದೆ.

ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳಲ್ಲಿ ಬೆಂಕಿ ಹೊತ್ತಿಕೊಳ್ಳುತ್ತಿರುವ ಪ್ರಕರಣಗಳ ಬಗ್ಗೆ ಇತ್ತೀಚೆಗೆ ಕಳವಳ ವ್ಯಕ್ತಪಡಿಸಿದ್ದರು. ದೋಷಪೂರಿತ ವಾಹನಗಳನ್ನು ಸರಿಪಡಿಸುವಂತೆ ಎಲ್ಲ ಇ.ವಿ ಕಂಪನಿಗಳಿಗೆ ಅವರು ಸೂಚನೆ ನೀಡಿದ್ದರು. ವಾಹನ ಚಾಲಕರ ಸುರಕ್ಷತೆಯೇ ಸರ್ಕಾರದ ಆದ್ಯತೆ ಎಂದಿದ್ದ ಅವರು, ಈ ಪ್ರಕರಣಗಳಲ್ಲಿ ಕಂಪನಿಗಳ ಲೋಪ ಕಂಡುಬಂದಲ್ಲಿ ಭಾರಿ ದಂಡ ವಿಧಿಸುವ ಎಚ್ಚರಿಕೆಯನ್ನೂ ನೀಡಿದ್ದರು. ದೇಶದಲ್ಲಿ ಈಗಿರುವ ಶೇ 2ರಷ್ಟು ಇ.ವಿ ಸ್ಕೂಟರ್‌ಗಳ ಪ್ರಮಾಣವನ್ನು 2030ರ ವೇಳೆಗೆ ಶೇ 80ಕ್ಕೆ ಏರಿಸುವ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ.

ಕಂಪನಿಗಳಿಂದ ಉಚಿತ ತಪಾಸಣೆ

ಅಗ್ನಿ ಅವಘಡಗಳ ಬೆನ್ನಲ್ಲೇ, ದೋಷಪೂರಿತ ಇ.ವಿಗಳನ್ನು ವಾಪಸ್ ಪಡೆದು ಸರಿಪಡಿಸಲು ಕಂಪನಿಗಳು ಮುಂದಾಗಿವೆ. ಓಲಾ ಕಂಪನಿಯು 1,441 ವಾಹನಗಳನ್ನು, ಒಕಿನಾವಾ 3,215 ವಾಹನಗಳನ್ನು ಹಾಗೂ ಪ್ಯೂರ್ ಇವಿ ಕಂಪನಿಯು 2,000 ವಾಹನಗಳನ್ನು ಉಚಿತವಾಗಿ ಸರಿಪಡಿಸುವ ವಾಗ್ದಾನ ನೀಡಿವೆ. ಒಕಿನಾವಾ ಪ್ರೈಸ್‌ಪ್ರೊ ಮಾದರಿಯಲ್ಲಿ ಕಾಣಿಸಿಕೊಂಡಿರುವ ಬ್ಯಾಟರಿ ದೋಷಗಳನ್ನು ಕಂಪನಿಯ ಯಾವುದಾದರೂ ಸರ್ವಿಸ್ ಕೇಂದ್ರಗಳಲ್ಲಿ ಪರಿಶೀಲನೆಗೆ ಒಳಪಡಿಸಬಹುದು ಎಂದು ಏಪ್ರಿಲ್ ಮಧ್ಯಭಾಗದಲ್ಲಿ ಸಂಸ್ಥೆ ತಿಳಿಸಿತ್ತು. ಎಲ್ಲ ಕೇಂದ್ರಗಳಲ್ಲಿ ಉಚಿತವಾಗಿ ಬ್ಯಾಟರಿಗಳ ಗುಣಮಟ್ಟ ಹಾಗೂ ಜೋಡಣೆ ಸರಿಯಾಗಿದೆಯೇ ಎಂದು ತಪಾಸಣೆ ಮಾಡಲಾಗುವುದು ಎಂದು ಪ್ರಕಟಣೆ ಹೊರಡಿಸಿತ್ತು.

ನಿಯಮಗಳಲ್ಲೇ ದೋಷ

ಭಾರತದಲ್ಲಿ ಮಾರಾಟವಾಗುವ ಪ್ರತಿ ಮಾದರಿಯ ವಾಹನವನ್ನೂ ಆಟೊಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಹಲವು ಸ್ವರೂಪದ ಪರೀಕ್ಷೆಗಳಿಗೆ ಒಳಪಡಿಸುತ್ತದೆ. ಈ ಎಲ್ಲಾ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದ ವಾಹನಗಳಷ್ಟೇ ಭಾರತದ ಮಾರುಕಟ್ಟೆ ಪ್ರವೇಶಿಸಲು ಅನುಮತಿ ಪಡೆಯುತ್ತವೆ. ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಿಗೂ ಇದು ಅನ್ವಯವಾಗುತ್ತದೆ. ಭಾರತದಲ್ಲಿ ಮಾರಾಟವಾಗುವ ಪ್ರತಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನವೂ ಎಆರ್‌ಎಐನ ಪ್ರಮಾಣ ಪತ್ರ ಪಡೆದಿರಬೇಕು. ಹೀಗೆ ಪ್ರಮಾಣ ಪತ್ರ ಪಡೆದ ಇ-ಸ್ಕೂಟರ್‌ಗಳಿಗೂ ಬೆಂಕಿ ಹೊತ್ತಿಕೊಂಡದ್ದರಿಂದ, ಎಆರ್‌ಎಐ ನಡೆಸುವ ಪರೀಕ್ಷೆಗಳ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಎಆರ್‌ಎಐ ನಡೆಸುವ ಬ್ಯಾಟರಿ ಪರೀಕ್ಷೆಗಳ ನಿಯಮಗಳಲ್ಲೇ ಸಮಸ್ಯೆ ಇರುವುದು ಮೇಲ್ನೋಟಕ್ಕೆ ಕಾಣುತ್ತದೆ. ಬಹುತೇಕ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಲ್ಲಿ ಲಿಥಿಯಂ ಅಯಾನ್ ಬ್ಯಾಟರಿಗಳ ಪ್ಯಾಕ್ ಬಳಸಲಾಗುತ್ತಿದೆ. ಈ ಬ್ಯಾಟರಿಗಳು ಮೈನಸ್ 10 ಡಿಗ್ರಿ ಸೆಲ್ಸಿಯಸ್‌ನಿಂದ 45 ಡಿಗ್ರಿ ಸೆಲ್ಸಿಯಸ್‌ವರೆಗಿನ ಉಷ್ಣಾಂಶದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ಇದಕ್ಕಿಂತ ಹೆಚ್ಚಿನ ಅಥವಾ ಕಡಿಮೆ ಉಷ್ಣಾಂಶದಲ್ಲಿ ಕಾರ್ಯನಿರ್ವಹಿಸಿದರೆ ಬ್ಯಾಟರಿ ಹಾಳಾಗುವ ಅಥವಾ ಅದರ ದಕ್ಷತೆ ಕುಸಿಯುವ ಅಥವಾ ಬ್ಯಾಟರಿ ಶಾರ್ಟ್ ಸರ್ಕಿಟ್‌ನ ಅಪಾಯವಿರುತ್ತದೆ. ಆದರೆ ಎಆರ್‌ಎಐ ನಡೆಸುವ ಬಹುತೇಕ ಪರೀಕ್ಷೆಗಳನ್ನು 10 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶದಲ್ಲಿ ನಡೆಸಲಾಗುತ್ತದೆ. ಇದು ಬ್ಯಾಟರಿಯು ಕಾರ್ಯನಿರ್ವಹಿಸುವ ಸಂದರ್ಭದ ಉಷ್ಣಾಂಶಕ್ಕಿಂತ ಇದು ತೀರಾ ಕಡಿಮೆ.



- **ಬ್ಯಾಟರಿ ಚಾರ್ಜಿಂಗ್ ಪರೀಕ್ಷೆ:** ಚಾರ್ಜಿಂಗ್ ವೇಳೆ ಬ್ಯಾಟರಿಗಳು ಹೆಚ್ಚು ಬಿಸಿಯಾಗುತ್ತವೆಯೇ? ಹೆಚ್ಚು ಬಿಸಿಯಾಗುವುದರಿಂದ ಬ್ಯಾಟರಿ ಮತ್ತು ಬ್ಯಾಟರಿಯ ಕೇಸಿಂಗ್‌ಗೆ ಹಾನಿಯಾಗುತ್ತದೆಯೇ, ಬ್ಯಾಟರಿಗೆ ಬೆಂಕಿ ಹೊತ್ತಿಕೊಳ್ಳುತ್ತದೆಯೇ ಮತ್ತು ಬ್ಯಾಟರಿ ಸ್ಫೋಟಗೊಳ್ಳುತ್ತದೆಯೇ ಎಂಬುದನ್ನು ಈ ಪರೀಕ್ಷೆಯಲ್ಲಿ ಪರಿಶೀಲಿಸಲಾಗುತ್ತದೆ. ಎಆರ್‌ಎಐ 20 –10 ಡಿಗ್ರಿ ಸೆಲ್ಸಿಯಸ್ ಅಥವಾ 20 + 10 ಡಿಗ್ರಿ ಸೆಲ್ಸಿಯಸ್‌ನಲ್ಲಿ ಈ ಪರೀಕ್ಷೆ ನಡೆಸುತ್ತದೆ. ಅಂದರೆ, 10 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದ ಮಧ್ಯೆ ಈ ಪರೀಕ್ಷೆ ನಡೆಯುತ್ತದೆ. ಆದರೆ, ಚಾರ್ಜಿಂಗ್ ವೇಳೆ ಬ್ಯಾಟರಿಗಳು 45 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶಕ್ಕೆ ತಲುಪುತ್ತವೆ. ಜತೆಗೆ ಭಾರತದ ಸಂದರ್ಭದಲ್ಲಿ ಬೇಸಿಗೆಯಲ್ಲಿ ಹೊರಗಿನ ವಾತಾವರಣ ಹಲವೆಡೆ 40 ಡಿಗ್ರಿ ಸೆಲ್ಸಿಯಸ್‌ನಷ್ಟು ತಲುಪುತ್ತದೆ
- **ಬ್ಯಾಟರಿ ಓವರ್ ಚಾರ್ಜಿಂಗ್ ಪರೀಕ್ಷೆ:** ಬ್ಯಾಟರಿಯಲ್ಲಿ ಚಾರ್ಜಿಂಗ್ ಶೇ 100ರಷ್ಟನ್ನು ಮುಟ್ಟಿದ ಮೇಲೂ ಚಾರ್ಜ್ ಮಾಡಿದರೆ, ಆಗುವ ಪರಿಣಾಮಗಳನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ಈ ಪರೀಕ್ಷೆಯನ್ನು ಸಹ 10 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದ ವಾತಾವರಣದಲ್ಲಿ ನಡೆಸಲಾಗುತ್ತದೆ. ಆದರೆ ಓವರ್ ಚಾರ್ಜಿಂಗ್ ವೇಳೆ ಬ್ಯಾಟರಿಗಳ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪುವುದು ಸಾಮಾನ್ಯ
- **ಬ್ಯಾಟರಿ ಓವರ್ ಡಿಸ್‌ಚಾರ್ಜಿಂಗ್ ಪರೀಕ್ಷೆ:** ಬ್ಯಾಟರಿಯಲ್ಲಿ ಚಾರ್ಜಿಂಗ್ ಸೂಚಿತ ಮಟ್ಟಕಿಂತ ಕಡಿಮೆ ಬಂದ ನಂತರವೂ ಅದನ್ನು ಬಳಸಿದರೆ, ಅದನ್ನು ಓವರ್ ಡಿಸ್‌ಚಾರ್ಜ್ ಎಂದು ಕರೆಯಲಾಗುತ್ತದೆ. ಅಂತಹ ಸಂದರ್ಭದಲ್ಲಿ ಬ್ಯಾಟರಿ ಹೆಚ್ಚು ಬಿಸಿಯಾಗುತ್ತದೆಯೇ, ಬೆಂಕಿ ಹೊತ್ತಿಕೊಳ್ಳುತ್ತದೆಯೇ ಅಥವಾ ಸ್ಫೋಟಗೊಳ್ಳುತ್ತದೆಯೇ ಎಂಬುದನ್ನು ಈ ಪರೀಕ್ಷೆಯಲ್ಲಿ ಪರಿಶೀಲಿಸಲಾಗುತ್ತದೆ. ಇದನ್ನು ಸಹ 10 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದ ವಾತಾವರಣದಲ್ಲಿ ನಡೆಸಲಾಗುತ್ತದೆ. ಆದರೆ ಓವರ್ ಡಿಸ್‌ಚಾರ್ಜಿಂಗ್ ವೇಳೆ ಬ್ಯಾಟರಿಗಳ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪುವುದು ಸಾಮಾನ್ಯ
- **ಕಂಪನ, ಆಘಾತ ಪರೀಕ್ಷೆ:** ವಾಹನಗಳ ಚಾಲನೆ ವೇಳೆ ಉಂಟಾಗುವ ಕಂಪನ ಮತ್ತು ಆಘಾತಗಳಿಂದ ಬ್ಯಾಟರಿ ಮತ್ತು ಬ್ಯಾಟರಿ ಪ್ಯಾಕ್‌ಗೆ ಹಾನಿಯಾಗುತ್ತದೆಯೇ ಎಂಬುದನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ಪರೀಕ್ಷೆ ವೇಳೆ ಬ್ಯಾಟರಿ ಹೆಚ್ಚು ಬಿಸಿಯಾಗುತ್ತದೆಯೇ, ಬೆಂಕಿ ಹೊತ್ತಿಕೊಳ್ಳುತ್ತದೆಯೇ ಅಥವಾ ಸ್ಫೋಟಗೊಳ್ಳುತ್ತದೆಯೇ ಎಂಬುದನ್ನು ಈ ಪರೀಕ್ಷೆಯಲ್ಲಿ ಪರಿಶೀಲಿಸಲಾಗುತ್ತದೆ. ಈ ಪರೀಕ್ಷೆಯನ್ನು 10 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದ ವಾತಾವರಣದಲ್ಲಿ ನಡೆಸಲಾಗುತ್ತದೆ. ಆದರೆ, ವಾಸ್ತವದಲ್ಲಿ ವಾಹನಗಳ ಚಾಲನೆ ವೇಳೆ ಹೊರಗಿನ ವಾತಾವರಣದಲ್ಲಿ 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಉಷ್ಣಾಂಶವಿರುತ್ತದೆ
- **ಥರ್ಮಲ್ ಶಾಕಿಂಗ್:** ಬ್ಯಾಟರಿ ಮತ್ತು ಬಾಹ್ಯ ಉಷ್ಣಾಂಶದಲ್ಲಿ ಆಗುವ ದಿಢೀರ್ ಬದಲಾವಣೆಯಿಂದ ಬ್ಯಾಟರಿ ಮೇಲೆ ಆಗುವ ಪರಿಣಾಮಗಳನ್ನು ಪರಿಶೀಲಿಸಲು ಈ ಪರೀಕ್ಷೆ ನಡೆಸಲಾಗುತ್ತದೆ. ಇದನ್ನು ಮೈನಸ್ 20 ಡಿಗ್ರಿ ಸೆಲ್ಸಿಯಸ್‌ನಿಂದ 60 ಡಿಗ್ರಿ ಸೆಲ್ಸಿಯಸ್‌ವರೆಗಿನ ಉಷ್ಣಾಂಶದಲ್ಲಿ ನಡೆಸಲಾಗುತ್ತದೆ. ಈ ಪರೀಕ್ಷೆಯನ್ನು ಕೆಲವೇ ಸೆಕೆಂಡ್‌ಗಳ ಕಾಲ ನಡೆಸಲಾಗುತ್ತದೆ

ಬಹುತೇಕ ಪರೀಕ್ಷೆಗಳನ್ನು 10ರಿಂದ 30 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಲ್ಲೇ ನಡೆಸಲಾಗುತ್ತದೆ. ಆದರೆ ವಾಸ್ತವ ಬಳಕೆ ವೇಳೆ ಬ್ಯಾಟರಿಯಲ್ಲಿನ ಉಷ್ಣಾಂಶವೇ 45 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪುತ್ತದೆ. ಭಾರತದ ಹಲವು ಪ್ರದೇಶಗಳಲ್ಲಿ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ ಅನ್ನೂ ದಾಟುತ್ತದೆ. ಆದರೆ ಕಡಿಮೆ ಉಷ್ಣಾಂಶದಲ್ಲಿ ನಡೆದ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ಮಾದರಿಯ ಬ್ಯಾಟರಿಗಳು, ವಾಸ್ತವ ಬಳಕೆಯಲ್ಲಿ ಇನ್ನೂ ಹೆಚ್ಚಿನ ಉಷ್ಣಾಂಶವನ್ನು ಎದುರಿಸಬೇಕಾಗುತ್ತದೆ. ಇಷ್ಟೊಂದು ಉಷ್ಣಾಂಶದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಆ ಮಾದರಿಯ ಬ್ಯಾಟರಿಗೆ ಇದೆಯೇ ಎಂಬುದನ್ನು ಪರೀಕ್ಷೆ ವೇಳೆ ಪರಿಶೀಲಿಸುವುದೇ ಇಲ್ಲ. ಪರೀಕ್ಷಾ ನಿಯಮಗಳಲ್ಲಿ ಇರುವ ಈ ನ್ಯೂನತೆಯಿಂದಾಗಿ, ಬ್ಯಾಟರಿ ಸಾಮಾನ್ಯವಾಗಿ ಕಾರ್ಯನಿರ್ವಹಿಸುವ ಉಷ್ಣಾಂಶದಲ್ಲಿ ಬ್ಯಾಟರಿಗೆ ಏನಾಗುತ್ತದೆ ಎಂಬುದರ ಪರೀಕ್ಷೆ ನಡೆಯುವುದೇ ಇಲ್ಲ. ಇದರಿಂದ ಹೆಚ್ಚಿನ ಉಷ್ಣಾಂಶದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯವಿಲ್ಲದೇ ಇರುವ ಬ್ಯಾಟರಿಗಳನ್ನೂ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಲ್ಲಿ ಬಳಸಲು ಅವಕಾಶವಿದೆ.



ಥರ್ಮಲ್ ರನ್‌ಅವೇ

ಬಾಹ್ಯ ಮತ್ತು ಆಂತರಿಕ ಕಾರಣಗಳಿಂದ ಬ್ಯಾಟರಿಗಳಲ್ಲಿನ ಉಷ್ಣಾಂಶವು ವಿಪರೀತ ಮಟ್ಟದಲ್ಲಿ ಏರಿಕೆಯಾಗುವುದನ್ನು ಥರ್ಮಲ್ ರನ್‌ಅವೇ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಲಿಥಿಯಂ ಅಯಾನ್ ಬ್ಯಾಟರಿಗಳಲ್ಲಿ ಉಷ್ಣಾಂವು 45 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಾದರೆ, ಥರ್ಮಲ್ ರನ್‌ಅವೇ ಸಂಭವಿಸುವ ಅಪಾಯವಿರುತ್ತದೆ. ಹೀಗೆ ಆದಾಗ, ಬ್ಯಾಟರಿಯಲ್ಲಿ ಬೆಂಕಿ ಹೊತ್ತಿಕೊಳ್ಳುವ ಅಥವಾ ಬ್ಯಾಟರಿ ಸ್ಫೋಟಗೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ ಬ್ಯಾಟರಿಯ ಕಾರ್ಯಾಚರಣೆ ಉಷ್ಣಾಂಶವು 45 ಡಿಗ್ರಿ ಸೆಲ್ಸಿಯಸ್ ದಾಟದಂತೆ ಪೂರಕ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಇಂತಹ ವ್ಯವಸ್ಥೆಗಳು ವಿಫಲವಾದಾಗ ಅಥವಾ ಇಂತಹ ವ್ಯವಸ್ಥೆಗಳು ಇಲ್ಲದೇ ಇದ್ದಾಗ ಅಥವಾ ಬ್ಯಾಟರಿ ತಣ್ಣಗಾಗಿಸುವ ಬಾಹ್ಯ ಕೂಲಿಂಗ್ ವ್ಯವಸ್ಥೆ ಇಲ್ಲದೇ ಇದ್ದಾಗ ಥರ್ಮಲ್ ರನ್‌ಅವೇ ತಲೆದೋರುವ ಅಪಾಯವಿದೆ.

ಆಧಾರ: ಪಿಟಿಐ, ಎಆರ್‌ಎಐ, ಆಟೊಮೋಟಿವ್ ಇಂಡಸ್ಟ್ರಿ ಸ್ಟಾಡರ್ಡ್ಸ್–156,48,38 ನಿಯಮಾವಳಿಗಳು, ನಾಸಾ, ಪ್ಯಾನಸೋನಿಕ್ ಲಿಥಿಯಂ ಅಯಾನ್ ಬ್ಯಾಟರಿ ನಿರ್ವಹಣಾ ಮಾರ್ಗದರ್ಶಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 110

ಕುಲಘಾತುಕ ಗುಣನಿಧಿ ಚರಿತ್ರೆ

ಸೃಷ್ಟಿಖಂಡದಲ್ಲಿ 'ಗುಣನಿಧಿಚರಿತ್ರವರ್ಣನ' ಎಂಬ ಹದಿನೇಳನೆಯ ಅಧ್ಯಾಯವಿದೆ.

ಬ್ರಹ್ಮ ಹೇಳಿದ ಸೃಷ್ಟಿವರ್ಣನವನ್ನು ಕೇಳಿದ ನಂತರ ನಾರದ, ಮತ್ತೆ ಬ್ರಹ್ಮನನ್ನು 'ಭಕ್ತವತ್ಸಲನಾದ ಶಂಕರ ಕೈಲಾಸಕ್ಕೆ ಹೋಗಿದ್ದು ಯಾವಾಗ? ಮಹಾತ್ಮನಾದ ಕುಬೇರನೊಡನೆ ಆತನಿಗೆ ಸ್ನೇಹ ಎಲ್ಲಿ ಉಂಟಾಯಿತು? ಪರಿಪೂರ್ಣ ಶಿವಸ್ವರೂಪನಾದ ಹರನು ಅಲ್ಲಿ ಏನು ಮಾಡಿದ? ಇದೆಲ್ಲವನ್ನೂ ನನಗೆ ತಿಳಿಯಪಡಿಸು ತಂದೆಯೇ' ಎಂದು ಕೋರುತ್ತಾನೆ. ಅದಕ್ಕೆ ಬ್ರಹ್ಮ 'ನಾರದ ಕೇಳು. ಶಿರಸ್ಸಿನಲ್ಲಿ ಚಂದ್ರಲೇಖೆಯನ್ನು ತಳೆದ ಆ ಶಿವನ ಚರಿತ್ರೆಯನ್ನು ಹೇಳುತ್ತೇನೆ. ಆತನು ಕೈಲಾಸಕ್ಕೆ ಹೋದ ಬಗೆಯನ್ನೂ, ಕುಬೇರನೊಡನೆ ಆತನಿಗೆ ಸಖ್ಯವಾದ ರೀತಿಯನ್ನೂ ನಿನಗೆ ವಿವರಿಸುವೆ' ಎಂದು ಗುಣನಿಧಿಯ ಚರಿತ್ರೆಯನ್ನು ಹೇಳುತ್ತಾನೆ.

ಕಾಂಪಿಲ್ಯವೆಂಬ ಪಟ್ಟಣದಲ್ಲಿ ಸೋಮಯಾಜಿಗಳ ವಂಶದ ಯಜ್ಞದತ್ತನೆಂಬ ಒಬ್ಬ ದೀಕ್ಷಿತನಿದ್ದ. ಆತನು ಯಜ್ಞವಿದ್ಯೆಯಲ್ಲಿ ಪಾರಂಗತನಾಗಿದ್ದ. ಆತ ಚತುರ್ವೇದ, ಶಿಕ್ಷಾದಿ ವೇದಾಂಗಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ವೇದಾಂತ ಮೊದಲಾದ ತತ್ವಶಾಸ್ತ್ರಗಳಲ್ಲಿ ಬಹು ಸಮರ್ಥನಾಗಿದ್ದ. ಅಲ್ಲದೆ, ಆತ ರಾಜಮಾನ್ಯನೂ ಬಹಳ ದಾನಮಾಡುವವನೂ ಆಗಿದ್ದ. ಆತನ ಕೀರ್ತಿಯು ಎಲ್ಲೆಲ್ಲಿಯೂ ಹರಡಿತ್ತು. ಆತ ಅಗ್ನಿಶುಶ್ರೂಷೆ ಮತ್ತು ವೇದಾಧ್ಯಯನದಲ್ಲಿ ತುಂಬ ಆಸಕ್ತಿ ವಹಿಸಿದ್ದ. ಯಜ್ಞದತ್ತನಿಗೆ ಸುಂದರನಾದ, ಮನೋಹರವಾದ ಅಂಗಸೌಷ್ಠವ ಹೊಂದಿದ, ಚಂದ್ರಬಿಂಬವನ್ನು ಹೋಲುವಂಥ ಗುಣನಿಧಿ ಎಂಬ ಮಗನಿದ್ದ.

ಉಪನಯನ ಸಂಸ್ಕಾರವಾದ ನಂತರ ಗುಣನಿಧಿ ಎಂಟು ವಿದ್ಯೆಗಳನ್ನು ಚೆನ್ನಾಗಿ ಕಲಿತ. ಆದರೆ, ವಿದ್ಯಾವಂತನಾದ ನಂತರ ತಂದೆ ಯಜ್ಞದತ್ತನಿಗೆ ತಿಳಿಯದಂತೆ ಜೂಜುಗಾರಿಕೆಯಂಥ ಕೆಟ್ಟ ಚಟ ಕಲಿತ. ಇದಕ್ಕಾಗಿ ಗುಣನಿಧಿ ತನ್ನ ತಾಯಿಯನ್ನು ಪೀಡಿಸಿ ಹಣವನ್ನು ಪಡೆಯುತ್ತಿದ್ದ. ಒಬ್ಬನೇ ಮಗನೆಂಬ ಮಮತೆಯಿಂದ ಆ ತಾಯಿ ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದಳು. ಹಾದಿತಪ್ಪಿದ ಗುಣನಿಧಿ ಜೂಜುಕೋರರೊಂದಿಗೆ ಸ್ನೇಹವನ್ನು ಬೆಳೆಸಿ, ಕುಲ ಸಂಪ್ರದಾಯದ ಆಚಾರಗಳನ್ನೆಲ್ಲಾ ಬಿಟ್ಟ. ವೇದಶಾಸ್ತ್ರಗಳನ್ನು, ವೇದಾಂತಿಗಳನ್ನು ದೂಷಿಸುತ್ತಿದ್ದ. ಯಾವಾಗಲೂ ಸಂಗೀತವನ್ನು ಹಾಡುತ್ತ, ವಾದ್ಯಗಳನ್ನು ನುಡಿಸುತ್ತ, ಕೋಳಿ-ಕಾಳಗರೊಡನೆ ಸೇರಿ ವಿನೋದಾನಂದ ಮಾಡುತ್ತಿದ್ದ. ಪುಂಡುಪೋಕರಿಗಳೊಂದಿಗೆ ಹೆಚ್ಚು ಸ್ನೇಹ ಹೊಂದಿದ್ದ ಆತನಿಗೆ ತಾಯಿ ಎಷ್ಟು ಬುದ್ಧಿ ಹೇಳಿದರೂ ಕೇಳುತ್ತಿರಲಿಲ್ಲ.

ನಿತ್ಯ ಗೃಹಕೃತ್ಯಗಳಲ್ಲೇ ಮಗ್ನನಾಗಿರುತ್ತಿದ್ದ ಯಜ್ಞದತ್ತ ದೀಕ್ಷಿತನಿಗೆ ತನ್ನ ಮಗ ಕೆಟ್ಟ ಹಾದಿ ತುಳಿದಿರುವುದು ಗೊತ್ತಿರಲಿಲ್ಲ. ತಂದೆಗೆ ಕಾಣದಂತೆ ಓಡಾಡುತ್ತಿದ್ದ ಗುಣನಿಧಿಯ ಬಗ್ಗೆ ಯಜ್ಞದತ್ತ ತನ್ನ ಪತ್ನಿಯನ್ನು ಕೇಳಿದಾಗಲೆಲ್ಲ' ಈಗ ತಾನೇ ಅವನು ಹೊರಗೆ ಹೋಗಿದ್ದಾನೆ. ಸ್ನಾನಮಾಡಿ, ದೇವರ ಪೂಜೆಯನ್ನು ನೆರವೇರಿಸಿ ಪಾಠಗಳನ್ನೆಲ್ಲಾ ಓದುತ್ತಿದ್ದ. ಈಗಷ್ಟೆ ಸ್ನೇಹಿತರೊಡನೆ ಹೋಗಿದ್ದಾನೆ' ಎಂದು ಸುಳ್ಳು ಹೇಳುತ್ತಿದ್ದಳು. ಒಬ್ಬನೇ ಮಗನೆಂಬ ಪ್ರೀತಿಯಿಂದ, ನಿಜವನ್ನು ಮರೆಮಾಚುತ್ತಿದ್ದಳು. ಇದರಿಂದ ಯಜ್ಞದತ್ತನಿಗೆ ತನ್ನ ಮಗನ ದುರ್ನಡತೆಗಳೊಂದೂ ಗೊತ್ತಾಗುತ್ತಿರಲಿಲ್ಲ.

ಗುಣನಿಧಿ ಹದಿನಾರರ ಪ್ರಾಯಕ್ಕೆ ಬಂದಾಗ ಗೃಹ್ಯಸೂತ್ರೋಕ್ತ ವಿಧಿಗನುಸಾರವಾಗಿ ಮದುವೆ ಮಾಡಲಾಯಿತು. ನಂತರವೂ ಗುಣನಿಧಿ ತನ್ನ ಗುಣಗಳನ್ನ ಬದಲಿಸಿಕೊಳ್ಳಲಿಲ್ಲ. ಕಂಗಾಲಾದ ತಾಯಿ ಮಗನಿಗೆ ಬುದ್ಧಿ ಹೇಳುತ್ತಿದ್ದಳು. ಆದರೆ ಗುಣನಿಧಿ ಮಾತ್ರ ಗುಣವಂತನಾಗುವ ಯಾವ ಲಕ್ಷಣವನ್ನೂ ತೋರಿಸಲಿಲ್ಲ. 'ಮಗು ಗುಣನಿಧಿ, ಮಹಾತ್ಮನಾದ ನಿನ್ನ ತಂದೆಯು ಮಹಾ ಕೋಪಿಷ್ಠನೆಂಬುದು ನಿನಗೆ ತಿಳಿಯದೇ? ಅವರಿಗೇನಾದರೂ ನಿನ್ನ ಕೆಟ್ಟ ನಡತೆಯ ವಿಚಾರ ಗೊತ್ತಾದ್ದರೆ, ನಿನ್ನನ್ನೂ ನನ್ನನ್ನೂ ಚೆನ್ನಾಗಿ ಹೊಡೆಯುವರು. ನಾನು ನಿತ್ಯವೂ ನಿಮ್ಮ ತಂದೆಗೆ ಗೊತ್ತಾಗದಂತೆ ನಿನ್ನ ಕೆಟ್ಟ ನಡತೆಯೆಲ್ಲವನ್ನೂ ಮರೆಮಾಚುತ್ತಿದ್ದೇನೆ. ನಿನ್ನ ತಂದೆ ತಮ್ಮ ಉತ್ತಮಶೀಲತನದಿಂದ, ಐಶ್ವರ್ಯದಿಂದ ಜನರೆಲ್ಲರಿಗೂ ಮಾನ್ಯರಾಗಿದ್ದಾರೆ. ಸದ್ವಿದ್ಯೆಯೂ ಸತ್ಸಹವಾಸವೂ ನಮ್ಮಂಥ ಶೀಲವಂತರಿಗೆ ಐಶ್ವರ್ಯವಲ್ಲವೇ? ನಿನಗೇಕೆ ಗುಣಸಂಪತ್ತಿನಲ್ಲಿ ಅಭಿಲಾಷೆ ಹುಟ್ಟಲಿಲ್ಲ? ವಂಶಪಾರಂಪರ್ಯವಾಗಿ ನಿಮ್ಮ ಹಿರಿಯರೆಲ್ಲರೂ ಒಳ್ಳೆಯ ಶ್ರೋತ್ರಿಯರು, ದೀಕ್ಷಿತರು, ಸೋಮಯಾಗವನ್ನು ಮಾಡಿದವರು. ಅವರೆಲ್ಲ ನಮ್ಮ ವಂಶದ ಕೀರ್ತಿಯನ್ನು ಬೆಳೆಸಿದ್ದಾರೆ. ನಿನಗೇಕೆ ಇಂಥ ಕೆಟ್ಟ ಬುದ್ಧಿ ಬಂತು' ಅಂತ ರೋದಿಸುತ್ತಾಳೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಮೆರವಣಿಗೆ ಹೋಗುತ್ತಿಲ್ಲ. ಮತ್ತೆ ನಿಮಗೇಕೆ ಸಿಟ್ಟು?' ಎಂಬ ಒಕ್ಕಣೆ ಇರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 27 ಸೆಕೆಂಡ್‌ನ ಈ ವಿಡಿಯೊದಲ್ಲಿ ಕೆಲವರು ರೈಲಿನತ್ತ ಕಲ್ಲು ತೂರುತ್ತಿರುವ ದೃಶ್ಯಗಳಿವೆ. ರೈಲಿನ ಸದ್ದಿನಿಂದ ನಮಾಜ್‌ಗೆ ಅಡಚಣೆ ಆಯಿತು ಎಂಬ ಆಕ್ರೋಶದಲ್ಲಿ ಮುಸ್ಲಿಂ ಯುವಕರು ರೈಲಿನತ್ತ ಕಲ್ಲು ತೂರಾಟ ನಡೆಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊವನ್ನು ಹಂಚಿಕೊಂಡ ಕೆಲವರು ಹೇಳಿಕೊಂಡಿದ್ದಾರೆ.

ಈ ಮಾಹಿತಿ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ವೇದಿಕೆ ಹೇಳಿದೆ. ಚೆನ್ನೈನ ಪೆರಂಬೂರು ರೈಲು ನಿಲ್ದಾಣದಲ್ಲಿ ಎರಡು ಗುಂಪುಗಳ ನಡುವೆ ನಡೆದ ಸಂಘರ್ಷದ ಸಂದರ್ಭದಲ್ಲಿ ಉಂಟಾದ ಕಲ್ಲು ತೂರಾಟದ ವಿಡಿಯೊ ಇದು ಎಂದು 'ದಿ ಲಾಜಿಕಲ್ ಇಂಡಿಯನ್' ಹೇಳಿದೆ. ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಈ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ನ್ಯೂಸ್ 18 ವಾಹಿನಿಯಲ್ಲಿ 2020ರ ಏಪ್ರಿಲ್ 12ರಂದು ಈ ವಿಡಿಯೊ ಪ್ರಕಟವಾಗಿದೆ. ಪೆರಂಬೂರು ರೈಲು ನಿಲ್ದಾಣದ ಸಮೀಪ ಕಾಲೇಜು ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ನಡೆದ ಸಂಘರ್ಷದ ವಿಡಿಯೊ ಎಂಬ ಮಾಹಿತಿ ಮೂಲ ವಿಡಿಯೊದ ಜತೆಗೆ ಇದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ- ವಸಂತ ಋತು ತಿಥಿ: ವೈಶಾಖ ಶುಕ್ಲ ತೃತೀಯ **ಅಹೋರಾತ್ರ ನಕ್ಷತ್ರ:** ರೋಹಿಣಿ ಗಂ. 27-08 **ಯೋಗ:** ಶೋಭನ ಗಂ. 16-15, **ಕರಣ:** ತೈತಿಲ ಗಂ. 18-24, ಮೇಷ ಮಾಸದ 19ನೇ ದಿನ. **ರಾಹುಕಾಲ:** ಮಧ್ಯಾಹ್ನ 03:00-04:30, **ಸೂರ್ಯೋದಯ:** 06-12 **ಸೂರ್ಯಾಸ್ತ :** 06-43, **ಮುಸ್ಲಿಂ ದಿನಾಂಕ:** 01 ಶವ್ವಾಲ್, **ದಿನ ವಿಶೇಷ:** ಪರಶುರಾಮ ಜಯಂತಿ, ಅಕ್ಷಯ ತೃತೀಯ, ಬಸವ ಜಯಂತಿ, ಕೇದಾರ ಬದರಿ ಯಾತ್ರಾ, ದಾದಾ ಚೆಲ್ಲಾರಾಮ್‌ರವರ ಜನ್ಮ ದಿನೋತ್ಸವ (ಸಿಂಧಿ), ಈದ್-ಉಲ್-ಫಿತರ್ (ಮುಸ್ಲಿಂ), **ಅದೃಷ್ಟ ಸಂಖ್ಯೆ:** 2, 11

ಮೇಷ: ನಿಮ್ಮೆಲ್ಲ ಕನಸುಗಳು ಕೈಗೂಡುವ ದಿನ. ಆಸ್ತಿ ವ್ಯವಹಾರಗಳಿಂದ ಉತ್ತಮ ಲಾಭ ಹಾಗೂ ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆಗೆ ಹೆಚ್ಚಿನ ಗೌರವ-ಆದರಗಳು ಸಿಗುವುದು.

ವೃಷಭ: ಈ ದಿನ ನಿಮಗೆ ಮಿಶ್ರಫಲ ಅನುಭವಕ್ಕೆ ಬರಲಿದೆ. ಅಧಿಕಾರಿಗಳೊಂದಿಗೆ ಹೊಂದಿಕೊಳ್ಳುವ ಗುಣ ಹಾಗೂ ನಿಮ್ಮ ಬುದ್ಧಿವಂತಿಕೆಯ ಸಾಮರ್ಥ್ಯ ನಿಮ್ಮ ಏಳಿಗೆಯಲ್ಲಿ ಮುಖ್ಯ ಪಾತ್ರ ವಹಿಸುವುದು. ಅನಾರೋಗ್ಯ ಸಂಭವಿಸಬಹುದು.

ಮಿಥುನ: ಸ್ವತ್ತು ವಿವಾದಗಳ ಇತ್ಯರ್ಥಕ್ಕೆ ಸೂಕ್ತ ವಾತಾವರಣ ಸೃಷ್ಟಿಯಾಗಲಿದೆ. ಕೋರ್ಟ್– ಕಚೇರಿ ಕೆಲಸಗಳಲ್ಲಿ ಜಯ ನಿಮ್ಮ ಪರವಾಗಿ ಉಂಟಾಗಿ ಸಮಸ್ಯೆ ಗಳು ಬಗೆಹರಿಯುತ್ತವೆ. ಸಮಾಜ ಸೇವೆಯಲ್ಲಿ ಪುತ್ರರ ಘನತೆ ಗೌರವ ಹೆಚ್ಚಳ.

ಕರ್ಕಾಟಕ: ನಿಮ್ಮ ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ. ಇದರಿಂದ ನಿಮ್ಮ ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ವಿದ್ಯಾರ್ಥಿಗೆ ಶಿಕ್ಷಣ ಮುಂದುವರಿಸಲು ಸರ್ಕಾರ, ಬಂಧುಗಳಿಂದ ಸಹಾಯ.

ಸಿಂಹ: ನಿತ್ಯ ಬಳಕೆಯ ವಾಹನಗಳು ರಿಪೇರಿಗೆ ಬರುವಂತಾಗಲಿದೆ. ಗಂಭೀರ ಹಂತದಲ್ಲಿರುವ ನಿಮ್ಮ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವುದರಲ್ಲಿ ಈ ದಿನ ಯಶಸ್ವಿಯಾಗುವಿರಿ.

ಕನ್ಯಾ: ನಿಮ್ಮಲ್ಲಿರುವ ಉತ್ತಮ ಗುಣಗಳು ನಿಮ್ಮನ್ನು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಯಾವುದೇ ವಿಷಯವನ್ನು ಮುಂದೂಡುವುದು ಸರಿಯಲ್ಲ.

ತುಲಾ: ವಿದೇಶದಿಂದ ಒಂದು ಶುಭ ಸಂದೇಶ ಬರಲಿದೆ. ಅನವಶ್ಯಕ ತಿರುಗಾಟ ವಿದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ ಬರುವುದು. ನಿಮ್ಮಲ್ಲಿ ಯಾವುದನ್ನೇ ಆಗಲಿ ಸಾಧಿಸಿ ತೋರಿಸುವ ಶಕ್ತಿ ಸಾಮರ್ಥ್ಯವಿದೆ.

ವೃಶ್ಚಿಕ: ನಿಮ್ಮಲ್ಲಿ ಅದ್ಭುತವಾದ ಆಲೋಚನೆಗಳಿವೆ. ಅದನ್ನು ಕಾರ್ಯರೂಪಕ್ಕೆ ತರಲು ಸೃಜನಶೀಲ ಗೆಳೆಯರನ್ನು ಆರಿಸಿಕೊಳ್ಳಬೇಕಷ್ಟೆ. ಸಿವಿಲ್ ಎಂಜಿನಿಯರ್‌ಗಳಿಗೆ ಬೃಹತ್ ವಾಣಿಜ್ಯ ಮಳಿಗೆಯ ಕಾರ್ಯಭಾರ ಸಿಗಬಹುದು.

ಧನು: ಗಿಡಮೂಲಿಕೆಗಳ ಬಳಕೆಯಿಂದ ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡು ಬಂದು ದೈನಂದಿನ ಚುಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಕಾರ್ಯ ನಿಮಿತ್ತ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಇರಲಿ.

ಮಕರ: ನಿಮ್ಮ ಸ್ನೇಹಿತರ ಬಳಗದಲ್ಲಿ ಅವರವರ ಸ್ವಾರ್ಥಕ್ಕಾಗಿ ನಿಮ್ಮನ್ನು ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ನಡೆಯಲಿದೆ. ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ವ್ಯವಹಾರ ಅಭಿವೃದ್ಧಿಯಾಗಲಿದೆ.

ಕುಂಭ: ಮನೆಯಲ್ಲಿ ಆನಂದದ ವಾತಾವರಣ. ಹಾಗೆ ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಮನೆಗೆ ಬಂಧುಗಳ ಆಗಮನವಿರುವುದು. ಬರಹಗಾರರಿಗೆ ಉತ್ತೇಜನದ ಕೊರತೆ ಕಾಣಲಿದೆ.

ಮೀನ: ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ. ಹೊಸ ಸ್ಥಳದಲ್ಲಿನ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುವಿರಿ. ವೈದ್ಯ ವೃತ್ತಿಯಲ್ಲಿನ ನಿಮ್ಮ ಸಾಧನೆಗೆ ಸಾಮಾಜಿಕ ಗೌರವ ಪಡೆಯುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರತ್ಯೇಕತೆಯಿಂದ ಹಾನಿ

ಪ್ರತ್ಯೇಕ ಸುಖವ, ನೀಂ ಪ್ರತ್ಯೇಕ ಸಂಪದವ |
ನತ್ಯಾಶೆಯಿಂದರಸಿ ಮಿಕ್ಕೆಲ್ಲ ಜಗವ - ||
ನೊತ್ತಟ್ಟಿಗಿಡುವೆನೆನೆ, ನಷ್ಟವಾರಿಗೊ ಮರುಳೆ ? |
ಬತ್ತುವುದು ನಿನ್ನಾತ್ಮ- ಮಂಕುತಿಮ್ಮ
|| 619 ||

ಪದ-ಅರ್ಥ: ಸಂಪದವನತ್ಯಾಶೆಯಿಂದರಸಿ = ಸಂಪದವನು + ಅತ್ಯಾಶೆಯಿಂದ + ಅರಸಿ, ಜಗವನೊತ್ತಟ್ಟಿಗಡುವೆನೆನೆ = ಜಗವನು + ಒತ್ತಟ್ಟಿಗೆ + ಇಡುವೆನು + ಎನೆ, ನಷ್ಟವಾರಿಗೊ = ನಷ್ಟವು + ಯಾರಿಗೊ, ಬತ್ತುವುದು = ಒಣಗಿಹೋಗುವುದು.

ವಾಚ್ಯಾರ್ಥ: ಎಲ್ಲವೂ ಪ್ರತ್ಯೇಕವಾಗಿ ಇರಬೇಕು ತನಗೆ, ಎಂದು ಅತಿ ಆಸೆಯಿಂದ ಸುಖ, ಸಂಪದಗಳನ್ನು ಹುಡುಕಾಡುತ್ತ, ಉಳಿದ ಜಗತ್ತನ್ನೆಲ್ಲ ಬದಿಗಿಟ್ಟುಬಿಡುವೆನು ಎಂದರೆ ನಷ್ಟ ಯಾರಿಗೆ? ಅದರಿಂದ ಬತ್ತುವುದು ನಿನ್ನ ಆತ್ಮ.

ವಿವರಣೆ: ನಾನು ಈ ತಿಂಗಳಿನ ಸೈಂಟಿಫಿಕ್ ಅಮೆರಿಕನ್ ಪತ್ರಿಕೆಯನ್ನು ಓದುತ್ತಿದ್ದೆ. ಅದರಲ್ಲಿ 'How wealth reduces compassion' ಎನ್ನುವ ಲೇಖನ ನನ್ನ ಮನಸ್ಸನ್ನು ಸೆಳೆಯಿತು.

ಬರ್ಕಲಿಯ ಮನಃಶಾಸ್ತ್ರಜ್ಞರಾದ ಪೌಲ್ ಪಿಫ್ ಮತ್ತು ಕೆಲ್ಟನ್ ಅವರು ಸಾಕಷ್ಟು ಸಂಶೋಧನೆ ಮಾಡಿ ಒಂದು ವಿಷಯವನ್ನು ಪ್ರಕಟಿಸಿದ್ದಾರೆ. ಅದರಂತೆ ಶ್ರೀಮಂತಿಕೆ ಹೆಚ್ಚಾದಂತೆ ಮತ್ತೊಬ್ಬರ ಬಗೆಗಿನ ಕರುಣೆ, ಅನುಕಂಪ ಕಡಿಮೆಯಾಗುತ್ತದಂತೆ. ಅದಕ್ಕೆ ಕಾರಣ ಅದ್ಭುತವಾಗಿದೆ. ಹಣ, ಅಧಿಕಾರ ಹೆಚ್ಚಾದಂತೆ ಇನ್ನಷ್ಟು ಪಡೆಯಬೇಕೆಂಬ ಆಸೆ ಬಲವತ್ತರವಾಗುತ್ತದೆ. ಅವರೊಂದು ಪುಟ್ಟ ಪ್ರಯೋಗ ಮಾಡುತ್ತಾರೆ.

ಒಂದು ಕೋಣೆಯಲ್ಲಿ ಕೆಲವು ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ. ಅವರಲ್ಲಿ ಕೆಲವು ಮಕ್ಕಳು ತುಂಬಾ ಶ್ರೀಮಂತ ಮನೆತನದವರು ಮತ್ತು ಕೆಲವರು ತುಂಬಾ ಬಡತನದಲ್ಲಿದ್ದವರು. ಎಲ್ಲರಿಗೂ ಒಂದೇ ತರಹದ ಯೂನಿಫಾರ್ಮ ಹಾಕಿದ್ದರಿಂದ ಅವರಿಗೆ ಆ ಅಂತರ ತಿಳಿಯುತ್ತಿದ್ದಿಲ್ಲ. ಮೇಜಿನ ಮೇಲೆ ಒಂದು ದೊಡ್ಡ ಗಾಜಿನ ಪಾತ್ರೆಯಲ್ಲಿ ಚಾಕೊಲೇಟ್‌ಗಳ ರಾಶಿ ಹಾಕಿ ಹೇಳಿದರಂತೆ, 'ನಿಮಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳಿ. ಉಳಿದ ಚಾಕೊಲೇಟ್‌ಗಳನ್ನು ಹತ್ತಿರದ ಅನಾಥಾಶ್ರಮಕ್ಕೆ ಕೊಡುತ್ತೇವೆ'. ಎಲ್ಲರೂ ಹೊರಗೆ ಹೋಗಿ ಒಳಗೆ ನಡೆಯುತ್ತಿದ್ದುದನ್ನು ವಿಡಿಯೊ ಮೂಲಕ ಗಮನಿಸುತ್ತಿದ್ದರು. ಶ್ರೀಮಂತ ಮಕ್ಕಳು ಯಾರನ್ನೂ ಮಾತನಾಡಿಸದೆ, ತಮಗಿರುವ ಎಲ್ಲಾ ಜೇಬುಗಳಲ್ಲಿ ಚಾಕೊಲೇಟ್‌ಗಳನ್ನು ತುಂಬಿಕೊಂಡು ಹೊರಟರು. ಬಡಮಕ್ಕಳು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದವು. ಹೊರಡುವಾಗ ಈ ಹುಡುಗರು ಒಂದೋ ಎರಡೋ ಚಾಕೊಲೇಟ್ ತೆಗೆದುಕೊಂಡು ಸಂತೋಷದಿಂದ ಹೋದರಂತೆ. ಮನೋವಿಜ್ಞಾನಿಗಳು ಹೇಳುತ್ತಾರೆ, ಗಳಿಕೆಯ ಆಸೆ ಎನ್ನುವುದು ಒಂದು ರೋಗ, ಗಳಿಸಿದಷ್ಟೂ ಅದು ಉಲ್ಬಣವಾಗುತ್ತ ಹೋಗುವುದಲ್ಲದೆ, ಪರರ ಬಗ್ಗೆ ಚಿಂತೆ, ಕಾಳಜಿ ಕಡಿಮೆಯಾಗುತ್ತದೆ'. ಅಂದರೆ ಆ ತರಹದ ಜನ ತುಂಬಾ ಸ್ವಾರ್ಥಿಯಾಗುತ್ತಾರೆ.

ಕಗ್ಗ ಹೇಳುತ್ತದೆ, ನನಗೆ ಎಲ್ಲವೂ ವಿಶೇಷವಾಗಬೇಕು, ನಾನು ಎಲ್ಲರಿಗಿಂತ ಭಿನ್ನವಾಗಿರಬೇಕು ಎಂದು ಅತಿ ಆಸೆಯಿಂದ ಎಲ್ಲವನ್ನೂ ಬಾಚಿಕೊಳ್ಳುತ್ತ ಹೊರಟಾಗ, ಯಾರೂ ಆ ವ್ಯಕ್ತಿಯ ಹತ್ತಿರ ಸುಳಿಯಲಾರರು. ಅವನಿಗೆ ಗೊತ್ತಾಗದಂತೆ ಅವನೇ ಏಕಾಂಗಿಯಾಗಿ ಬಿಡುತ್ತಾನೆ. ಜಗತ್ತಿನಲ್ಲಿ ಎಲ್ಲವೂ ಇದೆ, ಹಂಚಿ ತಿಂದರೆ. ಎಲ್ಲವೂ ನನಗೇ ಇರಬೇಕು ಎಂದರೆ, ಉಳಿದವರು ಯಾರೂ ಬೇಡ ಎಂದಂತಾಯಿತಲ್ಲ. ಸ್ನೇಹದಿಂದ, ಸಹಬಾಳ್ವೆಯಿಂದ, ಸ್ವಾರ್ಥ ನಾಶ ವಾಗುತ್ತದೆ. ಲೋಕಸ್ನೇಹದಿಂದ ಆತ್ಮ-ವಿಸ್ತರಣ. ಪ್ರತ್ಯೇಕತೆ ಲೋಕಜೀವನದ ಸೊಗಸನ್ನು ಕಳೆದು, ಆತ್ಮ ಸಂದರ್ಶನದ ಮೂಲ ಸ್ರೋತವನ್ನೇ ಒಣಗಿಸಿಬಿಡುತ್ತದೆ.

ಪದಬಂಧ 4946

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ವಿಕ್ರಯಿಸಿ ಮೋಸಹೋಗು! (3)
2.ಲೋಪದೋಷಗಳನ್ನು ಸರಿಪಡಿಸುವವನು (4)
4.ನಡುವೆ ಲೋಭವನ್ನಿಟ್ಟು ಆಸೆ ಹುಟ್ಟಿಸುವುದು (4)
6.ಆನಂದ ಹೀಗೆ ಬಂದಿದೆ (3)
7.ತಿರುವು ಮುರುವಾಗಿರುವ ಒಜ್ಜೆ (2)
9.ರಸಸ್ವಾದನೆ ಬಲ್ಲವನೀತ (3)
11.ವಠಾರದವರಿಗೆ ದೊರೆತ ಅನುಗ್ರಹ! (2)
13.ಸಭೆಯಲ್ಲಿ ಕುಳಿತಿರುವವನು (3)
14.ರುಚಿಕಟ್ಟಾದ ಅಡುಗೆಯಿದು (4)
16.ಮುಕ್ತಿಸಾಧನೆಗಾಗಿ ದೇವರನ್ನು ಆರಾಧಿಸುವ ಬಗೆ (4)
17.ತರಳೆ ಹಿಡಿದಿರುವ ಹತ್ತಿ (3)

ಮೇಲಿಂದ ಕೆಳಕ್ಕೆ
1.ಒಂದೇ ವಿಧ ಎಂದು ಹೀಗೆನ್ನಿ (5)
2.ಧಾನ್ಯಗಳ ಕೊಯ್ಲಿನ ಕಾಲ (2)
3.ಬೆಳ್ಳಿ ಹಬ್ಬವಿದು (5)
5.ಗರ ಬಡಿದಿರುವ ಶಹರು (3)
8.ಮನಸ್ಸಿನ ಭಾವನೆಗಳನ್ನು ತೋರ್ಪಡಿಸಿಕೊಳ್ಳುವುದು (5)
10.ವನದ ಬಗ್ಗೆ ಬರೆದ ಪದ್ಯ (3)
12.ಯುದ್ಧವನ್ನು ಸಾರುವ ಕಹಳೆ (5)
15.ಪ್ರವೇಶಿಸಲು ಅಶಕ್ಯವಾದುದು (2)



4945ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪನ್ನ 2.ಕಲ್ಲೋಲ
4.ತಲೋದರಿ 6.ಗಡಿಯಾರ
8.ಪಾಕ 9.ಸುಂಕ
10.ಕಡವರ 12.ಪ್ರಕರಣ
14.ಸರೀಕ 15.ಪ್ಲುತ

ಮೇಲಿಂದ ಕೆಳಕ್ಕೆ:
1.ಪರಾತ 2.ಕಮರಿ
3.ಲವಂಗ 5.ಲೋಲಕ
7.ರಸಿಕ 8.ಪಾಲಕ
9.ಸುಂದರ 11.ರಕ್ಕಸ
12.ಪ್ರತೀಕ 13.ಣಲ್ಲತ

ಸುಡೊಕು 5332

6		4	9		7			8
					6			
	7	8	2			4		6
7					8		6	
	8		4			7		5
		5		7				
4	9		3	8		6		1
	6					5		
8		7	1		4			3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5331 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಜಯದ ಹಾದಿಗೆ ಮರಳಿದ ಕೋಲ್ಕತ್ತ

ನಿತೀಶ್ ರಾಣಾ, ರಿಂಕು ಸಿಂಗ್ ಮಿಂಚು; ಸಂಜು ಅರ್ಧಶತಕ ವ್ಯರ್ಥ

ನಿತೀಶ್ ರಾಣಾ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಮುಂಬೈ (ಪಿಟಿಐ): ಸತತ ಐದು ಪಂದ್ಯಗಳಲ್ಲಿ ಸೋತು ಕಂಗೆಟ್ಟಿದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಸೋಮವಾರ ಗೆಲುವಿನ ಹಳಿಗೆ ಮರಳಿತು.

ನಿತೀಶ್ ರಾಣಾ (ಅಜೇಯ 48; 37ಎ) ಮತ್ತು ರಿಂಕು ಸಿಂಗ್ (ಅಜೇಯ 42; 23ಎ) ಅವರ ಚೆಂದದ ಬ್ಯಾಟಿಂಗ್ ಬಲದಿಂದ ಕೋಲ್ಕತ್ತ ತಂಡವು ರಾಜಸ್ಥಾನ್ ರಾಯಲ್ಸ್ ಎದುರು 7 ವಿಕೆಟ್‌ಗಳಿಂದ ಜಯಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಆರಂಭಿಸಿದ ರಾಯಲ್ಸ್ ತಂಡವು ಸಂಜು (54; 49ಎ) ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 152 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 19.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 158 ರನ್ ಗಳಿಸಿತು.

ಕೋಲ್ಕತ್ತ ತಂಡವು 12.5 ಓವರ್‌ಗಳಲ್ಲಿ 92 ರನ್ ಗಳಿಸಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ನಾಯಕ ಶ್ರೇಯಸ್ ಅಯ್ಯರ್ (34; 32ಎ) ಕೂಡ ಪೆವಿಲಿಯನ್ ಸೇರಿಯಾಗಿತ್ತು. ಈ ಹಂತದಲ್ಲಿ ಜೊತೆಗೂಡಿದ ರಾಣಾ ಮತ್ತು ರಿಂಕು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿದರು. 19ನೇ ಓವರ್‌ನಲ್ಲಿ ಅಂಪೈರ್ ನೀಡಿದ ವೈಡ್ ಎಸೆತದ ಕುರಿತು ರಾಯಲ್ಸ್ ನಾಯಕ ಸಂಜು ಆಕ್ಷೇಪ ವ್ಯಕ್ತಪಡಿಸಿದರು.

ಬೌಲರ್‌ಗಳ ಮಿಂಚು: ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ಸ್ ತಂಡಕ್ಕೆ ಕೋಲ್ಕತ್ತದ ಬೌಲರ್‌ಗಳು ತಡೆಯೊಡ್ಡಿದರು. ಉಮೇಶ್ ಯಾದವ್ ಒಂದು ಮೇಡನ್ ಓವರ್ ಮಾಡಿ ಒಂದು ವಿಕೆಟ್ ಕೂಡ ಗಳಿಸಿದರು. ಟಿಮ್ ಸೌಥಿ ಎರಡು ವಿಕೆಟ್ ಗಳಿಸಿದರು.

ರಾಯಲ್ಸ್ ತಂಡದ ಸಂಜು ತಾಳ್ಮೆಯಿಂದ ಅರ್ಧಶತಕ ಗಳಿಸಿದರು. ಕನ್ನಡಿಗ ಕರುಣ್ ನಾಯರ್ (13;13ಎ) ಸಂಜು ಜೊತೆಗೆ ಜೊತೆಯಾಟ ಕಟ್ಟಿದರು. ಆದರೆ, ಅನುಕೂಲ್ ರಾಯ್ ಎಸೆತದಲ್ಲಿ ಔಟಾದರು. ಕ್ರೀಸ್‌ಗೆ ಬಂದ ರಿಯಾನ್ ಪರಾಗ್ (19; 12ಎಸೆ) ಆಕ್ರಮಣಶೀಲ ಆಟವಾಡಿದರು. ಒಂದು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿ ಬೌಲರ್‌ಗಳಿಗೆ ಸವಾಲೊಡ್ಡಿದ್ದರು. ಶಿಮ್ರೊನ್ ಹೆಟ್ಮೆಯರ್ (ಔಟಾಗದೆ 27, 13ಎಸೆ) ಕೊನೆಯ ಓವರ್‌ಗಳಲ್ಲಿ ಬೀಸಾಟವಾಡಿದರು. ಇದರಿಂದಾಗಿ ಮೊತ್ತವು 150ರ ಗಡಿ ದಾಟಲು ಸಾಧ್ಯವಾಯಿತು.

ಇಂದಿನ ಪಂದ್ಯ: ಗುಜರಾತ್ ಟೈಟನ್ಸ್ – ಪಂಜಾಬ್ ಕಿಂಗ್ಸ್
ಡಾ. ಡಿ.ವೈ. ಪಾಟೀಲ ಕ್ರೀಡಾಂಗಣ,
ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಹಾಟ್‌ಸ್ಟಾರ್

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 5ಕ್ಕೆ 152 (20 ಓವರ್)
ಬಟ್ಲರ್ ಸಿ ಶಿವಂ ಬಿ ಸೌಥಿ 22 (25 ಎ, 4x3), ದೇವದತ್ತ ಸಿ ಮತ್ತು ಬಿ ಉಮೇಶ್ 2 (5 ಎ), ಸಂಜು ಸಿ ರಿಂಕು ಬಿ ಶಿವಂ 54 (49 ಎ, 4x7, 6x1), ಕರುಣ್ ಸಿ ರಿಂಕು ಬಿ ಅನುಕೂಲ್ 13 (13 ಎ, 4x1), ರಿಯಾನ್ ಸಿ ಅನುಕೂಲ್ ಬಿ ಸೌಥಿ 19 (12 ಎ, 4x1, 6x2), ಶಿಮ್ರೊನ್ ಔಟಾಗದೆ 27 (13 ಎ, 4x1, 6x2), ರವಿಚಂದ್ರನ್ ಔಟಾಗದೆ 6 (5 ಎ)
ಇತರೆ (ಲೆಗ್‌ಬೈ 2, ನೋಬಾಲ್ 2, ವೈಡ್ 5) 9
ವಿಕೆಟ್ ಪತನ: 1-7 (ದೇವದತ್ತ ಪಡಿಕ್ಕಲ್, 2.1), 2-55 (ಜೋಸ್ ಬಟ್ಲರ್, 8.3), 3-90 (ಕರುಣ್ ನಾಯರ್, 13.1), 4-115 (ರಿಯಾನ್ ಪರಾಗ್, 16.6), 5-115 (ಸಂಜು ಸ್ಯಾಮ್ಸನ್, 17.1)
ಬೌಲಿಂಗ್: ಉಮೇಶ್ ಯಾದವ್ 4-1-24-1, ಅನುಕೂಲ್ ರಾಯ್ 4-0-28-1, ಸುನಿಲ್ ನಾರಾಯಣ್ 4-0-19-0, ಶಿವಂ ಮಾವಿ 4-0-33-1, ಟಿಮ್ ಸೌಥಿ 4-0-46-2

ಕೋಲ್ಕತ್ತ ನೈಟ್ ರೈಡರ್ಸ್ 3ಕ್ಕೆ 158 (19.1 ಓವರ್)
ಇಂದ್ರಜೀತ್ ಸಿ ಅಶ್ವಿನ್ ಬಿ ಪ್ರಸಿದ್ಧ 15 (16ಎ, 4X2), ಫಿಂಚ್ ಬಿ ಸೇನ್ 4 (7ಎ), ಶ್ರೇಯಸ್ ಸಿ ಸ್ಯಾಮ್ಸನ್ ಬಿ ಬೌಲ್ಟ್ 34 (32ಎ, 4X3, 6X1), ನಿತೀಶ್ ಔಟಾಗದೆ 48 (37ಎ, 4X3, 6X2), ರಿಂಕು ಔಟಾಗದೆ 42 (23ಎ, 4X6, 6X1)
ಇತರೆ (ಲೆಗ್‌ಬೈ 4, ವೈಡ್ 11) 15
ವಿಕೆಟ್ ಪತನ: 1-16 (ಆರನ್ ಫಿಂಚ್, 3.1), 2-32 (ಬಾಬಾ ಇಂದ್ರಜಿತ್, 5.4), 3-92 (ಶ್ರೇಯಸ್ ಅಯ್ಯರ್, 12.5)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-25-1, ಪ್ರಸಿದ್ಧ ಕೃಷ್ಣ 4-0-37-1, ಕುಲದೀಪ್ ಸೇನ್ 3.1-0-28-1, ರವಿಚಂದ್ರನ್ ಅಶ್ವಿನ್ 4-0-33-0, ಯಜುವೇಂದ್ರ ಚಾಹಲ್ 4-0-31-0

ಫಲಿತಾಂಶ: ಕೋಲ್ಕತ್ತ ನೈಟ್‌ರೈಡರ್ಸ್‌ಗೆ 7 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	9	8	1	0	0	16	0.377
ಲಖನೌ	10	7	3	0	0	14	0.397
ರಾಜಸ್ಥಾನ	10	6	4	0	0	12	0.340
ಹೈದರಾಬಾದ್	9	5	4	0	0	10	0.471
ಬೆಂಗಳೂರು	10	5	5	0	0	10	-0.558
ದೆಹಲಿ	9	4	5	0	0	8	0.587
ಕೋಲ್ಕತ್ತ	10	4	6	0	0	8	0.060
ಪಂಜಾಬ್	9	4	5	0	0	6	-0.470
ಚೆನ್ನೈ	9	3	6	0	0	6	-0.407
ಮುಂಬೈ	9	1	8	0	0	2	-0.836

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	17
ನಟರಾಜನ್	ಹೈದರಾಬಾದ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	588
ರಾಹುಲ್	ಲಖನೌ	451
ಅಭಿಷೇಕ್	ಹೈದರಾಬಾದ್	324

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಧೋನಿ ಹಸ್ತಾಕ್ಷರ ಪಡೆದ ಸ್ಟೇನ್

ಪುಣೆ: ಸನ್‌ರೈಸರ್ಸ್ ಹೈದರಾಬಾದ್ ತಂಡದ ವೇಗದ ಬೌಲಿಂಗ್ ಕೋಚ್ ಆಗಿರುವ ಡೆಲ್ ಸ್ಟೇನ್ ತಮ್ಮ ಪೋಷಾಕಿನ ಮೇಲೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ಹಸ್ತಾಕ್ಷರ ಪಡೆದರು.

ಭಾನುವಾರ ಉಭಯ ತಂಡಗಳ ನಡುವೆ ಪಂದ್ಯ ನಡೆದಿತ್ತು. ಚೆನ್ನೈ 13 ರನ್‌ಗಳಿಂದ ಜಯಿಸಿತ್ತು. ಪಂದ್ಯದ ನಂತರ ಸ್ಟೇನ್, ಧೋನಿಯಿಂದ ಹಸ್ತಾಕ್ಷರ ಪಡೆದರು. ಸ್ಟೇನ್ ದಕ್ಷಿಣ ಆಫ್ರಿಕಾದ ಮಾಜಿ ವೇಗಿ. ವಿಶ್ವದ ಪ್ರಮುಖ ಬೌಲರ್‌ಗಳಲ್ಲಿ ಒಬ್ಬರು. ಅವರು ಹಸ್ತಾಕ್ಷರ ಪಡೆಯುತ್ತಿರುವ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಮೆಚ್ಚುಗೆ ಪಡೆದಿದೆ. 'ಒಬ್ಬ ದಿಗ್ಗಜ ಮತ್ತೊಬ್ಬ ದಿಗ್ಗಜನ ಹಸ್ತಾಕ್ಷರ ಪಡೆಯುತ್ತಿದ್ದಾರೆ' ಎಂದು ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಮಂಗಳೂರು ಪಾರಮ್ಯ; ಐದು ಕೂಟ ದಾಖಲೆ

ದ್ಯುತಿಗೆ ಸೋಲುಣಿಸಿದ ಪ್ರಿಯಾ ಮೋಹನ್

• ವಿಕ್ರಂ ಕಾಂತಿಕೆರೆ



ಮಹಿಳೆಯರ 200 ಮೀ ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಪ್ರಿಯಾ ಮೋಹನ್ (ಎಡದಿಂದ ಮೂರನೆಯವರು) ಮತ್ತು ದ್ಯುತಿ ಚಾಂದ್ (ಎರಡನೆಯವರು) –ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಬೆಂಗಳೂರು: ಭಾನುವಾರ ರಾತ್ರಿ ಮಳೆನಿಂತ ಮೇಲೆ ಟ್ರ್ಯಾಕ್‌ನಲ್ಲಿ ಮಿಂಚು ಮೂಡಿಸಿದ ಪ್ರಿಯಾ ಮೋಹನ್ ಸೋಮವಾರ ಬೆಳಿಗ್ಗೆ ಮತ್ತೊಮ್ಮೆ ಬೆಳಗಿದರು. ಒಲಿಂಪಿಯನ್ ದ್ಯುತಿ ಚಾಂದ್ ಅವರನ್ನು ಹಿಂದಿಕ್ಕಿ 200 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದು ಸಂಭ್ರಮಿ ಸಿದರು. 14 ತಾಸುಗಳ ಒಳಗೆ ಎರಡು ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಕಳೆದ ಬಾರಿಯ ಚಾಂಪಿಯನ್ ದ್ಯುತಿ ಚಾಂದ್ ಮತ್ತು ಈ ಬಾರಿಯ ಅಂತರ ವಾರ್ಸಿಟಿ ಚಾಂಪಿಯನ್ ಪ್ರಿಯಾ ನಡುವಿನ 200 ಮೀಟರ್ಸ್ ಓಟದ ಸ್ಪರ್ಧೆ ಸ್ಪ್ರಿಂಟ್ ಪ್ರಿಯರಲ್ಲಿ ಕುತೂಹಲ ಕೆರಳಿಸಿತ್ತು. ಮಳೆಯ ಸಾಧ್ಯತೆ ಇರುವುದರಿಂದ ಸಂಜೆಯ ಸ್ಪರ್ಧೆಗಳನ್ನು ಬೆಳಿಗ್ಗೆಯೇ ಆಯೋಜಿಸಲಾಗಿತ್ತು. ಶನಿವಾರ 100 ಮೀ ಓಟದಲ್ಲಿ ಚಿನ್ನ ಗೆದ್ದಿದ್ದ ದ್ಯುತಿ ಮತ್ತು ಭಾನುವಾರ 400 ಮೀ ಓಟದಲ್ಲಿ ಮೊದಲಿಗರಾಗಿದ್ದ ಪ್ರಿಯಾ 'ಡಬಲ್' ಸಾಧನೆಯ ಗುರಿಯೊಂದಿಗೆ ಟ್ರ್ಯಾಕ್‌ಗೆ ಇಳಿದಿದ್ದರು.

6ನೇ ಲೇನ್‌ನಲ್ಲಿ ಓಡಿದ ಕಳಿಂಗ ವಿವಿಯ ದ್ಯುತಿ ಆರಂಭದಲ್ಲಿ ಮುನ್ನಡೆ ಸಾಧಿಸಿದ್ದರು. ತವರಿನ ಅಂಗಣದ 5ನೇ ಲೇನ್‌ನಲ್ಲಿದ್ದ ಜೈನ್ ವಿವಿಯ ಪ್ರಿಯಾ ಅಂತಿಮ ಕ್ಷಣಗಳಲ್ಲಿ ಮುನ್ನುಗ್ಗಿ ಚಿನ್ನಕ್ಕೆ ಮುತ್ತಿಕ್ಕಿದರು. ತಮ್ಮದೇ ವಿವಿಯ ಮಧುಮಿತಾ ಮತ್ತು ರಾಂಚಿ ವಿವಿಯ ಫ್ಲಾಲೆನ್ಸ್ ಅವರಿಂದ ತೀವ್ರ ಪೈಪೋಟಿ ಎದುರಿಸಿದ ದ್ಯುತಿ ಅಂತಿಮ 50 ಮೀ ವರೆಗೂ ಭರವಸೆಯಲ್ಲೇ ಓಡಿದ್ದರು. ಆದರೆ ನಂತರ ಪ್ರಿಯಾ ಸ್ಪ್ರಿಂಟ್ ಹೆಚ್ಚಿಸಿಕೊಂಡು ದ್ಯುತಿಗೆ ನಿರಾಸೆ ಮೂಡಿಸಿದರು.

ಮಂಗಳೂರು ವಿವಿ ಚಾಂಪಿಯನ್: ಆಳ್ವಾಸ್ ಕಾಲೇಜು ವಿದ್ಯಾರ್ಥಿಗಳೇ ಹೆಚ್ಚು ಇರುವ ಮಂಗಳೂರು ವಿವಿ ಅಥ್ಲೆಟಿಕ್ಸ್‌ನ ಚಾಂಪಿಯನ್ ಪಟ್ಟ ಉಳಿಸಿಕೊಂಡಿತು. ಕಳೆದ ಬಾರಿ 7 ಚಿನ್ನ, 6 ಬೆಳ್ಳಿ ಮತ್ತು 5 ಕಂಚು ಗಳಿಸಿದ್ದ ತಂಡ ಈ ಬಾರಿ ತಲಾ 6 ಚಿನ್ನ, ಬೆಳ್ಳಿ ಮತ್ತು ಕಂಚು ಗೆದ್ದುಕೊಂಡಿತು. ಲವ್ಲಿ ಪ್ರೊಫೆಷನಲ್ ವಿವಿ ಮತ್ತು ಮಹರ್ಷಿ ದಯಾನಂದ್ ವಿವಿ ಕ್ರಮವಾಗಿ 2 ಮತ್ತು 3ನೇ ಸ್ಥಾನ ಗಳಿಸಿದವು. ಕಳೆದ ಬಾರಿ ರನ್ನರ್ ಅಪ್ ಆಗಿದ್ದ ಕೋಟಯಂನ ಮಹಾತ್ಮ ಗಾಂಧಿ ವಿವಿ 10ನೇ ಸ್ಥಾನಕ್ಕೆ ಕುಸಿಯಿತು.

ಕರ್ನಾಟಕ ಪಾರಮ್ಯ: ಪುರುಷರ 200 ಮೀ ಓಟದ ಚಿನ್ನ ಮತ್ತು ಕಂಚು ಮಂಗಳೂರು ವಿವಿ ಪಾಲಾದರೆ ಬೆಂಗಳೂರು ವಿವಿ ಬೆಳ್ಳಿ ಗಳಿಸಿತು. 21.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕೂಟ ದಾಖಲೆಯೊಂದಿಗೆ ವಿಘ್ನೇಶ್ ಮೊದಲಿಗರಾದರು. 21.39 ಸೆಕೆಂಡುಗಳೊಂದಿಗೆ ಶಶಿಕಾಂತ ಅಂಗಡಿ ಬೆಳ್ಳಿ ಗೆದ್ದರೆ ತೀರ್ಥೇಶ್ ಶೆಟ್ಟಿ ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡರು. ಚಿನ್ನ ಮತ್ತು ಬೆಳ್ಳಿ ಗೆದ್ದ ಇಬ್ಬರೂ ದಾಖಲೆ ಮಾಡಿದರು.

ಅಥ್ಲೆಟಿಕ್ಸ್‌ನ ಕೊನೆಯ ಸ್ಪರ್ಧೆಯಾದ ಮಹಿಳೆಯರ 4x400 ಮೀ ರಿಲೆಗೂ ಮೊದಲು ನಡೆದ ಪುರುಷರ 4x400 ಮೀ ರಿಲೆಯಲ್ಲಿ ಮಂಗಳೂರು ವಿವಿ ಅಮೋಘ ಓಟದೊಂದಿಗೆ ಕೂಟ ದಾಖಲೆ ನಿರ್ಮಿಸಿ ಚಿನ್ನ ಗಳಿಸಿತು. 4ನೇ ಲೇನ್‌ನಲ್ಲಿ ವಿವಿಯ ಪರ ಓಟ ಶುರು ಮಾಡಿದ ಮಹಾಂತೇಶ್ ಅವರು ಮದುರೈ, ಕ್ಯಾಲಿಕಟ್ ಮತ್ತು ಮಹರ್ಷಿ ದಯಾನಂದ ವಿವಿಯ ಸವಾಲು ಮೀರಿ ಮುನ್ನುಗ್ಗಿದರು. 2ನೇ ಲೆಗ್‌ನಲ್ಲಿ ದೇವಯ್ಯ ಕೂಡ ಮುನ್ನಡೆ ಗಳಿಸಿಕೊಟ್ಟರು. 3ನೇ ಲೆಗ್‌ನಲ್ಲಿ ಮಿಲನ್ ಅಪ್ರತಿಮ ಓಟದ ಮೂಲಕ ಭಾರಿ ಮುನ್ನಡೆ ಗಳಿಸಿದರು. ಹೀಗಾಗಿ ಕೊನೆಯ ಲೆಗ್‌ನಲ್ಲಿ ನಿಹಾಲ್ ನಿರಾಯಾಸವಾಗಿ ಓಡಿ ಚಿನ್ನ ಗೆದ್ದುಕೊಟ್ಟರು.

ಫಲಿತಾಂಶಗಳು: ಪುರುಷರ 200 ಮೀ ಓಟ: ವಿಘ್ನೇಶ್ (ಮಂಗಳೂರು)-1. ಕಾಲ: 21.28 ಸೆ (ಕೂಟ ದಾಖಲೆ; ಹಳೆಯದು: 21.42, ರಾಹುಲ್), ಶಶಿಕಾಂತ್ ಅಂಗಡಿ (ಬೆಂಗಳೂರು; ಕೂಟ ದಾಖಲೆ: ಹಳೆಯದು: 21.42, ರಾಹುಲ್)-2, ತೀರ್ಥೇಶ್ ಶೆಟ್ಟಿ (ಮಂಗಳೂರು)-3; ಪುರುಷರ 800 ಮೀ ಓಟ: ಸತ್ಯದೇವ್ (ಮಹರ್ಷಿ ದಯಾನಂದ)-1. ಕಾಲ: 1 ನಿ 54.26 ಸೆ, ಟಿ.ಎಚ್. ದೇವಯ್ಯ (ಮಂಗಳೂರು)-2, ಅಖಿಲ್ (ಕ್ಯಾಲಿಕಟ್)-3; 5000 ಮೀ ಓಟ: ಲೋಕೇಶ್ ಚೌಧರಿ (ಮಹರ್ಷಿ ದಯಾನಂದ)-1. ಕಾಲ: 14 ನಿ 36.11 ಸೆ, ಅಜಯ್ (ಲವ್ಲಿ)-2, ರೋಹಿತ್ ಕುಮಾರ್ (ಗುರುನಾನಕ್)-3; 4x400 ಮೀ ರಿಲೆ: ಮಂಗಳೂರು (ಮಹಾಂತೇಶ್, ದೇವಯ್ಯ, ಮಿಲನ್, ನಿಹಾಲ್)-1. ಕಾಲ: 3 ನಿ, 13.44 ಸೆ (ಕೂಟ ದಾಖಲೆ; ಹಿಂದಿನದು:3 ನಿ 15.45, ಎಂ.ಜಿ ಕೋಟಯಂ), ಮಹಾತ್ಮ ಗಾಂಧಿ-2. ಕಾಲ: 3 ನಿ 14.79 ಸೆ (ಕೂಟ ದಾಖಲೆ; ಹಿಂದಿನದು: 3 ನಿ 15.45 ಸೆ), ಚೌಧರಿ ಚರಣ್‌ಸಿಂಗ್-3; ಪೋಲ್‌ವಾಲ್ಟ್: ಧೀರೇಂದ್ರ (ವೀರ ಬಹದ್ದೂರ್)-1. ಎತ್ತರ: 4.80 ಮೀ (ಕೂಟ ದಾಖಲೆ: 4.60), ಜ್ಞಾನಸೋಣ್ (ಮದ್ರಾಸ್)-2; ಟ್ರಿಪಲ್ ಜಂಪ್: ಕೃಷ್ಣ ಸಿಂಗ್ (ಮುಂಬೈ)-1. ಅಂತರ: 16.10 ಮೀ (ಕೂಟ ದಾಖಲೆ; ಹಳೆಯದು: 15.27 ಮೀ, ಎಬಿ ಅರುಣ್), ಸೆಲ್ವ ಪ್ರಭು (ಭಾರತೀದಾಸನ್)-2. ಕಾಲ: 16.03 (ಕೂಟ ದಾಖಲೆ; ಹಳೆಯದು: 15.27 ಎಬಿ ಅರುಣ್), ರಾಬಿನ್ಸನ್ ಶೇಖರ್ (ಮದುರೈ ಕಾಮರಾಜ)-3. ಮಹಿಳೆಯರ 200 ಮೀ ಓಟ: ಪ್ರಿಯಾ ಮೋಹನ್ (ಜೈನ್)-1. ಕಾಲ: 23.90 ಸೆ, ದ್ಯುತಿ ಚಾಂದ್ (ಕಳಿಂಗ)-2, ಫ್ಲಾಲೆನ್ಸ್ ಬಾರ್ಲಾ (ರಾಂಚಿ)-3; 800 ಮೀ ಓಟ: ಪೂಜಾ (ಲವ್ಲಿ)-1. ಕಾಲ: 2 ನಿ 07.67 ಸೆ, ಅರ್ಪಿತಾ (ಬೆಂಗಳೂರು)-2, ಸುನಿತಾ (ಹಿಮಾಚಲ ಪ್ರದೇಶ)-3; 1500 ಮೀ: ರಾಧಾ ಸಿಂಗ್ (ಮಂಗಳೂರು)-1. ಕಾಲ: 4 ನಿ 34.43 ಸೆ, ಸುನಿತಾ (ಹಿಮಾಚಲ ಪ್ರದೇಶ)-2, ಹೈದ್ರೊಂ ದೇವಿ (ಮಣಿಪುರ)-3; ಶಾಟ್‌ಪಟ್: ಅಂಬಿಕಾ (ಮೈಸೂರು)-1. ದೂರ: 14.04 ಮೀ, ಜಾಸ್ಮಿನ್ (ಲವ್ಲಿ)-2, ರೇಖಾ (ಮಂಗಳೂರು)-3; 5000 ಮೀ. ಓಟ: ನಿಕಿತಾ ರಾವತ್ (ರಾಷ್ಟ್ರಸಂತ ತುಕಡೋಜಿ)-1. ಕಾಲ: 16 ನಿ 55.38 ಸೆ (ಕೂಟ ದಾಖಲೆ; ಹಳೆಯದು: 16:59.44), ಭಾರತಿ (ಮಹರ್ಷಿ ದಯಾನಂದ್)-2, ಪೂನಮ್ (ಪುಣೆ)-3; 4x400 ಮೀ ರಿಲೆ: ಪಂಜಾಬಿ-1. ಕಾಲ 3:43.83 (ಕೂಟ ದಾಖಲೆ; ಹಳೆಯದು: 3:48.12, ಎಂ.ಜಿ), ಕ್ಯಾಲಿಕಟ್-2, ಎಂ.ಜಿ-3; 20 ಕಿ.ಮೀ. ವೇಗ ನಡಿಗೆ: ರಾಖಿ ಸಿಂಗ್ (ರಾಜೇಂದ್ರ ವಿವಿ)-1. ಕಾಲ: 1 ತಾಸು 41.35 ನಿ, ಪಾಯಲ್ (ಪಂಜಾಬಿ-2, ಮಾನಸಿ ನೇಗಿ (ಲವ್ಲಿ)-3; ಹೈಜಂಪ್: ಗ್ರಾಸ್ನಾ (ಮನೋನ್ಮಣಿಯನ್)-1. ಎತ್ತರ: 1.76 ಮೀ, ರೇಖಾ (ಲವ್ಲಿ)-2, ಕೆವಿನಾ (ಭಾರತಿದಾಸನ್)-3.

ಕರಾಟೆ: ಪುರುಷ -50 ಕೆಜಿ: ದೀಪಕ್ ವರ್ಮಾ (ಮಹರ್ಷಿ ದಯಾನಂದ್)-1, ಕ್ಯಬೊ ಲಿಯಾಂಗ್ (ಹಿಮಾಲಯನ್)-2, ಎನ್.ಎಸ್ ಅರವಿಂದ್ (ಬೆಂಗಳೂರು), ಸಂಜಯ್ (ರಾಜೀವ್‌ಗಾಂಧಿ)-3; -60 ಕೆಜಿ: ಅಂಕುಶ್ (ರಣ್‌ಬೀರ್ ಸಿಂಗ್)-1, ಕೌಶಿಕ್ (ಅಣ್ಣಾ)-2, ಡಿ.ಎಸ್.ತೇಜಸ್ (ಮೈಸೂರು), ದಿನೇಶ್ ಚೌಧರಿ (ದೀನ್ ದಯಾಳ್)-3; ಮಹಿಳೆಯರ 45 ಕೆಜಿ: ಅಶ್ವಿನಿ (ಮೈಸೂರು)-1, ಅಕ್ಷತಾ (ಕಾಶಿ ವಿದ್ಯಾಪೀಠ)-2 ಪ್ರೀತಿ (ಕುರುಕ್ಷೇತ್ರ), ಪ್ರತಿಷ್ಠಾ (ಚಂಡೀಗಢ)-3. ಕುಸ್ತಿ: 82 ಕೆಜಿ: ರೋಹಿತ್ ದಹಿಯಾ (ಲವ್ಲಿ)-1, ಅಮರಿಂದರ್ ಸಿಂಗ್ (ಗುರುನಾನಕ್)-2, ಆದಿತ್ಯ ಬೆಡಕಿಹಾಳ (ಕರ್ನಾಟಕ ವಿವಿ), ಆಯುಷ್ (ಕುರುಕ್ಷೇತ್ರ)-3.

ಪುರುಷರ 4X400 ಮೀ ರಿಲೆಯಲ್ಲಿ ಚಿನ್ನ ಗೆದ್ದ ಮಂಗಳೂರು ವಿವಿ ಪ್ರತಿನಿಧಿಸಿದ ಆಳ್ವಾಸ್ ಕಾಲೇಜು ವಿದ್ಯಾರ್ಥಿಗಳು (ಎಡದಿಂದ): ನಿಹಾಲ್, ಮಹಾಂತೇಶ್, ದೇವಯ್ಯ ಮತ್ತು ಮಿಲನ್ ಸಂಭ್ರಮ –ಪ್ರಜಾವಾಣಿ ಚಿತ್ರ

ಸಮಾರೋಪ ಸಮಾರಂಭದಲ್ಲಿ ಯೋಗ ಪ್ರದರ್ಶನ: ಮಂಗಳವಾರ ಸಂಜೆ 5.30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ 96 ಯೋಗಪಟುಗಳು ಸೇರಿದಂತೆ 500 ಮಂದಿಯ ಯೋಗ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.

ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಗ್ರ ಸ್ಥಾನದತ್ತ ಆತಿಥೇಯ ಜೈನ್ ವಿಶ್ವವಿದ್ಯಾಲಯ

ಆತಿಥೇಯ ಜೈನ್ ವಿವಿ, ಕ್ರೀಡಾಕೂಟದ ಸಮಗ್ರ ಚಾಂಪಿಯನ್ ಪಟ್ಟ ಗಳಿಸುವತ್ತ ಹೆಜ್ಜೆ ಹಾಕಿದೆ. ಆರಂಭದಲ್ಲಿ ನಾಲ್ಕು ದಿನ ಈಜುಕೊಳದಲ್ಲಿ ಪದಕಗಳನ್ನು ಹೆಕ್ಕಿದ ಕ್ರೀಡಾಪಟುಗಳು ಸತತ ಮುನ್ನಡೆ ಗಳಿಸಿಕೊಟ್ಟಿದ್ದರು. ನಂತರವೂ ಜೈನ್ ವಿವಿಯ ಪಾರಮ್ಯ ಮುಂದುವರಿಯಿತು. 20 ಸ್ಪರ್ಧೆಗಳ ಪೈಕಿ 18 ಸ್ಪರ್ಧೆಗಳು ಸೋಮವಾರ ಸಂಜೆ ವೇಳೆಗೆ ಮುಕ್ತಾಯಗೊಂಡಿವೆ. ಕಬಡ್ಡಿ ಮತ್ತು ಫುಟ್‌ಬಾಲ್ ಮಾತ್ರ ಉಳಿದುಕೊಂಡಿವೆ. 20 ಚಿನ್ನದೊಂದಿಗೆ 32 ಪದಕ ಗೆದ್ದಿರುವ ಜೈನ್ ವಿವಿ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಕಳೆದ ಬಾರಿ ಚಾಂಪಿಯನ್ ಆಗಿದ್ದ ಪಂಜಾಬ್ ವಿವಿ ಮೂರನೇ ಸ್ಥಾನದಲ್ಲಿದ್ದು ಲವ್ಲಿ ಪ್ರೊಫೆಷನಲ್ ವಿವಿ ಎರಡನೇ ಸ್ಥಾನದಲ್ಲಿದೆ.

ಕಬಡ್ಡಿ ಫೈನಲ್ ಗೊಂದಲ: ಜೈನ್ ವಿವಿ ಆವರಣದಲ್ಲಿ ನಡೆಯುತ್ತಿದ್ದ ಕಬಡ್ಡಿಯ ಫೈನಲ್ ಪಂದ್ಯವನ್ನು ಸಮಾರೋಪ ಸಮಾರಂಭಕ್ಕೂ ಮೊದಲು ಗಣ್ಯರ ಮುಂದೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸುವುದಾಗಿ ಎರಡು ದಿನಗಳ ಹಿಂದೆ ಆಯೋಜಕರು ತಿಳಿಸಿದ್ದರು. ಆದರೆ ಫೈನಲ್ ಪಂದ್ಯವನ್ನು ಜೈನ್ ವಿವಿಯಲ್ಲೇ ನಡೆಸಲಾಗುವುದು ಎಂದು ಕ್ರೀಡಾ ಸಚಿವರು ಸೋಮವಾರ ಮಧ್ಯಾಹ್ನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು. ರಾತ್ರಿ ಮತ್ತೆ ನಿರ್ಧಾರ ಬದಲಿಸಿ ಕಂಠೀರವದಲ್ಲೇ ಆಯೋಜಿಸಲು ನಿರ್ಧರಿಸಲಾಯಿತು. ತರಾತುರಿಯಲ್ಲಿ ಮ್ಯಾಟ್ ಅಳವಡಿಕೆ ಮತ್ತಿತರ ಕೆಲಸವನ್ನು ಮಾಡಲಾಯಿತು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರ ಪರವಾಗಿ ನಾವು ಕೆಳಕಂಡ ಸ್ಥಿರಾಸ್ತಿಗಳ ಹಕ್ಕುಗಳನ್ನು ಪರಿಶೋಧನೆ ಮಾಡುತ್ತಿದ್ದೇವೆ:
1. ಮೆ. ಮೂಕಾಂಬಿಕಾ ಅಂಡ್ ಕೋ., ಇಂಡಿಯನ್ ಪಾರ್ಟನರ್‌ಶಿಪ್ ಆಕ್ಟ್, 1932ರ ಅಡಿಯಲ್ಲಿನ ನೋಂದಾಯಿತ ಒಂದು ಪಾಲುದಾರಿಕೆಯುಳ್ಳ ಸಂಸ್ಥೆ, ಫರ್ಮ್ ನಂ. ಬಿಎಸ್‌ಡಿ–ಎಫ್202–2020–21 ಮತ್ತು ನೋಂದಾಯಿತ ಕಚೇರಿ ವಿಳಾಸ ನಂ. 17, 4ನೇ ಮಹಡಿ, ಬೆಲ್ ಅಪಾರ್ಟ್‌ಮೆಂಟ್ಸ್, 401, ಮಿಡ್ಸ್ ಸ್ಕೂಲ್ ರೋಡ್, ಬೆಂಗಳೂರು – 560004, ಭಾರತ, ಇದನ್ನು ಕೆಳಕಂಡ **ಷೆಡ್ಯೂಲ್ ಎ** ದಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ ಮತ್ತು ಇದನ್ನು ಇಲ್ಲಿ ಇನ್ನುಮುಂದೆ "**ಷೆಡ್ಯೂಲ್ ಎ ಪ್ರಾಪರ್ಟಿ**" ಎನ್ನಲಾಗುತ್ತದೆ:
2. ಎನ್.ಬಿ.ಸುರೇಶ್ ಕುಮಾರ್ ಬಿನ್ ಎನ್ ಬಿ ವೆಂಕಟರಂಗಣ್ಣ, ವಯಸ್ಸು ಸುಮಾರು 51 ವರ್ಷ, ಇದನ್ನು ಕೆಳಕಂಡ **ಷೆಡ್ಯೂಲ್ ಬಿ** ದಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ ಮತ್ತು ಇದನ್ನು ಇಲ್ಲಿ ಇನ್ನುಮುಂದೆ "**ಷೆಡ್ಯೂಲ್ ಬಿ ಪ್ರಾಪರ್ಟಿ**" ಎನ್ನಲಾಗುತ್ತದೆ;
ಮೇಲ್ಕಂಡ ಎಲ್ಲರನ್ನೂ ಒಟ್ಟಾಗಿ ಇಲ್ಲಿ **"ಮಾಲಿಕರು"** ಎನ್ನಲಾಗುತ್ತದೆ ಮತ್ತು ವೈಯಕ್ತಿಕವಾಗಿ **"ಮಾಲಿಕ"** ಎನ್ನಲಾಗುತ್ತದೆ. ಷೆಡ್ಯೂಲ್ ಎ ಪ್ರಾಪರ್ಟಿ ಮತ್ತು ಷೆಡ್ಯೂಲ್ ಬಿ ಪ್ರಾಪರ್ಟಿ ಎರಡನ್ನೂ ಒಟ್ಟಾಗಿ ಇಲ್ಲಿ **"ಷೆಡ್ಯೂಲ್ ಪ್ರಾಪರ್ಟೀಸ್"** ಎನ್ನಲಾಗುತ್ತದೆ.
ಯಾವುದೇ ವ್ಯಕ್ತಿ, ಸಂಸ್ಥೆ, ಸಂಘ, ಸೊಸೈಟಿ, ಸಂಸ್ಥೆಗಳು (ಕಾರ್ಪೊರೇಟ್ ಅಥವಾ ಇನ್ನಿತರ) ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸ್ವತ್ತಿಗೆ ವಿರುದ್ಧವಾಗಿ ಮತ್ತು/ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಬಂಧಿಸಿದಂತೆ ಯಾವುದೇ ಕ್ಲೇಮ್, ಹಕ್ಕು, ಬಾಧ್ಯತೆ, ಹಿತಾಸಕ್ತಿ, ಚಾರ್ಜ್, ಬೆನೆಫಿಟ್, ಅಥವಾ ಡಿಮಾಂಡ್ ಮತ್ತು/ಅಥವಾ ಮಾರಾಟ, ವರ್ಗಾವಣೆ, ಒಪ್ಪಂದ, ಹಂಚಿಕೆ, ಹಕ್ಕು, ಹಿತಾಸಕ್ತಿ, ಭಾಗ, ವಿನಿಮಯ, ಉಡುಗೊರೆ, ಭೋಗ್ಯ, ಭಾಡಿಗೆ, ಲೈಸೆನ್ಸ್, ಸ್ವಾಧೀನ, ಕೊವೆನಂಟ್, ಪ್ರಿಯಾಂಪ್ಷನ್, ಅಸೈನ್‌ಮೆಂಟ್, ಅಡಮಾನ, ಚಾರ್ಜ್, ಲೀನ್, ಟ್ರಸ್ಟ್, ಕೌಟುಂಬಿಕ ಒಡಂಬಡಿಕೆ/ಇತ್ಯರ್ಥ, ಋಣಭಾರ, ಇನ್ಹೆರಿಟನ್ಸ್, ಸಕ್ಸೆಶನ್, ಉಯಿಲು, ಟೆಸ್ಟಾಮೆಂಟರಿ ಇನ್‌ಸ್ಟ್ರುಮೆಂಟ್, ಪ್ರೊಬೇಟ್, ಆಡಳಿತ ಪತ್ರಗಳು, ಬಿಕ್ವೆಸ್ಟ್, ಈಸ್‌ಮೆಂಟ್, ಪೊಸೆಶನ್, ಸ್ವಾನುಭವ, ನಿರ್ವಹಣೆ, ಅಭಿವೃದ್ಧಿ ಹಕ್ಕುಗಳು, ತಗಾದೆ, ಲಿಸ್‌ಪೆಂಡೆನ್ಸ್, ಯಾವುದೇ ನ್ಯಾಯಾಲಯದ ಆರ್ಡರ್/ಡಿಕ್ರಿ/ತೀರ್ಪು ಮಾದರಿಯಲ್ಲಿ ಯಾವುದೇ ಹಕ್ಕು ಪತ್ರಗಳು ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ, ಯಾವುದೇ ಒಪ್ಪಂದ, ಒಡಂಬಡಿಕೆ, ಪಾಲುದಾರಿಕೆ ಅಥವಾ ಇನ್ನಿತರ ಯಾವುದೇ ಮೂಲ ಹಕ್ಕು ದಾಖಲಾತಿಗಳನ್ನು ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **14 (ಹದಿನಾಲ್ಕು)** ದಿನಗಳೊಳಗೆ ಲಿಖಿತ ರೂಪದಲ್ಲಿ ಎಲ್ಲಾ ದಾಖಲಾತಿ ಪುರಾವೆಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರ ಗಮನಕ್ಕೆ ಸಲ್ಲಿಸುವುದು, ಇದಕ್ಕೆ ತಪ್ಪಿದಲ್ಲಿ, ಮುಂಬರುವ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಬೆನೆಫಿಟ್, ಕ್ಲೇಮ್ ಡಿಮಾಂಡ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ಕೈಬಿಡಲಾಗುತ್ತದೆ ಹಾಗೂ ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ನಮ್ಮ ಕಕ್ಷಿದಾರರು ಹಕ್ಕುಳ್ಳವರಾಗುತ್ತಾರೆ. ನಿಗದಿತ ಕಾಲಾವಧಿಯ ನಂತರ ಸಂದಾಯವಾಗುವ ಆಕ್ಷೇಪಣೆಗಳನ್ನು ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯ ನಿರ್ಬಂಧಗಳನ್ನು ರೂಪಿಸುವುದಿಲ್ಲ.

ಷೆಡ್ಯೂಲ್ ಎ
ಷೆಡ್ಯೂಲ್ ಎ ಪ್ರಾಪರ್ಟಿಯ ವಿವರ

ಉಪ್ಪಾರಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ ಕೆಳಕಂಡ 3 ಎಕರೆ 54 ಗುಂಟಾ ಜಮೀನುಗಳ (2 ಗುಂಟಾ ಬಿ ಖರಾಬು ಸೇರಿದಂತೆ) ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ	ಚಕ್ಕುಬಂದಿ			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01	4	1 ಎಕರೆ 16 ಗುಂಟಾ	ರೈಲ್ವೆ ಟ್ರ್ಯಾಕ್	ರಸ್ತೆ ಮತ್ತು ಸಣ್ಣ ಅಮ್ಮನಿಕೆರೆ ಗ್ರಾಮ ಸರಹದ್ದು	ಸರ್ವೆ ನಂ. 5 & 6 ಹೊಂದಿರುವ ಜಮೀನು	ಸರ್ವೆ ನಂ. 2 & 3 ಹೊಂದಿರುವ ಜಮೀನು
02	7/1	02 ಎಕರೆ 36 ಗುಂಟಾ ಮತ್ತು 02 ಗುಂಟಾ ಬಿ ಖರಾಬು	ರೈಲ್ವೆ ಟ್ರ್ಯಾಕ್	ರಸ್ತೆ ಮತ್ತು ಸಣ್ಣ ಅಮ್ಮನಿಕೆರೆ ಗ್ರಾಮ ಸರಹದ್ದು	ಸರ್ವೆ ನಂ. 7/2, 7/3, 8 ಮತ್ತು 9 ಹೊಂದಿರುವ ಸ್ವತ್ತು	ಸರ್ವೆ ನಂ. 5 ಮತ್ತು 6 ಹೊಂದಿರುವ ಸ್ವತ್ತು

ಷೆಡ್ಯೂಲ್ ಬಿ
ಷೆಡ್ಯೂಲ್ ಬಿ ಪ್ರಾಪರ್ಟಿಯ ವಿವರ

ಉಪ್ಪಾರಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ ಕೆಳಕಂಡ 1 ಎಕರೆ 30 ಗುಂಟಾ ವಿಸ್ತೀರ್ಣವುಳ್ಳ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ	ಚಕ್ಕುಬಂದಿ			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01	5	1 ಎಕರೆ 08 ಗುಂಟಾ	ರೈಲ್ವೆ ಲೈನ್	ಸರ್ವೆ ನಂ. 6 ಹೊಂದಿರುವ ಸ್ವತ್ತು	ಸರ್ವೆ ನಂ. 7 ಹೊಂದಿರುವ ಸ್ವತ್ತು	ಸರ್ವೆ ನಂ. 4 ಹೊಂದಿರುವ ಸ್ವತ್ತು
02	6	22 ಗುಂಟಾ	ಸರ್ವೆ ನಂ. 5 ಹೊಂದಿರುವ ಸ್ವತ್ತು	ರಸ್ತೆ	ಸರ್ವೆ ನಂ. 7 ಹೊಂದಿರುವ ಸ್ವತ್ತು	ಸರ್ವೆ ನಂ. 4 ಹೊಂದಿರುವ ಸ್ವತ್ತು

ಶ್ರೀ. ರಾಜ ರಾಮಚಂದ್ರನ್ ಮತ್ತು ಶ್ರೀ. ರಕ್ಕಿ ಕೆ
ಪಾಲುದಾರರು,
ಜೆ. ಸಾಗರ್ ಅಸೋಸಿಯೇಟ್ಸ್, ವಕೀಲರು ಮತ್ತು ಸಾಲಿಸಿಟರ್ಸ್, ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, ಕಸ್ತೂರಬಾ ರಸ್ತೆ, ಬೆಂಗಳೂರು–560001. ಫೋನ್: 080–43503600

ದಿನಾಂಕ: 03.05.2022
ಸ್ಥಳ: ಬೆಂಗಳೂರು

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

No: EE/RWSS/Dvn/SMG/JE/JJM/E-Proc/2021-22/208 Date : 29.04.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಇಂಡೆಂಟ್ ಸಂಖ್ಯೆ : 1) 39875, 2) 39872, 3) 37012/Call3, 4) 39990/Call2, 5) 39989/Call2, 6) 39842/Call2, 7) 39828/Call2, 8) 39654, 9) 39653, 10) 39458/Call2.
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https: //www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

ಟೆಂಡರ್‌ನ ಕೆಲವು ಷರತ್ತುಗಳು

(1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **09.05.2022ರ ಸಂಜೆ 5.30**. (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **11/13.05.2022 ರ ಬೆಳಿಗ್ಗೆ 11.30**. (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11.05.2022ರ ಬೆಳಿಗ್ಗೆ 11.30**. (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **13.05.2022ರ ಬೆಳಿಗ್ಗೆ 11.30**. (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ 3 ತಿಂಗಳು (90 ದಿನಗಳು) ದ್ವಿ ಲಕೋಟೆ 3 ತಿಂಗಳು (90 ದಿನಗಳು)**.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ. ಮತ್ತು ನೈ. ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.133–05
ಝೋಂಕಾರ್/2022–23

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ
(ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
ಸಕ್ಕರೆ ನಗರ, ಮಂಡ್ಯ –571402 (ಕರ್ನಾಟಕ)

ನೇರ ಸಂದರ್ಶನ

ಮೈಸೂರು ಸಕ್ಕರೆ ಕಂಪನಿಯು ದಿನವೊಂದಕ್ಕೆ 5000 ಮೆಟ್ರಿಕ್ ಟನ್ ಕಬ್ಬು ನುರಿಸುವ ಜೊತೆಗೆ 36,000 ಲೀಟರ್ ಮದ್ಯಸಾರ ಉತ್ಪಾದಿಸುವ ಸಾಮರ್ಥ್ಯ ಹೊಂದಿರುವ ಡಿಸ್ಟಿಲರಿ ಮತ್ತು 30 ಮೆಗಾ ವ್ಯಾಟ್ ಬಗ್ಯಾಸ್ ಆಧಾರದಲ್ಲಿ ವಿದ್ಯುತ್ ಉತ್ಪಾದನೆಯ ಸಹ–ವಿದ್ಯುತ್ ಘಟಕವನ್ನು ಹೊಂದಿರುತ್ತದೆ. ಕಂಪನಿಗೆ ಈ ಕೆಳಕಂಡ ಹುದ್ದೆಗಳ ಅವಶ್ಯಕತೆ ಇರುವುದರಿಂದ ಅನುಭವ ಹೊಂದಿರುವ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ.

Sl. No.	Name of the Post	No.of Post	Qualification & Experience
1	Chief Security-cum-Vigilance Officer	1	Should be an Ex-serviceman preferably of the Rank of Major/Sub Naik. Experience of One year in Industrial Security is essential.5 years in Industrial Security is desirable.
2	Assistant Security Officer	4	Ex-serviceman of the rank of Junior Commissioned Officer. Persons with experience in Industrial Security preferred.
3	Deputy Chief Engineer (Sugar Unit)	1	B.E., Mechanical with BOE & ANSI/AVSI with minimum 4 years experience as Senior Engineer for 8 years as Asst. Engineer in Sugar Industries.Co-generation experience is preferred.
4	Assistant Engineer (Mechanical)	1	B.E.., Mech. Engg with 5 years experience or Diploma (Mech) with minimum 7 years experience in Sugar Industries. Preference will be given to ANSI AVSI/BOE. Experience in Co-gen Plant.
5	Assistant Engineer (Electrical)	1	B.E.(Elec) with minimum 5 years experience or Diploma in Elec., with minimum 7 years experience in maintenance of Electrical installation in an Industrial undertaking. Sugar & Co-gen Plant experience is preferred.
6	Manufacturing Chemist	2	Should possess B.Sc., ANSI/AVSI or B.Sc with 7 years experience as Manufacturing Chemist.
7	Labour Welfare Officer	1	Degree with Diploma in Social Welfare (M.S.W) of recoginsed Institution. Persons with 5 Yrs experience is preferred.

ಟಿಪ್ಪಣಿ: 1) ಮೇಲ್ಕಂಡ ಹುದ್ದೆಗಳು ಎರಡು ವರ್ಷದ ಗುತ್ತಿಗೆ ಆಧಾರದ ಮೇಲೆ ಸೀಮಿತಗೊಂಡಿರುತ್ತದೆ. **2)** ಗರಿಷ್ಠ ವಯೋಮಿತಿ 55 ವರ್ಷಗಳು. **3)** ವೇತನವನ್ನು ಅನುಭವದ ಆಧಾರದ ಮೇಲೆ ನಿಗದಿಗೊಳಿಸಲಾಗುವುದು. **4)** ನೇರ ಸಂದರ್ಶನದ ಸಂದರ್ಭದಲ್ಲಿ ಅಭ್ಯರ್ಥಿಗಳು ತಮ್ಮ ಬಯೋಡಾಟಾ ಜೊತೆಯಲ್ಲಿ ವಿದ್ಯಾರ್ಹತೆ, ಜಾತಿ, ಅನುಭವ ದೃಢೀಕರಣ ಪತ್ರಗಳೊಂದಿಗೆ ತಮ್ಮ ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸತಕ್ಕದ್ದು. **5)** ನೇರ ಸಂದರ್ಶನವು ದಿ: 10.05.2022 ರಂದು ಬೆಳಿಗ್ಗೆ 10.00 ಗಂಟೆಯಿಂದ 12.00 ಗಂಟೆಯ ವರೆಗೆ ವ್ಯವಸ್ಥಾಪಕ ನಿರ್ದೇಶಕರವರ ಕಚೇರಿ, ಮೈಷುಗರ್ ಕಂಪನಿ, ಸಕ್ಕರೆ ನಗರ, ಮಂಡ್ಯ 571402(ಕರ್ನಾಟಕ) ಇಲ್ಲಿ ನಡೆಯುತ್ತದೆ. **6)** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 8762904161.

ಸಹಿ/– ಪ್ರಧಾನ ವ್ಯವಸ್ಥಾಪಕರು

DIPR/AD-MDY/MC&A/44/2022-23